ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಒಂದು ಪ್ರಕಟಣೆ

ಲರ್ನಿಂಗ್ ಕರ್ವ್

ಲರ್ನಿಂಗ್ ಕರ್ವ್ ಸಂಚಿಕೆ 4, ಫೆಬ್ರವರಿ 2017

# ಆರಂಭಿಕ ಬಾಲ್ಯ ಶಿಕ್ಷಣ

001 ಬೃಹತ್ ಚಿತ್ರ
035 ಚಿಕ್ಕ ಮಕ್ಕಳೊಂದಿಗೆ ಕೆಲಸ ಮಾಡುವುದು
091 ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಸಂಶೋಧನೆ
106 ಕ್ಷೇತ್ರಾನುಭವ

















**ಸಂಪಾದಕ ಮಂಡಳಿ**

ಚಂದ್ರಿಕಾ ಮುರಳೀಧರ್
ಇಂದುಮತಿ ಎಸ್.
ಮಧುಮಿತಾ ಸುಧಾಕರ್
ಪ್ರೇಮಾ ರಘುನಾಥನ್

**ಸಲಹೆಗಾರರು**

ರಾಮ್ ಗೋಪಾಲ್ ವಲ್ಲತ್
ಎಸ್. ಗಿರಿಧರ್
ಉಮಾಶಂಕರ್ ಪೆರಿಯೋಡಿ

**ಈ ಆವೃತ್ತಿಗೆ ವಿಶೇಷ ಸಲಹೆಗಾರರು**

ಜಿಗಿಷಾ ಶಾಸ್ತ್ರಿ
ಕಿನ್ನರಿ

**ಕನ್ನಡ ಸಂಚಿಕೆಯ ಸಂಪಾದಕರು**

ಎಸ್.ವಿ. ಮಂಜುನಾಥ
ದಿನೇಶ್ ಮಡಗಾಂವ್ಕರ್

**ಭಾಷಾಂತರ ಪರಿಷ್ಕರಣೆ**

ಜೈಕುಮಾರ್ ಮರಿಯಪ್ಪ

**ವಿನ್ಯಾಸ**

ಪೆಂಟಗಾನ್ ಕಮ್ಯುನಿಕೇಷನ್ ಪ್ರೈ ಲಿಮಿಟೆಡ್.

+91 080 22212942/ 946

**ಚಿತ್ರಕೃಪೆ**

ಒಳಪುಟಗಳ ಅಂಚಿನ ವಿನ್ಯಾಸ– ಜೇನ್ ಸಾಹಿ, ಸೀತಾ ಸ್ಕೂಲ್, ಕರ್ನಾಟಕ
ಮುಖಪುಟ ಹಾಗು ಲೇಖನಗಳ ಕೊನೆಯಲ್ಲಿ ಬಳಸಿದ ಅನೇಕ ಫೋಟೋಗಳು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸದಸ್ಯರು ತಮ್ಮ ಕೆಲಸದ ಸಂದರ್ಭದಲ್ಲಿ ತೆಗೆದಿರುವಂತಹವು. ಲೇಖನದ ಕೊನೆಯಲ್ಲಿ ಕೊಡಲಾದ ಚಿತ್ರಗಳು ಆಯಾ ಲೇಖನಕ್ಕೆ ಸಂಬಂಧಿಸಿರಬೇಕಾಗಿಲ್ಲ. ಅವನ್ನು ಕೇವಲ ಸ್ಥಳಪೂರಕಗಳಾಗಿ ಬಳಸಲಾಗಿರುತ್ತದೆ.

**ಮುದ್ರಣ**

ಎಸ್ ಸಿ ಪಿ ಎಲ್
ಬೆಂಗಳೂರು 560 062
+91 80 2686 0585 / +91 98450 42233
www.scpl.net

---

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಲರ್ನಿಂಗ್ ಕರ್ವ್', ಶಿಕ್ಷಣವನ್ನು ಕುರಿತ ಪ್ರಕಟಣೆಯಾಗಿದ್ದು ಸಾರ್ವಕಾಲಿಕ ಮಹತ್ವವುಳ್ಳ ಮತ್ತು ಮೌಲ್ಯವುಳ್ಳ ಸಾಂದರ್ಭಿಕ ಹಾಗು ನಿರ್ದಿಷ್ಟ ವಿಷಯಾಧಾರಿತ ಚರ್ಚಾ ವಿಷಯಗಳನ್ನು ಶಿಕ್ಷಕರು, ಶಿಕ್ಷಕ ಶಿಕ್ಷಕರು, ಶಾಲಾ ಮುಖ್ಯಸ್ಥರು, ಶಿಕ್ಷಣಾಧಿಕಾರಿಗಳು, ಶಿಕ್ಷಣ ಕಾರ್ಯಕರ್ತರು, ಪೋಷಕರು ಹಾಗು ಸರ್ಕಾರೇತರ ಸಂಸ್ಥೆಗಳಿಗೆ ತಲುಪಿಸುವ ಮಹತ್ತರ ಆಶಯವನ್ನು ಹೊಂದಿದೆ. ಇದು ವಿಭಿನ್ನ ಅಭಿಪ್ರಾಯಗಳನ್ನು ಮತ್ತು ದೃಷ್ಟಿಕೋನಗಳನ್ನು ವ್ಯಕ್ತಪಡಿಸಲು ವೇದಿಕೆಯನ್ನು ಒದಗಿಸುವುದೇ ಅಲ್ಲದೆ ಹೊಸ ಹೊಸ ಮತ್ತು ತಜ್ಞ ವಿಚಾರಧಾರೆಗಳನ್ನು, ಆಲೋಚನೆಯನ್ನು ಪ್ರಚೋದಿಸುವ ದೃಷ್ಟಿಕೋನಗಳನ್ನು ಹಾಗು ನವೀನ ಬೋಧನಾ ವಿಧಾನಗಳ ಕಥನಗಳನ್ನು ಹಂಚಿಕೊಳ್ಳಲು ಉತ್ತೇಜಿಸುತ್ತದೆ. ಶೈಕ್ಷಣಿಕ ರಂಗದ ಈ ವಿಚಾರ ಮಂಥನದಲ್ಲಿ ಶೈಕ್ಷಣಿಕ ಜ್ಞಾನ ಮತ್ತು ಪ್ರಾಯೋಗಿಕ ಅನುಭವಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರಯತ್ನ ನಮ್ಮದಾಗಿದೆ.

---

ಈ ಸಂಚಿಕೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಆಯಾ ಲೇಖಕರದ್ದೇ ಆಗಿರುತ್ತವೆ ಮತ್ತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧಿಕೃತ ಕಾರ್ಯನೀತಿ ಅಥವಾ ನಿಲುವನ್ನು ಪ್ರತಿಬಿಂಬಿಸುವುದಿಲ್ಲ.

# ಸಂಪಾದಕೀಯ



ಈ ಲರ್ನಿಂಗ್ ಕರ್ವ್ ಸಂಚಿಕೆಯು ಪ್ರತಿಯೊಬ್ಬರ ಜೀವನದ ಅತ್ಯಂತ ಪ್ರಮುಖ ಘಟ್ಟವಾಗಿರುವ ಬಾಲ್ಯದ ಜೀವನವನ್ನು ಕುರಿತು ಬೆಳಕು ಚೆಲ್ಲುತ್ತದೆ. ಶಿಕ್ಷಣದ ಇತರ ಅಂಶಗಳ ಬಗ್ಗೆ ಏನೇ ಭಿನ್ನಾಭಿಪ್ರಾಯಗಳು ಇದ್ದರೂ ಎಲ್ಲರೂ ಮಗುವಿನ ಜನನದಿಂದ ಹಿಡಿದು ಎಂಟು ವರ್ಷದವರೆಗಿನ ಅವಧಿಯು ತುಂಬಾ ಮಹತ್ವದ್ದು ಹಾಗೂ ಈ ಅವಧಿಯು ಮಗುವಿನ ಜೀವನವನ್ನು ನಿರ್ಮಿಸಬಹುದು ಅಥವಾ ಹಾಳುಮಾಡಬಹುದು ಎಂಬ ವಿಷಯವನ್ನು ಒಮ್ಮತದಿಂದ ಒಪ್ಪಿಕೊಳ್ಳುತ್ತಾರೆ. ಇದು ಎಷ್ಟು ಸಾರ್ವತ್ರಿಕವೆಂದರೆ ಎಲ್ಲ ಸಂಸ್ಕೃತಿಗಳಲ್ಲೂ ಇದು ಗ್ರಾಹ್ಯ ಸತ್ಯ.

ಈ ವಿಷಯವು ಎಷ್ಟು ಮಹತ್ವದ್ದು ಮತ್ತು ಅಗಾಧವಾದದ್ದೆಂದರೆ ನಮ್ಮ ತಂಡದ ಎಲ್ಲರೂ ಒಮ್ಮತದಿಂದ ಒಂದು ಇಡೀ ಸಂಚಿಕೆಯನ್ನು ಇದಕ್ಕಾಗಿಯೇ ಮೀಸಲಾಗಿರಿಸುವ ನಿರ್ಧಾರಕ್ಕೆ ಬಂದೆವು. ಶಿಕ್ಷಣ ತಜ್ಞರು ಮತ್ತು ಮನಃಶಾಸ್ತ್ರಜ್ಞರು ಇದನ್ನು ಯಾಕೆ ಪ್ರಧಾನ ಅವಧಿ ಎಂದು ಪರಿಗಣಿಸಿದ್ದಾರೆ, ಮಗುವಿನ ಪರಿಪೂರ್ಣ ಬೆಳವಣಿಗೆಗೆ ಹಿರಿಯರ ಮಧ್ಯ ಪ್ರವೇಶಗಳು ಯಾವಾಗ ಆಗಬೇಕು ಹಾಗೂ ದೀರ್ಘ ಕಾಲದ ಫಲಿತಾಂಶ ಪಡೆಯಲು ಇದನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ತಿಳಿದುಕೊಳ್ಳುವುದು ಮಕ್ಕಳ ಬೆಳವಣಿಗೆಯ ಕುರಿತು ಕಾರ್ಯನಿರತರಾದವರಿಗೆ ಎಡೆಬಿಡದ ಕಾಳಜಿ ಆಗಿರುತ್ತದೆ. ಮೊದಲಿಗೆ ಇದು ಪುಟ್ಟ ಮಗುವಿನ ಶೈಶವದ ಪೋಷಣೆಯನ್ನು ವ್ಯವಸ್ಥಿತವಾಗಿ ನಡೆಸುವ ತಂದೆ ತಾಯಿಯರಿಗೆ ತುಂಬಾ ಮಹತ್ವದ್ದಾಗಿರುತ್ತದೆ.

ಮಗುವಿನ ಬೆಳವಣಿಗೆಯ ಈ ಹಂತದಲ್ಲಿ ಪ್ರತಿಯೊಂದು ಅಂಶವೂ ಹೊಸ ಅಚ್ಚರಿಯೇ ಆಗಿರುವುದರಿಂದ ಪ್ರತಿಯೊಂದೂ ಕಲಿಕೆಯ ಅಂಶವಾಗಿರುತ್ತದೆ. ಅದು ಭಾಷೆಯನ್ನು ಕಲಿಯುವುದಾಗಿರಬಹುದು, ಚಲನೆಯ ಕೌಶಲ್ಯವಾಗಿರಬಹುದು, ಜೀವನಕ್ಕೆ ಅಗತ್ಯವಾಗಿರುವ ಕೌಶಲ್ಯ, ಮನುಷ್ಯರೊಡನೆ ಮಾತುಕತೆ, ಕಲಿಯುವುದು ಹೇಗೆ ಎಂಬುದರ ಕಲಿಕೆ ಮುಂತಾದ ಎಲ್ಲ ಅಂಶಗಳು ಮಗುವಿನ ಜೀವನಾರಂಭದ ವರ್ಷಗಳಲ್ಲಿ ಪ್ರತಿಕ್ಷಣದಲ್ಲಿಯೂ ಉಂಟಾಗುತ್ತಿರುತ್ತವೆ.

ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ಇದು ಸ್ಪಷ್ಟವಾಗಿ ಗೊತ್ತಿದೆ. ಈ ಕಾರಣಕ್ಕಾಗಿ ಅವು ತಮ್ಮಿಂದ ಸಾಧ್ಯವಾದಷ್ಟು ಉತ್ತಮ ಗುಣಮಟ್ಟದ ಶಿಶುವಿಹಾರದ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ ಕೊಡಲು ಬಯಸುತ್ತಿವೆ. ಆದರೆ ಇದು ನನಸಾಗುತ್ತಿದೆಯೇ? ಖಾಸಗಿ ಶಾಲೆಗಳ ಬಗ್ಗೆ ಹೇಳುವುದಾದರೆ ಇಲ್ಲಿ ಶಿಕ್ಷಣದ ಮೂಲಭೂತ ಗುಣಮಟ್ಟವನ್ನು ಉತ್ತಮ ಮಟ್ಟದಲ್ಲಿ ಇರಿಸಿಕೊಳ್ಳುವಂತೆ ನೋಡಿಕೊಳ್ಳುವ ಯಾವುದೇ ನಿಯಂತ್ರಕ ವ್ಯವಸ್ಥೆಯಿಲ್ಲ.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು ಆಡಳಿತ ಕೆಲಸಗಳಲ್ಲಿಯೇ ವ್ಯಸ್ತರಾಗಿರುವುದರಿಂದ ಅವರಿಗೆ ಮಕ್ಕಳಿಗೆ ಏನು ಅಗತ್ಯವೋ ಅದನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಇವೆರಡೂ ರೀತಿಯ ಶಾಲೆಗಳಲ್ಲೂ ಜಾಗದ ಕೊರತೆ ಕೂಡ ಒಂದು ಪ್ರಮುಖ ಸಮಸ್ಯೆಯಾಗಿದೆ ಹಾಗೂ ಮೂಲ ಸೌಲಭ್ಯದ ಕೊರತೆ ಇನ್ನೊಂದು ರೀತಿಯ ಅಡ್ಡಿಯಾಗಿದೆ. ಮಕ್ಕಳ ಮೊದಲ ಪಾಠಶಾಲೆಯಾಗಿರುವ ಮನೆಯಲ್ಲೂ ಕಳೆದ ಮೂವತ್ತು ವರ್ಷಗಳ ಹಿಂದೆ ಕಂಡು ಬರುತ್ತಿದ್ದ ಚಿತ್ರ ಈಗ ಕಂಡು ಬರುತ್ತಿಲ್ಲ. ದೈನಂದಿನ ಒತ್ತಡದಿಂದಾಗಿ ಮನೆಯಲ್ಲಿ ಪರಸ್ಪರ ಕೊಳ್ಳೊಡೆಗಳಿಗೆ ಅವಕಾಶವೇ ಸಿಗುತ್ತಿಲ್ಲ. ಇದರ ಜೊತೆಗೆ ಕ್ರಿಯಾಶೀಲ ಭಾಷಾ ಕೌಶಲ್ಯಗಳ ಅಗತ್ಯವಿರದ ಕಂಪ್ಯೂಟರ್, ಐಪಾಡ್, ಮೊಬೈಲ್ ಫೋನ್ ಮತ್ತು ಟೀವಿಗಳಿಂದಾಗಿ ಅಮೂಲ್ಯ ಸಮಯ ವ್ಯರ್ಥವಾಗುತ್ತಿವೆ.

ಈ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಲೇಖನಗಳನ್ನು ದೇಶದ ಪ್ರಖ್ಯಾತ ಮತ್ತು ಗೌರವಾನ್ವಿತ ಶಿಕ್ಷಣ ತಜ್ಞರು ಈ ಸಂಚಿಕೆಯಲ್ಲಿ ಬರೆದಿದ್ದಾರೆ. ಇದರ ಜೊತೆಗೆ ಆರಂಭಿಕ ಬಾಲ್ಯ ಶಿಕ್ಷಣದ (ಇಸಿಇ) ಪ್ರಾಯೋಗಿಕ ಅನುಭವ ಮತ್ತು ಮಾಡಿ ಕಲಿತ ವಿಧಾನಗಳನ್ನೂ ವಿವರಿಸಲಾಗಿದೆ. ಈ ಸಂಚಿಕೆಯಲ್ಲಿ ಎಳೆ ಮಕ್ಕಳ ಶಿಕ್ಷಣದಲ್ಲಿ ವಿವಿಧ ವಯಸ್ಸು ಮತ್ತು ಸಾಮರ್ಥ್ಯ ಮಟ್ಟದ ಸೇರ್ಪಡೆಯ ಯಶಸ್ವಿ ಪ್ರಯೋಗಗಳು, ಕ್ರಿಯಾಶೀಲತೆ ಮತ್ತು ಕಲೆಗಳ ಮಹತ್ವದ ರೂಪುರೇಖೆಗಳನ್ನು ವಿವರಿಸುವ ಲೇಖನಗಳಿವೆ. ಎಳೆಯ ವಯಸ್ಸಿನಲ್ಲಿ ಅಂಗ ಹಕ್ಕು ಮತ್ತು ಓದುವ ಕೌಶಲ್ಯ ಕಲಿಸುವುದನ್ನು ಕುರಿತು ಹೊಸ ಬೆಳಕು ಚೆಲ್ಲುವ ಲೇಖನ, ಪ್ರತಿ ಮಗುವಿಗೂ ಕಲಿಯುವ ಅವಕಾಶ ಇತ್ಯಾದಿ ವಿಷಯಗಳನ್ನು ಕುರಿತ ಲೇಖನಗಳೂ ಇವೆ. ಇದರಲ್ಲಿ ಇನ್ನೂ ಎರಡು ಅತಿ ಮಹತ್ವದ ಅಂಶಗಳಿವೆ ಅವು ಯಾವುವೆಂದರೆ ಸಂಶೋಧಕರಾಗಿ ಶಿಕ್ಷಕರ ಪಾತ್ರ ಮತ್ತು ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಮುನ್ನಡೆ ಇವುಗಳನ್ನು ಕುರಿತ ಸಂವಾದ ಚರ್ಚೆಗಳಿವೆ.

ಇನ್ನುಳಿದಂತೆ ಈ ಸಂಚಿಕೆಯಲ್ಲಿ ಕೆಲವು ಲೇಖಕರು ಅತ್ಯಮೂಲ್ಯವಾದ ಪ್ರಾಯೋಗಿಕ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಉದಾಹರಣೆಗೆ, ನಾವೆಂದೂ ಪರಿಗಣಿಸದಿರುವ ಒಂದು ಮುಖ್ಯವಾದ ಅಂಶವಾಗಿರುವ – ಶಾಲೆಗೆ ಸೇರಿಸುವ ಮೊದಲಿನ ಸಿದ್ಧತೆಯ ಕುರಿತು ಇಲ್ಲಿ ಚರ್ಚೆ ಮಾಡಲಾಗಿದೆ. ಇದು ಒಂದು ಪ್ರತ್ಯೇಕ ಲೇಖನದ ವಿಷಯವಾಗಿದ್ದು, ಇದು ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಮಾತೃಭಾಷೆ ಮತ್ತು ಇಂಗ್ಲಿಷ್ ನಡುವಿನ ಪೈಪೋಟಿಯಂತಹ ನಾಜೂಕು ವಿಷಯಗಳತ್ತ ಬೆಳಕು ಚೆಲ್ಲುತ್ತದೆ. ಕಲಿಯುವ ವಿಧಾನವು ಒಂದು ವಿಶಿಷ್ಟ ಪ್ರಕ್ರಿಯೆಯಾಗಿದ್ದು, ಬಾಲ್ಯದಲ್ಲಿಯೇ ಇದನ್ನು ಕುರಿತ ಪ್ರಕ್ರಿಯೆಯನ್ನು ಕಲಿಸುವ ಅಗತ್ಯವಿದೆ ಎಂಬುದನ್ನು ಪ್ರತಿಪಾದಿಸಲಾಗಿದೆ. ಇನ್ನೊಂದು ವಿಚಾರಪ್ರದ ಅಂಶವೆಂದರೆ ಮೇದಕ್‌ನಲ್ಲಿ ನಡೆದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಪ್ರಾಜೆಕ್ಟ್‌ನ ಕಾರ್ಯರೂಪದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಇದು ಈ ಸಂಚಿಕೆಯ ಲೇಖನಗಳ ಒಂದು ಸಮಗ್ರ ಪಟ್ಟಿಯಲ್ಲ. ಬದಲಾಗಿ ಈ ಸಂಚಿಕೆಯ ವಿಷಯಗಳ ವೈವಿಧ್ಯದ ಒಂದು ಇಣುಕು ನೋಟವಾಗಿದೆ. ನಮ್ಮ ಪ್ರಕಾರ ಇದು, ಕೇವಲ ಒಂದೊಂದು ಮಗುವಿನ ಮೇಲೆ ಮಾತ್ರವಲ್ಲದೆ, ದೇಶ ಮತ್ತು ಜಗತ್ತಿನ ಮೇಲೆ ಪರಿಣಾಮ ಬೀರಬಲ್ಲ ಅಪಾರ ಅಗಾಧತೆಯಿರುವ ವಿಷಯವೊಂದರ ಒಂದು ಸಮಗ್ರ ಪರಿಶೀಲನೆಯಾಗಿದೆ. ಸರಳವಾಗಿ ಹೇಳುವುದಾದರೆ ಈ ಪೃಥ್ವಿಯ ಭವಿಷ್ಯ ನಾವು ನಮ್ಮ ಸಣ್ಣ ಮಕ್ಕಳನ್ನು ಯಾವ ರೀತಿ ಬೆಳೆಸುತ್ತೇವೆ ಎಂಬುದರ ಮೇಲೆ ಅವಲಂಬಿತವಾಗಿದೆ.

ನನ್ನ ಮಾತನ್ನು ಮುಗಿಸುವ ಮುನ್ನ ಈ ಸಂಚಿಕೆಗೆ ನೆರವಾದ ಜಿಗೀಷಾ ಶಾಸ್ತ್ರಿ ಮತ್ತು ಕಿನ್ನರಿ ಪಾಂಡ್ಯ ಅವರಿಗೆ ನಾನು ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಅವರು ಈ ಸಂಚಿಕೆಗೆ ಸಲಹೆಗಾರರಾಗಲು ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಅವರ ನೆರವಿಲ್ಲದೆ ಹಾಗೂ ಸಂಚಿಕೆಯ ಪ್ರತಿಯೊಂದು ಹಂತದಲ್ಲೂ ಅವರ ನೇರ ಭಾಗಿಯಾಗುವಿಕೆ ಅಂದರೆ ನಿರ್ದಿಷ್ಟ ವಿಷಯಗಳನ್ನು ನಿರ್ಧರಿಸಲು ಅಗತ್ಯವಿರುವ ವ್ಯಕ್ತಿಗಳ ಹೆಸರು ಸೂಚಿಸುವುದು ಮತ್ತು ತಜ್ಞರ ಸಂಪರ್ಕ ಸಾಧಿಸಲು ಸಹಾಯ ನೀಡುವುದು ಇತ್ಯಾದಿಗಳಿಲ್ಲದೇ ಈ ಸಂಚಿಕೆಯನ್ನು ಹೊರ ತರಲು ಸಾಧ್ಯವಾಗುತ್ತಿರಲಿಲ್ಲ. ಅವರಿಬ್ಬರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಪ್ರೇಮ ರಘುನಾಥ್**

ಸಂಪಾದಕಿ, ಲರ್ನಿಂಗ್ ಕರ್ವ್

prema.raghunath@azimpremjifoundation.org

## ಈ ಸಂಚಿಕೆಯಲ್ಲಿ



### ವಿಭಾಗ ಎ
# ಬೃಹತ್ ಚಿತ್ರ


ಆರಂಭಿಕ ಬಾಲ್ಯ ಶಿಕ್ಷಣ: ‘ಲರ್ನಿಂಗ್ ಕರ್ವ್’ ಜೊತೆಗೆ ಸಂವಾದ 2
ಇಂದು ಪ್ರಸಾದ್

ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಹಕ್ಕು 9
ಡೋಲಶ್ರೀ ಮೈಸೂರ್

ಆರಂಭಿಕ ಬಾಲ್ಯ ಶಿಕ್ಷಣ: ಭವಿಷ್ಯದಲ್ಲಿನ ಸಾಧ್ಯತೆಗಳು 14
ವಿನಿತಾ ಕೌಲ್

ಆರಂಭಿಕ ವರ್ಷಗಳಲ್ಲಿ ಪೋಷಣೆ, ಆರೋಗ್ಯ ಹಾಗೂ ಶಿಕ್ಷಣ 20
ಶ್ರೀಲತಾ ರಾವ್ ಶೇಷಾದ್ರಿ ಹಾಗೂ ಸೂರಜ್ ಅಂಕುಶ್ ಪರಬ್

ಆರಂಭಿಕ ಬಾಲ್ಯ ಶಿಕ್ಷಣ: ಪ್ರವಾಹದಿಂದ ಪಾರಾಗುವ ಬಗೆ 24
ಕಿನ್ನರಿ ಪಾಂಡ್ಯ ಮತ್ತು ಜಿಗಿಷಾ ಶಾಸ್ತ್ರಿ

ಬಾಲ್ಯದಲ್ಲಿ ಲಿಂಗ ಆಧಾರಿತ ಹಕ್ಕುಗಳು 28
ಮೀನಾ ಸ್ವಾಮಿನಾಥನ್


### ವಿಭಾಗ ಬಿ
# ಚಿಕ್ಕ ಮಕ್ಕಳೊಂದಿಗೆ ಕೆಲಸ ಮಾಡುವುದು




ಶಿಶುವಿಹಾರಗಳನ್ನು ಸಮನ್ವಯ ಸ್ಥಳವಾಗಿಸುವುದು 36
ಎಸ್. ಆನಂದಲಕ್ಷ್ಮಿ

ವಿಶೇಷ ಅಗತ್ಯಗಳು: ಆರಂಭಿಕ ಬಾಲ್ಯದ ವರ್ಷಗಳಲ್ಲಿ ಅವನ್ನು ಗುರುತಿಸುವುದು ಮತ್ತು ಅಗತ್ಯ ಉಪಕ್ರಮಗಳು 41
ಅನುರಾಧ ನಾಯ್ಡು

ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಮೌಲ್ಯಮಾಪನ 46
ರೇಖಾ ಶರ್ಮಾ ಸೆನ್ ಮತ್ತು ಶ್ರುತಿ ಭಾರ್ಗವ

ಕುತೂಹಲ ಮತ್ತು ಕಲಿಕೆ 52
ಶರ್ಮಿಳಾ ಗೊವಾನ್ದೆ ನೀ ಮಾಂಡ್ಲಿಕ್

ಸೃಜನಶೀಲತೆ: ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಕಲೆಯ ಪಾತ್ರ 56
ಆಶಾ ಸಿಂಗ್

ಹುಟ್ಟುವ ಮೊದಲೇ ಕೂಸಿಗೆ ಇಂಗ್ಲಿಷ್ ಪಾಠವೇ? ಯಾಕಾಗಬಾರದು?: ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಮಾತೃಭಾಷೆ ವಿರುದ್ಧ ಇಂಗ್ಲಿಷ್ ಭಾಷೆ 62
ಅಜಿತ್ ಮೊಹಂತೆ

ಆರಂಭಿಕ ವರ್ಷಗಳಲ್ಲಿ ಭಾಷೆ ಮತ್ತು ಅಕ್ಷರ ಕಲಿಕೆ: ಇದು ಹೇಗಿರಬೇಕು? 66
ಶೈಲಜಾ ಮೆನನ್

ಓದುವ ಕೌಶಲ್ಯವನ್ನು ಪುಟ್ಟ ಮಕ್ಕಳಿಗೆ ಹೇಳಿಕೊಡುವುದು 71
ರಿಯಾ ಬ್ಯಾಜಿಲ

ಎಳೆಯ ವಯಸ್ಸಿನಲ್ಲಿ ಓದು-ಬರಹ 80
ಪಾರ್ಥಸಾರಥಿ ಮಿಶ್ರಾ

ಭಾಷಾ ಬೋಧನೆಯ ಬುನಾದಿಯಾಗಿ ಮಾತೃಭಾಷೆ 84
ರಣದೀಪ್ ಕೌರ್

ಶಾಲಾ ಸಿದ್ಧತೆ 88
ವೃಂದಾ ದತ್ತಾ






ವಿಭಾಗ ಸಿ

## ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಸಂಶೋಧನೆ


ಸಂಶೋಧನಾ ಕಾರ್ಯದಲ್ಲಿ ಭಾಗವಹಿಸುವವನಾಗಿ ಮತ್ತು ಸಂಶೋಧಕನಂತೆ ಶಿಕ್ಷಕನ ಪಾತ್ರ 92
ಟಿ.ಎಸ್. ಸರಸ್ವತಿ

ಐಸಿಡಿಎಸ್ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ಮೇದಕ್ ಜಿಲ್ಲೆಯಲ್ಲಿನ ಆರಂಭಿಕ ಬಾಲ್ಯ ಶಿಕ್ಷಣದ ಪರ್ಯಾಲೋಚನೆ – ಒಂದು ಸಾರಾಂಶ 96
'ಮೇದಕ್ ಆರಂಭಿಕ ಬಾಲ್ಯದ ಶಿಕ್ಷಣ ಉಪಕ್ರಮ' ತಂಡ, ಅಜೀಂ ಪ್ರೇಮ್‌ಜಿ ಫೌಂಡೇಷನ್

ಅಂಗನವಾಡಿಗಳಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ ಗುಣಮಟ್ಟವನ್ನು ಕುರಿತು ಪ್ರಾಥಮಿಕ ಶಾಲಾ ಶಿಕ್ಷಕರ ದೃಷ್ಟಿಕೋನ 102
ಸುಮಿತ್ ಅರೋರ





ವಿಭಾಗ ಡಿ

## ಕ್ಷೇತ್ರಾನುಭವ


ಧ್ವನಿ ಎತ್ತದ ಮಕ್ಕಳ ಹಕ್ಕುಗಳಿಗೆ ಮಾನ್ಯತೆ 107
ಅಪೂರ್ವಾ ಪಟೇಲ್

ಐಸಿಡಿಎಸ್ ವ್ಯವಸ್ಥೆಯೊಂದಿಗೆ ಪರಿಣಾಮಕಾರಿ ಕಾರ್ಯ ಸಾಧಿಸುವುದಕ್ಕಾಗಿ ಒಂದು ಅನುಕೂಲಕರ ಪರಿಸರ ವ್ಯವಸ್ಥೆಯ ರಚನೆ: ಅಕ್ಷರ ಫೌಂಡೇಷನ್ – ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮ 111
ವೈಜಯಂತಿ ಕೆ.

ಹ್ಯಾಂಡ್ಸ್ ಟು ಹಾರ್ಟ್ಸ್ ಇಂಟರ್‌ನ್ಯಾಷನಲ್ 115

ಭಾರತದ ಶಿಶುವಿಹಾರಗಳಲ್ಲಿ ರೆಜ್ಜಿಯೊ ಎಮಿಲಿಯಾ ಸಿದ್ಧಾಂತದ ಸಂಯೋಜನೆ 117
ನೀನಾ ಕಂಜಿರತ್

"ಮಕ್ಕಳ ಆಟವೇ" ಅವರ "ಕೆಲಸ": ಆರಂಭಿಕ ಬಾಲ್ಯ ಶಿಕ್ಷಣದ ಬಗ್ಗೆ ಸ್ಟೈನರ್ ವಾಲ್ಡೊರ್ಫ್‌ರ ದೃಷ್ಟಿಕೋನ 120
ಜಿ. ಮಣಿವನ್ನನ್

ಪ್ರೇಮಾ ರಘುನಾಥ್ ಅವರಿಂದ ಪುಸ್ತಕ ವಿಮರ್ಶೆ 123
ಪ್ರೇಮಾ ರಘುನಾಥ್









ವಿಭಾಗ ಎ

# ಬೃಹತ್ ಚಿತ್ರ



# ಆರಂಭಿಕ ಬಾಲ್ಯ ಶಿಕ್ಷಣ: 'ಲರ್ನಿಂಗ್ ಕರ್ವ್' ಜೊತೆಗೆ ಸಂವಾದ

**ಇಂದು ಪ್ರಸಾದ್**

ಪ್ರಸ್ತುತ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣವೊಂದೇ ನಿಯಮಗಳ ಕಟ್ಟುಪಾಡುಗಳಿಲ್ಲದ ಅನಿಯಂತ್ರಿತ ವಲಯವಾಗಿದೆ. ಶಾಲಾ ಶಿಕ್ಷಣಕ್ಕೆ ಹಲವಾರು ನಿಯಮಗಳು, ನೀತಿ ರಚನೆಗಳು ಮತ್ತು ಅನೇಕ ಕಾರ್ಯಚೌಕಟ್ಟುಗಳು ಹೀಗೆ ಬಹಳಷ್ಟು ನಿಯಮಗಳಿವೆ.ಈಗ ಸಾರ್ವತ್ರಿಕ ಶಾಲಾ ಶಿಕ್ಷಣಕ್ಕೂ ನಿಯಮ ಬಂದಿದೆ. ಗ್ರಾಮೀಣ ಪ್ರದೇಶದಲ್ಲಿ ಸರ್ಕಾರದ ಕಾರ್ಯಕ್ರಮವಾದ ಅಂಗನವಾಡಿ ಎಂಬ ಅಂಗನವಾಡಿಗಳಲ್ಲಿ ಆರಂಭಿಕ ಬಾಲ್ಯದ ಶಿಕ್ಷಣ ವ್ಯವಸ್ಥೆ ಇದೆ. ಆದರೆ ಖಾಸಗೀ ಪುಟ್ಟ ಮಕ್ಕಳ ಶಾಲೆಗಳಿಗೆ ಯಾವುದೇ ನಿಯಮಗಳಾಗಲೀ ನಿರ್ಬಂಧವಾಗಲಿ ಇಲ್ಲ. ಹೀಗಾಗಿ ನಾನು ಇಂದು ನನ್ನ ಮನೆಯಲ್ಲಿ ಒಂದು ಶಿಶುವಿಹಾರವನ್ನು ಪ್ರಾರಂಭಿಸುತ್ತೇನೆ ಎಂದು ಹೊರಟರೆ ನನ್ನನ್ನು ಪ್ರಶ್ನಿಸುವವರು ಯಾರೂ ಇಲ್ಲ. ನಿಮ್ಮ ಪಠ್ಯಕ್ರಮ ಏನು, ಯಾವ ಶಿಕ್ಷಣ ಮಂಡಳಿಯ ನಿಯಮವನ್ನು ಅನುಸರಿಸುತ್ತಿದ್ದೀರಿ, ಯಾವ ವಯಸ್ಸಿನ ಮಕ್ಕಳನ್ನು ದಾಖಲಿಸಿಕೊಳ್ಳುತ್ತೀರಿ? ಹದಿನೆಂಟು ತಿಂಗಳ ಮಕ್ಕಳನ್ನು ತೆಗೆದುಕೊಳ್ಳುವುದು ನ್ಯಾಯಸಮ್ಮತವೇ? ಅಥವಾ ದಾಖಲಾತಿಗೆ ೩ ವರ್ಷ ತುಂಬಿರಲೇಬೇಕೇ? ಕನಿಷ್ಠ ಸುರಕ್ಷಾ ನಿಯಮಗಳನ್ನು ಪಾಲಿಸುತ್ತಿರುವಿರಾ? ಶಿಕ್ಷಕರು ತರಬೇತಿ ಪಡೆದಿರುವರೇ? ಅವರು ಏನು ತರಬೇತಿ ಪಡೆದಿರಬೇಕು? – ಎಂಬ ಪ್ರಶ್ನೆಗಳನ್ನು ನನಗೆ ಯಾರೂ ಕೇಳುವುದಿಲ್ಲ. ಹೀಗಾಗಿ, ಇದು ಯಾರು ಏನುಬೇಕಾದರೂ ಮಾಡಿಕೊಳ್ಳಬಹುದಾದ ಮುಕ್ತ ವಲಯವಾಗಿದೆ. ಆದ್ದರಿಂದ ಇಂದು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕಾಗಿ ಅನೇಕ ಖಾಸಗೀ ಕೇಂದ್ರಗಳು ನಾಯಿಕೊಡೆಯಂತೆ ಬೆಳೆಯುತ್ತಿವೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಡೇ–ಕೇರ್ ಸೆಂಟರ್, ಕ್ರೆಷ್, ಶಿಶುವಿಹಾರಗಳು ವಿಪರೀತವಾಗಿ ಹುಟ್ಟಿಕೊಳ್ಳುತ್ತಿವೆ. ಇವುಗಳನ್ನು ಪ್ರಾರಂಭಿಸಲು ಮತ್ತು ನಡೆಸಿಕೊಂಡು ಹೋಗಲು ಯಾವುದೇ ನಿಯಮಗಳಿಲ್ಲ. ಇದೇ ಈ ವಿಷಯದಲ್ಲಿ ಅತಿ ದೊಡ್ಡ ಆತಂಕದ ಅಂಶ. ಏಕೆಂದರೆ, ಮಕ್ಕಳ ಸುರಕ್ಷೆ, ಅವರ ಕಲಿಕೆ, ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಇದು ತೀವ್ರವಾದ ಪರಿಣಾಮ ಬೀರುತ್ತದೆ. ಮಗುವಿನ ಬೆಳವಣಿಗೆಯ ಮಹತ್ವದ ಘಟ್ಟಗಳಲ್ಲಿ ಎಳೆಯ ವಯಸ್ಸು ಒಂದು ಅತ್ಯಂತ ಮಹತ್ವದ ಘಟ್ಟ.

ಪಟ್ಟಣ ಪ್ರದೇಶದಲ್ಲಿ ಈ ಚಿತ್ರ ಕಂಡರೆ, ಸರ್ಕಾರದಿಂದ ನಿಯಂತ್ರಿತವಾದ ಅಂಗನವಾಡಿಗಳಿರುವ ಗ್ರಾಮೀಣ ಪ್ರದೇಶಗಳಲ್ಲಿ, ಬಹಳಷ್ಟು ರಾಜ್ಯಗಳಲ್ಲಿ ಪಠ್ಯಕ್ರಮದ ಮಾರ್ಗದರ್ಶನ ಮತ್ತು ಪೌಷ್ಟಿಕ ಆಹಾರ ನಿಗದಿಪಡಿಸಿದ ಗುಣಮಟ್ಟಗಳು ಪ್ರಶಂಸಾರ್ಹವಾದರೂ ಕಾರಣಾಂತರಗಳಿಂದ ಅವುಗಳ ಅನುಷ್ಠಾನ ತೀರ ಕಳಪೆಯದ್ದಾಗಿದೆ. ಹೀಗಾಗಿ, ನಗರ, ಅರೆ–ನಗರ, ಗ್ರಾಮೀಣ ಪ್ರದೇಶದಲ್ಲಿನ ಅನಿಯಂತ್ರಿತ ಖಾಸಗಿ ತಾಣಗಳು ಒಂದುಕಡೆ ಮತ್ತು ಕಳಪೆ ನಿರ್ವಹಣೆಯಿರುವ ನಿಯಂತ್ರಿತ ಸರ್ಕಾರಿ ಅಂಗನವಾಡಿಗಳು ಇನ್ನೊಂದುಕಡೆ ಈ ವಲಯದಲ್ಲಿ ನಮಗೆ ಕಂಡುಬರುತ್ತವೆ. ತಮಿಳುನಾಡು ತನ್ನ ಐಸಿಡಿಎಸ್ (ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳು) ಕಾರ್ಯಕ್ರಮವನ್ನು ಚೆನ್ನಾಗಿ ಕಾರ್ಯರೂಪಕ್ಕೆ ತರುತ್ತಿದೆ. ಆದರೆ, **ಚೆನ್ನಾಗಿ** ಎನ್ನುವುದು ಹೇಗೆಂದರೆ, ದೇಶದಲ್ಲಿನ ಉಳಿದ ಪ್ರದೇಶಗಳಲ್ಲಿನ ಈ ಕಾರ್ಯಕ್ರಮದ ನಿರ್ವಹಣೆಯೊಂದಿಗೆ ಹೋಲಿಸಿದಾಗ ಮಾತ್ರ ಚೆನ್ನಾಗಿ ನಡೆಯುತ್ತಿದೆ ಎಂದು ಕಾಣುವಂತಹದ್ದಾಗಿದೆ. ಕೆಲವು ಖಾಸಗೀ ಸಂಸ್ಥೆಗಳು ಅನಿಯಂತ್ರಿತವಾಗಿದ್ದರೂ ಉತ್ತಮವಾದ ಸೇವೆಯನ್ನು ನೀಡುತ್ತಿರಬಹುದೋ ಏನೋ ನಮಗೆ ತಿಳಿದಿಲ್ಲ. ವಾಸ್ತವವಾಗಿ ಏನಾಗುತ್ತಿದೆ ಎಂದು ಹೇಳುವುದಕ್ಕೆ ಯಾವುದೇ ರೀತಿಯ ಸಂಶೋಧನೆಗಳಾಗಲೀ, ಅಧ್ಯಯನಗಳಾಗಲಿ ಇಲ್ಲವೆಂದೇ ಹೇಳಬಹುದು. ಪಕ್ಕದ ಮನೆಯವರು ತಮ್ಮ ಮನೆಯಲ್ಲಿರುವ ಒಂದು ಕೋಣೆಯಲ್ಲಿ ಅಥವಾ ಗ್ಯಾರೇಜಿನಲ್ಲಿ ಅಥವಾ ಕೈತೋಟದಲ್ಲಿ ನಡೆಸುತ್ತಿರುವ ಶಿಶುವಿಹಾರಗಳಿಂದ ಸಾಮಾನ್ಯ ಜನರಿಗೆ ನಿಲುಕದಿರುವ ಅತ್ಯುತ್ತಮವಾದ ಸುಸಂಸ್ಕೃತ ಶಿಶುವಿಹಾರಗಳವರೆಗೂ ಒಂದು ಶ್ರೇಣಿಯನ್ನೇ ನಾವು ಈ ವಲಯದಲ್ಲಿ ಕಾಣಬಹುದು. ಇದೊಂದು ಬೃಹತ್ತಾದ ವಲಯವಾಗಿದ್ದು, ಇದು ಒಂದು ಸಾಮಾನ್ಯ ತತ್ವವನ್ನು ಹೊಂದಿಲ್ಲ. ಹೀಗಾಗಿ ಇದಕ್ಕೆ 'ಖಾಸಗೀ ಕ್ಷೇತ್ರ' ಎಂದು ಹೆಸರಿಸಬಹುದಾದ ಏಕರೂಪದ ಅಸ್ತಿತ್ವವಿಲ್ಲ.

ಇನ್ನೊಂದು ಪ್ರಮುಖವಾದ ಆಯಾಮವೆಂದರೆ ವ್ಯವಸ್ಥಿತ ಕಲಿಕಾ ಪರಿಸರದ ಯಾವುದೇ ಪೂರ್ವ ತಿಳುವಳಿಕೆ ಇಲ್ಲದ ಮತ್ತು ಅನುಭವವಿಲ್ಲದ ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಯ ಒಂದನೇ ತರಗತಿಗೆ ದಾಖಲಾಗುತ್ತಿದ್ದಾರೆ. ಮನೆಯಲ್ಲಿ

ಅಥವಾ ಸೂಕ್ತವಾಗಿ ಕಾರ್ಯ ನಿರ್ವಹಿಸದಿರುವ ಅಥವಾ ಹಾಗೇ ತೂಗಿಸಿಕೊಂಡು ಹೋಗುತ್ತಿರುವ ಅಂಗನವಾಡಿಗಳಲ್ಲಿ ತಮ್ಮ ಜೀವನದ ಮೊದಲ ಐದೂವರೆ ವರ್ಷವನ್ನು ಕಳೆದಿರುವ ಅನೇಕಾನೇಕ ಮಕ್ಕಳು ಶಾಲೆಯ ಮೊದಲ ಅನುಭವವನ್ನು ಪಡೆಯಲು ಒಂದನೇ ತರಗತಿಗೆ ದಾಖಲಾಗುತ್ತಿದ್ದಾರೆ. ಹೀಗಾಗಿ, ಅನೇಕ ಸನ್ನಿವೇಶಗಳಲ್ಲಿ ಪೋಷಕರಿಬ್ಬರೂ ದುಡಿಯುತ್ತಿರುವ, ಕೌಟುಂಬಿಕ ಬೆಂಬಲದ ವ್ಯವಸ್ಥೆ ಇರುವ, ಕೆಲವೊಮ್ಮೆ ಇಲ್ಲದಿರುವ, ವ್ಯವಸ್ಥೆಯನ್ನು ಹೊಂದಿರುವಲ್ಲಿ ವಾಸ್ತವಿಕತೆಯನ್ನು ನೋಡಿದಾಗ ಪೌಷ್ಟಿಕ ಆಹಾರದ ಕೊರತೆ, ಆರೋಗ್ಯದ ಮತ್ತು ಸುರಕ್ಷೆಯ ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಹೊರಗಿನ ಪ್ರಪಂಚದ ಬಗ್ಗೆ ಅರಿವಿಲ್ಲದೇ ತಮ್ಮ ಬಾಲ್ಯದ ಸುಮಾರು ಆರುವರ್ಷಗಳನ್ನು ಕಳೆದಿರುವ ಬೃಹತ್ ಸಂಖ್ಯೆಯಲ್ಲಿನ ಮಕ್ಕಳು ನಮ್ಮಲ್ಲಿರುವುದನ್ನು ಕಾಣಬಹುದು. ಎಲ್ಲಾ ಕಡೆಯಲ್ಲೂ ಈ ರೀತಿ ಆಗುತ್ತಿದೆಯೆಂದಲ್ಲ, ಆದರೆ, ನಮ್ಮ ದೇಶದಲ್ಲಿನ ಮಕ್ಕಳ ಮೊದಲ ಆರು ವರ್ಷಗಳಲ್ಲಿ ಏನಾಗುತ್ತಿದೆ ಎನ್ನುವುದರ ಒಂದು ವಿಶಾಲ ಚಿತ್ರ ಇದಾಗಿದೆ.

ನಗರ ಪ್ರದೇಶಕ್ಕೆ ವಲಸೆ ಬರುವವರದ್ದು ಮತ್ತೊಂದು ವಲಯ. ಇಲ್ಲಿ ಪುಟ್ಟ ಮಕ್ಕಳು ತಮ್ಮ ಕುಟುಂಬದವರೊಡನೆ ಕಟ್ಟಡ ನಿರ್ಮಾಣದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸ್ಥಳಾಂತರಗೊಳ್ಳುತ್ತಿರುತ್ತಾರೆ. ಇವರ ಗತಿ ಏನು? ಸಾಮಾನ್ಯವಾಗಿ ಇವರು ಅನಾರೋಗ್ಯಕರ ಮತ್ತು ಅಸುರಕ್ಷಿತ ವಾತಾವರಣದಲ್ಲಿ ವಾಸಿಸುತ್ತಿರುತ್ತಾರೆ. ನಿರ್ಮಾಣ ಯೋಜನೆಯ ಗಾತ್ರಕ್ಕೆ ತಕ್ಕಂತೆ ಕಟ್ಟಡ ನಿರ್ಮಾಣಕಾರರು ಕ್ರೆಷ್ ಅನ್ನು ನಡೆಸಬೇಕು. ಆದರೆ ಬಹಳಷ್ಟು ನಿರ್ಮಾಣ ಸಂಸ್ಥೆಗಳು ಇದನ್ನು ಮಾಡುವುದಿಲ್ಲ. ಹೀಗಾಗಿ ಇದೂ ಒಂದು ಬಿಗಿ ನಿಯಂತ್ರಣವನ್ನು ಹೊಂದಿರದ ವಲಯ. ಮಾಲಿನ್ಯ, ಅಸುರಕ್ಷೆ, ಸುತ್ತಲೂ ಸಾಮಾಗ್ರಿಗಳಿಂದ ತುಂಬಿದ, ಮೇಲ್ವಿಚಾರಣೆಯ ಕೊರತೆ, ಶುಚಿತ್ವದ ಕೊರತೆ, ಪೌಷ್ಟಿಕಾಂಶದ ಕೊರತೆ ಇರುವ ಪರಿಸರದ ಚಿತ್ರಣವನ್ನು ನೋಡಿದಲ್ಲಿ, ಇಂತಹ ಮಕ್ಕಳ ಪರಿಸ್ಥಿತಿ ಬಹಳ ದುಸ್ತರವಾಗಿರುತ್ತದೆ. ಇದರ ಜೊತೆಯಲ್ಲಿ, ತಮ್ಮ ಹಳ್ಳಿಗಳಿಂದ ವಲಸೆ ಬಂದಿರುವುದರಿಂದ ಅವರು ತಮ್ಮದೇ ಮನೆಯ ನೆಮ್ಮದಿಯ ಸೌಲಭ್ಯದಿಂದಲೂ ವಂಚಿತರಾಗಿರುತ್ತಾರೆ. ಇಂತಹವರು ತಮ್ಮ ಗ್ರಾಮ, ಸಮುದಾಯ ಮತ್ತು ಸಂಬಂಧಿಕರಿಂದ ದೂರ ಉಳಿದು ಪ್ರತ್ಯೇಕ ಕುಟುಂಬಗಳಲ್ಲಿ ವಾಸಿಸುತ್ತಿರುತ್ತಾರೆ ಮತ್ತು ಇದರಲ್ಲಿ ಬಹಳಷ್ಟು ಸಮಯ ತಮ್ಮದೇ ಭಾಷೆಗಿಂತ ಭಿನ್ನವಾದ ಭಾಷೆಯನ್ನು ಹೊಂದಿರುವ ಸ್ಥಳಗಳಲ್ಲಿ ವಾಸಿಸುತ್ತಿರುತ್ತಾರೆ.

ಕೌಟುಂಬಿಕ ರಚನೆಯು ಸಂಪೂರ್ಣವಾಗಿ ಬದಲಾಗುತ್ತಿರುವುದರ ಸಂಧರ್ಭದಲ್ಲಿ ಇಂದು ನಾವಿದ್ದೇವೆ ಹಾಗೂ ಇದು ನಗರ ಪ್ರದೇಶ ಮತ್ತು ಅರೆ-ನಗರ ಪ್ರದೇಶಗಳನ್ನು ಹೆಚ್ಚಾಗಿ ಬಾಧಿಸುತ್ತಿದೆ. ಇಂದು ಅಜ್ಜಿ-ಅಜ್ಜ, ಚಿಕ್ಕಮ್ಮ, ಚಿಕ್ಕಪ್ಪ, ಮಾವ, ಅತ್ತೆ ಮತ್ತು ಇತರ ಮಕ್ಕಳು ಕೂಡಿ ಬದುಕುವ ಅವಿಭಕ್ತ ಕುಟುಂಬಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ಹಿಂದೆ, ನೀವು ಮನೆಯಲ್ಲಿರುವ ಹತ್ತು ಮಕ್ಕಳಲ್ಲಿ ಒಬ್ಬರಾಗಿದ್ದಿರಿ, ನಿಮ್ಮ ಅಜ್ಜಿ ನಿತ್ಯ ಕಥೆಗಳನ್ನು ಹೇಳುತ್ತಿದ್ದರು, ನಿಮ್ಮೊಡನೆ ಆಟವಾಡಲು ಸದಾ ಯಾರಾದರೊಬ್ಬರು ಇರುತ್ತಿದ್ದರು. ಇದಲ್ಲದೇ ಎಲ್ಲಾ ರೀತಿಯ ಪದಾರ್ಥಗಳು ತುಂಬಿದ ಅಡುಗೆ ಮನೆ ತೋಟ, ಸಾಕು ಪ್ರಾಣಿಗಳು ಇರುತ್ತಿದ್ದವು ಹಾಗೂ ಇಲ್ಲಿ ನಡೆಯುತ್ತಿದ್ದ ಅನೇಕ ಚಟುವಟಿಕೆಗಳು ಮಕ್ಕಳಿಗೆ ಕಲಿಯಲು ಅನುಕೂಲಕರವಾದ ಪರಿಸರವನ್ನು ಒದಗಿಸುತ್ತಿದ್ದವು. ಮನೆಯಲ್ಲಿ ಅನೇಕ ವಯಸ್ಕರು ಇರುತ್ತಿದ್ದುದರಿಂದ ಹಾಗೂ ಎಲ್ಲ ರೀತಿಯವರೂ ಇರುತ್ತಿದ್ದುದರಿಂದ ಮಗುವಿಗೆ ಭಾಷೆಯ ಅನುಭವ ಚೆನ್ನಾಗಿ ಆಗುತ್ತಿತ್ತು. ಕಲಿಯಲು ಮತ್ತು ಬೆಳೆಯಲು ರಚನಾತ್ಮಕವಾಗಿ ಇಲ್ಲದಿದ್ದರೂ, ಮಗುವಿಗೆ ಎಲ್ಲಾ ರೀತಿಯ ಅವಕಾಶಗಳು ದೊರೆಯುತ್ತಿತ್ತು. ನಿಧಾನವಾಗಿ ಒಂದು ಅಥವಾ ಎರಡು ಮಕ್ಕಳಿರುವ ಕುಟುಂಬಗಳು ಪ್ರಾರಂಭವಾದವು ಮತ್ತು ಇಂತಹ ಒಡನಾಟಗಳು ಕಡಿಮೆಯಾಗುತ್ತಾ ಬಂತು. ಹೀಗಾಗಿ ಮಗುವಿಗೆ ಹಂಚಿಕೊಳ್ಳುವುದು, ಕೂಡಿ ಬಾಳುವುದು, ಭಾಷೆಯ ಸೂಕ್ಷ್ಮತೆಯನ್ನು ಕಲಿಯುವುದು, ಕಾರಣವನ್ನು ಕಂಡುಕೊಳ್ಳುವುದು ಹೀಗೆ ಅನೇಕ ಅನುಭವಗಳನ್ನು ಅರ್ಥ ಮಾಡಿಕೊಳ್ಳುವುದು ಅಸಾಧ್ಯವಾಗುತ್ತಾ ಬಂತು. ಉದಾಹರಣೆಗೆ, ಎರಡು ಅಥವಾ ಮೂರು ಮಕ್ಕಳಿರುವ ಮನೆಯಲ್ಲಿ ಪುಟ್ಟ ಮಗುವು ಶೀಘ್ರವಾಗಿ ಕಲಿಯುವುದನ್ನು ನೀವು ಗಮನಿಸಿರಬಹುದು. ಇದರರ್ಥ ಸಣ್ಣ ಮಗು ಹೆಚ್ಚು ಬುದ್ಧಿವಂತ ಅಥವಾ ದೊಡ್ಡ ಮಗು ಕಡಿಮೆ ಬುದ್ಧಿ ಇರುವವ ಎಂದರ್ಥವಲ್ಲ. ಇದು ದೊರೆಯುವ ಅವಕಾಶವನ್ನು ಎತ್ತಿ ಹೇಳುತ್ತದೆ - ಸಣ್ಣ ಮಗುವಿನ ಮೆದುಳು ಚುರುಕಾಗಿರುವ ಮತ್ತು ಸ್ಪಂಜಿನಂತೆ ಶೀಘ್ರವಾಗಿ ಹೀರಿಕೊಳ್ಳುವಂತಿರುವ ಘಟ್ಟದಲ್ಲಿ ಅವನಿಗೆ/ಅವಳಿಗೆ ಈಗಾಗಲೇ ಸಾಕಷ್ಟು ಕಲಿತಿರುವ ದೊಡ್ಡ ಮಗುವಿನ ಸಾಂಗತ್ಯದ ಅವಕಾಶ ದೊರೆಯುತ್ತದೆ.

ಮೊದಲ ಆರು ವರ್ಷಗಳು ಮಗುವಿನ ಬೆಳವಣಿಗೆಯಲ್ಲಿ ಅತ್ಯಂತ ಪ್ರಮುಖವಾದ ಘಟ್ಟ ಎಂದು ಸಂಶೋಧನೆಗಳು ಹೇಳುತ್ತವೆ- ಬೌದ್ಧಿಕ/ಗ್ರಹಣಶಕ್ತಿ ಬೆಳವಣಿಗೆ, ಭಾವನಾತ್ಮಕ ಬೆಳವಣಿಗೆ, ಸಾಮಾನ್ಯ ಆರೋಗ್ಯ, ಕಲಿಕೆಯತ್ತ ಮನೋಧೋರಣೆಯ ಬೆಳವಣಿಗೆ, ಇತರರ ಬಗ್ಗೆ ಮನೋಧೋರಣೆ ಮುಂತಾದವು ಈ ವಯಸ್ಸಿನಲ್ಲಿ ಅಭಿವೃದ್ಧಿಗೊಳ್ಳುತ್ತದೆ. ಹಸುಗೂಸುಗಳ ವಿಷಯದಲ್ಲಿ ಇದು ಬಹಳ ದೊಡ್ಡದಾಗಿ ಕಾಣಬಹುದು ಆದರೆ ಇದು ಅತ್ಯಂತ ಪ್ರಮುಖವಾದದ್ದು. ಏಕೆಂದರೆ ಇದು ಬಹಳಷ್ಟು ನಿರೀಕ್ಷೆಗಳನ್ನು ಮತ್ತು ನಯಗೊಳಿಸುವಿಕೆಯನ್ನು ಗಟ್ಟಿಗೊಳಿಸುತ್ತದೆ.

ಮಕ್ಕಳು ತಮ್ಮ ಮೊದಲ ಆರು ವರ್ಷಗಳಲ್ಲಿ ಭಾಷೆಯನ್ನು ಕಲಿಯುವಷ್ಟು ಸುಲಭವಾಗಿ ತಮ್ಮ ಜೀವಿತಾವಧಿಯಲ್ಲಿ ಮುಂದೆಂದೂ ಕಲಿಯಲಾರರು. ಮೆದುಳಿನ ಬೆಳವಣಿಗೆಯನ್ನು ಗಮನಿಸಿದಾಗ, ಜೀವನದ ಮೊದಲ ಹನ್ನೆರಡು ವರ್ಷಗಳಲ್ಲಿ, ಅದರಲ್ಲೂ ವಿಶೇಷವಾಗಿ ಮೊದಲ ಆರು ವರ್ಷಗಳಲ್ಲಿ ನರ ಸಂಪರ್ಕಗಳು ರೂಪುಗೊಳ್ಳುವ ವಿಧಾನ ಅನಂತರದಲ್ಲಿ ಎಂದೂ ಪುನರಾವರ್ತಿಸುವುದಿಲ್ಲ ಎಂದು ಕಂಡುಬರುತ್ತದೆ. ರೂಪುಗೊಳ್ಳುವ ನರ ಸಂಪರ್ಕಗಳು ವಾಸ್ತವವಾಗಿ ನಿಮ್ಮ ಒಟ್ಟು ಕಲಿಕೆಯದಾಗಿರುತ್ತದೆ. ವೈಜ್ಞಾನಿಕವಾಗಿ ಹೇಳುವ ವಿಧಾನ ಇದಲ್ಲದಿದ್ದರೂ, ಸರಳವಾಗಿ ಅರ್ಥಮಾಡಿಕೊಳ್ಳುವ ಮಾರ್ಗ ಇದಾಗಿದೆ. ಇದು ಮಕ್ಕಳಿಗೆ ದೊರಕುವ ವಿವಿಧ ಅನುಭವಗಳಿಂದಾಗುತ್ತದೆ ಮತ್ತು ಈ ಅನುಭವಗಳು ಮಕ್ಕಳಿಗೆ ಶೀಘ್ರವಾಗಿ ಕಲಿಯಲು ಸಹಾಯ ಮಾಡುತ್ತವೆ. ಇದರರ್ಥ ತಮ್ಮ ವಯಸ್ಸಿಗೆ ಮುನ್ನವೇ ಕಲಿಯಬೇಕು ಎಂಬುದಲ್ಲ. ಇದರರ್ಥ ಕೆಲವನ್ನು ನೋಡಿ ಅರ್ಥಮಾಡಿಕೊಳ್ಳುವ, ಪರಿಕಲ್ಪನೆಗಳನ್ನು ಬೆಳಸಿಕೊಳ್ಳುವ, ನಮ್ಮ ಸುತ್ತಲಿನ ಚಲನಶೀಲತೆಯನ್ನು ಅರ್ಥೈಸಿಕೊಳ್ಳುವ, ಸಂಪರ್ಕಗಳನ್ನು ಕಂಡುಕೊಳ್ಳುವ, ಸಂಬಂಧಗಳನ್ನು ಕಾಣುವ ಸಾಮರ್ಥ್ಯವನ್ನು ಬೆಳಸಿಕೊಳ್ಳುವುದರ ಬಗ್ಗೆ ಹೇಳುತ್ತಿದ್ದೇವೆ. ಇವೆಲ್ಲವೂ ಸಣ್ಣ ವಯಸ್ಸಿನಲ್ಲೇ ಪ್ರಾರಂಭವಾಗುತ್ತದೆ. ಭಾಷೆಯ ಪಾತ್ರ ಇದರಲ್ಲಿ ಹೆಚ್ಚಿನ ಮಹತ್ವವನ್ನು ಹೊಂದಿದೆ. ಏಕೆಂದರೆ ಜ್ಞಾನ ಮತ್ತು ಭಾಷೆ ಇವೆರಡೂ ಅತ್ಯಂತ ನಿಕಟ ಸಂಪರ್ಕವನ್ನು ಹೊಂದಿವೆ. ನಾವು ನಮ್ಮ ಮತ್ತು ಇತರರ ವಿಶ್ವವನ್ನು ಅರ್ಥೈಸಿಕೊಳ್ಳುವುದು ಭಾಷೆಯ ಮುಖಾಂತರವೇ ಆಗಿದೆ. ಹೀಗಾಗಿ, ಮಕ್ಕಳು ಸಣ್ಣವರಿರುವಾಗಲೇ ಅವರೊಂದಿಗೆ ಹೆಚ್ಚು ಮಾತನಾಡುವುದು, ಅವರಿಗೆ ವಿವರಿಸುವುದು, ಅವರೊಂದಿಗೆ ಚರ್ಚಿಸುವುದು ಅವರ ಭಾಷಾ ಬೆಳವಣಿಗೆಗೆ ಅದ್ಭುತವಾದ ನೆರವನ್ನು ನೀಡುತ್ತದೆ. ಮಕ್ಕಳು ಮಾತನಾಡಲು ಪ್ರಾರಂಭಿಸಿಲ್ಲದಿರಬಹುದು ಮತ್ತು ಮಾತನಾಡಲು ಇಂತಹದ್ದೇ ಭಾಷೆಯ ಅರಿವಿಲ್ಲದಿರಬಹುದು. ಯಾರೇ ಆದರೂ ಆಲೋಚಿಸುವಾಗ ಮೊದಲು ಬಳಕೆಯಾಗುವುದು ಭಾಷೆ, ಮತ್ತು ಮಕ್ಕಳು ನಿರಂತರವಾಗಿ ಆಲೋಚನೆಯಲ್ಲಿ ತೊಡಗಿಕೊಂಡಿರುತ್ತಾರೆ. ಮಾತನಾಡುವುದು, ಓದುವುದು ಮತ್ತು ಬರವಣಿಗೆ ಅನಂತರ ಬರುತ್ತದೆ.

ಯಾವ ಮನೆಯಲ್ಲಿ ಮುದ್ರಿತ/ಬರವಣಿಗೆಯ ಪದಗಳಿಗೆ ಹೆಚ್ಚು ಮೌಲ್ಯವನ್ನು ನೀಡುವರೋ ಅಂತಹ ಮನೆಯಲ್ಲಿ ಒಂದು ಮಗುವು ತನ್ನ ತಾಯಿ, ತಂದೆ, ಅಜ್ಜಿ, ಒಡಹುಟ್ಟಿದವರೊಡನೆ ಪುಸ್ತಕದ ಪುಟಗಳನ್ನು ತಿರುಗಿಸುತ್ತಾ, ಕಥೆಗಳನ್ನು ಕೇಳುತ್ತಾ ಬರೆದಿರುವ/ಮುದ್ರಿತ ಪದಗಳು ಮತ್ತು ಕಥೆಯ ನಡುವಿನ ಸಂಪರ್ಕವನ್ನು ಅರ್ಥಮಾಡಿಕೊಳ್ಳುವುದರಲ್ಲಿ, ಮುದ್ರಿತ/ಬರವಣಿಗೆಯ ಪದಗಳಲ್ಲಿ ವಿಶ್ವದಲ್ಲಿನ ಅದ್ಭುತಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರತಿ ನಿತ್ಯ ಕೆಲವೊಂದು ಗಂಟೆಗಳಾದರೂ ವ್ಯಯಿಸುತ್ತದೋ ಅಂತಹ ಮಗುವು ತನ್ನ ಐದು ಅಥವಾ ಆರನೇ ವಯಸ್ಸಿಗೆ ಬರುವಲ್ಲಿ ಅವಳಲ್ಲಿ/ಅವನಲ್ಲಿ ಆಗಿರುವ ಭಾಷಾ ಬೆಳವಣಿಗೆಯು ಅವಳಿಗೆ/ಅವನಿಗೆ ಮುಂದೆ ಶಾಲೆಯಲ್ಲಿ ಕಲಿಯಬೇಕಾಗಿರುವ ಪರಿಕಲ್ಪನೆಗಳನ್ನು ಸುಲಭವಾಗಿ ಗ್ರಹಿಸಿ ಅರ್ಥ ಮಾಡಿಕೊಳ್ಳುವಂತೆ ಮಾಡುತ್ತದೆ. ಏಕೆಂದರೆ ಈಗಾಗಲೇ ಆ ಮಗುವಿಗೆ ಸರಿಯಾದ ತಳಪಾಯ ಸಿಕ್ಕಿರುತ್ತದೆ. ಎರಡನೆಯದಾಗಿ ಆ ಮಗುವಿಗೆ ಕಲಿಕೆ ಬಗ್ಗೆ ಒಲವು ಮೂಡಿರುತ್ತದೆ. ಏಕೆಂದರೆ ಕಲಿಕೆಯು ಒಂದು ಫಲಪ್ರದ ಅನುಭವವಾಗಿರುತ್ತದೆ ಮತ್ತು ಒಳ್ಳೆಯ ಭಾವನೆಗಳು, ಸಂತೋಷಮಯ ಸನ್ನಿವೇಶಗಳು ಏನನ್ನಾದರೂ ಮಾಡುವ ಉತ್ಸಾಹ ಈ ಎಲ್ಲಾ ಉತ್ತಮ ಅನುಭವಗಳು ಅರ್ಥ ಮಾಡಿಕೊಳ್ಳುವ ಒಂದು ಸಂಪರ್ಕಜಾಲವನ್ನು ಸೃಷ್ಟಿಸಿ ಮೆದುಳಿನಲ್ಲಿ ಹುದುಗಿಸಿ ಬಿಟ್ಟಿರುತ್ತವೆ. ಈಗ ನಾವು ಇನ್ನೊಂದು ಸನ್ನಿವೇಶವನ್ನು ನೋಡೋಣ – ಯಾವ ಮನೆಯಲ್ಲಿ ಇಂತಹ ಸಂಪನ್ಮೂಲಗಳ ಬಡತನವಿರುತ್ತದೆ, ಈ ಮನೆಗಳು ಆರ್ಥಿಕವಾಗಿ ಶ್ರೀಮಂತಿಕೆ ಅಥವಾ ಬಡತನ ಹೊಂದಿವೆ ಎನ್ನುವುದು ಇಲ್ಲಿ ಮುಖ್ಯವಲ್ಲ, ಈ ಸಂಪನ್ಮೂಲಗಳಿಗೆ ಆರ್ಥಿಕತೆಯ ಪರಿಸ್ಥಿತಿ ಅಂತಹಾ ಪ್ರಮುಖವಾದುದಲ್ಲ. ಆರ್ಥಿಕ ಪರಿಸ್ಥಿತಿಯು ಸಂಪನ್ಮೂಲಗಳ ಲಭ್ಯತೆಗೆ ನೆರವು ನೀಡುತ್ತವೆ ಮತ್ತು ಸಾಮಾಜಿಕ-ಆರ್ಥಿಕ ತೊಂದರೆಯ ಹಿನ್ನೆಲೆಯಿಂದ ಬಂದಿರುವ ಮಕ್ಕಳು ಹೆಚ್ಚಿನ ಸಂಘರ್ಷಕ್ಕೆ ಒಳಗಾಗುತ್ತಾರೆ. ಕೆಲವೊಂದು ಮನೆಗಳಲ್ಲಿ ಸಂಪನ್ಮೂಲಗಳ ಲಭ್ಯತೆ ಇರುತ್ತದೆ ಆದರೆ ಕಲಿಕೆಯ ಸಂಸ್ಕೃತಿ, ಓದುವ ಒಲವು, ಪುಸ್ತಕಗಳ ಲಭ್ಯತೆ ಹಾಗೂ ಓದುವ ಮತ್ತು ಬರೆಯುವುದರಲ್ಲಿನ ಪ್ರಚೋದನೆ ಮತ್ತು ಆನಂದದ ಕೊರತೆ ಇರುತ್ತದೆ. ಹೀಗಾಗಿ ಒಂದು ಮಗು ತನ್ನ ಆರನೇ ವಯಸ್ಸಿನಲ್ಲಿ ಈ ರೀತಿಯ ಒಳ್ಳೆಯ ಅನುಭವಗಳಿಲ್ಲದೇ ಒಂದನೇ ತರಗತಿಗೆ ಸೇರಿದಾಗ, ಸುಲಭವಾಗಿ ಗ್ರಹಿಸಲು, ಸಂಪರ್ಕಗಳನ್ನು ಏರ್ಪಡಿಸಿಕೊಳ್ಳಲು, ವಿವಿಧ ಸಂಬಂಧಗಳನ್ನು ಕಾಣಲು ಮತ್ತು ಅರ್ಥ ಮಾಡಿಕೊಳ್ಳಲು ಅನೇಕ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ. ಇಂತಹಾ ಮಗುವು ಕುಂಠಿತ ಬೆಳವಣಿಗೆಯೊಡನೆ ಬಂದಿದೆ ಎಂಬರ್ಥವನ್ನು ನೀಡುತ್ತದೆ.

ವಾಸ್ತವವಾಗಿ ಆರಂಭಿಕ ಬಾಲ್ಯದ ಶಿಕ್ಷಣ ಉದ್ದೇಶ ಮುಟ್ಟಿ ತಟ್ಟಿ ಪರಿಶೀಲಿಸಲು, ಅರಿವಿನ ಪರಿಶೋಧನೆ, ಭಾವನಾತ್ಮಕ ಬೆಸುಗೆ, ಇತರರೊಡನೆ ಬೆರೆತು ಆಟವಾಡುವುದು, ಮತ್ತೊಬ್ಬರ ಬಗ್ಗೆ ಆಲೋಚಿಸುವುದನ್ನು ಕಲಿಯುವುದು, ಬಣ್ಣಗಳ ಬಗ್ಗೆ ಅರಿಯುವುದು, ಓದುವ ಆನಂದ ಇವುಗಳನ್ನು ಪ್ರೋತ್ಸಾಹಿಸುವುದಾಗಿದೆ. ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಆನಂದ ಮತ್ತು ಉತ್ತಮ ಅನುಭವಗಳನ್ನು ನೀಡುವ ಅನೇಕ

ಚಟುವಟಿಕೆಗಳನ್ನು ಪರಿಚಯಿಸಲಾಗುತ್ತದೆ. ಇವು ಶಾಶ್ವತವಾದ ಬೆಸುಗೆಯನ್ನು ಹಾಕುತ್ತವೆ. ಇಂತಹ ಚಟುವಟಿಕೆಗಳನ್ನು ಮಗು, ಮಗುವಾಗಿರುವಂತೆಯೇ, ಅವನು/ಅವಳು ಅವರಿರುವಂತೆಯೇ ಒಪ್ಪಿಕೊಳ್ಳುವ ವಿಧಾನದಲ್ಲಿ ಮತ್ತು ಭಾವನಾತ್ಮಕ ಸುರಕ್ಷೆಯ ಅನುಭವವನ್ನು ಹೊಂದುವ ವಾತಾವರಣದಲ್ಲಿ, ಮಕ್ಕಳನ್ನು ಪ್ರೋತ್ಸಾಹಿಸುವ, ಪ್ರಶಂಸಿಸುವ, ಪ್ರೀತಿಸುವ, ಕಾಳಜಿ ತೋರುವ, ಅವರ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವ ಪರಿಸರದಲ್ಲಿ ನಡೆಸಿದ್ದೇ ಆದಲ್ಲಿ, ಅವರ ಸಂಪೂರ್ಣ ಅನುಭವವು ಸದ್ಭಾವನೆಯು ಮಗುವಿನ ಮನದಲ್ಲಿ ರೂಪುಗೊಳ್ಳುವಂತೆ ಮಾಡುತ್ತದೆ ಮತ್ತು ಅದು ಶಾಶ್ವತವಾಗಿ ಉಳಿಯುವಂತೆಯೂ ಮಾಡುತ್ತದೆ. ಇದಕ್ಕೆ ತದ್ವಿರುದ್ಧವಾಗಿಯೂ ಆಗುವ ಸಾಧ್ಯತೆಗಳು ಇವೆ. ಎಳೆಯ ವಯಸ್ಸಿನಲ್ಲಿಯೇ ಅತ್ಯಂತ ಕಷ್ಟವನ್ನು ಅನುಭವಿಸುವ ಮಕ್ಕಳು ಅಂದರೆ ದಾರಿದ್ರ್ಯದ ಅನುಭವ, ಎಲ್ಲ ರೀತಿಯ ಹಿಂಸೆಗಳ ಅನುಭವ, ಹಿರಿಯರೊಂದಿಗಿನ ಅವರ ಒಡನಾಟದಲ್ಲಿ ಅಧಿಕಾರದ ಬಗ್ಗೆ ಭಯವನ್ನು ಹುಟ್ಟಿಸುವಂತಹ ಅನುಭವಗಳು, ಅವರಿಗೆ ಹಿರಿಯರೆಂದರೆ, ಅಧಿಕಾರದಲ್ಲಿರುವವರ ಬಗ್ಗೆ, ನಿಯಂತ್ರಣವನ್ನು ಹೊಂದಿರುವವರ ಬಗ್ಗೆ ಹೆದರಿಕೆಯನ್ನು ಬೆಳಸಿಕೊಳ್ಳುವಂತೆ ಮಾಡುತ್ತದೆ ಮತ್ತು ಈ ರೀತಿಯ ಸಂದೇಶಗಳನ್ನು ಅವರು ಶಾಶ್ವತವಾಗಿ ತಮ್ಮಲ್ಲಿ ಉಳಿಸಿಕೊಳ್ಳುವಂತೆ ಮಾಡುತ್ತವೆ.

ಮಕ್ಕಳಿಗೆ ಬಾಲ್ಯದಲ್ಲಿ ಒಳ್ಳೆಯ ಕಲಿಕಾ ಪ್ರಚೋದನೆಯ ಅನುಭವಗಳು ಸಿಗಲೇ ಬೇಕೆಂದು ಹೇಳಿದರಷ್ಟೇ ಸಾಲದು; ಅದು ವಾಸ್ತವವಾಗಿ ಯಾವ ರೀತಿಯ ಅನುಭವಗಳನ್ನು ಒದಗಿಸುತ್ತೇವೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಹೀಗಾಗಿ, ಮಕ್ಕಳನ್ನು ಎಳೆಯ ವಯಸ್ಸಿನಲ್ಲಿಯೇ ಯಾವುದೋ ಒಂದು ಕೆಟ್ಟ ಶಿಶುವಿಹಾರಕ್ಕೆ ಕಳುಹಿಸುವುದರ ಬದಲು ಉತ್ತಮವಾದ ಮತ್ತು ಸಂತೋಷ ತುಂಬಿದ ಮನೆಯ ಪರಿಸರದಲ್ಲಿಯೇ ಉಳಿಸಿಕೊಳ್ಳುವುದು ಒಳ್ಳೆಯದು. ಮಗುವಿನೊಂದಿಗೆ ನಿಖರವಾಗಿ ಏನನ್ನು ಮಾಡಬೇಕು ಎಂದು ತಿಳಿದಿಲ್ಲದಿರುವ ತಂದೆ ತಾಯಿಗಳು ಅಜ್ಜ-ಅಜ್ಜಿಯರೊಡನೆ ಇರುವುದು ರಚನಾತ್ಮಕ ಮತ್ತು ಕಲಿಕೆ ಇರುವ ಶಿಶುವಿಹಾರಗಳಿಗೆ ಕಳುಹಿಸುವುದಕ್ಕಿಂತಾ ಸುರಕ್ಷಿತವಾಗಿರುತ್ತದೆ. ಏಕೆಂದರೆ ಅಲ್ಲಿ ಅವರನ್ನು ವಯಸ್ಸಿಗೆ ಮೀರಿದ ಕಲಿಕೆಯಲ್ಲಿ ತೊಡಗುವಂತೆ ಮಾಡಲಾಗುತ್ತದೆ ಅಥವಾ ಭಯ ಮತ್ತು ಬಲವಂತದಿಂದ ಕಲಿಯುವಂತೆ ಮಾಡಲಾಗುತ್ತದೆ. ಶಿಶುವಿಹಾರದ ಸಂಪೂರ್ಣ ಪರಿಕಲ್ಪನೆ ಮಗುವಿಗೆ ಎಳೆಯ ವಯಸ್ಸಿನಲ್ಲಿ ಆನಂದದ ಅನುಭವವನ್ನು ಒದಗಿಸುವುದು ಮತ್ತು ಉತ್ಸಾಹವನ್ನು ಸೃಷ್ಟಿಸುವುದಾಗಿದೆ. ಮಕ್ಕಳು ತಮ್ಮ ಎಳೆ ವಯಸ್ಸಿನಲ್ಲಿ ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ, ಕುತೂಹಲವನ್ನು ಹೊಂದಿರುತ್ತಾರೆ ಹಾಗೂ ಅನೇಕ ವಿಷಯಗಳಿಂದ ಸಾಮಾನ್ಯ ಎಂದು ಹಿರಿಯರು ಪರಿಗಣಿಸುವಂತಹಾ ವಿಷಯಗಳಿಂದಲೂ ಉತ್ಸಾಹಿತರಾಗಿರುತ್ತಾರೆ. ಮಕ್ಕಳು ತಮ್ಮದೇ ಪ್ರಪಂಚವನ್ನು ಹೊಂದಿದ್ದು ಉತ್ಸಾಹ ಮತ್ತು ಆಸಕ್ತಿಯನ್ನು ತುಂಬಿಕೊಂಡಿರುತ್ತಾರೆ. ಇದೇ ಎಲ್ಲರನ್ನೂ ಜೀವಂತಿಕೆಯಿಂದ ಇರುವಂತೆ ಮಾಡುವುದು. ಭಾಷೆಯ ವಿಷಯವನ್ನೇ ತೆಗೆದುಕೊಳ್ಳಿ ಮೂಲ ಪರಿಕಲ್ಪನೆ ಎಂದರೆ ಪ್ರತಿಯೊಂದಕ್ಕೂ ಒಂದು ಹೆಸರಿದೆ ನೀವು ಒಂದನ್ನು ಒಂದು ಹೆಸರಿನಿಂದ ಮತ್ತು ಮತ್ತೊಂದನ್ನು ಇನ್ನೊಂದು ಹೆಸರಿನಿಂದ ಗುರುತಿಸುವ, ವ್ಯವಸ್ಥೆಯೇ ಭಾಷೆ. ಬಣ್ಣಗಳ ಪರಿಕಲ್ಪನೆ, ಬಣ್ಣಗಳಲ್ಲಿಯ ವಿಭಿನ್ನ ವರ್ಣಗಳು ಹೀಗೆ ವಿಶ್ವವು ಉತ್ಸಾಹ ಮತ್ತು ಕೌತುಕದಿಂದ ಕೂಡಿದೆ, ಅದರಲ್ಲೂ ಪ್ರಪಂಚವನ್ನು ಹೊಸದಾಗಿ ಅರಿಯಲು ಪ್ರಾರಂಭಿಸಿದವರಿಗೆ ಇದು ಮತ್ತಷ್ಟು ಉತ್ಸಾಹವನ್ನು ತುಂಬುತ್ತದೆ. ಹೀಗಾಗಿ ಶಿಶುವಿಹಾರದ ಆಲೋಚನೆಯು ನಾವು ಮಕ್ಕಳಿಗೆ ಅರಿವನ್ನು ಪ್ರಚೋದಿಸುವ ಮತ್ತು ಭಾವನಾತ್ಮಕವಾಗಿ ಸುರಕ್ಷಿತವಾದ ಅನುಭವಗಳನ್ನು ಒದಗಿಸುವುದಾಗಿದೆ. ಇದು ಸಾಧ್ಯವಾದಲ್ಲಿ, ಮಗುವಿನಲ್ಲಿ ಕಲಿಕೆಯ ಬಗ್ಗೆ ಉತ್ಸಾಹದ ಮನೋಧೋರಣೆಯನ್ನು ಬೆಳಸಿಕೊಳ್ಳುವಂತೆ ಮಾಡಿ ಶಾಲೆಯಲ್ಲಿ ಅವನು/ಅವಳು ಸುಲಭವಾಗಿ ಬೆರೆಯುವಂತೆ ಮಾಡುವುದು ಸಾಧ್ಯವಾಗುತ್ತದೆ.

ಪೌಷ್ಟಿಕಾಹಾರ ಶಿಕ್ಷಣದಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಆದರೆ ನಮ್ಮ ದೇಶದಲ್ಲಿ ಇದು ಬಲು ದೊಡ್ಡ ವಿಷಯ, ಏಕೆಂದರೆ ಒಂದನೇ ತರಗತಿಗೆ ದಾಖಲಾಗುವ ಆರು ವರ್ಷದ ಅನೇಕ ಮಕ್ಕಳಲ್ಲಿ ಪೌಷ್ಟಿಕತೆಯ ಅತ್ಯಂತ ಪ್ರಮುಖ ಘಟಕಗಳ ಕೊರತೆ ಇರುತ್ತದೆ (ವಿಟಮಿನ್ ಬಿ ಕಾಂಪ್ಲೆಕ್ಸ್, ಖನಿಜಗಳು ಮುಂತಾಗಿ) ಅನೇಕರಿಗೆ, ಅದರಲ್ಲೂ ಹೆಣ್ಣುಮಕ್ಕಳಿಗೆ ರಕ್ತಹೀನತೆ ಇರುತ್ತದೆ. ಪ್ರಮುಖವಾದ ಎಲ್ಲಾ ಪೋಷಕಾಂಶಗಳು ಬೌದ್ಧಿಕ/ಗ್ರಹಣಶಕ್ತಿ ಬೆಳವಣಿಗೆಯ ಸಾಮರ್ಥ್ಯದಲ್ಲಿ ದೊಡ್ಡ ಪಾತ್ರವನ್ನು ವಹಿಸುತ್ತವೆ. ಪೌಷ್ಟಿಕಾಂಶದ ಕೊರತೆ ಮತ್ತು ಬೌದ್ಧಿಕ/ಗ್ರಹಣಶಕ್ತಿ ಬೆಳವಣಿಗೆಯ ಸಾಮರ್ಥ್ಯದ ನಡುವೆ ಪ್ರಬಲವಾದ ಸಂಬಂಧವಿದೆ.

ಹೀಗಾಗಿ ಒಂದನೇ ತರಗತಿಗೆ ದಾಖಲಾಗುವ ಮಕ್ಕಳು ಈಗಾಗಲೇ ಮೂರು ಹೆಜ್ಜೆ ಹಿಂದಿರುತ್ತಾರೆ, ಆದ್ದರಿಂದಲೇ ಅಂಗನವಾಡಿಗಳಲ್ಲಿ ಪೌಷ್ಟಿಕಾಂಶದ ವಿಷಯ ಬಹಳ ದೊಡ್ಡ ವಿಷಯವಾಗಿದ್ದು ನಮ್ಮ ದೇಶದಲ್ಲಿ ಖಂಡಿತವಾಗಿಯೂ ಇದನ್ನು ಅವಗಣನೆ ಮಾಡಲು ಸಾಧ್ಯವಿಲ್ಲ. ಮಧ್ಯಾಹ್ನದ ಬಿಸಿಯೂಟಕ್ಕೆ ಇದೇ ಕಾರಣ. ಮೊದಲನೆಯದಾಗಿ, ಇದು ಹಾಜರಾತಿಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿತ್ತು, ಆದರೆ ಆಹಾರ ಮತ್ತು ಮೆದುಳಿನ ಕಾರ್ಯಕ್ಷಮತೆ ಹಾಗೂ ಕಲಿಕೆಯ ನಡುವೆ ನೇರವಾದ ಸಂಬಂಧವಿದೆ. ಸ್ಕ್ಯಾಂಡಿನೇವಿಯನ್ ದೇಶಗಳನ್ನು ನೀವು ನೋಡಿದಾಗ,

ಉದಾಹರಣೆಗೆ ಫಿನ್‌ಲ್ಯಾಂಡ್, ವಿಶ್ವದಲ್ಲಿಯೇ ಕೆಲವೊಂದು ಶ್ರೀಮಂತ ರಾಷ್ಟ್ರಗಳು ಅಲ್ಲಿವೆ, ಆದರೆ ಇಲ್ಲಿನ ಎಲ್ಲಾ ಶಾಲೆಗಳಲ್ಲಿ ಮಧ್ಯಾಹ್ನದ ಭೋಜನ ಕಾರ್ಯಕ್ರಮವಿದೆ. ಇದು ಮಕ್ಕಳಿಗೆ ತಮ್ಮ ಭೋಜನವನ್ನು ತಾವೇ ತರುವ ಶಕ್ತಿ ಇಲ್ಲವೆಂದು ಜಾರಿಗೊಳಿಸಿರುವುದಲ್ಲ ಅಥವಾ ಪೌಷ್ಟಿಕ ಆಹಾರವನ್ನು ಒದಗಿಸಲು ದುಸ್ತರವೆನಿಸುವ ಕುಟುಂಬದಿಂದ ಬರುತ್ತಾರೆ ಎಂದಲ್ಲ, ಆದರೆ ಇದನ್ನು ಆ ದೇಶದವರು ಶಿಕ್ಷಣದ ಅತ್ಯಂತ ಮೂಲಭೂತ ಮತ್ತು ಅತ್ಯಾವಶ್ಯಕ ಭಾಗವನ್ನಾಗಿ ಕಾಣುತ್ತಾರೆ. ಬಡತನ ಅಥವಾ ಸಿರಿವಂತಿಕೆ ಇದಕ್ಕೆ ಸಂಬಂಧ ಪಟ್ಟಿದ್ದಲ್ಲ, ಆದರೆ ಪೌಷ್ಟಿಕತೆ ಮತ್ತು ಕಲಿಕೆ ಒಂದರೊಡನೆ ಇನ್ನೊಂದು ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿದೆ ಎನ್ನುವ ಅಂಶಕ್ಕೆ ಸಂಬಂಧಿಸಿದ್ದಾಗಿದೆ.

ಪೌಷ್ಟಿಕ ಆಹಾರವು ನಿಮ್ಮ ದೇಹಕ್ಕೆ ಮಾತ್ರ ಸಂಬಂಧಿಸಿರುವುದಲ್ಲ, ಇದು ನಿಮ್ಮ ಮೆದುಳು ಹೇಗೆ ಕಾರ್ಯ ನಿರ್ವಹಿಸುತ್ತದೆ ಎನ್ನುವುದಕ್ಕೂ ಸಂಬಂಧಿಸಿದೆ. ಉದಾಹರಣೆಗೆ, ರಕ್ತಹೀನತೆಯು ಜ್ಞಾಪಕ ಶಕ್ತಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಇದು ಕಲಿಕೆಯ ಒಂದು ಪ್ರಮುಖವಾದ ಭಾಗ. ಆದ್ದರಿಂದ ಶಿಶುವಿಹಾರಗಳಲ್ಲಿ, ಗಮನಿಸಬೇಕಾದ ಅಂಶಗಳು ಮೆದುಳಿನ ಬೆಳವಣಿಗೆಯನ್ನು ಕುರಿತದ್ದಾಗಿವೆ. ಹೀಗಾಗಿ ಮಗುವಿಗೆ ನಾವು ಒದಗಿಸುವ ಪ್ರಚೋದನಾತ್ಮಕ ಪರಿಸರ, ಮಗು ಸಂಬಂಧಗಳನ್ನು ಬೆಳಸಿಕೊಳ್ಳಲು ನಾವು ನೀಡುವ ನೆರವು, ನಾವು ದೇಹಕ್ಕೆ ನೀಡುವ ಪೌಷ್ಟಿಕ ಆಹಾರ ಮತ್ತು ದೈಹಿಕ ಚಲನವಲನಕ್ಕೆ ನೀಡುವ ಅವಕಾಶ ಇವೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ ಆದ್ದರಿಂದಲೇ ನಾವು ಸುವ್ಯವಸ್ಥಿತ, ಸುರಚಿತವಾದ ಶಿಶುವಿಹಾರ ಪರಿಸರದ ಆಲೋಚನೆಗೆ ತೊಡಗಿದೆವು. ಇಲ್ಲದಿದ್ದಲ್ಲಿ, ಇವೆಲ್ಲವೂ ದೊರೆಯುವ ಕುಟುಂಬವೇ ಮಕ್ಕಳಿಗೆ ಸಾಕು. ಅನೇಕರು ಇದನ್ನು ಒಪ್ಪದಿರಬಹುದು ಆದರೆ ನನಗೆ ಅನಿಸುವಂತೆ, ಮಗುವಿಗೆ ಈ ಎಲ್ಲವೂ ದೊರೆಯುವ ಕುಟುಂಬವಿದ್ದರೆ ಅದಕ್ಕಿಂತ ಇನ್ನೇನು ಬೇಕು. ಇದಕ್ಕೆ ಔಪಚಾರಿಕ ಶಾಲೆಯೇ ಬೇಕಾಗಿಲ್ಲ. ಮಗುವನ್ನು ಶಿಶುವಿಹಾರಕ್ಕೆ ಕಳುಹಿಸುವುದರಿಂದ ಆಗಬಹುದಾದ ಲಾಭವೆಂದರೆ ಆ ಮಗುವಿಗೆ ಆರು ವರ್ಷವಾದಾಗ ನಿಯಮಿತವಾದ ಶಾಲೆಗೆ ದಾಖಲಾದ ಅನಂತರ ಎದುರಿಸಬೇಕಾದ ಸುರಚಿತ ಪರಿಸರಕ್ಕೆ ಹೊಂದಿಕೊಳ್ಳುವ ಅಭ್ಯಾಸವನ್ನು ಒದಗಿಸುವುದಾಗಿದೆ. ಚೆನ್ನಾಗಿ ಹೊಂದಿಕೊಳ್ಳುವ ಅಭ್ಯಾಸವುಳ್ಳ ಮಕ್ಕಳಿಗೆ ಹೊಸ ಪರಿಸರಕ್ಕೆ ಹೊಂದಿಕೊಳ್ಳುವುದಕ್ಕೆ ಹೆಚ್ಚಿನ ಸಮಯ ಬೇಕಾಗುವುದಿಲ್ಲ. ಅವರು ಶೀಘ್ರವಾಗಿ ಕಲಿಯಬಲ್ಲರು.

ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಎಳೆಯ ವಯಸ್ಸು ಅತ್ಯಂತ ಪ್ರಮುಖವಾದದ್ದಾಗಿದ್ದರೂ, ಅದಕ್ಕೆ ಕೊಡಬೇಕಾದ ಪ್ರಾಮುಖ್ಯತೆಯನ್ನು ನಾವು ಕೊಡುತ್ತಿಲ್ಲ. ಉನ್ನತ ಶಿಕ್ಷಣಕ್ಕೆ ನಾವು ಹೆಚ್ಚಿನ ಗಮನವನ್ನು ನೀಡುತ್ತಿದ್ದೇವೆ ಆದರೆ, ಮಗುವಿನ ಜೀವನದ ಆರಂಭದ ಘಟ್ಟವನ್ನು ಅದು ನಡೆದಂತೆ ನಡೆಯಲಿ ಎಂದು ಬಿಟ್ಟು ಬಿಟ್ಟಿದ್ದೇವೆ. ಶಿಶುವಿಹಾರಗಳು ಶೈಕ್ಷಣಿಕ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ಸೇರಿದ್ದಾಗಿವೆ. ಕೇಂದ್ರಸರ್ಕಾರದಲ್ಲಿ ಇದನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಎಂದು ಕರೆಯುತ್ತಾರೆ, ಆದರೆ ರಾಜ್ಯ ಸರ್ಕಾರದಲ್ಲಿ ಇದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಬರುತ್ತದೆ. ಅಂಗನವಾಡಿಯ ಸಂಪೂರ್ಣ ವ್ಯವಸ್ಥೆಯು ಇದಕ್ಕೆ ಸೇರಿರುತ್ತದೆ. ಪ್ರಾಥಮಿಕ ಶಾಲೆಯಿರುವ ಆವರಣದಲ್ಲಿಯೇ ಅಂಗನವಾಡಿ ಇದ್ದರೂ, ವ್ಯವಸ್ಥೆಯ ಮಟ್ಟದಲ್ಲಿ, ಇವೆರೆಡೂ ಒಂದರೊಂದಿಗೆ ಇನ್ನೊಂದು ಒಡನಾಟವನ್ನು ಇಟ್ಟುಕೊಳ್ಳುವುದಿಲ್ಲ. ಅಂಗನವಾಡಿಯಲ್ಲಿ ಮಗು ಏನನ್ನು ಕಲಿಯುವುದೋ ಅದು ಒಂದನೆಯ ತರಗತಿಯಲ್ಲಿ ಮಕ್ಕಳ ಕಲಿಕೆಯೊಂದಿಗೆ ಸಂಪರ್ಕವನ್ನು ಹೊಂದಿಲ್ಲ. ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿಯ ನಡುವೆ ಯಾವುದೇ ಸಂಭಾಷಣೆಯಿಲ್ಲ. ಆದ್ದರಿಂದ ವ್ಯವಸ್ಥೆಯ ಮಟ್ಟದಲ್ಲಿ, ಅಂಗನವಾಡಿ ವ್ಯವಸ್ಥೆ ಮತ್ತು ಪ್ರಾಥಮಿಕ ಶಾಲಾ ವ್ಯವಸ್ಥೆಯ ನಡುವೆ ಶೂನ್ಯ ಸಂಪರ್ಕವಿರುತ್ತದೆ. ಆರಂಭಿಕ ಬಾಲ್ಯದ ಶಿಕ್ಷಣವನ್ನು ಮೊದಲನೆಯದಾಗಿ ಮಗುವಿನ ನಿರಂತರ ಶಿಕ್ಷಣದ ಅಂಗ ಭಾಗ ಎಂದು ನೋಡಲಾಗುತ್ತಿಲ್ಲ, ಮತ್ತು ಎರಡನೆಯದಾಗಿ ಮಗುವಿನ ಒಟ್ಟಾರೆ ಶಿಕ್ಷಣಕ್ಕೆ ಪ್ರಮುಖವಾದದ್ದು ಎಂದಾಗಲೀ ಪರಿಗಣಿಸುತ್ತಿಲ್ಲ.

ಚಿಕ್ಕ ಮಕ್ಕಳ ಬೆಳವಣಿಗೆಯನ್ನು ಇನ್ನೂ ಆರೋಗ್ಯ ಮತ್ತು ವೈದ್ಯಕೀಯ ದೃಷ್ಟಿಯಲ್ಲೇ ನೋಡಲಾಗುತ್ತಿದೆ. ಅಂದರೆ, ಸುರಕ್ಷಿತ ಹೆರಿಗೆ, ಲಸಿಕೆ ಹಾಕುವುದರ ಮೇಲೆ ಹೆಚ್ಚಿನ ಗಮನವನ್ನು ನೀಡಲಾಗುತ್ತಿದೆ. ಒಂದು ವ್ಯವಸ್ಥೆಯಾಗಿ, ಅದಕ್ಕಿಂತ ಹೆಚ್ಚಾಗಿ ಸಮಾಜದ ಒಂದು ಭಾಗವಾಗಿ ಎಳೆವಯಸ್ಸಿನಲ್ಲಿ ದೊರೆಯುವ ವಿವಿಧ ಪ್ರಚೋದನೆಗಳು ಹೇಗೆ ಅವರ ಭವಿಷ್ಯದ ಜೀವನದೊಂದಿಗೆ ಸಂಪರ್ಕವನ್ನು ಹೊಂದಿದ್ದು ಅದನ್ನು ಸಶಕ್ತಗೊಳಿಸುತ್ತದೆ ಎನ್ನುವುದನ್ನು ನಾವು ಅರ್ಥಮಾಡಿಕೊಂಡಿಲ್ಲ. ಉದಾಹರಣೆಗೆ, ನಮ್ಮ ಎಷ್ಟೋ ಕ್ರಿಯೆಗಳು ಎಷ್ಟು ಮುಖ್ಯವಾದದ್ದು ಮತ್ತು ಅದು ಎಳೆಯ ವಯಸ್ಸಿನ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ ಎಂದು ತಂದೆತಾಯಿಗಳಾಗಿಯೂ ನಾವು ಅರ್ಥಮಾಡಿಕೊಂಡಿಲ್ಲ. ಇದರರ್ಥ ಪ್ರತಿಯೊಬ್ಬರೂ ಅಸಹಜವಾದ ಬಹು ವ್ಯವಸ್ಥಿತ ತಂದೆತಾಯಿಗಳಾಗಬೇಕು ಎಂದಲ್ಲ. ಆದರೆ, ನೀವು ಏನೆಲ್ಲಾ ಮಾಡುತ್ತೀರೋ ಅದನ್ನು ನಿಮ್ಮ ಮನೆಯಲ್ಲಿರುವ ಮಗುವು ಗಮನಿಸಿ ಗ್ರಹಿಸುತ್ತಿರುತ್ತದೆ ಹಾಗೂ ಆ ಮಗುವು ನಿಮ್ಮನ್ನು ತನ್ನ ಜೀವನದ

ಅತ್ಯಂತ ಪ್ರಮುಖವಾದ ವ್ಯಕ್ತಿ ಎಂದು ಭಾವಿಸಿರುತ್ತದೆ. ಹಾಗಾಗಿ ನೀವು ಮಾಡುವ ಪ್ರತಿಯೊಂದು ವಿಷಯವೂ ಆ ಮಗುವಿನ ಮೇಲೆ ಆಳವಾದ ಪರಿಣಾಮವನ್ನು ಬೀರುತ್ತದೆ. ಮಗುವಿನ ಸಂಪೂರ್ಣ ಪ್ರಪಂಚ ನಿಮ್ಮ ಸುತ್ತಲೇ ತಿರುಗುತ್ತಿರುತ್ತದೆ ಹಾಗಾಗಿ ನೀವೇನು ಮಾಡುತ್ತಿರೋ ಅದು ಖಂಡಿತವಾಗಿಯೂ ಪ್ರಮುಖವಾದದ್ದಾಗಿದೆ. ಆದ್ದರಿಂದ ನಿಮ್ಮೊಂದಿಗೆಯೇ ಮಗುವು ಅನುಭವಗಳನ್ನು ಪಡೆಯುತ್ತಾ ಹೋಗುತ್ತದೆ.

ಹೀಗಾಗಿ ಪೋಷಕರಾಗಿ ನಾವು ನಮ್ಮ ಪಾತ್ರವನ್ನು ಸಾಧ್ಯವಾದಷ್ಟು ಗಂಭೀರವಾಗಿ ಪರಿಗಣಿಸಬೇಕು. ಇದರೊಟ್ಟಿಗೆ, ವ್ಯವಸ್ಥೆಯ ಮಟ್ಟದಲ್ಲಿ ಆಲೋಚಿಸಿದಾಗ ಮಗುವು ತನ್ನ ಐದು ಮತ್ತು ಆರನೆಯ ವಯಸ್ಸಿನ ಒಳಗೆ ಹಾಗೂ ಶಾಲೆಗೆ ದಾಖಲಾಗುವ ಮೊದಲು ಏನೆಲ್ಲಾ ಅನುಭವಗಳಿಗೆ ಒಳಗಾಗುತ್ತದೆ ಅದು ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ ಎನ್ನುವುದರ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡುವುದಿಲ್ಲ. ಇವೆಲ್ಲವೂ ಮಕ್ಕಳು, ಕಲಿಕೆ, ಬೆಳವಣಿಗೆ ಹಾಗೂ ಶಿಕ್ಷಣದ ಉದ್ದೇಶವೇನು ಎನ್ನುವುದರ ಬಗ್ಗೆ ನಮಗಿರುವ ಒಟ್ಟಾರೆ ಅರ್ಥೈಕೆ ಅಥವಾ ಅದರ ಅಭಾವದಿಂದ ಹುಟ್ಟಿರುವುದಾಗಿದೆ. ಉದಾಹರಣೆಗೆ, ನನ್ನ ಪಕ್ಕದ ಮನೆಯಲ್ಲಿ ಎರಡೂವರೆ ವರ್ಷದ ಒಂದು ಮಗುವಿದೆ ಆ ಮಗುವಿನ ತಾಯಿ ತಾನು ಇನ್ನೂ ಮಗುವನ್ನು ಶಿಶುವಿಹಾರಕ್ಕೆ ಸೇರಿಸಿಲ್ಲ, ಆದರೆ ಇತರರು ತಮ್ಮ ಮಕ್ಕಳನ್ನು ಎರಡನೆಯ ವಯಸ್ಸಿನಲ್ಲಿಯೇ ಶಿಶುವಿಹಾರಕ್ಕೆ ಸೇರಿಸಿದ್ದಾರೆ. ಈಗಾಗಲೇ ಆ ಮಕ್ಕಳು ಬರೆಯಲು ಕಲಿಯುತ್ತಿದ್ದಾರೆ ಎಂದು ತನ್ನ ಕಾಳಜಿಯನ್ನು ವ್ಯಕ್ತಪಡಿಸಿದಳು. ಮಗು ತುಂಬಾ ಚುರುಕಾಗಿದೆ, ಸಂಜೆ ಅದೇ ವಸತಿ ಸಮುಚ್ಚಯದಲ್ಲಿರುವ ಅನೇಕ ಮಕ್ಕಳೊಂದಿಗೆ ಆಟವಾಡುತ್ತಾನೆ ಮತ್ತು ಬೆಳಗಿನ ಇಡೀ ಸಮಯವನ್ನು ತನ್ನ ಅಜ್ಜಿಯೊಂದಿಗೆ ಕಳೆಯುತ್ತಾನೆ ಅಜ್ಜಿ ಅವನಿಗೆ ಸಂಪೂರ್ಣ ಮನರಂಜನೆ ಒದಗಿಸುತ್ತಾರೆ. ಇದರಲ್ಲಿ ಕೊರತೆ ಇರುವುದು ಎಲ್ಲಿ ಎಂದು ನನಗೆ ಇನ್ನೂ ಅರ್ಥವಾಗಿಲ್ಲ. ಆ ಮಗುವಿನ ತಾಯಿಗೆ ತಾನು ಮಗುವನ್ನು ಶಿಶುವಿಹಾರಕ್ಕೆ ಸೇರಿಸಿಲ್ಲ ಎನ್ನುವ ಕಾಳಜಿ ತನ್ನ ಸುತ್ತಲಿನ ಜನರು ಏನು ಮಾಡುತ್ತಿದ್ದಾರೆ ಎನ್ನುವ ಒತ್ತಡದಿಂದ ಉಂಟಾಗಿದೆಯಲ್ಲದೇ ಮಗುವಿಗೆ ವಾಸ್ತವವಾಗಿ ಏನು ಬೇಕಾಗಿದೆ ಎನ್ನುವುದರಿಂದಲ್ಲ. ಕಾರ್ಯಾಚರಣೆಯ ಮೂಲಭೂತ ಚೌಕಟ್ಟೇ ಚಿಂತೆ ಮತ್ತು ಭಯದಿಂದ ಕೂಡಿದ್ದಾಗಿದೆ. ಮಗು ಇತರ ಮಕ್ಕಳೊಂದಿಗೆ ಒಡನಾಟವನ್ನು ಹೊಂದಬೇಕು, ಹಂಚಿಕೊಳ್ಳುವುದನ್ನು ಕಲಿಯಬೇಕು ಎನ್ನುವ ನಿರೀಕ್ಷೆ ಸರಿಯಾದದ್ದೇ, ಆದರೆ ಮೂರು ತುಂಬುವುದರ ಒಳಗೇ ಆ ಮಗು ಬರೆಯಲು ಪ್ರಾರಂಭಿಸಬೇಕು ಎನ್ನುವುದು ಖಂಡಿತವಾಗಿಯೂ ಅನಗತ್ಯವಾದದ್ದು. ಮಗುವಿನ ಚಲನಾ ಕೌಶಲ್ಯದ ಬೆಳವಣಿಗೆಯನ್ನು ನೋಡಿದ್ದೇ ಆದರೆ, ಇದು ಮಗು ಐದು ವರ್ಷದ ಆಸುಪಾಸಿನಲ್ಲಿರುವಾಗ ಮೈಗೂಡುವ ಕೌಶಲ್ಯ. ತನ್ನ ಶೂ ಲೇಸನ್ನು ತಾನೇ ಕಟ್ಟಿಕೊಳ್ಳುವುದು, ಗುಂಡಿಗಳನ್ನು ಹಾಕಿಕೊಳ್ಳುವುದು ಮತ್ತು ಬರೆಯುವುದು ಈ ಎಲ್ಲಾ ಕೆಲಸಗಳು ಮಗು ತನ್ನ ಆರನೆಯ ವಯಸ್ಸಿನಲ್ಲಿ ಮಾಡಲು ಪ್ರಾರಂಭಿಸುವಂತಹದ್ದು. ಇಂದು, ಅನೇಕ ಶಿಶುವಿಹಾರಗಳು ಮಕ್ಕಳಿಗೆ ಎರಡೂವರೆ ವರ್ಷವಿರುವಾಗಲೇ ಅವರ ಮಾಂಸ ಖಂಡಗಳು ಇನ್ನೂ ಸಂಪೂರ್ಣವಾಗಿ ತಯಾರಿರುವ ಮೊದಲೇ ಬರೆಯುವಂತೆ ಮಾಡುತ್ತಿವೆ. ಇದು ವಾಸ್ತವವಾಗಿ ಬೆಳವಣಿಗೆಗೆ ಮಾರಕವಾದದ್ದು ಮತ್ತು ಇದು ಮಗುವಿಗೆ ದೈಹಿಕವಾಗಿ ಮಾತ್ರವಲ್ಲದೇ ಮಾನಸಿಕವಾಗಿಯೂ ಹಾನಿಯನ್ನು ಉಂಟುಮಾಡುವಂತಹದ್ದು. ಭಾವನೆಗಳ ಬಗ್ಗೆ ಸ್ವಲ್ಪ ಹೊತ್ತು ಸಂಪೂರ್ಣವಾಗಿ ಮರೆತು ಬಿಡೋಣ ಅಥವಾ ಮೌಲ್ಯವನ್ನು ಬದಿಗಿಡೋಣ, ನರವಿಜ್ಞಾನವನ್ನು ಮಾತ್ರ ಪರಿಗಣಿಸಿದರೆ, ಬರೆಯುವ ಕ್ರಿಯೆ ಮತ್ತು ಬರೆಯುವಾಗ ಮಗು ಅನುಭವಿಸುವ ಯಾತನೆಯಿಂದ ಉಂಟಾಗುವ ನರಗಳ ಸಂಪರ್ಕಗಳ ರೂಪುಗೊಳ್ಳುವಿಕೆಯನ್ನು ಗಮನಿಸೋಣ. ಮಗುವಿನ ಮನದಲ್ಲಿ ಉಳಿಯುವ ಭಾವನೆ ಎಂದರೆ "ಬರೆಯುವುದು ಒಂದು ಯಾತನಾಮಯ ಕ್ರಿಯೆ; ನಾನು ಇದರಲ್ಲಿ ನಿಧಾನ; ನನಗೆ ಇದರಿಂದ ಬೈಗುಳ ಸಿಗುತ್ತದೆ; ನನ್ನ ಕೈ ನೋಯುತ್ತದೆ" ಎಂಬುದು. ಮಗುವಿಗೆ ಬರೆಯುವ ಕ್ರಿಯೆಯನ್ನು ನಾವು ಒಂದು ಶಿಕ್ಷೆಯನ್ನಾಗಿ ಪರಿವರ್ತಿಸಿದ್ದೇವೆ. ಈ ಬರವಣಿಗೆಯ ಕ್ರಿಯೆಯನ್ನು ಮಾಡಲು ವಿಧಾನಗಳಿವೆ. ಮಕ್ಕಳು ಸ್ವಾಭಾವಿಕವಾಗಿ ತಮ್ಮ ಎಳೆವಯಸ್ಸಿನಲ್ಲೇ ಬರೆಯಲು ಪ್ರಾರಂಭಿಸಿದರೆ, ಬರೆಯಲು ಬಿಡಿ. ಆದರೆ ಹೇಗೆ ಬರೆಯಬೇಕು ಎಂಬ ನಿರ್ಧಾರವನ್ನು ಅವರಿಗೇ ಬಿಡಿ. ಈ ಹಂತದಲ್ಲಿ ಅವರ ಬರವಣಿಗೆಯನ್ನು ತಿದ್ದುವುದಾಗಲೀ ಬರವಣಿಗೆಯ ಕೌಶಲ್ಯವನ್ನು ನಯಗೊಳಿಸುವುದನ್ನಾಗಲೀ ಮಾಡಬಾರದು. ಇದನ್ನು ಮಗುವಿಗೆ ಆರು ವರ್ಷವಾದ ನಂತರ ಮಾಡಬಹುದು ಆ ಸಮಯದಲ್ಲಿ ಮಗುವಿಗೆ ಹೆಚ್ಚಿನ ನಿಯಂತ್ರಣ



ಬಂದಿರುತ್ತದೆ. ಸ್ವಲ್ಪ ಸಮಯ ತಡೆದು ತಿದ್ದುವುದರಿಂದ ಕಳೆದುಕೊಳ್ಳುವಂತಹದ್ದು ಏನೂ ಇಲ್ಲ. ಕಲಿಕೆಯ ವೇಗದಲ್ಲಿ ನಮನೀಯತೆಯನ್ನು ಹೊಂದುವುದೆಂದರೆ ಕಲಿಕೆಯು ಆಗುವುದೇ ಇಲ್ಲ ಎಂದಲ್ಲ. ಮಗುವು ಒಳ್ಳೆಯ, ಪ್ರಚೋದನಾತ್ಮಕ ಮತ್ತು ಮಾನಸಿಕವಾಗಿ ಸವಾಲನ್ನು ಒಡ್ಡುವ ಅನುಭವಗಳನ್ನು ಹೊಂದುತ್ತಿದೆ ಎಂದಾದರೆ ಆ ಮಗುವು ಯಶಸ್ವಿಯಾಗುತ್ತದೆ. ಏಕೆಂದರೆ ಆ ಮಗುವು ಕಲಿಯಲು ಸಮರ್ಥವಾಗಿದೆ ಮತ್ತು ಅತ್ಯಂತ ಚುರುಕಾಗಿದೆ ಎಂದರ್ಥ. ಇದನ್ನು ಹಾಳುಗೆಡವುವವರು ನಾವೇ. ಮಕ್ಕಳಿಗೆ ಎಂಟು ಅಥವಾ ಹತ್ತು ವರ್ಷ ತುಂಬುವಷ್ಟರಲ್ಲಿ ಅವರು ಪ್ರಶ್ನೆ ಕೇಳುವುದನ್ನೇ ನಿಲ್ಲಿಸುವಂತಹ ಸನ್ನಿವೇಶವನ್ನು ನಾವು ಸೃಷ್ಟಿಸುತ್ತೇವೆ!









**ಇಂದು**ರವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಂಪನ್ಮೂಲ ಕೇಂದ್ರದ ಮುಖ್ಯಸ್ಥರು. ಸಂಸ್ಥೆಯನ್ನು ಸೇರುವ ಮೊದಲು ಇವರು 15 ವರ್ಷ ನರಕೋಶದ ತೊಂದರೆ – ಆಟಿಸಂ, ಸರೆಬ್ರಲ್ ಪಾಲ್ಸಿ, ಇರುವ ಮಕ್ಕಳೊಡನೆ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕಲಿಕಾ ನ್ಯೂನತೆ ಇರುವ ಮಕ್ಕಳೊಂದಿಗೆ ಮತ್ತು ಸಮಾವೇಶಿ ತರಗತಿಗಳಲ್ಲೂ ಇವರು ಬೋಧಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರು ರಾಜಕೀಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದು, ಇದರೊಟ್ಟಿಗೆ ವಿಶೇಷ ಶಿಕ್ಷಣದಲ್ಲಿ ಬಿ.ಎಡ್ ಮತ್ತು ಎಂ.ಎಡ್ ಪದವಿಯನ್ನು ಪಡೆದಿದ್ದಾರೆ. ಇವರನ್ನು indu@azimpremjifoundation.org ಇಲ್ಲಿ ಸಂಪರ್ಕಿಸಬಹುದು



# ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಹಕ್ಕು

**ಡೋಲಶ್ರೀ ಮೈಸೂರ್**

ಈ ಪ್ರಬಂಧವು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ (ಇಸಿಸಿಇ) ಅಂಶಗಳ ಮೇಲೆ ವಿಶೇಷವಾಗಿ ಭಾರತದಲ್ಲಿನ ಆರಂಭಿಕ ಬಾಲ್ಯದ ಶಿಕ್ಷಣದ ನೀತಿ ಮತ್ತು ನಿಯಮಗಳು ಹೇಗೆ ಬೆಳೆದವು ಎಂಬುದರ ಬಗ್ಗೆ ವಿವರಣೆಯನ್ನು ನೀಡುತ್ತದೆ. ಅಲ್ಲದೇ, ಈ ಪ್ರಮುಖ ನೀತಿಯ ಉದ್ದೇಶದ ಬಗ್ಗೆ ನ್ಯಾಯಾಲಯಗಳು ಹೇಗೆ ಚಿಂತನ ಮಂಥನ ನಡೆಸಿವೆ ಎಂಬುದನ್ನು ಪರಿಶೋಧಿಸುವ ಪ್ರಯತ್ನವನ್ನು ಮಾಡುತ್ತದೆ. ಆರಂಭಿಕ ಬಾಲ್ಯದ ಶಿಕ್ಷಣ (ಇಸಿಸಿಇ) ಕುರಿತು ಸಂವಿಧಾನದಲ್ಲಿ ಏನು ಅವಕಾಶ ಕಲ್ಪಿಸಲಾಗಿದೆ ಎಂದು ಸಂಕ್ಷಿಪ್ತವಾಗಿ ಹೇಳುವುದರೊಂದಿಗೆ ಈ ಲೇಖನವು ಪ್ರಾರಂಭವಾಗಿ ಈ ವಿಷಯದ ಮೇಲಿನ ಕಾನೂನಿನ ಬೆಳವಣಿಗೆಗಳನ್ನು ಅರ್ಥಮಾಡಿಕೊಳ್ಳುವುದರತ್ತ ಮುಂದುವರೆಯುತ್ತದೆ.

## ಸಂವಿಧಾನದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣ (ಇಸಿಸಿಇ) ಕುರಿತ ಉಪಬಂಧಗಳು:

ಭಾರತದ ಸಂವಿಧಾನವು ಸಮಾಜ ಕಲ್ಯಾಣದ ಉದ್ದೇಶಗಳಾದ ಶಿಕ್ಷಣ ಮತ್ತು ಉದ್ಯೋಗವನ್ನು ರಾಜ್ಯದ ನೀತಿ ನಿರ್ದೇಶಕ ತತ್ವಗಳಲ್ಲಿ ಒಳಗೊಂಡಿದೆ. ಈ ನೀತಿ ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳಂತಲ್ಲ,[1] ಹೀಗಾಗಿ ರಾಜ್ಯದ ನೀತಿ ನಿರ್ದೇಶಕ ತತ್ವಗಳನ್ನು ಜಾರಿಗೊಳಿಸುವಂತೆ ಯಾವ ನ್ಯಾಯಾಲಯವೂ ಆದೇಶ ನೀಡಲು ಸಾಧ್ಯವಿಲ್ಲ ಅಥವಾ ನೀತಿ ನಿರ್ದೇಶಕ ತತ್ವಗಳ ಉಲ್ಲಂಘನೆಯನ್ನು ಒಳಗೊಂಡಿರುವ ವಿಷಯಗಳ ಬಗ್ಗೆ ಯಾವುದೇ ತೀರ್ಪನ್ನು ನೀಡುವುದು ಸಾಧ್ಯವಿಲ್ಲ.[2] ಹೀಗಿದ್ದರೂ, ಕಾನೂನು ಮತ್ತು ನಿಯಮಗಳನ್ನು ರೂಪಿಸುವಾಗ ರಾಜ್ಯವು ನೀತಿನಿರ್ದೇಶಕ ತತ್ವಗಳನ್ನು ಮಾರ್ಗದರ್ಶಿಯನ್ನಾಗಿ ಉಪಯೋಗಿಸಿಕೊಂಡು ಅದಕ್ಕೆ ಪ್ರಾಮುಖ್ಯತೆಯನ್ನು ನೀಡುವಂತೆ ಅಪೇಕ್ಷಿಸಲಾಗಿದೆ.

ಮೂಲತಃ, ಭಾರತದ ಸಂವಿಧಾನ, 1950 ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಜಾರಿಯನ್ನು ಒತ್ತಾಯಪಡಿಸಲಾಗದ ನೀತಿ ನಿರ್ದೇಶಕ ತತ್ವವನ್ನಾಗಿ ತನ್ನ (ಹಿಂದಿನ) 45ನೇ ಅನುಚ್ಛೇದದಲ್ಲಿ ಒಳಗೊಂಡಿತ್ತು.[3] ಮಕ್ಕಳು ತಮ್ಮ ಹದಿನಾಲ್ಕನೇ ವಯಸ್ಸಿಗೆ ಬರುವವರೆಗೂ ಎಲ್ಲಾ ಮಕ್ಕಳಿಗೂ ರಾಜ್ಯವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂದು ಈ ರಾಜ್ಯದ ನೀತಿ ನಿರ್ದೇಶಕ ತತ್ವಗಳಲ್ಲಿ ಹೇಳಲಾಗಿದೆ.

ಇದಲ್ಲದೇ, ಭಾರತದ ಸಂವಿಧಾನದ ಅಡಿಯಲ್ಲಿರುವ ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿ, ಹತ್ತು ವರ್ಷಗಳ ಅವಧಿಯ ಒಳಗೇ ಈ ಮೇಲೆ ಹೇಳಿರುವಂತಹ ಉದ್ದೇಶವನ್ನು ಸಾಧಿಸಬೇಕೆಂದು ಹೇಳಿರುವ ಏಕೈಕ ನೀತಿ ನಿರ್ದೇಶಕ ತತ್ವ ಇದಾಗಿದೆ. ಈ ಸಂವಿಧಾನದ ಉಪಬಂಧದಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ಇಸಿಸಿಇ) ಮತ್ತು ಪ್ರಾಥಮಿಕ ಶಿಕ್ಷಣದ ಎಂದು ಬೇರೆ ಬೇರೆ ಹೇಳಿಲ್ಲ; ಇದು ರಾಜ್ಯದಲ್ಲಿನ ಎಲ್ಲಾ ಮಕ್ಕಳಿಗೂ ಹದಿನಾಲ್ಕು ವರ್ಷದವರೆಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವುದು ರಾಜ್ಯದ ಬಾಧ್ಯತೆ ಎಂದಷ್ಟೇ ವಿವರಿಸುತ್ತದೆ.

*ಮೋಹಿನಿ ಜೈನ್[4] ಮತ್ತು ಉನ್ನಿಕೃಷ್ಣನ್[5] ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಹೀಗೆ ಹೇಳಿದೆ:*

ಮೋಹಿನಿ ಜೈನ್ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ (1992) ಮತ್ತು ಉನ್ನಿಕೃಷ್ಣನ್ ಜೆ.ಪಿ ವಿರುದ್ಧ ಆಂಧ್ರ ಪ್ರದೇಶ ರಾಜ್ಯ ಸರ್ಕಾರ (1993) ಈ ಎರಡು ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿ ಶಿಕ್ಷಣ ಪಡೆಯಲು ಹಕ್ಕುಗಳನ್ನು ಘೋಷಿಸಿದೆ ಮತ್ತು ಸ್ಪಷ್ಟಪಡಿಸಿದೆ. ಉನ್ನಿಕೃಷ್ಣನ್‌ರವರ ಪ್ರಕರಣದಲ್ಲಿ, ಸರ್ವೋಚ್ಚ

[1]ಸಂವಿಧಾನದ ಅನುಚ್ಛೇದ 32 ಮತ್ತು 226 ಅಡಿಯಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ಸಮಾನತೆ ಹಕ್ಕು, ಸ್ವಾತಂತ್ರ್ಯ ಅಥವಾ ಜೀವದ ಹಕ್ಕುಗಳಂತಹ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಬಹುದಾಗಿದೆ.

[2]ಅನುಚ್ಛೇದ 37, ಭಾರತದ ಸಂವಿಧಾನ, 1950

[3]ಲೇಖನದ ಮುಂಬರುವ "ಶಿಕ್ಷಣ ಮತ್ತು ECCE ಕುರಿತು ಮೂಲಭೂತ ಹಕ್ಕು" ಎಂಬ ವಿಭಾಗವು ಸಂವಿಧಾನದ (ಎಂಬತ್ತ ಆರನೇ ತಿದ್ದುಪಡಿ) ಕಾಯಿದೆ, 2002 ಅಡಿಯಲ್ಲಿ ಅನುಚ್ಛೇದ 45ಕ್ಕೆ ಮಾಡಿದ ಒಂದು ಪರಿಷ್ಕರಣೆ ಕುರಿತು ಹೇಳುತ್ತದೆ.

[4]Mohini Jain v State of Karnataka, (1992) 3 SCC 666

[5]Unnikrishnan J. P. v State of Andhra Pradesh 1993 SCC (1) 645

ನ್ಯಾಯಾಲಯವು ಸಂವಿಧಾನದ 21ನೇ ಅನುಚ್ಛೇದದ ಅಡಿಯಲ್ಲಿ ಖಾತರಿ ನೀಡಲಾದ ಜೀವನದ ಮೂಲಭೂತ ಹಕ್ಕುಗಳ ಭಾಗವಾಗಿ ಶಿಕ್ಷಣದ ಹಕ್ಕನ್ನು ಘೋಷಿಸಿದೆ. ಶಿಕ್ಷಣದ ಹಕ್ಕು ಎಲ್ಲಾ ನಾಗರಿಕರಿಗೂ ಎಲ್ಲಾ ಹಂತಗಳಲ್ಲೂ ಲಭ್ಯವಾಗಬೇಕು ಎನ್ನುವುದನ್ನು ನ್ಯಾಯಾಲಯವು ಎತ್ತಿ ಹಿಡಿದಿದೆ. ರಾಜ್ಯವು ಶಿಕ್ಷಣವನ್ನು ಒದಗಿಸಬೇಕು ಎಂದು ನಾಗರಿಕರು ಈಗ ಬೇಡಿಕೆ ಇಡಬಹುದು. ಶಿಕ್ಷಣದ ಹಕ್ಕು ಜೀವನದ ಹಕ್ಕಿಗೆ ಸಹವರ್ತಿ ಎಂಬ ತತ್ವವನ್ನು ನ್ಯಾಯಾಲಯವು ಒತ್ತಿ ಹೇಳಿದೆ. ಹೀಗಿದ್ದರೂ, ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಮಕ್ಕಳ ಹದಿನಾಲ್ಕನೇ ವರ್ಷದವರೆಗೆ ಮಾತ್ರ ನೀಡಬೇಕೆಂಬ ನಿರ್ಬಂಧವನ್ನು ಹೇಳಿದೆ. ನ್ಯಾಯಾಲಯವು ಇದಕ್ಕೆ ಈ ರೀತಿಯ ಕಾರಣಗಳನ್ನು ನೀಡಿದೆ: (1) ಈ ಸಂವಿಧಾನಾತ್ಮಕ ನಿರ್ದೇಶಕಗಳು ಮಕ್ಕಳಿಗೆ ಮಾತ್ರ ಲಭ್ಯ (2) ಎಲ್ಲಾ ಹಂತಗಳಲ್ಲಿ ಉಚಿತವಾಗಿ ಶಿಕ್ಷಣದ ಹಕ್ಕನ್ನು ನೀಡಲು ರಾಜ್ಯಕ್ಕೆ ಆರ್ಥಿಕ ಸಾಮರ್ಥ್ಯವಿಲ್ಲ.

ಜೀವಿಸುವ ಹಕ್ಕನ್ನು ಅರ್ಥಪೂರ್ಣವಾಗಿ ಅನುಭವಿಸಲು ಶಿಕ್ಷಣದ ಹಕ್ಕು ಅತ್ಯಾವಶ್ಯಕ ಎಂದು ಈ ತೀರ್ಪಿನಲ್ಲಿ ಒತ್ತಿ ಹೇಳಲಾಗಿದೆ. ಹೀಗಿದ್ದರೂ, ಈ ಎರಡು ತೀರ್ಪುಗಳಲ್ಲಿ ಯಾವೊಂದರಲ್ಲೂ ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದ ನಡುವೆ ವ್ಯತ್ಯಾಸವನ್ನು ಮಾಡಿಲ್ಲ. ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದ ನಡುವಿನ ವ್ಯತ್ಯಾಸ ನ್ಯಾಯಾಲಯಕ್ಕೆ ಯಾವುದೇ ಆತಂಕದ ವಿಷಯವಲ್ಲ. ಏಕೆಂದರೆ ಶಿಕ್ಷಣದ ಹಕ್ಕಿನ ಲಭ್ಯತೆಯನ್ನು ಹದಿನಾಲ್ಕು ವರ್ಷ ಪೂರ್ಣವಾಗುವುದರ ಒಳಗಿನ ಎಲ್ಲ ಮಕ್ಕಳಿಗೆ ಒದಗಿಸಲಾಗಿದೆ.

### ಶಿಕ್ಷಣದ ಮೂಲಭೂತ ಹಕ್ಕು ಮತ್ತು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ಇಸಿಸಿಇ):

2002ರಲ್ಲಿ, ಭಾರತದ ಸಂಸತ್ತು ತನ್ನ ಸಂವಿಧಾನದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕನ್ನು ಮೂಲಭೂತ ಹಕ್ಕು ಆಗಿ ತನ್ನ 21 ಎ ಅನುಚ್ಛೇದದಲ್ಲಿ ಸೇರಿಸಿದೆ.[6] ಹೊಸದಾಗಿ ಸೇರಿಸಿರುವ ಈ ಹಕ್ಕನ್ನು 6 ರಿಂದ 14ನೇ ವಯೋಮಾನದ ಒಳಗಿರುವ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ನಿರ್ಬಂಧಗೊಳಿಸಿದೆ. ಇದರ ಫಲವಾಗಿ, 21 ಎ ಪರಿಚ್ಛೇದದ ಉಲ್ಲಂಘನೆಗೆ ಉಚ್ಚ ನ್ಯಾಯಾಲಯವಾಗಲೀ, ಸರ್ವೋಚ್ಚ ನ್ಯಾಯಾಲಯವಾಗಲೀ ಪರಿಹಾರವನ್ನು ಒದಗಿಸಬಹುದು. ಹೀಗಿದ್ದರೂ, ಆರು ವರ್ಷದ ಒಳಗಿನ ಮಕ್ಕಳಿಗಾಗಿ ಇಸಿಸಿಇ ಕೂಡ ಒಳಗೊಳ್ಳುವಂತೆ ತಿದ್ದುಪಡಿ ಮಾಡಿ 45ನೇ ಅನುಚ್ಛೇದವನ್ನು ಮಾರ್ಪಡಿಸಲಾಗಿದೆ. ರಾಜ್ಯವು ಮಕ್ಕಳಿಗೆ ಎಳೆಯ ವಯಸ್ಸಿನಲ್ಲಿ ಪೋಷಣೆ ಮತ್ತು ಆರು ವರ್ಷದವರೆಗೆ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮಾಡಬೇಕು ಎಂದು ಪರಿಷ್ಕೃತ 45ನೇ ಅನುಚ್ಛೇದ ಹೇಳುತ್ತದೆ. ಹೀಗಾಗಿ, ಆರಂಭಿಕ ಬಾಲ್ಯದ ಶಿಕ್ಷಣವನ್ನು ರಾಜ್ಯ ನೀತಿ ನಿರ್ದೇಶಕ ತತ್ವವನ್ನಾಗಿ ಸೇರಿಸುವುದರಿಂದ, ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮ ಅಥವಾ ಯೋಜನೆಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿ ಯಾವುದೇ ವ್ಯಕ್ತಿಯು ನ್ಯಾಯಾಲಯಕ್ಕೆ ಹೋಗದಂತೆ ತಿದ್ದುಪಡಿಯು ನಿಯಂತ್ರಿಸುತ್ತದೆ.[7]

ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿಯು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ್ದಾದರೆ ಐಸಿಡಿಎಸ್ ಮತ್ತು ಇಸಿಸಿಇಯನ್ನು ಜಾರಿಗೊಳಿಸುವ ಜವಾಬ್ದಾರಿಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ್ದಾಗಿದೆ. ಶಿಕ್ಷಣದ ಹಕ್ಕನ್ನು ಅಳವಡಿಸುವಂತೆ ಪ್ರಸ್ತಾಪನೆಯನ್ನು ಮಾಡಿದ್ದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ. ಇದರ ಫಲವಾಗಿ, ಆರು ವರ್ಷದ ಒಳಗಿನ ಮಕ್ಕಳು, ಮಕ್ಕಳ ಶಿಕ್ಷಣದ ಹಕ್ಕಿನ ವ್ಯಾಪ್ತಿಯಿಂದ ಹೊರಗೆ ಉಳಿದರು.

### ಆಹಾರದ ಹಕ್ಕು ಪ್ರಕರಣ[8]

ಪಿ.ಯು.ಸಿ.ಎಲ್. ವಿರುದ್ಧ ಭಾರತದ ಕೇಂದ್ರ ಸರ್ಕಾರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಕೆಲವು ಆದೇಶಗಳು ನಮ್ಮ ಈ ಚರ್ಚೆಗೆ ಸೂಕ್ತವೆನಿಸುತ್ತವೆ. ಏಕೆಂದರೆ ಭಾರತದ ಅಂಗನವಾಡಿ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದಕ್ಕೆ ಇವು ಮಹತ್ವದ್ದಾಗಿವೆ. ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಸಂಸ್ಥೆಯು ಸಂವಿಧಾನದ 21 ಎ ಅನುಚ್ಛೇದದ ಅಡಿಯಲ್ಲಿನ ಜೀವನದ ಭರವಸೆಯ ಹಕ್ಕಿನ ಒಂದು ಭಾಗವಾಗಿ ಆಹಾರದ ಹಕ್ಕನ್ನು ಎತ್ತಿ ಹಿಡಿಯುವುದಕ್ಕಾಗಿ ಹೂಡಿದ ಮೊಕದ್ದಮೆ ಇದು. ಮೊಕದ್ದಮೆಯನ್ನು ಹೂಡಿದವರು, ಉಪವಾಸ ಮತ್ತು ಹಸಿವಿನಿಂದ ಜನರನ್ನು ರಕ್ಷಿಸುವಂತೆ ಮತ್ತು ಆಹಾರ ಮತ್ತು ಪೌಷ್ಟಿಕತೆಯನ್ನು ಪಡೆಯುವಂತೆ ಮಾಡಲು ನ್ಯಾಯಾಲಯವನ್ನು ಕೋರಿದರು. ಮಧ್ಯಾಹ್ನದ ಬಿಸಿಯೂಟವನ್ನು ಸಾರ್ವತ್ರಿಕಗೊಳಿಸುವುದು, ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವುದನ್ನೂ ಸೇರಿದಂತೆ ಆಹಾರ ಭದ್ರತೆಗೆ

[6]The Constitution (Eighty-Sixth Amendment) Act, 2002

[7]Article 37 of the Constitution prohibits any court from enforcing any directive principle of state policy.

[8]People's Union for Civil Liberties v Union of India W. P. (c) 196 of 2001

ಸಂಬಂಧಿಸಿದ ಎಲ್ಲಾ ಯೋಜನೆಗಳನ್ನು ಜಾರಿಗೆ ತರುವಂತೆ ನ್ಯಾಯಾಲಯವು ಅನೇಕ ಆದೇಶಗಳನ್ನು ನೀಡಿತು. ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸರ್ಕಾರ ಸಲ್ಲಿಸಿದ ವರದಿಗಳ ಮೂಲಕ ಈ ಆದೇಶಗಳ ಅನುಷ್ಠಾನದ ಮೇಲ್ವಿಚಾರಣೆಯನ್ನು ಮಾಡುವಂತೆ ನ್ಯಾಯಾಲಯವು ಒಂದು ಸಮಿತಿಯನ್ನು ನೇಮಕ ಮಾಡಿತು.

ಆರು ವರ್ಷದ ಒಳಗಿನ ಮಕ್ಕಳಿಗೆ ಆರೋಗ್ಯ, ಶಿಕ್ಷಣ ಮತ್ತು ಬೆಳವಣಿಗೆಯ ಅವಶ್ಯಕತೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರುವುದರಿಂದ ಭಾರತದಲ್ಲಿ ಇಸಿಸಿಇಯನ್ನು ಅಳವಡಿಸಿಕೊಳ್ಳಲು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (ಐಸಿಡಿಎಸ್) ಮಹತ್ವದ್ದಾಗಿದೆ. ಈ ಯೋಜನೆಗೆ ಸಂಬಂಧಿಸಿದಂತೆ, ಐಸಿಡಿಎಸ್‌ನ ಅಡಿಯಲ್ಲಿ ಅಂಗನವಾಡಿ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವಂತೆ ನಿರ್ದೇಶಿಸಿ ರಾಜ್ಯಕ್ಕೆ ನ್ಯಾಯಾಲಯವು ಒಂದು ಆದೇಶವನ್ನು ನೀಡಿತು.[9] ಅನಂತರ ಎಳೆ ವಯಸ್ಸಿನಲ್ಲೇ ಚುರುಕುಗೊಳಿಸುವ ಮತ್ತು ಶಿಕ್ಷಣದ ಮೂಲಕ ಶಾಲಾ ಪೂರ್ವ ಮಕ್ಕಳ ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಯ ಅಗತ್ಯತೆಗೆ ಬೇಕಾದ ಪರಿಸ್ಥಿತಿಗಳನ್ನು ಒದಗಿಸುವಂತೆ ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ಮತ್ತೊಂದು ಆದೇಶವನ್ನು ನೀಡಿತು.[10] ನಮಗೆ ಕಂಡುಬಂದ್ದದ್ದೇನೆಂದರೆ ದುರಾದೃಷ್ಟಕರವಾಗಿ, 2013ರಲ್ಲೂ ಅಂಗನವಾಡಿಗಳು ಸಿಬ್ಬಂದಿಯ ಕೊರತೆಯನ್ನು ಹೊಂದಿವೆ ಅಥವಾ ಕಳಪೆ ಮೂಲ ಸೌಕರ್ಯದೊಂದಿಗೆ ಕಾರ್ಯನಿರ್ವಹಿಸುತ್ತಿವೆ.[11]

**ಶಿಕ್ಷಣ ಹಕ್ಕು ಕಾಯ್ದೆ ಮತ್ತು ಆರಂಭಿಕ ಬಾಲ್ಯದ ಶಿಕ್ಷಣ:**

ಸಂವಿಧಾನದ 21 ಎ ಅನುಚ್ಛೇದದ ಅಡಿಯಲ್ಲಿನ ಶಿಕ್ಷಣದ ಹಕ್ಕನ್ನು ಕಾನೂನು ನಿರ್ಧರಿಸಿರುವಂತೆ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾನೂನಿನ (ಇಲ್ಲಿಂದ ಆರ್‌ಟಿಇ ಎನ್ನೋಣ) ಅನ್ವಯ ಜಾರಿಗೊಳಿಸಲಾಗುತ್ತದೆ. ಈ ಕಾನೂನು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಅನ್ವಯಿಸುವುದಾದರೂ, ಪುಟಾಣಿ ಮಕ್ಕಳಿಗೆ ಪೋಷಣೆ ಮತ್ತು ಶಿಕ್ಷಣವನ್ನು ಒದಗಿಸುವುದು ರಾಜ್ಯ ಸರ್ಕಾರಗಳಿಗೆ ಬಿಟ್ಟಿರುವ ಆಯ್ಕೆಯಾಗಿದೆ (ವಿಭಾಗ 11). ಇದರೊಂದಿಗೆ, ಯಾವ ಶಾಲೆಯು ಶಿಶುವಿಹಾರವನ್ನು ಹೊಂದಿದೆಯೋ ಆ ಶಾಲೆಗಳಲ್ಲಿ ಆರ್‌ಟಿಇ ಅಡಿಯಲ್ಲಿನ ಪ್ರವೇಶ ದಾಖಲಾತಿ ಮತ್ತು ಮೀಸಲು ಶಿಶುವಿಹಾರದಿಂದಲೇ ಪ್ರಾರಂಭವಾಗುತ್ತದೆ ಎಂದು ಆರ್‌ಟಿಇ ಕಡ್ಡಾಯಗೊಳಿಸಿದೆ (ವಿಭಾಗ 12). ಇದರ ಪರಿಣಾಮವಾಗಿ, ಪುಟಾಣಿ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ಎಲ್ಲಾ ಶಾಲೆಗಳ ಆರಂಭಿಕ ಬಾಲ್ಯದ ಶಿಕ್ಷಣ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಬಾಧ್ಯತೆಯ ಅಡಿಯಲ್ಲಿ ಬರುತ್ತವೆ. ಆರ್‌ಟಿಇಯಲ್ಲಿ ನೀಡಿರುವ ಈ ಅವಕಾಶದ ಮೂಲಕ ಮಕ್ಕಳು ಇವುಗಳನ್ನು ಪಡೆಯಲು ಹಕ್ಕುದಾರರಾಗಿದ್ದಾರೆ. – (1) ನೆರೆ–ಹೊರೆಯಲ್ಲಿರುವ ಸರ್ಕಾರಿ, ಖಾಸಗಿ ಅಥವಾ ಅನುದಾನಿತ ಶಾಲೆಗಳಲ್ಲಿ ಪ್ರವೇಶವನ್ನು ಪಡೆಯುವುದು ಮತ್ತು (2) ಯಾವುದೇ ಮಗುವು ಸಮಾಜದಲ್ಲಿ ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಅನಾನುಕೂಲವನ್ನು ಹೊಂದಿರುವ ವಿಭಾಗಕ್ಕೆ ಸೇರಿದ್ದಲ್ಲಿ ಆ ಮಗುವಿಗೆ ಉಚಿತ ಮತ್ತು ಕಡ್ಡಾಯವಾಗಿ ಆರಂಭಿಕ ಬಾಲ್ಯದ ಶಿಕ್ಷಣವನ್ನು ಒದಗಿಸಬೇಕು.

ಆರ್‌ಟಿಇಯ ಸಂವಿಧಾನಾತ್ಮಕ ಸಿಂಧುತ್ವವನ್ನು ಆಕ್ಷೇಪಿಸಿ ಅನುದಾನರಹಿತ ಮತ್ತು ಅನುದಾನಿತ ಶಾಲೆಗಳ ಒಂದು ಗುಂಪು ರಾಜಾಸ್ಥಾನದ ಖಾಸಗೀ ಶಾಲೆಗಳ ಸಂಘಟನೆ (ಯುನೈಟೆಡ್ ಪ್ರೈವೇಟ್ ಸ್ಕೂಲ್ಸ್ ಆಫ್ ರಾಜಾಸ್ಥಾನ್) ವಿರುದ್ಧ ಭಾರತದ ಕೇಂದ್ರ ಸರ್ಕಾರ ಪ್ರಕರಣದಲ್ಲಿ ಮೊಕದ್ದಮೆಯನ್ನು ಹೂಡಿತು.[12] 2012ರಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್, ಈ ಮೊಕದ್ದಮೆಯ ಮಧ್ಯಪ್ರವೇಶಿಸಿ ಆರ್‌ಟಿಇ ಸಿಂಧುತ್ವವನ್ನು ಉಳಿಸಬೇಕೆಂದು ವಾದಿಸಿತು. ಮುಂದುವರಿದು, ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ ಕುರಿತು (ಇಸಿಸಿಇ) ಮಾತನಾಡಿ ನ್ಯಾಯಾಲಯವು ಇಸಿಸಿಇಯನ್ನು 21 ಎ ಪರಿಚ್ಛೇದದ ಅಡಿಯಲ್ಲಿನ ಶಿಕ್ಷಣದ ಹಕ್ಕು ವ್ಯಾಪ್ತಿಯಲ್ಲಿ ಬರುವಂತಹುದು ಎಂದು ಪರಿಗಣಿಸಬೇಕು ಎಂದು ಪ್ರಸ್ತಾವವನ್ನೂ ಸಲ್ಲಿಸಿತು. ಅಂದರೆ ಈ ಮೂಲಕ ಈ ಹಕ್ಕನ್ನು ಆರು ವರ್ಷಕ್ಕಿಂತ ಚಿಕ್ಕ ಮಕ್ಕಳಿಗೂ ವಿಸ್ತರಿಸುವಂತೆ ಕೇಳಕೊಂಡಿತು.

ಈ ಸಲ್ಲಿಕೆಯು ಮೂರು ತತ್ವಗಳನ್ನು ಆಧರಿಸಿದ್ದಾಗಿತ್ತು, ಅವುಗಳೆಂದರೆ:

1. ಉನ್ನಿಕೃಷ್ಣನ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವಂತೆ ಹದಿನಾಲ್ಕು ವರ್ಷದ ಒಳಗಿರುವ

---

[9] W.P. (c) 196/2001, Order dated 28/11/2012, available at: http://www.righttofoodindia.org/orders/nov28.html

[10] W.P. (c) 196/2001, Order dated 29/04/2004, available at: **http://www.righttofoodindia.org/orders/apr2904.html**

[11] "Poor Status of Anganwadis in Bangalore" CIVIC (2012), available at:
**http://civicspace.in/sites/default/files/attachments/public%20hearing%20on%20health%20english%20version.pdf.**
Also see "Anganwadis for All – A Primer" Right to Food Campaign (2007) available at: http://www.righttofoodindia.org/data/icds06primer.pdf.

[12] "(2012) 6 SCC 1

ಎಲ್ಲಾ ಮಕ್ಕಳೂ ಶಿಕ್ಷಣದ ಹಕ್ಕನ್ನು ಪಡೆಯಲು ಅರ್ಹರು ಮತ್ತು ಈ ಹಕ್ಕನ್ನು ಜಾರಿಗೆ ತರಲು ರಾಜ್ಯದ ಮೇಲೆ ಒತ್ತಾಯ ತರಬಹುದು;

2. ಶಾಲೆಗಳಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಇಸಿಸಿಇಯ ಪಾತ್ರ ಪ್ರಮುಖವಾದದ್ದು ಎಂದು ಸಂಶೋಧನೆಯು ತೋರಿಸಿದೆ; ಮತ್ತು

3. ಭಾರತದಲ್ಲಿನ ಆರಂಭಿಕ ಬಾಲ್ಯದ ಶಿಕ್ಷಣದ ವಲಯವು ಹೆಚ್ಚು ಅನಿರ್ಬಂಧಿತವಾಗಿದೆ ಆದರೆ ಆರ್‌ಟಿಇ ಕಾಯ್ದೆಯು ಒಂದನೇ ತರಗತಿ ಮತ್ತು ಅದಕ್ಕೆ ಮೇಲ್ಪಟ್ಟ ತರಗತಿಗಳ ದಾಖಲಾತಿಗೆ ಕೆಲವು ನಿಯಮಗಳು ಮತ್ತು ಗುಣಮಟ್ಟವನ್ನು ಆದೇಶಿಸುತ್ತದೆ. ಹೀಗಿದ್ದರೂ, ಸಂಸತ್ತು ಪರಿಷ್ಕೃತ ಅನುಚ್ಛೇದ 45ರಲ್ಲಿ ಇಸಿಸಿಇಯನ್ನು ಸೇರಿಸಿದ್ದರೂ, ನ್ಯಾಯಾಲಯವು ಹಕ್ಕನ್ನು ವಿಸ್ತರಿಸುವ ವಿಷಯದಲ್ಲಿ ಮೌನವಾಗಿದೆ.

### ಇಸಿಸಿಇ ಮತ್ತು ಕರ್ನಾಟಕದಲ್ಲಿನ ಶಾಲೆಯಿಂದ ಹೊರಗುಳಿದ ಮಕ್ಕಳ ದಾವೆ:

ಇಸಿಸಿಇಯ ಪ್ರಾಮುಖ್ಯತೆಯನ್ನು ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಮೊಕದ್ದಮೆಯಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದ ಮುಂದೆಯೂ ಇಡಲಾಯಿತು.[13] ಒಂದು ದಿನ ಪತ್ರಿಕೆಯಲ್ಲಿನ ವರದಿಯ ಆಧಾರದ ಮೇರೆಗೆ[15] ಶಾಲೆಯಿಂದ ಹೊರಗುಳಿದ ಮಕ್ಕಳ ವಿಷಯದ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಈ ಮೊಕದ್ದಮೆಯನ್ನು ಪರಿಗಣಿಸಿತು.[14] 50,000 ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ಶಿಕ್ಷಣದ ಮೂಲಭೂತ ಹಕ್ಕು ಎನ್ನುವುದರ ಅತಿ ದೊಡ್ಡ ಉಲ್ಲಂಘನೆ ಎಂದು ನ್ಯಾಯಾಲಯವು ಪರಿಗಣಿಸಿತು. ಈ ಪ್ರಕರಣದಲ್ಲಿ, ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನವನ್ನು ಮಾಡುವುದಲ್ಲದೇ, ಕರ್ನಾಟಕದಲ್ಲಿ ಆರ್‌ಟಿಇಯ ಅನುಷ್ಠಾನದ ಮೇಲ್ವಿಚಾರಣೆ ಮಾಡಲು ಉನ್ನತ ಮಟ್ಟದ ಸಮಿತಿಯನ್ನು ನಿಯೋಜಿಸುವ ಮೂಲಕ ಶೈಕ್ಷಣಿಕ ಆಡಳಿತದ ವಲಯವನ್ನೂ ಪ್ರವೇಶಿಸಿತು.

ಈ ದಾವೆಯ ಪರಿಣಾಮವಾಗಿ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಹೊಸ ವ್ಯಾಖ್ಯಾನ ಬಂದಿತು ಮತ್ತು ಹಾಜರಾತಿ ಅಧಿಕಾರಿಗಳ ಕಾರ್ಯವೂ ಸೇರಿದಂತೆ ಅನೇಕ ವಿಷಯಗಳಲ್ಲಿ ಬದಲಾವಣೆಯನ್ನು ತಂದಿತು. ಆದಾಗ್ಯೂ, ಈ ಮೊಕದ್ದಮೆಯಲ್ಲಿ ಅಂಗನವಾಡಿ ವ್ಯವಸ್ಥೆಗೆ ಹೆಚ್ಚಿನ ಗಮನವನ್ನು ನೀಡದೇ ಇಸಿಸಿಇಯ ಬಗ್ಗೆಯೂ ಹೆಚ್ಚಿನ ಕಾಳಜಿಯನ್ನು ತೋರದೆ ಮಕ್ಕಳು ಮುಖ್ಯವಾಹಿನಿ ಶಾಲೆಗಳಿಗೆ ವರ್ಗವಾಗುವುದನ್ನು ಖಚಿತಪಡಿಸಿಕೊಳ್ಳುವಷ್ಟಕ್ಕೆ ಮಿತಗೊಂಡಿರುವುದಲ್ಲ ಗಮನಾರ್ಹ. ಅಂಗನವಾಡಿಯಲ್ಲಿನ ಮೂಲಸೌಕರ್ಯಗಳು, ನಿರ್ದಿಷ್ಟವಾಗಿ ಹೇಳುವುದಾದರೆ ಶೌಚಾಲಯಗಳು ಹೆಚ್ಚಿನ ಚಾಲನೆಯನ್ನು ಪಡೆದ ವಿಷಯಗಳು.[16] ವಿವಿಧ ಇಲಾಖೆಗಳ ನಡುವೆ ಉತ್ತಮ ಸಮನ್ವಯ ಅಗತ್ಯವಿದೆ ಎಂದು ನ್ಯಾಯಾಂಗವು ಹೆಚ್ಚಿನ ಒತ್ತನ್ನು ನೀಡಿತು, ಆದರೆ ಆರಂಭಿಕ ಬಾಲ್ಯದ ಶಿಕ್ಷಣದ ಮುಖ್ಯ ಉದ್ದೇಶವಾದ ಉತ್ತಮ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವುದು ಈ ದಾವೆಯ ವ್ಯಾಪ್ತಿಯಿಂದ ಹೊರಗುಳಿಯಿತು.

### ಮುಕ್ತಾಯದ ಅಭಿಪ್ರಾಯಗಳು:

ಭಾರತ ಸರ್ಕಾರ ಆರು ವರ್ಷದಿಂದ ಹದಿನಾಲ್ಕು ವರ್ಷದ ಮಕ್ಕಳ ಪ್ರಾಥಮಿಕ ಶಿಕ್ಷಣದ ವಿಷಯವನ್ನು ಯಶಸ್ವಿಯಾಗಿ ಕಾನೂನಿನ ಚೌಕಟ್ಟಿಗೆ ಒಳಪಡಿಸಿದರೂ, ಪುಟ್ಟ ಮಕ್ಕಳಿಗೆ (ಆರು ವರ್ಷದೊಳಗಿನ ಮಕ್ಕಳಿಗೆ) ಉತ್ತಮ ಗುಣಮಟ್ಟದ ಮತ್ತು ಏಕರೂಪದ ಶಿಕ್ಷಣ ವ್ಯವಸ್ಥೆ ಮಾಡುವುದರ ಬಗ್ಗೆ ಅಂತಹಾ ಪ್ರಯತ್ನಗಳನ್ನೇನು ಮಾಡಿರುವುದಿಲ್ಲ. ಭಾರತದಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ(ಇಸಿಸಿಇ) ಕೌಶಲ ಕ್ಷೇತ್ರಗಳು ಅನಿರ್ಬಂಧಿತವಾಗಿಯೇ ಉಳಿದಿದೆ. ಅಂಗನವಾಡಿಗಳು ಅಥವಾ ಶಿಶುವಿಹಾರಗಳನ್ನು ಕ್ರಮಬದ್ಧಗೊಳಿಸಿ ಅವುಗಳ ಸ್ಥಾಪನೆ, ಕಾರ್ಯ ಅಥವಾ ನಿಯಂತ್ರಣಗಳ ಗುಣಮಟ್ಟವನ್ನು ಹೇರಲು ಯಾವುದೇ ರೀತಿಯ ಕಾನೂನು ಅಥವಾ ನಿಯಮಗಳಿಲ್ಲ. ಇದಲ್ಲದೇ, ಅಂಗನವಾಡಿ ವ್ಯವಸ್ಥೆಗೆ ಮತ್ತು ಶಿಶುವಿಹಾರ ವ್ಯವಸ್ಥೆಗೆ ಸರ್ಕಾರದ ವಿಭಿನ್ನ ಸಚಿವಾಲಯಗಳು ಜವಾಬ್ದಾರರು. ಉತ್ತಮ ಗುಣಮಟ್ಟದ ಆರಂಭಿಕ ಬಾಲ್ಯದ ಶಿಕ್ಷಣವನ್ನು ಕಾರ್ಯರೂಪಕ್ಕೆ ತರಲು ಒಂದು ಹಕ್ಕನ್ನು ದೊರಕಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಆದರೂ ಆರಂಭಿಕ ಬಾಲ್ಯದ ಶಿಕ್ಷಣ ಸಂಸ್ಥೆಗಳ ಮೇಲೆ ಸ್ಪಷ್ಟವಾದ ಕಾನೂನು ಅಥವಾ ನಿಯಮ ಇಲ್ಲದೇ ಹೋಗಿರುವುದರಿಂದ ಈ ವಿಷಯದ ಬಗ್ಗೆ ಏನೇ ತೀರ್ಪು ನೀಡಲು ನ್ಯಾಯಾಲಯಗಳು

[13] W.P. (C) 15678 of 2013 High Court of Karnataka

[14] Supra at n. 5

[15] "The glitches that dog RTE implementation", the Hindu (March 31, 2013) available at: **http://www.thehindu.com/news/national/karnataka/the-glitches-that-dog-rte-implementation/article4564801.ece**

[16] "All Anganwadis in Karnataka will have toilets by next June, says Court", The Hindu (August 20, 2013) available at: **http://www.thehindu.com/news/national/karnataka/all-anganwadis-in-karnataka-will-have-toilets-by-june-next-says-court/article5039280.ece**

ಹಿಂಜರಿಯುತ್ತಿವೆ. ಆದ್ದರಿಂದ, ಅಂಗನವಾಡಿಗಳು ಮತ್ತು ಶಿಶುವಿಹಾರಗಳ ಸ್ಥಾಪನೆಯ ವಿಧಾನವನ್ನು ವಿವರವಾಗಿ ಹೇಳುವ, ಏಕರೂಪದ ಗುಣಮಟ್ಟವನ್ನು ನಿಗದಿಸುವ ಮತ್ತು ಅವುಗಳ ಕಾರ್ಯವನ್ನು ಕ್ರಮಬದ್ಧಗೊಳಿಸುವ ಸಮಗ್ರ ನಿಯಮಾವಳಿಯ ರಚನೆಯ ಬಹು ಮುಖ್ಯ ಅಗತ್ಯತೆಯನ್ನು ನಿರ್ಲಕ್ಷ್ಯ ಮಾಡಬಾರದು.







**ಡೋಲಶ್ರೀ**ಯವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶಾಲೆಯ ನೀತಿಗಳು ಮತ್ತು ಆಡಳಿತ (School of Policy and Governance) ವಿಭಾಗದಲ್ಲಿ ಗ್ರಾಜುಯೇಟ್ ಫೆಲೋ ಆಗಿ ಕಾರ್ಯ ನಿರ್ವಹಿಸುತಿದ್ದಾರೆ. ಇವರು ಹಬ್ ಫಾರ್ ಎಜುಕೇಷನ್ ಲಾ ಅಂಡ್ ಪಾಲಿಸಿ (ಎಚ್‌ಇಎಲ್‌ಪಿ)ಯ ಸದಸ್ಯರು. ಸರ್ವೋಚ್ಚ ನ್ಯಾಯಾಲಯದಲ್ಲಿದ್ದ ರಾಜಾಸ್ಥಾನದ ಅನುದಾನರಹಿತ ಖಾಸಗೀ ಶಾಲೆಗಳ ಸಂಘ ವಿರುದ್ಧ ಭಾರತದ ಕೇಂದ್ರ ಸರ್ಕಾರ, ಮತ್ತು ಸದ್ಯದಲ್ಲಿ ನಡೆಯುತ್ತಿರುವ ಪ್ರಮತಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿಶ್ವಸ್ಥ ಮಂಡಳಿ ವಿರುದ್ಧ ಭಾರತದ ಕೇಂದ್ರ ಸರ್ಕಾರದ ಮೊಕದ್ದಮೆಯಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಮಧ್ಯಸ್ಥಿಕೆಯಲ್ಲೂ ನೆರವು ನೀಡುತ್ತಿದ್ದಾರೆ. ಇದರ ಜೊತೆಯಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ದಾವೆಯಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕೆಲವು ಸಹೋದ್ಯೋಗಿಗಳೊಂದಿಗೆ, ಡೋಲಶ್ರೀಯವರು ಕರ್ನಾಟಕದಲ್ಲಿ ಆರ್‌ಟಿಇ ಕಾಯ್ದೆಯ ಅಡಿಯಲ್ಲಿನ ಕುಂದುಕೊರತೆಗಳ ಪರಿಹಾರ ವ್ಯವಸ್ಥೆಗಳ ಬಗ್ಗೆ ಅಧ್ಯಯನವನ್ನು ಕೈಗೊಂಡಿದ್ದಾರೆ. ಇವರು ಬಿ.ಎ., ಎಲ್‌ಎಲ್.ಬಿಯನ್ನು 2010ರಲ್ಲಿ ಯೂನಿವರ್ಸಿಟಿ ಲಾ ಕಾಲೇಜ್, ಬೆಂಗಳೂರು ಇಲ್ಲಿ ಪೂರ್ಣಗೊಳಿಸಿದ್ದಾರೆ. ಇವರಿಗೆ ಶಿಕ್ಷಣದ ಹಕ್ಕು, ಸಾಮಾಜಿಕ ಆರ್ಥಿಕ ಹಕ್ಕು ಹಾಗೂ ಸಂವಿಧಾನಾತ್ಮಕ ಕಾನೂನು ವಿಷಯಗಳಲ್ಲಿ ಆಸಕ್ತಿಯಿದೆ. ಇವರನ್ನು dolashree.mysoor@apu.edu.in ಇಲ್ಲಿ ಸಂಪರ್ಕಿಸಬಹುದು.



# ಆರಂಭಿಕ ಬಾಲ್ಯ ಶಿಕ್ಷಣ: ಭವಿಷ್ಯದಲ್ಲಿನ ಸಾಧ್ಯತೆಗಳು

ವಿನಿತಾ ಕೌಲ್

**ಪರಿಚಯ**

ರಾಷ್ಟ್ರೀಯ ಶಿಕ್ಷಣ ನೀತಿಯು (1986) ಆರು ವರ್ಷದ ಒಳಗಿರುವ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು (ಇಸಿಸಿಇ) ಶಿಕ್ಷಣದ ಏಣಿಯ ಮೊದಲ ಹಂತವೆಂದು ಮಾತ್ರವಲ್ಲದೇ ಪ್ರಾಥಮಿಕ ಶಿಕ್ಷಣಕ್ಕೆ ಗಮನಾರ್ಹವಾದ ಕೊಡುಗೆಯೆಂದೂ ಗುರುತಿಸಿದೆ. ಶಿಶು ಅಭಿವೃದ್ಧಿ ದೃಷ್ಟಿಕೋನದಿಂದ ನೋಡಿದಾಗ, ಆರರಿಂದ ಎಂಟು ವರ್ಷದ ಒಳಗಿನ ಮಕ್ಕಳ ಅವಶ್ಯಕತೆಗಳು ಮತ್ತು ಗುಣಲಕ್ಷಣಗಳು ಅವರಿಗಿಂತ ಕಿರಿಯರಂತೆಯೇ ಇರುವುದರಿಂದ ಮತ್ತು ಅದೇ ರೀತಿಯ ಶೈಕ್ಷಣಿಕ ಬೋಧನಾ ವಿಧಾನಗಳನ್ನು ಬಯಸುವುದರಿಂದ ಶಿಕ್ಷಣದ ಮೊದಲ ಹಂತವಾಗಿರುವ ಇಸಿಸಿಇಯನ್ನು 8 ವರ್ಷದ ವಯೋಮಾನದಲ್ಲಿರುವ ಮಕ್ಕಳ ಗುಂಪಿಗೂ ವಿಸ್ತರಿಸಬೇಕೆಂದು ಜಾಗತಿಕವಾಗಿ ಪರಿಗಣಿಸಲಾಗಿದೆ. ಇಸಿಸಿಇಯನ್ನು ಪುಟಾಣಿ ಮಕ್ಕಳಿಗಾಗಿರುವ ಒಂದು ಸಂಯೋಜಿತ, ಸಮಗ್ರ ಕಾರ್ಯಕ್ರಮವನ್ನಾಗಿ ಕಾಣಲಾಗುತ್ತಿದ್ದು, ಇದು ಶೈಕ್ಷಣಿಕ ಅವಕಾಶಗಳು, ಪಾಲನೆ, ಆರೋಗ್ಯ ಮತ್ತು ಪೌಷ್ಟಿಕಾಹಾರದ ಅಂಶಗಳನ್ನು ಒಳಗೊಂಡಿದೆ. ಇಸಿಸಿಇಯ ಈ ಹಂತದಲ್ಲಿ ಮೂರು ಉಪ ಹಂತಗಳನ್ನು ಗುರುತಿಸಲಾಗಿದೆ – (ಅ) ಗೃಹಾಧಾರಿತ ಪ್ರಚೋದನಾ ಪರಿಸರ ಮತ್ತು ಪಾಲನೆಯ ಅಗತ್ಯವಿರುವ 3 ವರ್ಷ ಹಾಗೂ ಅದಕ್ಕಿಂತ ಕಿರಿಯರಿಗಾಗಿ ಆರಂಭಿಕ ಪ್ರಚೋದನಾ ಹಂತ; (ಆ) ಮೂರರಿಂದ ಆರು ವರ್ಷದ ಒಳಗಿರುವ ಮಕ್ಕಳಿಗೆ ಅವಶ್ಯವಿರುವ ಸಮಗ್ರ ಕೇಂದ್ರ ಆಧರಿತ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮವಾದ ಆರಂಭಿಕ ಬಾಲ್ಯದ ಶಿಕ್ಷಣದ ಹಂತ ಮತ್ತು (ಇ) ಆರರಿಂದ ಎಂಟು ವರ್ಷದ ಒಳಗಿರುವ ಒಂದರಿಂದ ಎರಡನೇ ತರಗತಿಯಲ್ಲಿರುವ ಮಕ್ಕಳಿಗಾಗಿ ಪ್ರಾಥಮಿಕ ಪೂರ್ವ ಹಂತ.

ಮಕ್ಕಳು ಶಿಶುವಿಹಾರ ಶಿಕ್ಷಣ ಪಡೆದಾಗ ಅದು ಅವರ ಜೀವನದುದ್ದಕ್ಕೂ ಪ್ರಭಾವವನ್ನು ಬೀರುತ್ತದಾದರೂ, ನಿಕಟ ಪರಿಣಾಮವೆಂದರೆ ಅವರು ಅದರ ತರುವಾಯ ಸೇರುವ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳು ಶಾಲೆಯಲ್ಲೇ ಉಳಿಯುವುದು, ಅವರ ಹಾಜರಾತಿ ಮತ್ತು ಓದಿನಲ್ಲಿ ಪ್ರಗತಿ ಮೇಲೆ ಉತ್ತಮ ಪ್ರಭಾವವನ್ನು ಬೀರುತ್ತದೆ ಎಂದು ನರವಿಜ್ಞಾನ, ಅರ್ಥಶಾಸ್ತ್ರ ಮತ್ತು ಶೈಕ್ಷಣಿಕ ವಲಯದಲ್ಲಿನ ಸಾಕಷ್ಟು ಸಂಶೋಧನೆಗಳು ಒದಗಿಸಿರುವ ಪುರಾವೆಗಳು ನಮ್ಮ ದೇಶದಲ್ಲಿ ಹಾಗೂ ವಿಶ್ವದಾದ್ಯಂತ ಈಗ ಲಭ್ಯವಿದೆ. ಇದಲ್ಲದೇ, ಶಾಲಾ ಪೂರ್ವ ಸಿದ್ಧತಾ ಅನುಭವಗಳು ಪ್ರಾಥಮಿಕ ಹಂತದ ತರಗತಿಗಳಲ್ಲಿ ಹೊಂದಾಣಿಕೆ ಮತ್ತು ಕಲಿಕೆಗೆ ಅನುಕೂಲವನ್ನು ಒದಗಿಸುತ್ತವೆ ಎಂದೂ ಇವು ಸ್ಪಷ್ಟಪಡಿಸಿವೆ. ವಿಶೇಷವಾಗಿ ಭಾಷೆ ಮತ್ತು ಬೌದ್ಧಿಕ/ಗ್ರಹಣಶಕ್ತಿಯ ಪೂರ್ವ ಸಿದ್ಧತೆಯಿಲ್ಲದೇ ಶಾಲಾ ವ್ಯವಸ್ಥೆಗೆ ಬರುವ ವಿಭಿನ್ನ ಗುಂಪುಗಳಿಗೆ ಸೇರಿದ ಮೊದಲ ತಲೆಮಾರಿನ ವಿದ್ಯಾರ್ಥಿಗಳ ಹಿನ್ನೆಲೆಯಾದ ಇಎಫ್ಎಯ ವಿಷಯದಲ್ಲಿ ಇದು ಸುಸ್ಪಷ್ಟವಾಗಿದೆ. ಆರಂಭಿಕ ಬಾಲ್ಯದ ಶಿಕ್ಷಣವು ಮಗುವಿನ ಜೀವನದ ಅತ್ಯಂತ ಮಹತ್ವದ ವರ್ಷಗಳ ಅವಧಿಯಲ್ಲಿ ಜೀವನಕ್ಕೆ ಸದೃಢ ಅಡಿಪಾಯವನ್ನು ಒದಗಿಸುವುದಲ್ಲದೇ ಪ್ರಾಥಮಿಕ ಶಿಕ್ಷಣದ ಗುರಿಗಳ ಸಾಧನೆಗೂ ಮಹತ್ವಪೂರ್ಣ ಕೊಡುಗೆಯನ್ನು ನೀಡುತ್ತದೆ. ಶಿಕ್ಷಣದ ಹಕ್ಕಿನ ದೃಷ್ಟಿಕೋನದ ಸಾಕಾರಕ್ಕೆ ಇದು ಪರಿಣಾಮಕಾರಿ ಬಳುವಳಿಯಾಗುತ್ತದೆ.

**ಆರಂಭಿಕ ಬಾಲ್ಯ ಶಿಕ್ಷಣಕ್ಕೆ ಎರಡು ಪ್ರಮುಖವಾದ ಉದ್ದೇಶಗಳಿವೆ–**

(ಅ) ಮೊದಲನೆಯದಾಗಿ, ಜೀವನವಿಡೀ ಕಲಿಕೆ ಹಾಗೂ ಪ್ರಗತಿಗೆ ಉತ್ತಮ ಅಡಿಪಾಯವಾಗುವ ಆಟ ಆಧಾರಿತ ಚಟುವಟಿಕೆ, ಸಂವಹನ ಹಾಗೂ ಅನುಭವಗಳಿಂದ ಒಡಗೂಡಿದ ಬೆಳವಣಿಗೆಗೆ ಸೂಕ್ತವಾದ ಹಾಗೂ ವಯೋಮಾನಕ್ಕೆ ಅನುಗುಣವಾದ ಕಾರ್ಯಕ್ರಮದ ಮೂಲಕ ಮಗುವಿನ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವುದು. (ಆ) ಕೆಲವು ವಿಧದ ಪರಿಕಲ್ಪನೆ ಹಾಗೂ ಕೌಶಲ್ಯಗಳಿಂದ ಕೂಡಿದ ಚಟುವಟಿಕೆಗಳ ಮೂಲಕ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕೂ ಮುನ್ನ ಓದು,ಬರಹ ಮತ್ತು ಲೆಕ್ಕ ಕಲಿಕಾ ಪರಿಸರಕ್ಕೆ ಹೊಂದುವಂತೆ ಶಾಲೆಗೆ ಸಿದ್ಧಪಡಿಸುವುದು. ಇದು ಓದು ಬರಹ ಮತ್ತು ಲೆಕ್ಕವನ್ನು ಸಾಂಪ್ರದಾಯಿಕವಾಗಿ ಬೋಧಿಸುವ ಒಂದು ಕಾರ್ಯಕ್ರಮವಲ್ಲ. ಈ ಶಾಲಾ ಸಿದ್ಧತೆಯು ನಿರ್ದಿಷ್ಟವಾಗಿ 4 ರಿಂದ 6 ವರ್ಷಗಳ ಮಕ್ಕಳಿಗೆ ಸೂಕ್ತವಾಗಿದೆ. ಏಕೆಂದರೆ, ಆ ವಯಸ್ಸಿನ ಮಕ್ಕಳು ಹೆಚ್ಚು ರಚನಾತ್ಮಕವಾದ ಕಲಿಕಾ ಪರಿಸರಕ್ಕೆ ಪಕ್ವವಾಗಿ ಆಟ ಆಧಾರಿತ ಚಟುವಟಿಕೆಗಳಿಗೆ ಸಿದ್ಧವಾಗಿರುತ್ತಾರೆ.

## ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭಿಕ ಬಾಲ್ಯ ಶಿಕ್ಷಣ

ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ ಬಗ್ಗೆ ಗಮನಾರ್ಹ ಬೆಳವಣಿಗೆಗಳು ನಡೆದವು. 2006ನೇ ಇಸವಿಯಲ್ಲಿ ಕೇಂದ್ರ ಸರಕಾರದ ಕಾರ್ಯನೀತಿಯ ಮಟ್ಟದಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು (ಇಸಿಸಿಇ)ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಮಹಿಳಾ ಹಾಗೂ ಶಿಶು ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಯಿತು. ಇದು ಮುಂದೆ ಒಂದು ಪ್ರಮುಖ ಮೈಲಿಗಲ್ಲಾದ ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕಿನ ಕಾನೂನಾಗಿ 2010 ನೆ ಇಸವಿ ಎಪ್ರಿಲ್ 1 ರಿಂದ ಜಾರಿಗೊಂಡಿತು. ಈ ಕಾನೂನು 6 ವರ್ಷಗಳಗೂ ಕಿರಿಯರಾದ ಮಕ್ಕಳಿಗೆ ಅನ್ವಯಿಸದಿದ್ದರೂ ಸದರೀ ಕಾನೂನಿನ ಕಲಂ 11 ರ ಪ್ರಕಾರ "3 ವರ್ಷವನ್ನೂ ಮೀರಿದ ವಯಸ್ಸಿನ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕೆ ತಯಾರು ಮಾಡಲು ಹಾಗೂ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ನೀಡಲು ಸಂಬಂಧಪಟ್ಟ ಸರಕಾರಗಳು ಶಾಲಾ ಪೂರ್ವ ಶಿಕ್ಷಣವನ್ನು ಉಚಿತವಾಗಿ ದೊರಕಿಸಿಕೊಡಲು ಸೂಕ್ತ ವ್ಯವಸ್ಥೆಯನ್ನು ಮಾಡಬಹುದಾಗಿದೆ" ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವು (ಇಸಿಸಿಇ) ನಂತರದಲ್ಲಿ ಸಂವಿಧಾನಿಕ ನಿಬಂಧನೆಯಾಗಿ ಬದಲಾದ 45 ನೇ ಅನುಚ್ಛೇದದ ಪ್ರಕಾರ "ಮಕ್ಕಳಿಗೆ 6 ನೇ ವರ್ಷ ತುಂಬುವವರೆಗೂ ಎಲ್ಲ ಮಕ್ಕಳಿಗೂ ರಾಜ್ಯ ಸರ್ಕಾರವು ಇಸಿಸಿಇಯನ್ನು ಅವರಿಗೆ ನೀಡಲು ಪ್ರಯತ್ನಿಸಬೇಕು" ಎಂದು ಹೇಳುತ್ತದೆ. ಈ ಎಲ್ಲ ಬೆಳವಣಿಗೆಗಳು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಮಹತ್ವವನ್ನು ಎತ್ತಿ ತೋರಿಸಿದ್ದಲ್ಲದೇ ಶಾಲಾ ಪೂರ್ವ ಶಿಕ್ಷಣವು ಮಕ್ಕಳ ಶಿಕ್ಷಣ ಹಾಗೂ ಪ್ರಗತಿಯ ಅಡಿಗಲ್ಲು ಎಂಬುದಾಗಿಯೂ ಬಿಂಬಿಸಿವೆ.

## ಭಾರತದಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ ಪ್ರಸ್ತುತ ಸ್ಥಿತಿ

ಸೆಪ್ಟಂಬರ್ 2013ರಲ್ಲಿ ಭಾರತ ಸರಕಾರದ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯು ಪ್ರಕಟಿಸಿರುವ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ರಾಷ್ಟ್ರೀಯ ನೀತಿಯ ಅಂಗೀಕಾರವು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಕ್ಷೇತ್ರದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ. ಈ ನೀತಿಯ ಜೊತೆಯಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹಾಗೂ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಮೌಲ್ಯಯುತ ಗುಣಮಟ್ಟವನ್ನು ನಿಗದಿಪಡಿಸಲಾಗಿದೆ. ಕಾರ್ಯನೀತಿ ರಚನೆಯ ಮಟ್ಟದಲ್ಲಿನ ಈ ಪ್ರಯತ್ನಗಳು ಈ ವಲಯದಲ್ಲಿ ವಿಸ್ತರಣೆ ಮತ್ತು ಗುಣಮಟ್ಟದ ನಿಯಂತ್ರಣವನ್ನು ತರಬಹುದು ಎಂಬ ಆಶಾವಾದ ಹಾಗೂ ನಿರೀಕ್ಷೆಯನ್ನು ಹುಟ್ಟಿಸುತ್ತವೆ.

11ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಶಾಲಾ ಪೂರ್ವ ತರಗತಿಗಳಿಗೆ ಪ್ರವೇಶವು ಪರಿಣಾಮಕಾರಿಯಾಗಿ ಹೆಚ್ಚಿ 2005 ನೇ ಇಸವಿಯಲ್ಲಿದ್ದ ಶೇ21 ರಿಂದ 2010 ನೇ ಇಸವಿಯಲ್ಲಿ ಶೇ47ಕ್ಕೆ ಏರಿಕೆಯನ್ನು ದಾಖಲಿಸಿದೆ (ಯುನೆಸ್ಕೊ 2010). ಅಸರ್(ASER)ನ (2010) ಇತ್ತೀಚಿನ ಅಂಕಿ ಸಂಖ್ಯೆಗಳಂತೆ 3 ರಿಂದ 6 ವರ್ಷ ವಯಸ್ಸಿನ ಗ್ರಾಮೀಣ ಪ್ರದೇಶದ 83.6% ಮಕ್ಕಳು ಖಾಸಗಿ ಪ್ರಾಥಮಿಕ ಪೂರ್ವ ಶಾಲೆಗಳೂ ಸೇರಿದಂತೆ ಒಂದಲ್ಲ ಒಂದು ಶಿಕ್ಷಣ ಪೂರ್ವ ವ್ಯಾಸಂಗಕ್ರಮದಲ್ಲಿ ಸೇರಿದ್ದಾರೆ. ಅಂಕಿ ಸಂಖ್ಯೆಗಳ ವಿಶ್ವಾಸಾರ್ಹತೆಯು ಎಷ್ಟೇ ಚರ್ಚಾಸ್ಪದ ವಿಷಯವಾಗಿದ್ದರೂ ಪ್ರಾಥಮಿಕ ಪೂರ್ವ ಶಿಕ್ಷಣದ ಕ್ಷೇತ್ರದಲ್ಲಿ ಪ್ರಗತಿಯನ್ನು ಎಲ್ಲೆಡೆಯೂ ಕಾಣಬಹುದಾಗಿದೆ. ಇದಕ್ಕೆ ಕೆಲಮಟ್ಟಿಗೆ ಕಾರಣವಾಗಿರುವುದು ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಯ (ಐಸಿಡಿಎಸ್) ತ್ವರಿತ ವಿಸ್ತರಣೆ ಹಾಗೂ ಸಾರ್ವತ್ರೀಕರಣ ಮಾತ್ರವಲ್ಲದೇ ಹಲವು ರಾಜ್ಯಗಳ ಗ್ರಾಮೀಣ ಹಾಗೂ ಗುಡ್ಡಗಾಡು ಪ್ರದೇಶದಲ್ಲಿಯೂ ಒದಗಿಸುತ್ತಿರುವ ಖಾಸಗೀ ಸೇವೆಗಳೂ ಕಾರಣವಾಗಿವೆ. ದೆಹಲಿಯ ಅಂಬೇಡ್ಕರ ವಿಶ್ವವಿದ್ಯಾಲಯದ ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಅಭಿವೃದ್ಧಿ ಕೇಂದ್ರದ (ಸಿಇಸಿಇಡಿ) ಹಾಗೂ ಆಂಧ್ರಪ್ರದೇಶ, ಅಸ್ಸಾಂ ಮತ್ತು ರಾಜಸ್ಥಾನದಲ್ಲಿರುವ ಅಸರ್(ASER) ಕೇಂದ್ರದವರು ನಡೆಸಿರುವ ಇತ್ತೀಚಿನ ಅಧ್ಯಯನದಂತೆ ಅವರು ಭೇಟಿ ನೀಡಿದ ಈ ರಾಜ್ಯಗಳ ಪ್ರತೀ ಹಳ್ಳಿಯು ಅಂಗನವಾಡಿ ಕೇಂದ್ರವನ್ನು ಹೊಂದಿದ್ದು ಖಾಸಗಿ ಪ್ರಾಥಮಿಕ ಪೂರ್ವ ಶಿಕ್ಷಣ ವ್ಯವಸ್ಥೆಯು ಕೂಡ ತೀವ್ರ ವೇಗದಿಂದ ವಿಸ್ತರಣೆಯನ್ನು ಹೊಂದುತ್ತಿದೆ. (ಭಾರತದ ಆರಂಭಿಕ ಬಾಲ್ಯದ ಶಿಕ್ಷಣದ ಪರಿಣಾಮಗಳ ಅಧ್ಯಯನ ಐಇಸಿಇಐ–2013)

ಭಾರತದಲ್ಲಿ ಕೇಂದ್ರಾಧಾರಿತ ಆರಂಭಿಕ ಬಾಲ್ಯ ಶಿಕ್ಷಣವು ಸಾರ್ವಜನಿಕ, ಖಾಸಗಿ ಹಾಗೂ ಸ್ವಯಂಸೇವಾ ವಲಯ ಎಂಬ ಮೂರು ಪ್ರಮುಖ ಕ್ಷೇತ್ರಗಳ ಮೂಲಕ ಎಲ್ಲೆಡೆ ಹರಡಿವೆ. ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಮುಖವಾಗಿ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು (ಐಸಿಡಿಎಸ್) ಒಂದು ಮಹತ್ವಪೂರ್ಣ ಕಾರ್ಯಕ್ರಮವಾಗಿದೆ. ಇದರ ಅಡಿಯಲ್ಲಿ ಬರುವ ಆರು ಸೇವೆಗಳಲ್ಲಿ ಆರಂಭಿಕ ಬಾಲ್ಯದ ಶಿಕ್ಷಣವು ವಿಷಯ ಸಂಗ್ರಹಣೆ ಹಾಗೂ ಸವಲತ್ತುಗಳ ದೃಷ್ಟಿಯಲ್ಲಿ ಕಳಪೆ ಗುಣಮಟ್ಟವನ್ನು ಹೊಂದಿದೆ ಹಾಗೂ ಎಲ್ಲಾ ರಾಜ್ಯಗಳಲ್ಲು ಇರುವ ಅತೀ ದುರ್ಬಲ ಘಟಕ ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಪ್ರಸ್ತುತ ಈ ಕಾರ್ಯಕ್ರಮವು ಸುಮಾರು ಹನ್ನೆರಡು ಲಕ್ಷ ಅಂಗನವಾಡಿ ಕೇಂದ್ರಗಳ ಮೂಲಕ 73 ದಶಲಕ್ಷಕ್ಕೂ ಮೀರಿ 6 ವರ್ಷದ ಕೆಳಗಿನ ಮಕ್ಕಳಿಗೆ ದೊರೆಯುತ್ತಿದೆ. ಇದು ಮಾತ್ರವಲ್ಲದೇ ರಾಜೀವ ಗಾಂಧಿ ರಾಷ್ಟ್ರೀಯ ಶಿಶು ಪಾಲನಾ ಯೋಜನೆಯಡಿ ಕೇಂದ್ರ ಸರಕಾರದಿಂದ 22,038 ಶಿಶು ಪಾಲನಾ

ಕೇಂದ್ರಗಳು ಮಂಜೂರಾಗಿವೆ. (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ(ಎಂಡಬ್ಲ್ಯುಸಿಡಿ)– 2011) ಇಂಥ ಕೆಲವು ಕೇಂದ್ರಗಳಲ್ಲಿ ಮಗುವಿನ ಪಾಲನೆಯ ಜೊತೆಗೆ ಚಿಕ್ಕ ಮಕ್ಕಳಿಗೆ ಶಿಕ್ಷಣವನ್ನು ನೀಡಲಾಗುತ್ತಿದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಐಸಿಡಿಎಸ್)ಯು ಜಾರಿಯಾಗದಂತಹ ಪ್ರದೇಶಗಳಲ್ಲಿ ಸರ್ವ ಶಿಕ್ಷಣ ಅಭಿಯಾನ ಕೂಡ 14,235 ಆರಂಭಿಕ ಬಾಲ್ಯದ ಶಿಕ್ಷಣ ಕೇಂದ್ರಗಳ ಮೂಲಕ ದೇಶಾದ್ಯಂತ ಸುಮಾರು 4,86,605 ಮಕ್ಕಳನ್ನು ತಲುಪಿದೆ ಹಾಗೂ 4637 ಇಸಿಸಿಇ – ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ ಕೇಂದ್ರಗಳ ಮೂಲಕ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳ ಸುಮಾರು 92,523 ಮಕ್ಕಳನ್ನು, ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಯ ಕಾರ್ಯಕ್ರಮದ ಮೂಲಕ ತಲುಪಿದೆ. (ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಯ ಕಾರ್ಯಕ್ರಮ – ಪ್ರಗತಿ ವರದಿ – ಜೂನ್ 2011) ಸರ್ವ ಶಿಕ್ಷಣ ಅಭಿಯಾನವು ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರ ತರಬೇತಿ ಹಾಗೂ ವಿವಿಧ ಸಲಕರಣೆಗಳ ವ್ಯವಸ್ಥೆಗಳ ಪೂರೈಕೆಯ ಮೂಲಕ ಗುಣಮಟ್ಟದ ಸುಧಾರಣೆಗಾಗಿ ಧನಸಹಾಯವನ್ನು ಕೂಡ ಮಾಡುತ್ತಿದೆ.

ನಂಬಿಕಾರ್ಹವಾದ ಅಂಕಿ ಅಂಶಗಳು ಲಭ್ಯವಿಲ್ಲದಿದ್ದರೂ, ಇತ್ತೀಚೆಗೆ ನಡೆದ ಶೀಘ್ರ ಸಮೀಕ್ಷೆಗಳು ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಖಾಸಗೀ ವಲಯಗಳು ಸ್ಥಿರವಾಗಿ ವಿಸ್ತರಣೆಯನ್ನು ಹೊಂದುತ್ತಿರುವುದಲ್ಲದೇ ಗ್ರಾಮೀಣ ಪ್ರದೇಶ ಮತ್ತು ಬುಡಕಟ್ಟು ವಲಯವನ್ನೂ ಪ್ರವೇಶಿಸುತ್ತಿವೆ ಎಂದು ಸೂಚಿಸುತ್ತವೆ (AUD, 2011). 2010ರಲ್ಲಿ ಎಎಸ್ಇಆರ್(ಆಸರ್)ನವರು ನಡೆಸಿದ ಸಮೀಕ್ಷೆಯ ಪ್ರಕಾರ, ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಸುಮಾರು ಶೇ11.4 ಮಕ್ಕಳು ಖಾಸಗೀ ಶಾಲೆಗಳಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಪಡೆಯುತ್ತಿದ್ದಾರೆ ಎಂದು ತಿಳಿಸುತ್ತದೆಯಲ್ಲದೇ ಇದು ಕೆಲವು ರಾಜ್ಯಗಳಲ್ಲಿ ಇನ್ನೂ ಹೆಚ್ಚಾಗಿರುವುದನ್ನೂ ತೋರಿಸುತ್ತದೆ. ಕಡಿಮೆ ಶುಲ್ಕವನ್ನು ವಿಧಿಸುವ ಕೆಲವು ಖಾಸಗೀ ಪ್ರಾಥಮಿಕ ಪೂರ್ವ ಶಾಲೆಗಳು ಕಿಕ್ಕಿರಿದು ತುಂಬಿರುವ ತರಗತಿಗಳನ್ನು ಹೊಂದಿರುವುದಲ್ಲದೇ ಅಭಿವೃದ್ಧಿಗೆ ಸೂಕ್ತವಲ್ಲದ ಹಾಗೂ ಮಕ್ಕಳಿಗೆ ಅಪಾಯಕಾರಿಯಾಗಿ ಇರಬಹುದಾದ ಪಠ್ಯಕ್ರಮವನ್ನು ಹೊಂದಿರುವಂತಹ ಗಂಭೀರವಾದ ಲೋಪಗಳು ಇರುವುದನ್ನು ಸಮೀಕ್ಷೆಗಳು ತೋರಿಸುತ್ತವೆ. (ಸಿಇಸಿಇಡಿ, 2013). ಈ ವಲಯದಲ್ಲಿ ಖಾಸಗೀ ಸಂಸ್ಥೆಗಳು ಮಾತ್ರವಲ್ಲದೇ ಸರ್ಕಾರದಿಂದ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅನುದಾನ ಸಂಸ್ಥೆಗಳಿಂದ ಧನ ಸಹಾಯವನ್ನು ಪಡೆಯುತ್ತಿರುವ ಸ್ಥಳೀಯ ಮತ್ತು ರಾಷ್ಟ್ರೀಯ ಎನ್‌ಜಿಓ ಉಪಕ್ರಮಗಳು ಇವೆ. ಈ ವಲಯದಲ್ಲಿನ ವ್ಯಾಪ್ತಿಯನ್ನು ಸೂಚಿಸುವ ನಂಬಿಕಾರ್ಹವಾದ ದತ್ತಾಂಶಗಳು ಅಥವಾ ಮಾಹಿತಿ ಲಭ್ಯವಿಲ್ಲ.

## ಆರಂಭಿಕ ಬಾಲ್ಯ ಶಿಕ್ಷಣದಲ್ಲಿರುವ ಸಮಸ್ಯೆಗಳ ವಿಶ್ಲೇಷಣೆ

ಆರಂಭಿಕ ಬಾಲ್ಯದ ಶಿಕ್ಷಣದ ತರಗತಿಗಳಿಗೆ ಮಕ್ಕಳ ದಾಖಲಾತಿಯು ವರ್ಷಾಂತರದಲ್ಲಿ ಹೆಚ್ಚುತ್ತಿದ್ದರೂ, ಗುಣಮಟ್ಟ, ಔಚಿತ್ಯ ಮತ್ತು ಮುಂದುವರೆಸಿಕೊಂಡು ಹೋಗುವಲ್ಲಿನ ಸಾಮರ್ಥ್ಯದ ಸಮಸ್ಯೆಗಳು ಎದ್ದು ಕಾಣುತ್ತವೆ. ಅತಿ ಆತಂಕದ ವಿಷಯವೆಂದರೆ ಯಾವುದೇ ಶಾಲಾ ಪೂರ್ವ ಶಿಕ್ಷಣಕ್ಕೆ ಹಾಜರಾಗದೇ ಇರುವ ಮಕ್ಕಳು ಅತಿ ದೊಡ್ಡ ಸಂಖ್ಯೆಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಸೇರಿಕೊಳ್ಳುತ್ತಿದ್ದಾರೆ, ಅಥವಾ ಪ್ರಾಥಮಿಕ ಪೂರ್ವ ಶಾಲೆಗಳಿಗೆ ಸೇರಿ ಕಲಿತರೂ ಪ್ರಾಥಮಿಕ ಶಾಲೆಯ ಪಠ್ಯಕ್ರಮಕ್ಕೆ ಸರಿಯಾದ ಪೂರ್ವ ಸಿದ್ಧತೆಯನ್ನು ಸಾಕಷ್ಟು ಪಡೆಯದೇ ಬರುತ್ತಿದ್ದಾರೆ ಎಂಬುದು. ಹೀಗಾಗಿ ಹಲವಾರು ನೀತಿಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದ ನಂತರವೂ ದೇಶದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣವನ್ನು ಈ ಮಟ್ಟಕ್ಕೆ ತಂದಿರಬಹುದಾದ ಸಮಸ್ಯೆಗಳು ಯಾವುವು ಎನ್ನುವುದನ್ನು ವಿಶ್ಲೇಷಿಸ ಬೇಕಾದ ಅಗತ್ಯವಿದೆ. ಕೆಲವು ಪ್ರಮುಖ ಸಮಸ್ಯೆಗಳು ಈ ಕೆಳಗಿನಂತಿವೆ:

ಎ. ಸರ್ಕಾರಿ ವಲಯದಲ್ಲಿ ಈ ವಯೋಮಾನದಲ್ಲಿರುವ ಪುಟಾಣಿ ಮಕ್ಕಳ ಉಪಹಂತಗಳಿಗೆ ತಕ್ಕಂತೆ ವಯೋಮಾನಕ್ಕೆ ಅನುಗುಣವಾದ ವಿದ್ಯಾಕ್ರಮಗಳನ್ನು ಒದಗಿಸುವ ಅವಶ್ಯಕತೆಯನ್ನು ಅವರ ಬೆಳವಣಿಗೆಯ ಅವಶ್ಯಕತೆಗಳು ಮತ್ತು ಸಾಮರ್ಥ್ಯಗಳನ್ನು ಪೋಷಿಸುವ ಉದ್ದೇಶಗಳಿಂದ ಮನಗಾಣದಿರುವುದು ಹಾಗೂ ಸ್ವಯಂಸೇವಾ ಮತ್ತು ಸಾರ್ವಜನಿಕ ವಲಯಗಳಲ್ಲಿ ಮೂರರಿಂದ ಆರುವರ್ಷದ ಒಳಗಿರುವ ಮಕ್ಕಳನ್ನು ಒಂದೇ ಹಂತದಲ್ಲಿರುವವರೆಂದು ಗುರುತಿಸುವ ಪ್ರವೃತ್ತಿ.

ಬಿ. ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಐಸಿಡಿಎಸ್‌ನಲ್ಲಿ ಸಾಕಷ್ಟು ಪ್ರಾಮುಖ್ಯತೆ ಇಲ್ಲದಿರುವುದು ಸಾರ್ವತ್ರಿಕವಾಗಿ ಇದನ್ನು ಒಂದು ಪೌಷ್ಟಿಕಾಹಾರದ ಕಾರ್ಯಕ್ರಮವೆಂದು ಗ್ರಹಿಸುವಂತೆ ಮಾಡಿದೆ. ಅದೂ ಅಲ್ಲದೆ ವಿಭಿನ್ನ ಕೌಶಲ್ಯಗಳ ಅವಶ್ಯಕತೆಯಿರುವ ಬಹು–ವಲಯದ ಘಟಕಗಳನ್ನು ಬೋಧಿಸಲು ಒಬ್ಬಂಟಿ ತರಬೇತಿರಹಿತ ಮತ್ತು ಮಿತಿ ಮೀರಿದ ಕೆಲಸದ ಹೊರೆ ಹೊತ್ತಿರುವ ಕೆಲಸಗಾರನನ್ನು ನೇಮಿಸಿ ದುಡಿಸುತ್ತಿರುವುದು ಮತ್ತು ಕಳಪೆ ಮೂಲ ಸೌಕರ್ಯ ಹಾಗೂ ಸಂಪನ್ಮೂಲಗಳ ಕೊರತೆ ಇವುಗಳು ಇದನ್ನು ಬಾಧಿಸುತ್ತಿವೆ.

ಸಿ. ತಂದೆ ತಾಯಿಯರು ಆಂಗ್ಲ ಮಾಧ್ಯಮದ ಪ್ರಾಥಮಿಕ ಪೂರ್ವ ಶಾಲೆಗಳಿಗೆ ಒಲವು ತೋರಿಸುತ್ತಿರುವುದರಿಂದ, ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶದಲ್ಲೂ ನಾಲ್ಕರಿಂದ ಐದು ವರ್ಷಗಳ ವಯೋಮಾನದಲ್ಲಿರುವ ಮಕ್ಕಳು

ಅಂಗನವಾಡಿಗಳಿಂದ ಖಾಸಗೀ ಪ್ರಾಥಮಿಕ ಪೂರ್ವ ಶಾಲೆಗಳಿಗೆ ಸ್ಥಿರವಾಗಿ ವಲಸೆ ಹೋಗುತ್ತಿರುವುದು ಎದ್ದು ಕಾಣುತ್ತದೆ. ಅಲ್ಲದೇ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ಅಂಗವಾಗಿ ಪ್ರಾಥಮಿಕ ಶಾಲೆಗಳಿಗೆ ಸೇರುವುದೂ ಕೆಲವು ಪ್ರಕರಣಗಳಲ್ಲಿ ಕಂಡು ಬರುತ್ತದೆ. ಸಮುದಾಯದ ಈ ಬೇಡಿಕೆಯನ್ನು ಪೂರೈಸುವ ಸಲುವಾಗಿ ನಾಗಾಲ್ಯಾಂಡ್, ಅಸ್ಸಾಂ, ಜಮ್ಮು ಮತ್ತು ಕಾಶ್ಮೀರದಂತಹ ಕೆಲವು ರಾಜ್ಯಗಳಲ್ಲಿನ ಸರಕಾರಗಳು ಸ್ವಪ್ರೇರಣೆಯಿಂದ ಪ್ರಾಥಮಿಕ ಪೂರ್ವ ಶಾಲಾ ತರಗತಿಗಳನ್ನು ಪ್ರಾಥಮಿಕ ಶಾಲೆಗಳ ಜೊತೆ ಜೊತೆಗೆ ಸೇರಿಸಿವೆ.

ಡಿ. ಇತ್ತೀಚಿನವರೆಗೂ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಮಾರ್ಗದರ್ಶನಗಳು, ಸಂಪನ್ಮೂಲ ವಸ್ತುಗಳು ಅಥವಾ ಗುಣಮಟ್ಟದ ಮಾನದಂಡಗಳು ಇಲ್ಲದಿರುವುದರಿಂದ ಸರ್ಕಾರಿ ವಲಯದ ಕಾರ್ಯಕ್ರಮಗಳಲ್ಲಿ ಅತ್ಯಂತ ಕನಿಷ್ಠಮಟ್ಟದಲ್ಲಿ ನಡೆಸಿಕೊಂಡು ಹೋಗಲಾಗುತ್ತಿದೆ ಇನ್ನು ಖಾಸಗೀ ವಲಯಗಳಲ್ಲಿ ತೋಚಿದಂತೆ ನಡೆಸಿಕೊಂಡು ಹೋಗಲು ಬಿಡಲಾಗುತ್ತಿದೆ. ಹೀಗಾಗಿ ಇದನ್ನು ಪ್ರಾಥಮಿಕ ಶಿಕ್ಷಣದ ಕೆಳಮುಖ ವಿಸ್ತರಣೆಯೆಂಬಂತೆ ನೋಡಲಾಗುತ್ತಿದೆ ಮತ್ತು ಮಗುವಿನ ಅಭಿವೃದ್ಧಿಗೆ ಸೂಕ್ತವಲ್ಲದ ಅಭ್ಯಾಸಗಳು ಜಾರಿಯಲ್ಲಿವೆ. ಈ ಎರಡೂ ವಲಯದಲ್ಲಿರುವ ಪರಿಸ್ಥಿತಿ ಮಕ್ಕಳ ಬೆಳವಣಿಗೆ ಮತ್ತು ಶಿಕ್ಷ'ಣಕ್ಕೆ ಧಕ್ಕೆ ಒದಗಿಸುವುದೇ ಅಲ್ಲದೆ ಅದಕ್ಕೆ ಪ್ರತಿಕೂಲವಾಗಿ ವರ್ತಿಸುತ್ತವೆ.

ಇ. ಆರಂಭಿಕ ಬಾಲ್ಯದ ಶಿಕ್ಷಣದ ಬಗ್ಗೆ, ಒಟ್ಟಾರೆ ಅದರಲ್ಲೂ ರಾಜ್ಯ, ಜಿಲ್ಲೆ ಮತ್ತು ಉಪ ಜಿಲ್ಲಾ ಮಟ್ಟಗಳಲ್ಲಿ ಯೋಜನೆಯ, ಅನುಷ್ಠಾನದ, ಬೆಂಬಲದ ಅಥವಾ ಲಭ್ಯ ಸೌಲಭ್ಯಗಳನ್ನು ಮೇಲ್ವಿಚಾರಣೆ ಮಾಡಲು ಸಾಂಸ್ಥಿಕ ಸಾಮರ್ಥ್ಯದ ಕೊರತೆ ಇದೆ.

ಎಫ್. ಸಾಂಸ್ಥಿಕ ಸಾಮರ್ಥ್ಯದ ಕಥೆ ಹೀಗಾದರೆ ಆರಂಭಿಕ ಬಾಲ್ಯದ ಶಿಕ್ಷಣವನ್ನು ಕುರಿತು ಯೋಜನೆ ರಚಿಸಲು, ಅಥವಾ ಮೌಲ್ಯಮಾಪನದ ಪ್ರಕ್ರಿಯೆಯನ್ನು ನಡೆಸಲು ನೆರವಾಗುವ ಆರಂಭಿಕ ಬಾಲ್ಯದ ಶಿಕ್ಷಣದ ಎಂಐಎಸ್ ಅಥವಾ ಮಾಹಿತಿ ಆಕರ ಕೂಡ ಇಲ್ಲವಾಗಿದೆ.

ಇಲ್ಲಿರುವ ಅನೇಕ ಸಮಸ್ಯೆಗಳು ಇನ್ನೂ ಮುಂದುವರೆಯುತ್ತಿರುವುದಕ್ಕೆ ಆರಂಭಿಕ ಬಾಲ್ಯದ ಶಿಕ್ಷಣ ವಲಯಕ್ಕೇ ಮುಡಿಪಾದ ಒಂದು ಕೇಂದ್ರ ಪ್ರಾಯೋಜಿತ ಯೋಜನೆ ಮತ್ತು ಅದಕ್ಕಾಗಿಯೇ ಮೀಸಲಿಟ್ಟಿರುವ ಅನುದಾನಗಳು ಇಲ್ಲದಿರುವುದು ಮುಖ್ಯ ಕಾರಣ. ಹಾಗೇನಾದರೂ ಇದ್ದಿದ್ದರೆ ಮೇಲೆ ಚರ್ಚಿಸಿರುವ ವ್ಯವಸ್ಥಾತ್ಮಕವಾದ ಕಾಳಜಿಗಳಲ್ಲಿ ಹಲವಾರು ಅಂಶಗಳನ್ನು ಸಮಗ್ರವಾಗಿ ಪರಿಹರಿಸಬಹುದಾಗಿತ್ತು. ಆರಂಭಿಕ ಬಾಲ್ಯದ ಶಿಕ್ಷಣದ ಹಿನ್ನೆಲೆಯಲ್ಲಿ, ಎನ್‌ಎಸಿಯು ಒಬ್ಬ ಹೆಚ್ಚುವರಿ ಸಹಾಯಕರೊಂದಿಗೆ ಅಂಗನವಾಡಿಗಳಲ್ಲಿ ಐಸಿಡಿಎಸ್ ಮೂಲಕ ಆರಂಭಿಕ ಬಾಲ್ಯದ ಶಿಕ್ಷಣದ ಅನುಭವವನ್ನು ಮಕ್ಕಳಿಗೆ ನಾಲ್ಕು ವರ್ಷವಯಸ್ಸಾಗುವವರೆಗೆ ಮಕ್ಕಳಿಗೆ ಒದಗಿಸಬೇಕು ಎಂದು ಶಿಫಾರಸ್ಸು ಮಾಡಿದೆ. ಆರ್‌ಟಿಇ ಅನುಗುಣವಾಗಿ ಎಲ್ಲಾ ರಾಜ್ಯಗಳಲ್ಲಿ ಒಂದನೇ ತರಗತಿಗೆ ದಾಖಾಲಾತಿಯ ವಯಸ್ಸನ್ನು ಆರು ವರ್ಷಕ್ಕೆ ಏರಿಸಿದ್ದಲ್ಲಿ, ಇದು ಎರಡು ವರ್ಷಗಳ ಅವಧಿಯವರೆಗೆ ಶಾಲಾಧಾರಿತ ಆರಂಭಿಕ ಬಾಲ್ಯದ ಶಿಕ್ಷಣವನ್ನು ಒದಗಿಸುತ್ತದೆ, ಇದನ್ನು ಸಾಕಷ್ಟು ಒದಗಿಸಿದ್ದಲ್ಲಿ, ಎಲ್ಲಾ ಮಕ್ಕಳ ಕಲಿಕೆಗೆ ಗಟ್ಟಿಯಾದ ಅಡಿಗಲ್ಲನ್ನು ಹಾಕಲು ಪ್ರಮುಖವಾದ ಕೊಡುಗೆಯನ್ನು ನೀಡುತ್ತದೆ.

## ಮುಂದಿನ ಮಾರ್ಗಕ್ಕೆ ಸಲಹೆಗಳು

ಮೇಲೆ ಗಮನಿಸಿದ ಅಂಶಗಳ ದೃಷ್ಟಿಯಲ್ಲಿ, ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಆರ್‌ಟಿಇಯ ಅನುಕೂಲಗಳನ್ನು ಕೆಳಮುಖವಾಗಿ ವಿಸ್ತರಿಸಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಒಳಗೊಳ್ಳುವಂತೆ ಪ್ರಮುಖವಾದ ಬದಲಾವಣೆಯ ಪ್ರಸ್ತಾವವನ್ನು ಮಾಡಲಾಯಿತು. ಇದರ ಜೊತೆಗೆ ನಾಲ್ಕರಿಂದ ಆರುವರ್ಷದವರೆಗಿನ ಮಕ್ಕಳಿಗಾಗಿರುವ ಆರಂಭಿಕ ಬಾಲ್ಯದ ಶಿಕ್ಷಣವನ್ನು ಪ್ರಾಥಮಿಕ ಶಿಕ್ಷಣದ ತೆಕ್ಕೆಗೆ ತರುವಂತೆ ಅಥವಾ 'ಆರೋಹಣ'ವಾಗಿ ಸಂಯೋಜಿಸಿ ಮಕ್ಕಳು ಒಂದನೇ ತರಗತಿಯ ದಾಖಲಾತಿಗೆ ಮೊದಲೇ ಅವರಿಗೆ ಶಾಲಾ ಸಿದ್ಧತೆಯ ಕಾರ್ಯಕ್ರಮವನ್ನಾಗಿ ಒಳಗೊಳ್ಳುವಂತೆ ಶಿಫಾರಸ್ಸು ಮಾಡಲಾಗಿದೆ. ಹೀಗಿದ್ದರೂ, ಈ ಪ್ರಸ್ತಾವವು ನೆನೆಗುದಿಗೆ ಬಿದ್ದಿದ್ದು, ಬೆಳಕನ್ನು ಕಾಣಬೇಕಾಗಿದೆ.

ಈ ಸಲಹೆಗಳಿಗೆ ಮುಂದುವರಿಕೆಯಾಗಿ ಪರಿಗಣಿಸಬಹುದಾದ ಕೆಲವು ವಿಷಯಗಳೆಂದರೆ–

1. ಒಂದನೇ ತರಗತಿಗೆ ದಾಖಲಾತಿಯ ವಯಸ್ಸನ್ನು ಆರ್‌ಟಿಇ ನಿಬಂಧನೆಗೆ ಹೊಂದಿಕೆಯಾಗುವಂತೆ ಎಲ್ಲಾ ರಾಜ್ಯಗಳಲ್ಲೂ ಸಮನಾಗಿ ಆರುವರ್ಷ ಎಂದು ನಿಗದಿಸಬೇಕು, ಅದರಿಂದ 23 ರಾಜ್ಯಗಳಲ್ಲಿ ಪ್ರಸಕ್ತವಿರುವ ಐದುವರ್ಷಗಳ ವಯೋಮಿತಿಯಿಂದಾಗಿ, ಐದು ವರ್ಷದ ಮಕ್ಕಳು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ ಕೇಂದ್ರ/ತರಗತಿಗೆ ಶಾಲಾ ಸಿದ್ಧತೆಗಾಗಿ ಸೇರುವಂತಾಗುತ್ತದೆ. ಅಸರ್(ವಾರ್ಷಿಕ ಸ್ಥಿತಿಗತಿಯ ಶಿಕ್ಷಣ ವರದಿ–ASER)ನ ಇತ್ತೀಚಿನ ಸಮೀಕ್ಷೆ ಪ್ರಕಾರ (2010) ದೇಶದ ಗ್ರಾಮೀಣ ವಲಯದಲ್ಲಿರುವ ಐದು ವರ್ಷದ ಸುಮಾರು ಶೇ 60ಕ್ಕೂ ಹೆಚ್ಚು ಮಕ್ಕಳು ಅಂಗನವಾಡಿಗಳಲ್ಲಿ ಅಲ್ಲದೇ ಪ್ರಾಥಮಿಕ ಶಾಲೆಗಳಲ್ಲಿ ಇದ್ದಾರೆ ಎಂದು ವರದಿ ಮಾಡಿದೆ.

2. ಹೊಸ ನೀತಿಗೆ ಹೊಂದಿಕೆಯಾಗುವಂತೆ ಅಂಗನವಾಡಿ ಕೇಂದ್ರಗಳನ್ನು ಮೂಲ ಸೌಕರ್ಯಗಳೊಂದಿಗೆ, ಇಸಿಸಿಇಗೇ ಮೀಸಲಾದ ಕೆಲಸಗಾರರಿಗೆ ವೃತ್ತಿಪರ ತರಬೇತಿಯನ್ನು ನೀಡುವುದು ಮತ್ತು ಮೆದುಳಿನ ಬೆಳವಣಿಗೆಯಲ್ಲಿ ಅತ್ಯಂತ ಪ್ರಮುಖವಾದ ವಯಸ್ಸಾಗಿರುವ ನಾಲ್ಕು ವರ್ಷದ ಒಳಗಿನ ಮಕ್ಕಳಿಗೆ ಆ ವಯಸ್ಸಿಗೆ ಸೂಕ್ತವಾದ ಪೂರ್ವ ಪ್ರಚೋದನೆ ಮತ್ತು ಶೈಕ್ಷಣಿಕ ಪಠ್ಯಕ್ರಮ ಹಾಗೂ ವಸ್ತುಗಳನ್ನು ಒದಗಿಸುವ ಮೂಲಕ ಇಸಿಸಿಇ ಕೇಂದ್ರಗಳನ್ನಾಗಿ ಮಾರ್ಪಡಿಸಬೇಕು.

3. ಪ್ರತಿಯೊಂದು ಪ್ರಾಥಮಿಕ ಶಾಲೆಯಲ್ಲೂ ನಾಲ್ಕರಿಂದ ಆರುವರ್ಷದ ಮಕ್ಕಳಿಗಾಗಿ ಪ್ರಾಥಮಿಕ ಪೂರ್ವ ಶಾಲೆ ಇರಬೇಕು ಮತ್ತು ಇಲ್ಲಿ ಸೂಕ್ತವಾದ ಅಭಿವೃದ್ಧಿ ಪೂರ್ವಕ ಶಾಲಾ ಸಿದ್ಧತಾ ಕಾರ್ಯಕ್ರಮದಲ್ಲಿ ಅಂಗೀಕರಿಸಬಹುದಾದ ಗುಣಮಟ್ಟವನ್ನು ಮಕ್ಕಳಿಗೆ ನೀಡಲು ಸಾಧ್ಯವಾಗುವ ಸಂಪನ್ಮೂಲಗಳನ್ನು ಸಾಕಷ್ಟು ಒದಗಿಸಬೇಕು. ಶಾಲಾ ಪೂರ್ವ ಹಂತದಲ್ಲಿ ಓದು ಬರಹ ಲೆಕ್ಕವನ್ನು ಬೋಧಿಸುವುದನ್ನು ಶಾಲಾ ಸಿದ್ಧತೆಯು ಸೂಚಿಸುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಪ್ರಾಥಮಿಕ ಪಠ್ಯಕ್ರಮವನ್ನೆ ಕೆಳಮುಖವಾಗಿ ವಿಸ್ತರಿಸುವ ಈ ಅಭ್ಯಾಸವು ಮಕ್ಕಳ ಕಲಿಕೆ ಮತ್ತು ಅಭಿವೃದ್ಧಿಗೆ ಅಪಾಯಕಾರಿಯಾಗಿ ಕಂಡುಬಂದಿದೆ. ಇದಕ್ಕೆ ಬದಲಾಗಿ, ಶಾಲಾ ಸಿದ್ಧತೆಯು ಕೆಲವೊಂದು ವಿಷಯ ಗ್ರಹಣೆ, ಭಾಷೆಯ ಪರಿಕಲ್ಪನೆಗಳು ಮತ್ತು ಕೌಶಲ್ಯಗಳು ಅದರೊಂದಿಗೆ ಕಲಿಕೆಯ ಬಗ್ಗೆ ಒಲವಿನ ನಿಲುವುಗಳನ್ನು ಕಲಿಸುವುದು ಪೂರ್ವ ಸಿದ್ಧತೆಯ ಕ್ರಮವಾಗಿರುತ್ತದೆ. ಆಟ ಮತ್ತು ಚಟುವಟಿಕೆಯ ಮೂಲಕ ಮಗುವನ್ನು ಓದು ಬರಹ ಮತ್ತು ಲೆಕ್ಕಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪ್ರಾಥಮಿಕ ತರಗತಿಗಳಲ್ಲಿ ಕಲಿಯಲು ಪ್ರಚೋದಿಸುವಂತೆ ಪೂರ್ವ ಸಿದ್ಧತೆಯನ್ನು ಒದಗಿಸಬೇಕು.

4. ಪ್ರಾಥಮಿಕ ಪೂರ್ವ ಮತ್ತು ಆರಂಭಿಕ ಪ್ರಾಥಮಿಕ ತರಗತಿಗಳನ್ನು ಒಂದು ಸಂಯೋಜಿತ ಘಟಕವಾಗಿ ಒಟ್ಟುಗೂಡಿಸುವಂತೆ 'ಪೂರ್ವ ಕಲಿಕಾ ಘಟಕ' ಪರಿಕಲ್ಪನೆಯನ್ನು ಪರಿಚಯಿಸಬೇಕು. ಇದರಿಂದ ಯೋಜಿತ 'ಆರೋಹಣ' ಮುಂದುವರಿಕೆಗೆ ಪಠ್ಯಕ್ರಮದಲ್ಲಿ ಅನುವಾಗುತ್ತದೆ (ಇದು ಬೆಳವಣಿಗೆಗೆ ಸೂಕ್ತವಾಗಿ, ಅನೌಪಚಾರಿಕವಾಗಿ ಮತ್ತು ಆಟದ ಆಧಾರವನ್ನು ಹೊಂದಿರುವುದಾಗಿರಬೇಕು) ಅಲ್ಲದೇ ವೈಯಕ್ತಿಕ ವೇಗದಲ್ಲಿ ಕಲಿಯುವುದನ್ನು ಪ್ರೋತ್ಸಾಹಿಸುವ ನಮನೀಯತೆಯನ್ನು ನೀಡಬೇಕು, ಇದರಿಂದ ಪ್ರತಿಯೊಂದು ಮಗುವಿಗೂ ಗಟ್ಟಿಯಾದ ಅಡಿಪಾಯವನ್ನು ಒದಗಿಸಬಹುದಾಗಿದೆ. ಈ ಪರಿಕಲ್ಪನೆಗೆ ಸಂಬಂಧಿಸಿದಂತೆ ಇರುವ ದೇಶದ ಒಳಗಿರುವ ಮತ್ತು ಹೊರಗಿರುವ ಉತ್ತಮ ಅಭ್ಯಾಸಗಳನ್ನು ಉದಾಹರಣೆಗೆ ಚಟುವಟಿಕೆ ಆಧಾರಿತ ಕಲಿಕಾ ಕಾರ್ಯಕ್ರಮಗಳು, ನಲಿ-ಕಲಿ ಇವುಗಳಿಂದಾದ ಕಲಿಕೆ ಮತ್ತು ಅನುಭವಗಳನ್ನು ಉಪಯೋಗಿಸಿಕೊಳ್ಳಬೇಕು. ಇವು ಆವರ್ತಕ ಬದಲಾವಣೆಯನ್ನು ತಿಳಿಸುತ್ತವೆ. ಈ ಬದಲಾವಣೆಯು ಶಾಲಾ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಆಡಳಿತಾತ್ಮಕ ಅಥವಾ ರಚನಾತ್ಮಕ ಬದಲಾವಣೆಗಳನ್ನು ಬಯಸುವುದಿಲ್ಲ; ಬದಲಾಗಿ ಇದು ಮೂಲಭೂತವಾಗಿ ಪಠ್ಯಕ್ರಮ ಮತ್ತು ಬೋಧನಾ ತತ್ವಗಳೊಂದಿಗೆ ವರ್ಗಾಧಾರಿತ ವಸ್ತುಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಪೂರ್ವಸಿದ್ಧತೆ ಮತ್ತು ಸಹಕಾರದಲ್ಲಿನ ಬದಲಾವಣೆಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ.

5. ಇಸಿಇ ಶಿಕ್ಷಕರ ಶಿಕ್ಷಣದ ಡಿಪ್ಲೋಮೋ ಪಠ್ಯಕ್ರಮದ ಎನ್‌ಸಿಟಿಇ ಮಾದರಿಯು ಈಗಾಗಲೇ ಈ ಸಂಯೋಜಿತ ಪರಿಕಲ್ಪನೆಯನ್ನು ತನ್ನ ವ್ಯಾಪ್ತಿಯಲ್ಲಿ ಶಾಲಾ ಪೂರ್ವ ಮತ್ತು ಒಂದು ಹಾಗೂ ಎರಡನೆಯ ತರಗತಿಗೆ ಶಿಕ್ಷಕರ ಪೂರ್ವಸಿದ್ಧತೆಯನ್ನು ಒಳಗೊಂಡು ತೋರಿಸುತ್ತಿದೆ. ಇದನ್ನು ಇನ್ನೂ ಮರುಪರಿಶೀಲಿಸಿ, ಬಲಗೊಳಿಸಿ ಮತ್ತು ಪೂರ್ವ ಕಲಿಕಾ ಘಟಕದ ಪರಿಕಲ್ಪನೆಗೆ ಸರಿಹೊಂದುವಂತೆ ಮತ್ತು ಸೂಕ್ತವಾದ ಶಿಕ್ಷಕ ಸಿದ್ಧತೆಯನ್ನು ದೃಢಪಡಿಸುವಂತೆ ಮಾಡಬೇಕಾಗಿದೆ. ಪೂರ್ವ ಕಲಿಕಾ ಹಂತದ ಅಂದರೆ ಪ್ರಾಥಮಿಕ ಪೂರ್ವ ಮತ್ತು ಒಂದು ಹಾಗೂ ಎರಡನೇ ತರಗತಿಯ ಶಿಕ್ಷಕರಿಗೆ ಅನುಕೂಲವಾಗುವಂತೆ ಟಿಇಟಿ ಮಾರ್ಗದರ್ಶನಗಳನ್ನು ಅಳವಡಿಸಿಕೊಳ್ಳಲು ಎನ್‌ಸಿಟಿಇಯು ಅರ್ಹತಾ ಮಾನದಂಡಗಳನ್ನು ಹಾಕಿಕೊಳ್ಳುವ ಅಗತ್ಯವಿದೆ. ಶಿಕ್ಷಕರನ್ನು ನೇಮಿಸಿಕೊಳ್ಳಲು ರಾಜ್ಯಗಳು ನೇಮಕಾತಿ ನಿಯಮಗಳನ್ನು ಮಾರ್ಪಡಿಸಿಕೊಳ್ಳುವಂತೆ ಪ್ರೋತ್ಸಾಹ ನೀಡಬೇಕು ಇದರಿಂದಾಗಿ ಈ ಡಿಪ್ಲೋಮೊ ಪದವಿಯನ್ನು ಹೊಂದಿರುವವರನ್ನು ಪೂರ್ವ ಕಲಿಕಾ ಹಂತದ ಅಂದರೆ ಶಾಲಾ ಪೂರ್ವ ಮತ್ತು ಒಂದನೇ ಹಾಗೂ ಎರಡನೆಯ ತರಗತಿಗಳಿಗೆ ಶಿಕ್ಷಕರನ್ನಾಗಿ ನೇಮಕ ಮಾಡಿಕೊಳ್ಳಬಹುದು.

6. ಸಾರ್ವಜನಿಕ, ಖಾಸಗೀ ಮತ್ತು ಸ್ವಯಂಸೇವಾ ವಲಯಗಳಲ್ಲಿನ ಶಾಲಾ ಪೂರ್ವ ಘಟಕಗಳೆಲ್ಲೆಡೆ ಗುಣಮಟ್ಟದ ನಿಂಬಂಧನೆಯ ವ್ಯವಸ್ಥೆಯನ್ನು ಜಾರಿಗೊಳಿಸುವ ಅಗತ್ಯವಿದೆ ಮತ್ತು ಇದರೊಂದಿಗೆ ಎಲ್ಲಾ ಭಾಗೀದಾರರಲ್ಲೂ ಪ್ರಸ್ತುತ ಇರುವ ಶಿಕ್ಷಣದ ಗುಣಮಟ್ಟದ ತಪ್ಪುಕಲ್ಪನೆಗಳನ್ನು ಸರಿಪಡಿಸಲು ಮತ್ತು ಎಲ್ಲಾ ಮಕ್ಕಳಿಗೂ ಔಚಿತ್ಯಪೂರ್ಣ ಹಾಗೂ ಬೆಳವಣಿಗೆಗೆ ಸೂಕ್ತವಾದ ಶಾಲಾ

ಪೂರ್ವ ಶಿಕ್ಷಣವನ್ನು ಒದಗಿಸಲು ಬಲವಾದ ಪ್ರಸಾರ ಅಗತ್ಯವಿದೆ.

ಹೇಗೆ ಮಕ್ಕಳು ಶಾಲಾ ಶಿಕ್ಷಣಕ್ಕೆ ಸಿದ್ಧರಾಗುವಂತೆ ಅವರಿಗೆ ನೆರವು ನೀಡುತ್ತೇವೆಯೋ ಹಾಗೆಯೇ, ಶಾಲೆಗಳೂ ಮಕ್ಕಳಿಗೆ ತಕ್ಕಂತೆ ಸಿದ್ಧರಾಗಬೇಕಾದ ಅಗತ್ಯವಿದೆ. ಶಾಲೆಗಳು ಹೆಚ್ಚು ಬಾಲಸ್ನೇಹಿಯಾಗಬೇಕು, ಕಂಕಣಬದ್ಧರಾದ ಹಾಗೂ ತರಬೇತಿ ಹೊಂದಿರುವ ಶಿಕ್ಷಕರು ಇರಬೇಕು, ಹುರಿದುಂಬಿಸುವ ಆಟಗಳು ಮತ್ತು ಕಲಿಕಾ ವಸ್ತುಗಳನ್ನು, ಮತ್ತು ಪ್ರಾಥಮಿಕ ಪೂರ್ವ ತರಗತಿಗಳನ್ನು ನಡೆಸಲು ತರಗತಿ ಕೋಣೆಯನ್ನು ಹೊಂದಿರಬೇಕು. ಜೊತೆ ಜೊತೆಗೆ ಆರಂಭಿಕ ಬಾಲ್ಯದ ಶಿಕ್ಷಣದ ಬಗ್ಗೆ ಅತ್ಯುನ್ನತ ಸಾಂಸ್ಥಿಕ ಮಟ್ಟಗಳಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಜಿಲ್ಲಾ ಮತ್ತು ಬ್ಲಾಕ್ ಮಟ್ಟಗಳಲ್ಲಿ ಸಂಪನ್ಮೂಲ ಸಾಮರ್ಥ್ಯಗಳನ್ನು ಹೆಚ್ಚಿಸಬೇಕಾದ ಅಗತ್ಯವಿದೆ. ಇದನ್ನು ನಾಗರಿಕ ಸಮಾಜದ ಸಂಸ್ಥೆಗಳು ಮತ್ತು ವೃತ್ತಿನಿರತರು ಸಕ್ರಿಯವಾಗಿ ತಮ್ಮೊಂದಿಗೆ ಪಾಲ್ಗೊಳ್ಳುವಂತೆ ಮಾಡಿ ನಿಯಮಿತವಾಗಿ ನಿರಂತರ ಸಂಪನ್ಮೂಲ ಬೆಂಬಲದೊರಕಿಸಿಕೊಳ್ಳಬೇಕು ಹಾಗು ಸಮುದಾಯವು ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು.





**ವಿನಿತಾ ಕೌಲ್** ಅವರು ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಮನಃಶ್ಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇವರು ಪ್ರಸ್ತುತ ದೆಹಲಿಯ ಅಂಬೇಡ್ಕರ್ ಯುನಿವರ್ಸಿಟಿಯಲ್ಲಿನ ಸ್ಕೂಲ್ ಆಫ್ ಎಜುಕೇಷನ್ ಸ್ಟಡೀಸ್ ಅಂಡ್ ಸೆಂಟರ್ ಫಾರ್ ಅರ್ಲೀ ಚೈಲ್ಡ್‌ಹುಡ್ ಎಜುಕೇಷನ್ ಅಂಡ್ ಡೆವೆಲಪ್ಮೆಂಟ್‌ನ ನಿರ್ದೇಶಕರಾಗಿದ್ದಾರೆ. ಕೇಂದ್ರದ ನಿರ್ದೇಶಕರಾಗಿ ಇವರು ಅನೇಕ ಸಂಶೋಧನೆಗಳನ್ನು ಮತ್ತು ಪ್ರಸಾರ ಯೋಜನೆಗಳನ್ನು ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಅಭಿವೃದ್ಧಿ ವಿಷಯದಲ್ಲಿ ಪ್ರಾರಂಭಿಸಿದ್ದಾರೆ. ಪ್ರಸ್ತುತ ಇವರ ನೇತೃತ್ವದಲ್ಲಿ ನಡೆಸುತ್ತಿರುವ ಪ್ರಮುಖವಾದ ಸಂಶೋಧನೆಯೆಂದರೆ ಲಾಂಜಿಟ್ಯೂಡಿನಲ್ ಸ್ಟಡಿ ಟು ಎಕ್ಸ್‌ಪ್ಲೋರ್ ಇಮ್ಮೀಡಿಯೇಟ್ ಅಂಡ್ ಮೀಡಿಯಂ ಟರ್ಮ್ ಇಂಪಾಕ್ಟ್ ಆಫ್ ಕ್ವಾಲಿಟಿ ವೇರಿಯೇಷನ್ಸ್ ಇನ್ ಇಸಿಇ ಆನ್ ಪ್ರೈಮರಿ ಔಟ್‌ಕಂ. ಇದಕ್ಕೆ ಮೊದಲು, ಇವರು ಹಿರಿಯ ಶೈಕ್ಷಣಿಕ ತಜ್ಞರಾಗಿ ವಿಶ್ವ ಬ್ಯಾಂಕ್‌ನಲ್ಲಿ ಮತ್ತು ಎನ್‌ಸಿಇಆರ್‌ಟಿಯಲ್ಲಿ ಶಾಲಾ ಪೂರ್ವ ಮತ್ತು ಪ್ರಾಥಮಿಕ ಶಿಕ್ಷಣ ವಿಭಾಗದ ಮುಖ್ಯಸ್ಥರು ಮತ್ತು ಪ್ರೊಫೆಸರ್ ಆಗಿದ್ದರು. ಇವರನ್ನು vkaul54@gmail.com ಇಲ್ಲಿ ಸಂಪರ್ಕಿಸಬಹುದು.



# ಆರಂಭಿಕ ವರ್ಷಗಳಲ್ಲಿ ಪೋಷಣೆ, ಆರೋಗ್ಯ ಮತ್ತು ಶಿಕ್ಷಣ

ಶ್ರೀಲತಾ ರಾವ್ ಶೇಷಾದ್ರಿ ಹಾಗೂ ಸೂರಜ್ ಅಂಕುಶ್ ಪರಬ್



**ಪರಿಚಯ**

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಭ್ರೂಣಾವಸ್ಥೆಯ ಆರಂಭದ ಹಂತದಿಂದ ಹಿಡಿದು ಮನುಷ್ಯನ ಜೀವನದುದ್ದಕ್ಕೂ ಪೌಷ್ಟಿಕಾಹಾರ ಮಹತ್ವದ ಪಾತ್ರವನ್ನು ವಹಿಸುತ್ತದೆ. ಬದುಕಲು ಮಾತ್ರವಷ್ಟೇ ಪೌಷ್ಟಿಕ ಆಹಾರ ಮುಖ್ಯವಲ್ಲ, ಬದಲಾಗಿ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೂ ಇದು ನೆರವಾಗುತ್ತದೆ. ಮಕ್ಕಳಲ್ಲಿ ಪೌಷ್ಟಿಕಾಂಶಕ್ಕೆ ಅತಿ ಮಹತ್ವದ ಪಾತ್ರವಿದೆ. ಬಾಲ್ಯದಲ್ಲಿ ಮಗುವಿಗೆ ಪೌಷ್ಟಿಕ ಆಹಾರ ಕೊಡದೇ ಹೋದರೆ ಅದರ ಶಾರೀರಿಕ ಬೆಳವಣಿಗೆಯಲ್ಲಿ ಹಾಗೂ ವಿಷಯ ಗ್ರಹಣಶಕ್ತಿಯ ಬೆಳವಣಿಗೆಯಲ್ಲಿ ಅಡ್ಡಿಯುಂಟಾಗಬಹುದು. (ಚಿತ್ರ 1 ನೋಡಿ) ಪೌಷ್ಟಿಕಾಂಶಕೊರತೆಯುಳ್ಳ ಮಗು ಹಲವು ಜೈವಿಕ ಕ್ರಿಯೆಗಳ ಶಕ್ತಿ ಹೀನತೆ, ರೋಗನಿರೋಧಕ ಶಕ್ತಿ ಕುಂಠಿತ, ಗಮನ ಕೊಡುವುದನ್ನು ಮಾಡಲಾಗದುದು ಹಾಗು ಅತಿಯಾದ ಚಟುವಟಿಕೆ ಖಾಯಿಲೆಯು ಸೇರಿದಂತೆ, ಡಿಸ್ಲಕ್ಸಿಯ, ಡಿಸ್ಪ್ರಾಕ್ಸಿಯ ಹಾಗು ಆಟಿಸ್ಟಿಕ್ ತರಹದ ನ್ಯೂನತೆ ಯಂತಹ ಬೆಳವಣಿಗೆ ಸಂಬಂಧಿ ಸಮಸ್ಯೆಗಳಿಂದ ಬಳಲುವ ಸಾಧ್ಯತೆ ಇರುತ್ತದೆ. ಸಮರ್ಪಕ ಪೌಷ್ಟಿಕ ಆಹಾರ ಸೇವನೆಯಿಂದ ಮಗುವಿನ ಬೆಳವಣಿಗೆ ಚೆನ್ನಾಗಿ ಆಗಿ, ಅದರ ಕಲಿಕಾ ಮತ್ತು ಬಡತನದಿಂದ ಮೇಲ್ಬರುವ ಸಾಮರ್ಥ್ಯವೂ ಹೆಚ್ಚುತ್ತದೆ. ಇದರಿಂದ ಸಮಾಜಕ್ಕೂ ಒಳಿತಾಗಿ, ಉತ್ಪಾದಕತೆ ಹೆಚ್ಚಿ ಕುಟುಂಬ ಹಾಗೂ ಸಮುದಾಯಗಳ ಆರ್ಥಿಕ ಶಕ್ತಿ ಹೆಚ್ಚಾಗುತ್ತದೆ.

ಅಪೌಷ್ಟಿಕತೆ, ಅನಾರೋಗ್ಯ ಹಾಗೂ ಶಿಕ್ಷಣದ ಕೊರತೆಯು ಸಾಕಷ್ಟು ಅಂತರ ತಲೆಮಾರು ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಅಪೌಷ್ಟಿಕತೆಯಿಂದ ಬಳಲುವ, ಅನಾರೋಗ್ಯಪೀಡಿತ ಹಾಗೂ ಶಿಕ್ಷಣವಿಲ್ಲದ ತಾಯಂದಿರು ಅನೇಕ ಸಲ ಕಡಿಮೆ ತೂಕದ ಮಗುವಿಗೆ ಜನ್ಮ ಕೊಡುತ್ತಾರೆ; ಆ ಮಗುವಿಗೆ ಸ್ತನ್ಯಪಾನ ಕೂಡ ಸರಿಯಾಗಿ ಆಗುವುದಿಲ್ಲ, ಲಸಿಕೆಗಳನ್ನು ಹಾಕಿಸುವುದಿಲ್ಲ, ಪೂರಕ ಪೌಷ್ಟಿಕ ಆಹಾರ ಕೊಡುವುದಿಲ್ಲ. ಇದರೊಂದಿಗೆ ಕಲುಷಿತ ನೀರು ಸೇವನೆ ಮತ್ತು ನೈರ್ಮಲ್ಯ ಕೊರತೆಯಿಂದಾಗಿ ಮಗು ಸದಾ ಅನಾರೋಗ್ಯಕ್ಕೆ ಕಾರಣವಾಗುವ ವಾತವರಣದಲ್ಲೇ ಬೆಳೆಯಬೇಕಾಗುತ್ತದೆ. ಇದರಿಂದ ಆ ಮಗು ಶೈಕ್ಷಣಿಕ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವ ಸಾಮರ್ಥ್ಯ ಕಳೆದುಕೊಳ್ಳುತ್ತದೆ. ಅಲ್ಲದೇ ಮುಂದೆ ಆ ಮಗು ದುಡಿದು ಗಳಿಸುವುದರಲ್ಲಿ ವಿಫಲವಾಗಿ, ಬಡತನದಿಂದ ಬಳಲುವಂತಾಗುತ್ತದೆ.

ಜಗತ್ತಿನಾದ್ಯಂತ ಪ್ರತಿ ವರ್ಷ 2.3 ದಶಲಕ್ಷ ಮಕ್ಕಳ ಸಾವು ಅಪೌಷ್ಟಿಕತೆಯಿಂದ ಆಗುತ್ತಿದ್ದು,ಇನ್ನೂ ಅನೇಕ ದಶಲಕ್ಷ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ವೈಫಲ್ಯಕ್ಕೆ ಕೂಡ ಇದೇ ಕಾರಣ ಎನ್ನಲಾಗಿದೆ. ವಿಶ್ವಾದ್ಯಂತ ಲಕ್ಷಾಂತರ ಮಕ್ಕಳ ಜೀವ ಅತಂತ್ರ ಸ್ಥಿತಿಯಲ್ಲಿದೆ. ತಡೆಗಟ್ಟಬಹುದಾದ ರೋಗಗಳಿಗೆ ಪ್ರತಿ ದಿನ 19,000 ಮಕ್ಕಳು ಬಲಿಯಾಗುತ್ತಿದ್ದಾರೆ ಹಾಗೂ 130 ದಶಲಕ್ಷ ವಿದ್ಯಾರ್ಥಿಗಳು ಶಾಲೆಗೆ ಹೋದರೂ ಮೂಲಪಾಠಗಳನ್ನು ಕಲಿಯುವಲ್ಲಿ ಕೂಡ ವಿಫಲವಾಗುತ್ತಿದ್ದಾರೆ. ಜಾಗತಿಕ ಮಟ್ಟದಲ್ಲಿ ಭಾರತದಲ್ಲಿ ಅಪೌಷ್ಟಿಕತೆ ಪ್ರಮಾಣ ಅತಿ ಹೆಚ್ಚಾಗಿದ್ದು, ಸಹಾರ ಕೆಳಗಿನ ಆಫ್ರಿಕಾದೇಶಗಳಿಗಿಂತ ಎರಡು ಪಟ್ಟು ಹಾಗೂ ಚೀನಾಕ್ಕಿಂತ 6 ಪಟ್ಟು ಹೆಚ್ಚು ಎಂದು ಹೇಳಲಾಗುತ್ತಿದೆ. ಬಾಂಗ್ಲಾದೇಶ, ಪಾಕಿಸ್ತಾನ, ಶ್ರೀಲಂಕಾ, ನೇಪಾಳ ಹಾಗೂ ಭೂತಾನ್‌ನಂಥ ದಕ್ಷಿಣ ಏಷ್ಯಾದ ದೇಶಗಳ ಪೈಕಿ ಭಾರತ ದೇಶವು ಕಡಿಮೆ ತೂಕದ ಮಕ್ಕಳನ್ನು ಹೊಂದಿರುವ (ವಯಸ್ಸಿಗೆ ತಕ್ಕಂತೆ ಇರಬೇಕಾದ ತೂಕಕ್ಕಿಂತ ಕಡಿಮೆ ಇರುವುದು), ಕುಳ್ಳ (ವಯಸ್ಸಿಗೆ ತಕ್ಕಂತೆ ಎತ್ತರ ಇರುವುದು) ಹಾಗೂ ಎತ್ತರಕ್ಕೆ ತಕ್ಕಂತೆ ಇರಬೇಕಾದ ತೂಕದಲ್ಲಿ ಕಡಿಮೆ ಇರುವ ಸ್ಥಾನದಲ್ಲಿ ಮುಂದಿದೆ. ಎನ್‌ಎಫ್‌ಎಚ್‌ಎಸ್-3 ಅಂಕಿಅಂಶದ ಪ್ರಕಾರ, ಭಾರತದಲ್ಲಿ ಶೇಕಡ 48 ಮಕ್ಕಳು ಕುಳ್ಳ, ಶೇಕಡ 43 ಕಡಿಮೆ ತೂಕ ಹಾಗೂ ಶೇಕಡ 20ರಷ್ಟು ಮಕ್ಕಳು ಎತ್ತರಕ್ಕೆ ತಕ್ಕಂತೆ ಇರಬೇಕಾದ ತೂಕದಲ್ಲಿ ಕಡಿಮೆ ಇದ್ದಾರೆಂದು ತಿಳಿದುಬಂದಿದೆ. ನಗರ ಪ್ರದೇಶಕ್ಕೆ ಹೋಲಿಸಿದರೆ ಗ್ರಾಮೀಣ ಭಾಗದಲ್ಲಿ ಈ ಅಂಕಿ-ಅಂಶ ಇನ್ನೂ ಅಧಿಕವಾಗಿದೆ ಹಾಗೂ ಪರಿಶಿಷ್ಟ ಬುಡಕಟ್ಟು, ಜಾತಿ ಮತ್ತು ಬಡವರ ಸಂಖ್ಯೆ ಇದರಲ್ಲಿ ಹೆಚ್ಚು ಎಂದು ಹೇಳಲಾಗಿದೆ. ಭಾರತದಲ್ಲಿ ಜನಿಸುವ ಶೇಕಡ 30ರಷ್ಟು ಶಿಶುಗಳು ಕಡಿಮೆ ತೂಕದೊಂದಿಗೆ ಜನಿಸುತ್ತಿದ್ದು, ಜಾಗತಿಕ ಸರಾಸರಿ ಪ್ರಮಾಣಕ್ಕಿಂತ ಎರಡು ಪಟ್ಟು ಎಂಬ ಅಪಾಯದ ಮಾಹಿತಿಯೂ ಇದೆ. ಶೇಕಡ 36ರಷ್ಟು ಮಹಿಳೆಯರು

ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಶೇಕಡ 55ರಷ್ಟು ಜನರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.


### ಪೌಷ್ಟಿಕಾಹಾರ, ಆರೋಗ್ಯ ಹಾಗೂ ಶಿಕ್ಷಣದ ಅಂತರ ಸಂಬಂಧ:

ಪೌಷ್ಟಿಕಾಹಾರ, ಆರೋಗ್ಯ ಹಾಗೂ ಶಿಕ್ಷಣ – ಈ ಮೂರೂ ಅಂಶಗಳು ಮಗುವಿನ ಸಮಗ್ರ ಬೆಳವಣಿಗೆ ಹಾಗೂ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಅವುಗಳನ್ನು ವಿವಿಧ ಅಂಶಗಳ ಆಧಾರದ ಮೇಲೆ ಪರಿಗಣಿಸಬೇಕು: ಅವು ಒಂದರಿಂದ ಇನ್ನೊಂದು ವಿಭಿನ್ನವಾಗಿವೆಯೇ? ಸಾಮಾಜಿಕ ರಕ್ಷಣೆ ಎಂಬ ಒಂದೇ ಆವರಣದೊಳಗೆ ಅವು ಬರುತ್ತವೆಯಲ್ಲವೇ? ಮಗು ಎಂಬ ಒಂದೇ ಗುರಿಯ ಮೇಲೆ ನಾವು ಕೇಂದ್ರೀಕರಿಸುತ್ತಿಲ್ಲವೇ?

ಪೌಷ್ಟಿಕಾಹಾರ, ಆರೋಗ್ಯ ಹಾಗೂ ಶಿಕ್ಷಣ ಒಂದಕ್ಕೊಂದು ಅಂತರಸಂಪರ್ಕ ಹೊಂದಿರುವಂಥವು: ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು ಗಣಿತ ಪರೀಕ್ಷೆಯಲ್ಲಿ ಶೇಕಡ 7ಕ್ಕಿಂತ ಕಡಿಮೆ ಅಂಕ ಪಡೆಯುತ್ತಾರೆ ಹಾಗೂ ಎಂಟು ವರ್ಷದೊಳಗಿನ ಮಕ್ಕಳಲ್ಲಿ ಒಂದು ಸರಳ ವಾಕ್ಯವನ್ನು ಓದುವ ಸಾಮರ್ಥ್ಯ ಶೇಕಡ 19ರಷ್ಟು ಕಡಿಮೆಯಾಗಿರುತ್ತದೆ. ಸರಳ ವಾಕ್ಯ ಬರೆಯುವ ಸಾಮರ್ಥ್ಯ ಶೇಕಡ 12ರಷ್ಟು ಕಡಿಮೆ ಮತ್ತು ಶಾಲೆಯಲ್ಲಿ ತಮ್ಮ ವಯಸ್ಸಿಗೆ ತಕ್ಕಂತೆ ಸೂಕ್ತ ತರಗತಿಯಲ್ಲಿ ಇರಬೇಕಾದ ಮಕ್ಕಳು ಶೇಕಡ 13ರಷ್ಟು ಕಡಿಮೆ.

ಶಾಲೆಗಳಿಗೆ ಸಂಬಂಧಿಸಿದಂತೆ ಆರೋಗ್ಯ, ಪೌಷ್ಟಿಕಾಹಾರ ಹಾಗೂ ಶಿಕ್ಷಣದ ಮಧ್ಯೆ ಇರುವ ಮಹತ್ವದ ಸಂಪರ್ಕವನ್ನು ಗುರುತಿಸಿ, ಯುನೆಸ್ಕೊ, ಯುನಿಸೆಫ್, ವಿಶ್ವ ಆರೋಗ್ಯ ಸಂಸ್ಥೆ ಹಾಗೂ ವಿಶ್ವ ಬ್ಯಾಂಕ್‌ಗಳು ಪರಿಣಾಮಕಾರಿ ಶಾಲಾ ಆರೋಗ್ಯಕ್ಕಾಗಿ ಸಂಪನ್ಮೂಲ ಕೇಂದ್ರೀಕರಿಸುವ ಕಾರ್ಯಕ್ರಮ (ಫ್ರೆಶ್), ಶಾಲಾ ಆರೋಗ್ಯ ಹಾಗೂ ಪೌಷ್ಟಿಕಾಹಾರ-2000 ಎಂಬ ಕಾರ್ಯಕ್ರಮದ ಮೂಲಕ ಶಾಲೆಗಳಲ್ಲಿ ಆರೋಗ್ಯ ಮತ್ತು ಪೌಷ್ಟಿಕಾಹಾರವನ್ನು ಒಳಗೊಳ್ಳುವಂತೆ ಮಾಡುವ ಜಾಗತಿಕ ಮಟ್ಟದ ಯೋಜನೆ ಹಮ್ಮಿಕೊಂಡಿದೆ. ಜಗತ್ತಿನ ವಿವಿಧ ಅಭಿವೃದ್ಧಿಶೀಲ ದೇಶಗಳಿಂದ ಸಂಗ್ರಹಿಸಲಾದ ಅಂಕಿ ಅಂಶಗಳ ಪ್ರಕಾರ, ಅನಾರೋಗ್ಯ ಮತ್ತು ಕಳಪೆ ಪೌಷ್ಟಿಕಾಂಶದಿಂದಾಗಿ 200 ದಶಲಕ್ಷ ಶಾಲಾ ವರ್ಷಗಳು ನಷ್ಟವಾಗುತ್ತಿವೆ.

**ಚಿತ್ರ 1:** ಮಕ್ಕಳಲ್ಲಿ ಪೋಷಕಾಂಶ ಕೊರತೆ ಮತ್ತು ಸಾಮಾಜಿಕ ಭಾವನಾತ್ಮಕ ಬೆಳವಣಿಗೆ ಕುರಿತ ಸಂಭವನೀಯ ವ್ಯವಸ್ಥೆ




***ಆಧಾರ:*** *ಎಲಿಜಬೆತ್ ಪ್ರಡೊ ಹಾಗೂ ಕಾತ್ರಿನ್ ಡೆವೆ (2012), ಲೆವಿಟ್‌ಸ್ಕೈ ಅಂಡ್ ಬರ್ನ್ಸ್ (1972) ಮತ್ತು ಪೋಲಿಟ್ (1993)*

**ಭಾರತದಲ್ಲಿ ಚಟುವಟಿಕೆಗಳು:**

ಮಾನವ ಹಕ್ಕುಗಳ ಜಾಗತಿಕ ಘೋಷಣೆ–1948, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಅಂತಾರಾಷ್ಟ್ರೀಯ ಒಡಂಬಡಿಕೆ–1966 ಹಾಗೂ ಮಕ್ಕಳ ಹಕ್ಕುಗಳ ಸಮಾವೇಶ–1989ಕ್ಕೆ ಸಹಿ ಮಾಡಿದ ದೇಶಗಳಲ್ಲೊಂದಾದ ಭಾರತ ಈ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಿಟ್ಟಿದೆ. ಶಿಕ್ಷಣದ ಹಕ್ಕು, ಆಹಾರದ ಹಕ್ಕು ನೀಡಲು ಭಾರತ ಸರ್ಕಾರ ಬೆಂಬಲ ನೀಡಿದೆ. ಇದರ ಜತೆಗೆ ಪ್ರತಿ ಪ್ರಜೆಯನ್ನೂ ಆರೋಗ್ಯದ ವ್ಯಾಪ್ತಿಗೆ ತರಲು ಯೋಜನೆ ರೂಪಿಸಿದೆ. ಇದರಿಂದ ಒಂದಷ್ಟು ಪ್ರಗತಿಯಾಗಿದೆ: ಪ್ರಾಥಮಿಕ ಶಾಲೆಗಳಲ್ಲಿ ಹಾಜರಾತಿ ಪ್ರಮಾಣ ಶೇಕಡ 98.99ರಷ್ಟು ಏರಿಕೆಯಾಗಿದೆ. ಗುಣಮಟ್ಟದ ಶಿಕ್ಷಣ ಕೊಡುವ ಸಾಧ್ಯತೆ ಒಂದೆಡೆ ಇದ್ದರೂ ಮಕ್ಕಳು ಅಪೌಷ್ಟಿಕತೆ ಹಾಗೂ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಹಾಗೂ ಮಕ್ಕಳ ಕಲಿಕಾ ಸಾಮರ್ಥ್ಯ ಕಡಿಮೆಯಾಗಿರುವುದು ಕಳವಳ ಮೂಡಿಸುವಂತಿದೆ. ಅಂಕಿಅಂಶ ಮತ್ತು ಸಾಕ್ಷ್ಯಾಧಾರಗಳ ಕೊರತೆ, ಕಳಪೆ ಗುಣಮಟ್ಟದ ತರಬೇತಿ ಹಾಗೂ ಕೆಲಸಗಾರರ ಸಾಮರ್ಥ್ಯ ವೃದ್ಧಿ ಮತ್ತು ಸಂಬಂಧಿಸಿದ ಇಲಾಖೆಗಳ ಮಧ್ಯೆ ಸಮನ್ವಯ ಇಲ್ಲದಿರುವುದೂ ಸೇರಿದಂತೆ ಸರ್ಕಾರದ ನೀತಿಗಳಲ್ಲಿ ಹಲವಾರು ಲೋಪದೋಷಗಳಿವೆ.

ಅಪೌಷ್ಟಿಕತೆ, ಆರೋಗ್ಯ ವರ್ಧನೆ ಹಾಗೂ ಮಕ್ಕಳಿಗೆ ಶಿಕ್ಷಣ ಕುರಿತಂತೆ ಭಾರತ ಸರ್ಕಾರದಿಂದ ಹಲವಾರು ಕಾರ್ಯಕ್ರಮಗಳು ಚಾಲನೆಗೊಂಡಿವೆ. ಆ ಪೈಕಿ 'ಕೇಂದ್ರ ಪ್ರಾಯೋಜಿತ ಯೋಜನೆಗಳು' ಹೀಗಿವೆ:

**ಅಂತ್ಯೋದಯ ಅನ್ನ ಯೋಜನೆ:** (ಕಡುಬಡವರಿಗೆ ಹೆಚ್ಚಿನ ಸಬ್ಸಿಡಿಯಲ್ಲಿ ಆಹಾರಧಾನ್ಯ ಒದಗಿಸುವ ಯೋಜನೆ): ಅರ್ಹ ಫಲಾನುಭವಿಗಳನ್ನು ಗುರುತಿಸಿ, ಆಹಾರಧಾನ್ಯ ವಿತರಿಸುವುದು.

**ಸಮಗ್ರ ಶಿಶು ಅಭಿವೃದ್ಧಿ ಯೋಜನೆ:** (ಆರು ವರ್ಷದೊಳಗಿನ ಮಕ್ಕಳ ಆರೋಗ್ಯ, ಪೌಷ್ಟಿಕತೆ ಹಾಗೂ ಶಿಕ್ಷಣ ಕೊಡುವ ಸಮಗ್ರ ಯೋಜನೆ. ಗರ್ಭಿಣಿಯರು, ಬಾಣಂತಿಯರು ಹಾಗೂ ಕಿಶೋರಿಯರು ಸಹ ಈ ಕಾರ್ಯಕ್ರಮದ ವ್ಯಾಪ್ತಿಗೆ ಬರುತ್ತಾರೆ): ಮಕ್ಕಳು, ಕಿಶೋರಿಯರು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ನಿತ್ಯ ಆಹಾರ ಕೊಡುವ ಕಾಯ್ದೆ ರೂಪಿಸಲಾಗಿದೆ. ಪ್ರತಿಯೊಂದು ಬಡಾವಣೆಯಲ್ಲೂ ಒಂದು ಅಂಗನವಾಡಿ (ಮಕ್ಕಳ ಪಾಲನೆ ಕೇಂದ್ರ) ಸ್ಥಾಪನೆ ಹಾಗೂ ಅಸ್ತಿತ್ವದಲ್ಲಿರುವ ಎಲ್ಲ ಕೇಂದ್ರಗಳೂ ಸಂಪೂರ್ಣ ಕಾರ್ಯನಿರ್ವಹಿಸುವಂತೆ ಯೋಜನೆಯು ನಿರ್ದೇಶನ ನೀಡುತ್ತದೆ.

**ಮಧ್ಯಾಹ್ನದ ಬಿಸಿಯೂಟ ಯೋಜನೆ:** (ಸರ್ಕಾರಿ ಹಾಗೂ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಶಾಲಾ ಬಿಸಿಯೂಟ ಕೊಡುವ ಕಾರ್ಯಕ್ರಮ): ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳ ಎಲ್ಲ ಮಕ್ಕಳಿಗೆ ಶಾಲೆಯ ದಿನಗಳಂದು ಹಾಗೂ ವರ್ಷದಲ್ಲಿ ಕನಿಷ್ಠ 200 ದಿನಗಳ ಕಾಲ ಬಿಸಿಯೂಟ ಕೊಡುವುದು.

**ಗುರಿಯಿರಿಸಿದ ಜನರಿಗೆ ಪಡಿತರ ಯೋಜನೆ:** (ಬಡವರಿಗೆ ಮಧ್ಯಮ ಪ್ರಮಾಣದ ಸಬ್ಸಿಡಿಯಲ್ಲಿ ಆಹಾರಧಾನ್ಯ ಕೊಡುವುದು): ಅರ್ಹ ಫಲಾನುಭವಿಗಳನ್ನು ಗುರುತಿಸುವುದು, ಅವರಿಗೆ ಪಡಿತರ ಕಾರ್ಡ್ ಕೊಟ್ಟು, ಪ್ರತಿ ತಿಂಗಳೂ ಆಹಾರಧಾನ್ಯ ವಿತರಣೆ ಮಾಡುವುದು. ಈ ಯೋಜನೆಯು ರಾಜ್ಯದಿಂದ ರಾಜ್ಯಕ್ಕೆ ಬೇರೆ ಬೇರೆ ಸ್ವರೂಪದಲ್ಲಿ ಇರುತ್ತದೆ, ಆದರೆ ಬಡಕುಟುಂಬಗಳಿಗೆ ಆಹಾರಧಾನ್ಯ ನೀಡುವ ಮೂಲ ಉದ್ದೇಶ ಮಾತ್ರ ಒಂದೇ ಆಗಿರುತ್ತದೆ.

ಆರೋಗ್ಯ ಸೇವೆ, ಪೌಷ್ಟಿಕಾಹಾರ ಹಾಗೂ ಗುಣಮಟ್ಟದ ಶಿಕ್ಷಣ ಕೊಡಲು ಸರ್ಕಾರವು ಹಲವು ಮಹತ್ವದ ಹೆಜ್ಜೆಗಳನ್ನು ಹಾಕುತ್ತಿದ್ದರೂ ನೀತಿ ಹಾಗೂ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸ್ವಲ್ಪ ಹಿನ್ನಡೆ ಕಾಣುತ್ತದೆ. ಸರ್ಕಾರದ ನೀತಿಗಳಲ್ಲಿ ಹಲವು ಅಡೆತಡೆಗಳಿವೆ. ಯೋಜನೆಗಳನ್ನು ಇನ್ನಷ್ಟು ಬಲಪಡಿಸಬೇಕು, ಹೂಡಿಕೆಯನ್ನು ಹೆಚ್ಚಿಸಬೇಕು, ಪ್ರತಿಯೊಬ್ಬರನ್ನೂ ಯೋಜನೆಯು ತಲುಪಬೇಕು, ಎಎನ್ಎಂ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಗೆ ಹೆಚ್ಚು ಗೌರವಧನ ನೀಡಲು ಕ್ರಮ ಕೈಗೊಳ್ಳಬೇಕು ಹಾಗೂ ಅವರಿಗೆ ತರಬೇತಿ ನೀಡಿ ಮೂಲಸೌಲಭ್ಯ ಕಲ್ಪಿಸಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವುದು, ಶಿಕ್ಷಕರ ನೇಮಕ ಹಾಗೂ ಎಲ್ಲರಿಗೂ ಗುಣಮಟ್ಟದ ಶಿಕ್ಷಣಕ್ಕಾಗಿ ಸಮರ್ಪಕ ತರಬೇತಿ ಕೊಡಬೇಕು.

**ಉಪಸಂಹಾರ**

ಉಪಸಂಹಾರದ ವಿಶ್ಲೇಷಣೆಯೆಂದರೆ, ಈ ಎಲ್ಲ ಕಾರ್ಯಕ್ರಮಗಳೂ ಒಂದೇ ವರ್ಗದ ಫಲಾಭವಿಗಳನ್ನು ಗುರಿಯಾಗಿಟ್ಟುಕೊಂಡಿವೆ. ಸಮುದಾಯದ ಮಟ್ಟದಲ್ಲಿ ಶಾಲೆಗಳು, ಆರೋಗ್ಯ ಉಪಕೇಂದ್ರಗಳು / ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಅಂಗನವಾಡಿಗಳ ಮೂಲಕ ಕಾರ್ಯಕ್ರಮ ಜಾರಿಯಾಗುತ್ತವೆ. ಈ ಪ್ರತಿಯೊಂದು ಕೇಂದ್ರವೂ ತನ್ನದೇ ಆದ ಮೂಲಸೌಲಭ್ಯ ಹಾಗೂ ಸಮುದಾಯ ಕಾರ್ಯಕರ್ತರನ್ನು ಹೊಂದಿದೆ. ಈ ಸಮುದಾಯ ಮಟ್ಟದ ಜನರು ಹಾಗೂ ಮೂಲಸೌಲಭ್ಯ ಒಂದೇ ಉದ್ದೇಶದೊಂದಿಗೆ ಒಂದೇ ಕಡೆ ಕೆಲಸ ಮಾಡಿದರೆ ಅಂತಿಮ ಫಲಿತಾಂಶ ಹಲವು ಪಟ್ಟು ಹೆಚ್ಚುತ್ತದೆ. ಆದರೆ ದುರದೃಷ್ಟವಶಾತ್ ಈ ಕ್ಷಣದಲ್ಲಿ ಈ ಪ್ರತಿಯೊಂದು ಕಾರ್ಯಕ್ರಮವೂ ತನ್ನ ಪ್ರತ್ಯೇಕ ಮಾರ್ಗ

ಹೊಂದಿದ್ದು, ಇನ್ನೊಂದು ವರ್ಗದ ಸಂಬಂಧಪಟ್ಟವರ ಬಗ್ಗೆ ಅತ್ಯಲ್ಪ ಕಾಳಜಿ ಹೊಂದಿದೆ. ಒಂದು ವೇಳೆ ಈ ಅಂತರವನ್ನು ಒಂದುಗೂಡಿಸಿದರೆ, ಖಂಡಿತವಾಗಿಯೂ ನಾವು ಇನ್ನಷ್ಟು ಪ್ರಗತಿ ಸಾಧಿಸಬಹುದಾಗಿದೆ.



**References**


1. What Is The Relationship Between Child Nutrition And School Outcomes? By Annik Sorhaindo and Leon Feinstein
2. State of World's Mother Report, 2012
3. www.savethechildchildren.org.ink, Food for thoughts.
4. Children in India 2012 – A statistical appraisal, mospi.nic.in
5. Why India remains malnourished by Jyotsna Singh and Kunal Pandey.



**ಶ್ರೀಲತಾ ರಾವ್ ಶೇಷಾದ್ರಿ** ಇವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಆರೋಗ್ಯ, ಪೌಷ್ಟಿಕತೆ ಹಾಗೂ ಅಭಿವೃದ್ಧಿ ಉಪಕ್ರಮಗಳನ್ನು ಕುರಿತು ಕಾರ್ಯ ನಿರ್ವಹಿಸುತ್ತಿದ್ದಾರೆ. ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಹಾಗೂ ಆರೋಗ್ಯ, ಪೌಷ್ಟಿಕತೆ ಮತ್ತು ಶಿಕ್ಷಣದ ನಡುವಿನ ಸಂಬಂಧಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಕರ್ನಾಟಕದ ಗ್ರಾಮೀಣ ಭಾಗದ ಶಾಲಾ ವಿದ್ಯಾರ್ಥಿಗಳಲ್ಲಿ ಆಹಾರದ ಆಯ್ಕೆ ಮತ್ತು ಪೌಷ್ಟಿಕತೆ ಕುರಿತ ಅಧ್ಯಯನ ನಡೆಸುತ್ತಿದ್ದಾರೆ. ಆರೋಗ್ಯ ವಲಯದಲ್ಲಿ ನೀತಿಗಳು, ಅನಾರೋಗ್ಯ ತಡೆಗೆ ಕಾರ್ಯತಂತ್ರ ಸಹ ಅವರ ಆಸಕ್ತಿಯ ವಲಯಗಳು. ಕರ್ನಾಟಕ ಆರೋಗ್ಯ ಸ್ಥಿತಿಗತಿ ವರದಿ (ನವೆಂಬರ್ 2010)ಯ ಅಭಿವೃದ್ಧಿ ಹಾಗೂ ಬರಹದಲ್ಲಿ ಇವರ ಕೊಡುಗೆಯಿದೆ ಹಾಗೂ ಅದರ ಅನುಷ್ಠಾನದಲ್ಲಿಯೂ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ.

**ಸೂರಜ್ ಅಂಕುಶ್ ಪರಬ್** ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಆರೋಗ್ಯ, ಪೌಷ್ಟಿಕತೆ ಹಾಗೂ ಅಭಿವೃದ್ಧಿ ಉಪಕ್ರಮಗಳ ಅಧ್ಯಯನ ಸಂಯೋಜಕರಾಗಿ ನವೆಂಬರ್ 2013ರಲ್ಲಿ ಸೇವೆ ಆರಂಭಿಸಿದ್ದಾರೆ. ಗೋವಾ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಮೇಲೆ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಸೇರುವುದಕ್ಕೂ ಮುನ್ನ ಅವರು ಮಾನಸಿಕ ಆರೋಗ್ಯ ಸಂಶೋಧನಾ ಸಂಸ್ಥೆ 'ಸಂಗತ'ದಲ್ಲಿ ಏಳು ವರ್ಷಗಳ ಕಾಲ ಸಂಶೋಧಕ ಹಾಗೂ ಹಲವಾರು ಯೋಜನೆಗಳಲ್ಲಿ ಸಂಯೋಜಕರಾಗಿ ಕೆಲಸ ಮಾಡಿದ್ದಾರೆ. ಕಾರ್ಯಕ್ರಮ ಸಂಯೋಜನೆ, ಗುಣಾತ್ಮಕ ದತ್ತಾಂಶ ಸಂಗ್ರಹ ಹಾಗೂ ವಿಶ್ಲೇಷಣೆ, ದತ್ತಾಂಶ ನಿರ್ವಹಣೆ, ಮೌಲ್ಯಮಾಪನದ ಬಗ್ಗೆ ಸಾಕಷ್ಟು ಅನುಭವ ಇವರದು.



# ಆರಂಭಿಕ ಬಾಲ್ಯ ಶಿಕ್ಷಣ: ಪ್ರವಾಹದಿಂದ ಪಾರಾಗುವ ಬಗೆ



**ಕಿನ್ನರಿ ಪಾಂಡ್ಯ ಮತ್ತು ಜಿಗಿಶಾ ಶಾಸ್ತ್ರಿ**

*ಈ ಲೇಖನದಲ್ಲಿ ನಾವು ದೇಶದಲ್ಲಿನ ಆರಂಭಿಕ ಬಾಲ್ಯದ ಶಿಕ್ಷಣ (ಇಸಿಇ) ಕಾರ್ಯಕ್ರಮದ ಸ್ಥಿತಿಗತಿ ಹಾಗೂ ಈ ಕಾರ್ಯಕ್ರಮದ ಹಲವು ಹಂತಗಳ ಅನುಷ್ಠಾನದಲ್ಲಿ ತೊಡಗಿರುವ ವೃತ್ತಿಪರರ ಬಗ್ಗೆ ಚರ್ಚೆ ನಡೆಸಿದ್ದೇವೆ. ದೇಶದಲ್ಲಿ ವಾಸ್ತವವಾಗಿ ನೀಡುತ್ತಿರುವ ಆರಂಭಿಕ ಬಾಲ್ಯದ ಶಿಕ್ಷಣದ ಗುಣಮಟ್ಟವನ್ನು ಬದಲಾಯಿಸಬೇಕಾದರೆ ಉನ್ನತ ಶಿಕ್ಷಣದ ಕ್ಷೇತ್ರದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣದ ಬಗ್ಗೆ ಅಧ್ಯಯನ ನಡೆಸಬೇಕಾದ ಆವಶ್ಯಕತೆ ಇದೆ ಎಂಬ ನಂಬಿಕೆ ನಮ್ಮದು. ಈ ಹಿನ್ನೆಲೆಯಲ್ಲಿ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ವೃತ್ತಿಪರರು ತಿಳಿದುಕೊಳ್ಳಬೇಕಾದ ಕೆಲವು ಸಿದ್ಧಾಂತಗಳನ್ನು ಇಲ್ಲಿ ಶಿಫಾರಸು ಮಾಡಲಾಗಿದೆ. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ಇಸಿಸಿಇ) ಕುರಿತಾದ ರಾಷ್ಟ್ರಮಟ್ಟದ ತೀವ್ರ ಪ್ರಯತ್ನದ ಈ ಸಮಯದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ನಿರತರಾದ ವೃತ್ತಿಪರರಿಗೆ ಉನ್ನತ ಶಿಕ್ಷಣ ನೀಡಲು ಇನ್ನೂ ಹೆಚ್ಚು ತೀವ್ರ ಪ್ರಯತ್ನ ನಡೆಯಬೇಕೆಂಬ ಆಶಯ ನಮ್ಮದು.*

ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ಇಸಿಸಿಇ) ಕುರಿತಾದ ರಾಷ್ಟ್ರೀಯ ನೀತಿಯ ಅಧಿಸೂಚನೆಯನ್ನು 2013ರ ಸೆಪ್ಟೆಂಬರ್‌ನಲ್ಲಿ ಹೊರಡಿಸುವುದರೊಂದಿಗೆ ಭಾರತವು ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಬದಲಾವಣೆ ತರುವ ಹಂತಕ್ಕೆ ಬಂದು ನಿಂತಿದೆ. ಈ ಕ್ರಮವು ಮಹತ್ವದ್ದಾಗಿದ್ದು, ತಡವಾಗಿಯಾದರೂ ಉನ್ನತ ಗುಣಮಟ್ಟ ಹಾಗೂ ದೇಶದಾದ್ಯಂತ ಇಸಿಸಿಇಯ ಏಕರೂಪತೆಗೆ ಹೊಸ ಚೈತನ್ಯ ನೀಡಬಲ್ಲದು. ಈವರೆಗೆ ನಿಯಂತ್ರಿತ ವ್ಯವಸ್ಥೆಯ ಇಲ್ಲದ ಕಾರಣ ಎರಡು ದಶಕಗಳ ಕಾಲದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣದ ಶಾಲೆಗಳು ಅಣಬೆಯಂತೆ ತಲೆಯೆತ್ತಿವೆ, ದೇಶದಾದ್ಯಂತ ಆ ಕೇಂದ್ರಗಳು ಸ್ಥಾಪನೆಯಾಗಿವೆ. ಮಕ್ಕಳ ಬಗ್ಗೆ ವಿಶೇಷವಾಗಿ ತಿಳಿದುಕೊಳ್ಳುವುದು ಏನೂ ಇಲ್ಲ ಎಂಬ ಮನೋಭಾವನೆಯಿಂದ ಹಿಡಿದು, 'ನಾವೆಲ್ಲರೂ ಒಮ್ಮೆ ಮಕ್ಕಳಾಗಿದ್ದವರೇ, ಈಗ ನಮಗೆ ನಮ್ಮದೇಆದ ಮಕ್ಕಳಿದ್ದಾರೆ, ಹೀಗಾಗಿ ನಾವು ಅವರ ಬಗ್ಗೆ ಹಾಗೂ ಅವರಿಗಾಗಿ ಏನು ಮಾಡಬೇಕು ಎಂಬುದರ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೇವೆ' ಎಂಬ ಭಾವನೆಯೊಂದಿಗೆ ಅನೇಕ ಜನರು ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸುವ ಬಲು ಲಾಭದಾಯಕ ವೃತ್ತಿಯನ್ನು ಪ್ರಾರಂಭಿಸಿದ್ದಾರೆ. ಮಕ್ಕಳು ಬೇಗನೇ ಶಾಲೆಗೆ ಹೋಗಬೇಕು ಎಂಬ ಉದ್ದೇಶದಿಂದ ಮಕ್ಕಳನ್ನು ಸಾಕ್ಷರರನ್ನಾಗಿ ಮಾಡಲು (ಅಂದರೆ ಎ, ಬಿ, ಸಿ... ಹಾಗೂ 1, 2, 3 ಕಲಿಸುವುದು) ಹಾಗೂ ಶಾಲೆಗೆ ತೆರಳಲು ಬೇಗನೇ ಸಿದ್ಧಗೊಳಿಸುವ ಉದ್ದೇಶದಿಂದ ಬಹಳಷ್ಟು ಶಾಲಾಪೂರ್ವ ಶಿಕ್ಷಣ ಕಾರ್ಯಕ್ರಮಗಳು ಕೆಲವು ಹಾಡುಗಳು ಮತ್ತು ಕಥೆ ಹೇಳುವುದನ್ನು ಬಿಟ್ಟರೆ ಪ್ರಾಥಮಿಕ ಶಾಲೆಯ ಪಾಠವನ್ನು ಸ್ವಲ್ಪ ಲಘುಗೊಳಿಸಿ ಕೆಳಗಿನ ಶಾಲೆಗೆ ತಂದಂತಿವೆ. ಜನಸಾಮಾನ್ಯರಾಗಿ ಮತ್ತು ಜನಪದರಾಗಿ ಮಕ್ಕಳನ್ನು ಹೇಗೆ ಬೆಳಸಬೇಕೆಂದು ತಿಳಿದುಕೊಂಡಂತಹ ಎಳೆ ಮಕ್ಕಳಿಗೆ ಕಲಿಕೆ ಹಾಗೂ ಬೋಧನೆ ಹೇಗಿರಬೇಕೆಂದು ಅರಿಯದ ಜನರೂ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಭಾಗವಹಿಸುತ್ತಾರೆ. ಹೀಗಾಗಿ ಗ್ರಾಮೀಣ ಹಾಗೂ ನಗರ ಪ್ರದೇಶದ ಒಟ್ಟಾರೆ ಸಮುದಾಯಕ್ಕೆ ಮಿಶ್ರ ಸ್ವರೂಪದ ವ್ಯಾಸಂಗ ಕ್ರಮಗಳು ದೊರೆಯುತ್ತಿವೆ.

ಇನ್ನೊಂದು ಕಡೆಯಲ್ಲಿ, ಪ್ರಗತಿಗೆ ಪೂರಕವಾದ, ಸಾಂಸ್ಕೃತಿಕವಾಗಿ ಸಂವೇದನಾಶೀಲವಾದ ಕಾರ್ಯಕ್ರಮಗಳು ದೇಶದ ವಿಶ್ವವಿದ್ಯಾಲಯಗಳ ಪ್ರಾಯೋಗಿಕ ಶಾಲೆಗಳಲ್ಲಿ ಲಭ್ಯವಿದ್ದು, ಸ್ವಯಂಸೇವಾ ಸಂಸ್ಥೆಗಳು ಹಾಗೂ ಖಾಸಗಿ ಶಾಲೆಗಳಲ್ಲಿ ಆಸಕ್ತಿಕರ ಕಾರ್ಯಕ್ರಮಗಳು ನಡೆಯುತ್ತಿವೆ. ನಿರ್ದಿಷ್ಟ ಸಿದ್ಧಾಂತಗಳು ಮತ್ತು ಮರಿಯಾ ಮಾಂಟೆಸ್ಸರಿ ಅವರಂಥ ತತ್ವಜ್ಞಾನಿಗಳಿಂದ ಹೊರಹೊಮ್ಮಿದ ವಿಧಾನಗಳನ್ನು ಅನುಸರಿಸುತ್ತಿರುವ ಆರಂಭಿಕ ಬಾಲ್ಯದ ಶಿಕ್ಷಣದ ಕಾರ್ಯಕ್ರಮಗಳನ್ನೂ ಕಾಣಬಹುದು. ಆದರೆ ಅವುಗಳ ಸಂಖ್ಯೆ ತೀರಾ ಕಡಿಮೆ. ಸರ್ಕಾರ ನಡೆಸುತ್ತಿರುವ ಅಂಗನವಾಡಿಗಳು ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ ಯೋಜನೆ/ ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಐಸಿಡಿಎಸ್)ಗಳೂ ಇನ್ನೊಂದೆಡೆ ಇದ್ದು, ಅವು ಪೌಷ್ಟಿಕ ಆಹಾರ ಹಾಗೂ ಆರೋಗ್ಯ ಸಂಬಂಧಿ ಸೇವೆಗಳ ಜತೆ ಇಸಿಇ ಅಂಶಗಳನ್ನು ಸಹ ಅನುಷ್ಠಾನ ಮಾಡಬಹುದು. ಹೀಗೆ ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಭಾರತದಲ್ಲಿ ಹಲವಾರು ಮಾರ್ಗಗಳಿವೆ.

ಇಂದಿನ ಸ್ಪರ್ಧಾತ್ಮಕ ಕಾಲದಲ್ಲಿ ಹಾಗೂ ಇಂಗ್ಲಿಷ್ ಪಾರಮ್ಯದ ಸಂದರ್ಭದಲ್ಲಿ ಪಾಲಕರು ಮತ್ತು ಸಮುದಾಯ ಶಾಲಾ ವ್ಯವಸ್ಥೆಗೆ ಸರಿಯಾಗಿ ಹೊಂದಿಕೆಯಾಗುವಂಥ

ವಿದ್ಯಾಕ್ರಮಗಳನ್ನು ಬಯಸುವುದು ಸಹಜ. ಕಾರ್ಯಕ್ರಮದ ಸ್ವರೂಪ ಹಾಗೂ ಗುಣಮಟ್ಟದ ಜವಾಬ್ದಾರಿ ಶಾಲೆಯ ಮಾಲೀಕರ ಮೇಲೆಯೇ ಇರುತ್ತದೆ. ಆದರೆ ನಿಜಕ್ಕೂ ಉತ್ತಮ ಗುಣಮಟ್ಟದ ಮತ್ತು ಮಕ್ಕಳ ವಯೋ ಬೆಳವಣಿಗೆಗೆ ಸೂಕ್ತವಾದ ವಿದ್ಯಾಕ್ರಮಗಳು ಸಿಗಬೇಕೆಂದರೆ, ಸರ್ಕಾರ ಇದಕ್ಕಾಗಿ ಒಂದು ನಿಯಂತ್ರಣಾ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ದೇಶದ ಶೈಕ್ಷಣಿಕ ವಲಯವು ಶಾಲಾಪೂರ್ವ ಶಿಕ್ಷಣವನ್ನು ಮಹತ್ವದ ಕ್ಷೇತ್ರ ಎಂದು ಪರಿಗಣಿಸಬೇಕು ಹಾಗೂ ಇದರಲ್ಲಿ ಉನ್ನತ ಶಿಕ್ಷಣ, ಸಂಶೋಧನೆ ಹಾಗೂ ಅಭಿವೃದ್ಧಿಯ ಕೆಲಸಗಳು ನಡೆಯಬೇಕು.

ಹಲವು ಜನರು (ಇನ್ನು ಮುಂದೆ ಅವರನ್ನು ವೃತ್ತಿಪರರು ಎಂದು ಕರೆಯೋಣ) ಆರಂಭಿಕ ಬಾಲ್ಯದ ಶಿಕ್ಷಣದ ವಿವಿಧ ಹಂತಗಳಲ್ಲಿ ಪಾಲ್ಗೊಳ್ಳುತ್ತಾರೆ. ಈ ವೃತ್ತಿಪರರು ಯಾವ ಬಗೆಯಲ್ಲಿ ಕೊಡುಗೆ ನೀಡುತ್ತಾರೆ, ಅವರು ಕೊಡುವ ಶಿಕ್ಷಣದ ಸ್ವರೂಪ ಹೇಗೆ? ಇನ್ನಷ್ಟು ಗುಣಮಟ್ಟದ ಶಿಕ್ಷಣ ಕೊಡಲು ಏನು ಮಾಡಬೇಕು ಎಂಬುದನ್ನು ಚರ್ಚಿಸೋಣ.

ಮಕ್ಕಳ ಜತೆ ನೇರವಾಗಿ ಪಾಲ್ಗೊಳ್ಳುವ, ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುವ ಕೆಲವು ವೃತ್ತಿಪರರ ವಿವರ ಹೀಗಿದೆ:

- ದಿನನಿತ್ಯದ ಅವಧಿಯಲ್ಲಿ ಮಕ್ಕಳ ಜತೆ ಇರುವ ಶಿಕ್ಷಕ/ ಕಾರ್ಯಕರ್ತೆಯರು. ಅವರನ್ನು ತಳಮಟ್ಟದ ಕಾರ್ಯಕರ್ತೆಯರು ಅಥವಾ ಮೊದಲ ಸಾಲಿನ ಕಾರ್ಯನಿರ್ವಾಹಕರು ಎನ್ನಬಹುದು. ಅವರಲ್ಲಿ ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮದ ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರಿ ಅಥವಾ ಖಾಸಗಿ ಶಾಲೆಯಲ್ಲಿನ ಶಿಕ್ಷಕರು ಆಗಿರುತ್ತಾರೆ.

- ಎರಡನೇ ಹಂತದಲ್ಲಿ ಮೇಲ್ವಿಚಾರಕಿಯರ ಗುಂಪು. ಅಂಗನವಾಡಿ ಕಾರ್ಯಕರ್ತೆಯರ ಜತೆ ಇವರು ನೇರ ಸಂಪರ್ಕದಲ್ಲಿ ಇರುತ್ತಾರೆ. ದಿನನಿತ್ಯದ ಚಟುವಟಿಕೆಗಳನ್ನು ಪರಿಶೀಲಿಸುತ್ತ, ಅಗತ್ಯ ಸಲಹೆ ಸೂಚನೆ ಕೊಡುತ್ತಿರುತ್ತಾರೆ. ದೊಡ್ಡ ಮಟ್ಟದಲ್ಲಿ ಶಾಲಾಪೂರ್ವ ಸಂಸ್ಥೆಗಳ ಸರಣಿ ಹೊಂದಿರುವವರು ವಯೋಮಾನದ ಆಧಾರಿತ ಗುಂಪಿಗೆ ಪಠ್ಯಕ್ರಮ ನಿರೂಪಕರು ಹಾಗೂ ಶಾಲಾಪೂರ್ವ ಕಾರ್ಯಕ್ರಮ ಸಂಯೋಜಕರನ್ನು ಹೊಂದಿರುತ್ತಾರೆ.

- ಆರಂಭಿಕ ಬಾಲ್ಯದ ಶಿಕ್ಷಣದ ಕಾರ್ಯಕ್ರಮದಲ್ಲಿ ಮೂರನೇ ಗುಂಪು ಉನ್ನತ ಮಟ್ಟದ್ದು. ಯೋಜನೆಯಲ್ಲಿ ಅವರು ಶಿಶು ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಒ) ಆಗಿರುತ್ತಾರೆ. ಗುಣಮಟ್ಟದ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಹೆಚ್ಚೆಚ್ಚು ಸಂಖ್ಯೆಯ ಅಂಗನವಾಡಿಗಳ ಉಸ್ತುವಾರಿಯನ್ನು ಅವರು ನಿರ್ವಹಿಸುತ್ತ ಇರುತ್ತಾರೆ. ಮೇಲ್ವಿಚಾರಕಿಯರಿಗೆ ಮಾರ್ಗದರ್ಶನ ಕೊಡುತ್ತಾರೆ. ದೊಡ್ಡ ಖಾಸಗಿ ಶಾಲೆ ಸರಣಿಗಳಲ್ಲಿ ಅವರು ಪ್ರಾಂಶುಪಾಲರು ಅಥವಾ ಕಾರ್ಯಕ್ರಮಗಳ ಮುಖ್ಯಸ್ಥರು ಆಗಿರುತ್ತಾರೆ.

- ನಾಲ್ಕನೇ ಹಂತದಲ್ಲಿ ಇರುವವರು ಶಿಕ್ಷಕರಿಗೆ ತರಬೇತಿ ಕೊಡುವವರು. ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಐಸಿಡಿಎಸ್)ಯ ಕಾರ್ಯಕ್ರಮದಡಿಯಲ್ಲಿ ಅವರು ಕಾರ್ಯಕ್ರಮ ರೂಪಿಸಿ, ವಿವಿಧ ಹಂತಗಳಲ್ಲಿ ತರಬೇತಿ ಕೊಡುತ್ತಾರೆ. ಖಾಸಗಿ ವಲಯಗಳಲ್ಲಿ ನರ್ಸರಿ ಶಿಕ್ಷಕರಿಗೆ ತರಬೇತಿ ಕೊಡುತ್ತಾರೆ.

ಈ ನಾಲ್ಕು ವೃತ್ತಿಪರ ವರ್ಗಗಳಿಗಿಂತಲೂ ಶಾಲಾ ಪೂರ್ವ ಶಿಕ್ಷಣ (ಅದು ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ ಆಗಿರಬಹುದು ಅಥವಾ ಖಾಸಗಿ ಯೋಜನೆಯಾಗಿರಬಹುದು) ನೀತಿ ನಿರೂಪಕರು, ಆರಂಭಿಕ ಬಾಲ್ಯದ ಶಿಕ್ಷಣದ ಹಾಗೂ ಪುಟಾಣಿ ಮಕ್ಕಳ ಪಾಲನೆ ಮತ್ತು ಶಿಕ್ಷಣದ ಪ್ರತಿಪಾದಕರು, ಕಲಿಕಾ ಸಾಮಗ್ರಿ ವಿನ್ಯಾಸಗಾರರು, ಮಕ್ಕಳಿಗಾಗಿ ಆಟಿಕೆ–ಪುಸ್ತಕ ತಯಾರಕರು, ಸಂಶೋಧಕರಂಥ ಉತ್ತಮ ಗುಣಮಟ್ಟದ ವೃತ್ತಿಪರರು ಬೇಕಾಗುತ್ತಾರೆ. ಪ್ರತಿಯೊಂದು ಹಂತದಲ್ಲಿಯೂ ಆಳವಾಗಿ ಆರಂಭಿಕ ಬಾಲ್ಯದ ಶಿಕ್ಷಣದ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಅಧ್ಯಯನ ನಡೆಸುವುದು ಅತ್ಯಗತ್ಯ.

ನಮ್ಮ ದೇಶದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣವು ಅಸಂಘಟಿತ ಹಾಗೂ ಅನಿಯಂತ್ರಣದಲ್ಲಿಯೇ ಉಳಿದುಬಿಟ್ಟಿರುವುದು ದುರದೃಷ್ಟಕರ. ಅದಕ್ಕಾಗಿ ಶಿಸ್ತುಬದ್ಧ ಚಟುವಟಿಕೆ, ಸಂಶೋಧನೆ, ಅಧ್ಯಯನ ನಡೆದೇ ಇಲ್ಲ. ಇದನ್ನು ಗಮನಿಸಿ ಈ ಕ್ಷೇತ್ರದಲ್ಲಿ ಉನ್ನತ ಶಿಕ್ಷಣದ ಕಾರ್ಯಕ್ರಮಗಳನ್ನು ಕುರಿತು ವೃತ್ತಿಪರರಿಗೆ ತರಬೇತಿ ಕೊಡಬೇಕಾಗಿರುವುದು ಅಗತ್ಯ. ಗುಣಮಟ್ಟದ ಆರಂಭಿಕ ಬಾಲ್ಯದ ಶಿಕ್ಷಣದ ಪಠ್ಯಕ್ರಮ ರೂಪಿಸಲು ವಿಶೇಷ ತರಬೇತಿಯಿಂದ ಸಾಧ್ಯವಿದೆ. ಮಕ್ಕಳ ಶಾರೀರಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗುವಂಥ ಕಾರ್ಯಕ್ರಮವೂ ಅವಶ್ಯ. ಮಕ್ಕಳಿಗಾಗಿ ರೂಪಿಸಬೇಕಾದ ಕಾರ್ಯಕ್ರಮ ವಿನ್ಯಾಸ ಮತ್ತು ಕಲಿಕಾ ಸಾಮಗ್ರಿ ಆಯ್ಕೆಯು ಸೂಕ್ತವಾಗಿರಬೇಕು. ಆರಂಭಿಕ ಬಾಲ್ಯದ ಶಿಕ್ಷಣದ ಬಗ್ಗೆ ಸಾಕಷ್ಟು ತಿಳಿದುಕೊಂಡ ವೃತ್ತಿಪರರು ತರಬೇತಿ ಕಾರ್ಯಕ್ರಮ ರೂಪಿಸಲು ಹಾಗೂ ಭಾವಿ ಶಿಕ್ಷಕರಿಗೆ ಅದರ ಬಗ್ಗೆ ತಿಳಿಸಲು ಸಾಧ್ಯವಿದೆ. ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಉನ್ನತ ಶಿಕ್ಷಣ 'ಏಕೆ' ಅಗತ್ಯ ಎಂಬುದನ್ನು ಚರ್ಚಿಸಿದ ಬಳಿಕ, ನಾವು ಈಗ ಉನ್ನತ ಶಿಕ್ಷಣಕ್ಕಾಗಿ 'ಏನು' ಮಾಡಬೇಕು ಎಂಬುದರತ್ತ ಗಮನ ಹರಿಸೋಣ.

ಮಕ್ಕಳಿಗಾಗಿ ಉತ್ತಮ ಗುಣಮಟ್ಟದ ಆರಂಭಿಕ ಬಾಲ್ಯದ ಶಿಕ್ಷಣ ನೀಡಬೇಕಾದರೆ ಶಾಲಾಪೂರ್ವ ಶಿಕ್ಷಣ ಏಕೆ,

ಯಾವಾಗ ಹಾಗೂ ಹೇಗೆ ನಡೆಯಬೇಕು ಎಂಬುದನ್ನು ಶೈಕ್ಷಣಿಕವಾಗಿ ಆಳವಾದ ಅಧ್ಯಯನ ನಡೆಸಿ ಹಾಗೂ ಸೈದ್ಧಾಂತಿಕವಾಗಿ ಬಲು ಶ್ರಮಿಸಿ ಅರಿತ ಅರಿವು ಅಗತ್ಯವಿದೆ. ಹೀಗಾಗಿ, ತರಬೇತಿ ಕಾರ್ಯಕ್ರಮದ ಸಾರ ಹಾಗೂ ಸ್ವರೂಪವು ಪ್ರತಿಯೊಂದು ಹಂತದ ವೃತ್ತಿಪರರ ನಿರೀಕ್ಷೆಗೆ ಪೂರಕವಾಗಿ ಇರಬೇಕಾಗುತ್ತದೆ. ಆದರೆ ತರಬೇತಿಯ ಕೇಂದ್ರ ಹಾಗೂ ಮೂಲಸ್ವರೂಪ ಮಾತ್ರ ಸಾಮಾನ್ಯವಾಗಿ ಇರಬೇಕು. ಮಕ್ಕಳ ಜತೆ ನೇರವಾಗಿ ಕೆಲಸ ಮಾಡುವುದು ಮಾತ್ರ ಎಲ್ಲ ಕಾರ್ಯಕ್ರಮಗಳಲ್ಲಿ ಕಾಣಿಸಬೇಕಾದ ಮಹತ್ವದ ಅಂಶವಾಗಿದೆ. ಈ ಕಾರ್ಯಕ್ರಮದ ಪ್ರಮುಖ ಭಾಗವೆಂದರೆ; ಇದರಲ್ಲಿ ಪಾಲ್ಗೊಳ್ಳುವವರು ಸಿದ್ಧಾಂತದಷ್ಟೇ ಸರಿಸಮನಾಗಿ ಮಕ್ಕಳ ಜತೆ ಕೈಜೋಡಿಸುವುದು, ಅವರನ್ನು ಪರಿಶೀಲಿಸುವುದು, ಮಕ್ಕಳನ್ನು ವಿಶ್ಲೇಷಿಸುವುದು, ಕಲಿಕಾ ಸಾಮಗ್ರಿಗಳನ್ನು ವಿನ್ಯಾಸ ಮಾಡುವುದು, ಕಾರ್ಯಕ್ರಮಗಳನ್ನು ರೂಪಿಸುವುದನ್ನೂ ನಿರ್ವಹಿಸಬೇಕು.

ಸಿದ್ಧಾಂತದ ಸ್ವರೂಪಗಳ ಸಾರವನ್ನು ಸ್ಥೂಲವಾಗಿ ಮೂರು ಕ್ಷೇತ್ರಗಳಾಗಿ ವಿಂಗಡಿಸಬಹುದು. ಅವುಗಳೆಂದರೆ, ಮಕ್ಕಳ ಬೆಳವಣಿಗೆಯನ್ನು ಅರಿಯುವುದು, ಚಿಕ್ಕ ವಯಸ್ಸಿನ ಮಕ್ಕಳಿಗೆ ಪಠ್ಯಕ್ರಮ ಹಾಗೂ ಮಕ್ಕಳ ಜತೆ ಕಾರ್ಯನಿರ್ವಹಿಸುವುದು. ಈ ಪ್ರತಿಯೊಂದು ವಿಶಾಲ ಕ್ಷೇತ್ರದಲ್ಲಿ ಒಂದಷ್ಟು ನಿರ್ದಿಷ್ಟ ಸ್ವರೂಪದ ಸೈದ್ಧಾಂತಿಕ ಸಾಮಗ್ರಿಯ ಮೇಲೆ ಗಮನವನ್ನು ಕೇಂದ್ರೀಕರಿಸಬೇಕಿದೆ. ಅವು: ಮಕ್ಕಳ ಬೆಳವಣಿಗೆ ಮತ್ತು ಪ್ರಗತಿಯನ್ನು ತಿಳಿದುಕೊಳ್ಳುವುದು; ಪ್ರಗತಿಯ ಕ್ಷೇತ್ರಗಳು; ಮಕ್ಕಳ ಕಲಿಕಾ ಪ್ರಕ್ರಿಯೆ; ಮಕ್ಕಳ ಮೇಲೆ ಪ್ರಭಾವ ಬೀರುವ ಅಂಶಗಳು; ಪುಟಾಣಿ ಮಕ್ಕಳ ಬಗ್ಗೆ ಬೋಧನಾ ತತ್ವಗಳು; ಮಕ್ಕಳ ಬೆಳವಣಿಗೆಯ ಸಿದ್ಧಾಂತಗಳು; ಹಾಗೂ ಪಾಲಕರು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ.

ಮಕ್ಕಳ ಜತೆ ಹಾಗೂ ಅವರಿಗಾಗಿ ಕೆಲಸ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ಮಗುವಿನ ಹಾಗೂ ಬಾಲ್ಯದ ಈ ಮೂಲಭೂತ ಅಂಶಗಳ ಬಗ್ಗೆ ತಿಳಿದುಕೊಂಡಿರಬೇಕು ಎಂಬುದನ್ನು ಸಂಶೋಧನೆ ಹಾಗೂ ಅನುಸರಣಾ ಕ್ರಮಗಳು ಸೂಚಿಸುತ್ತವೆ.

ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮದಲ್ಲಿ ಮಕ್ಕಳು ಹಾಗೂ ಪಠ್ಯಕ್ರಮದ ಜತೆ ಕೆಲಸ ಮಾಡುವಾಗ ಗಮನ ಹರಿಸಬೇಕಾದ ಇತರ ಮಹತ್ವದ ಅಂಶಗಳು: *ಮಕ್ಕಳ ಬೆಳವಣಿಗೆಗೆ ಮಾರ್ಗದರ್ಶನ, ವರ್ತನೆ ಹಾಗೂ ಪ್ರಗತಿ, ಮಕ್ಕಳ ಕಲಿಕೆ ಫಲಿತಾಂಶ ಹಾಗೂ ಸಂಬಂಧಿತ ಅನುಭವಗಳು, ಪಠ್ಯಕ್ರಮ ಹಾಗೂ ಮೌಲ್ಯಮಾಪನ, ಮಕ್ಕಳಿಗಾಗಿ ಸಂಗೀತ ಹಾಗೂ ಕಥಾ ಚಟುವಟಿಕೆ, ಪುಟ್ಟ ಮಕ್ಕಳ ಜತೆ ವ್ಯವಹರಿಸುವಾಗ ಸನ್ನಡತೆ, ಸಾಂಸ್ಕೃತಿಕ ಸಂದರ್ಭಗಳನ್ನು ಅರಿಯುವುದು, ಎರಡೂ ಲಿಂಗಗಳ ಮತ್ತು ವಿಶೇಷ ಮಕ್ಕಳ ಸಮಾವೇಶನ, ಪುಟ್ಟ ಮಕ್ಕಳ ಜತೆ ಸಂಶೋಧನೆ.*



ಈ ಪ್ರತಿಯೊಂದು ನಿರ್ದಿಷ್ಟ ಪಠ್ಯಭಾಗಗಳ ಜತೆ ಕೆಲಸ ಮಾಡುವ ಸಂದರ್ಭದಲ್ಲಿ ಎರಡು ಮಹತ್ವದ ಅಂಶಗಳನ್ನು ಒಂದಕ್ಕೊಂದು ಹೆಣೆಯಬೇಕಾಗುತ್ತದೆ: ಮಕ್ಕಳ ಸಾಮಾಜಿಕ ಸಾಂಸ್ಕೃತಿಕ ವೈವಿಧ್ಯ ಹಾಗೂ ಮಕ್ಕಳ ಜತೆ ಕೆಲಸ ಮಾಡುವಾಗಿನ ನೈತಿಕ ಪರಿಗಣನೆ. ಇಸಿಇ ಕಾರ್ಯಕ್ರಮ ಗಮನಿಸುವಾಗ ಪ್ರತಿಯೊಬ್ಬರೂ ಗ್ರಾಮೀಣ, ನಗರ, ಬುಡಕಟ್ಟು, ಕೌಟುಂಬಿಕ, ಜಾತಿ ವೈವಿಧ್ಯ, ವರ್ಗ, ಭಾಷೆ, ಲಿಂಗ ಸಮಾನತೆ ಇತ್ಯಾದಿಗಳಂಥ ವಿವಿಧ ಬಗೆಯ ಅಂಶಗಳನ್ನು ಪರಿಗಣಿಸಬೇಕು. ಶಾಲಾಪೂರ್ವ ವ್ಯವಸ್ಥೆಯಲ್ಲಿ ಮಕ್ಕಳ ಸಂಕೀರ್ಣ ವೈವಿಧ್ಯವನ್ನು ವೃತ್ತಿಪರರು ಅರಿಯುವಂತೆ ಶೈಕ್ಷಣಿಕ ಕಾರ್ಯಕ್ರಮವನ್ನು ರೂಪಿಸಿರಬೇಕು ಹಾಗೂ ಮಕ್ಕಳು ತಮ್ಮೊಂದಿಗೆ ತರುವ ವೈಯಕ್ತಿಕ ಭಿನ್ನತೆಯನ್ನು ಗೌರವಿಸಬೇಕು. ಎಲ್ಲ ಹಂತದ ವೃತ್ತಿಪರರಿಗೆ ಕೊಡುವ ಶಾಲಾಪೂರ್ವ ಶಿಕ್ಷಣದ ಎಲ್ಲ ಕಾರ್ಯಕ್ರಮಗಳೂ ಪ್ರತಿಯೊಂದು ಮಗುವನ್ನು ಗುರುತಿಸುವ, ಉತ್ತೇಜಿಸುವ ಸಂವೇದನಾಶೀಲತೆಯನ್ನು ಹೊಂದಿರಬೇಕು.

ಮಕ್ಕಳು ಮತ್ತು ಅವರ ಶಿಕ್ಷಣದಲ್ಲಿ ಕಾರ್ಯನಿರತರಾದ ವ್ಯವಸ್ಥೆಗಳು ವಿವಿಧ ಸಂದರ್ಭಗಳಲ್ಲಿ ಕ್ರಮಕೈಗೊಳ್ಳಲು ಭದ್ರವಾದ ನೈತಿಕ ಬುನಾದಿ ಹೊಂದಿರಬೇಕು. ಮಕ್ಕಳ ಜೊತೆ ಕೆಲಸ ಮಾಡುವಾಗ ನೈತಿಕ ವಿಧಾನವನ್ನು ಅನುಸರಿಸುವ, ಮತ್ತು ಇಕ್ಕಟ್ಟು ಸಂದರ್ಭದಲ್ಲಿ ನೈತಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಜನರ ಅಗತ್ಯವಿದೆ.

ಇದೆಲ್ಲಕ್ಕೂ ಹೆಚ್ಚಿನದಾಗಿ, ಮೇಲುಸ್ತುವಾರಿ ಸ್ಥಾನದಲ್ಲಿ ಇದ್ದು ಅನುಷ್ಠಾನ ಮಾಡುತ್ತ ಪರಿಶೀಲನೆ ನಡೆಸುತ್ತ ಪ್ರೇರೇಪಿಸುವವರು ಕಾರ್ಯವಿಧಾನದ ಬಗ್ಗೆ ಸೈದ್ಧಾಂತಿಕ ಹಾಗೂ ರಚನಾತ್ಮಕ ತಿಳಿವಳಿಕೆಯನ್ನು ಹೊಂದಿರಬೇಕು. ಮೇಲುಸ್ತುವಾರಿ ಹಾಗೂ ಮಾರ್ಗದರ್ಶನದ ನಡುವಿನ ವ್ಯತ್ಯಾಸವನ್ನು ಅವರು ತಿಳಿದುಕೊಂಡಿರಬೇಕು. ಈ ಎರಡೂ ಕಾರ್ಯಕ್ರಮದ ಅನುಷ್ಠಾನಕ್ಕೆ ಹೇಗೆ ನೆರವಾಗುತ್ತವೆ ಎಂಬುದನ್ನೂ ಅರಿತಿರಬೇಕು.

ಆರಂಭಿಕ ಬಾಲ್ಯದ ಶಿಕ್ಷಣದ ಕ್ಷೇತ್ರದ ಬಗ್ಗೆ ಚೆನ್ನಾಗಿ ತಿಳವಳಿಕೆಯಿದ್ದರೆ ಇಸಿಇ ಕಾರ್ಯಕ್ರಮಗಳ ರಚನೆ, ಜಾರಿ ಹಾಗೂ ಮೇಲುಸ್ತುವಾರಿ ಮೇಲೆ ಉತ್ತಮ ಪರಿಣಾಮ ಬೀರುತ್ತದೆ. ಅಂಗನವಾಡಿ, ಶಿಶುವಿಹಾರಗಳು ಅಥವಾ ನೀತಿ ರಚಿಸುವವರು ಮತ್ತು ಅದರ ಪ್ರಚಾರಕರು ಕೈಗೊಳ್ಳುವ ನಿರ್ಧಾರಗಳು ತಾತ್ಕಾಲಿಕ ಆಗಿರದೇ ಸಿದ್ಧಾಂತದ ತಳಹದಿ ಮೇಲೆ ವಾಸ್ತವಿಕವಾಗಿ ಸೂಕ್ತವಾಗಿ ಇರಬೇಕು. ವಾಸ್ತವಿಕ ನೆಲೆಗಟ್ಟಿನಲ್ಲಿ ಕೈಗೊಂಡ ಕಾರ್ಯಗಳು ಗಟ್ಟಿಯಾಗಿದ್ದು, ನಿರೀಕ್ಷಿತ ಉತ್ತಮ ಫಲಿತಾಂಶ ಕೊಡುತ್ತವೆ. ಇದು ಅಗತ್ಯವನ್ನು ಗುರುತಿಸುವಲ್ಲಿ ನೆರವಾಗಿ ಶಿಶುವಿಹಾರಗಳಲ್ಲಿ ಮಕ್ಕಳನ್ನು ಕೇವಲ ಶಾಲೆಗೆ ಸಿದ್ಧಗೊಳಿಸದೇ ಮಕ್ಕಳ 'ಸಮಗ್ರ ಬೆಳವಣಿಗೆ'ಯ ಕಾರ್ಯಕ್ರಮಗಳನ್ನು ರೂಪಿಸಿ ಮಕ್ಕಳಿಗೆ ಕೊಡಲು ಸಹಕಾರಿಯಾಗುತ್ತದೆ.

ಒಟ್ಟಾರೆ ಸಂಗ್ರಹಿಸಿ ಹೇಳಬಹುದಾದರೆ, ಮಗು ಹಾಗೂ ಅದರ ಸಮಗ್ರ ಬೆಳವಣಿಗೆಯು ಆರಂಭಿಕ ಬಾಲ್ಯದ ಶಿಕ್ಷಣದ ಪ್ರತಿಯೊಂದು ಪ್ರಕ್ರಿಯೆಯ ಕೇಂದ್ರಬಿಂದು ಆಗಿರುತ್ತದೆ. ನಮ್ಮ ಶ್ರೀಮಂತ ಸಾಂಸ್ಕೃತಿಕ ವಿಧಾನಗಳು ಈ ಕೆಲಸಕ್ಕೆ ಒಂದಷ್ಟು ಒಳನೋಟಗಳನ್ನು ಕೊಡುತ್ತವೆ. ಆದರೂ ಆರಂಭಿಕ ಬಾಲ್ಯದ ಶಿಕ್ಷಣದ ಅವಧಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ನೀಡಲು ವೃತ್ತಿಪರ ತರಬೇತಿ ಪಡೆದ ಪರಿಣಿತರು ಬೇಕಾಗುತ್ತದೆ. ಇದು ಇಸಿಇಯ ಎಲ್ಲ ಹಂತಗಳಲ್ಲೂ ಅಗತ್ಯ. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕು ಎಂಬ ನಮ್ಮ ನೀತಿ ನಿರೂಪಕರ ಉದ್ದೇಶ ಸ್ಪಷ್ಟವಾಗಿದೆ. ಇದಕ್ಕೆ ಇಸಿಸಿಇ ಕುರಿತ ರಾಷ್ಟ್ರೀಯ ನೀತಿಯ ಒಪ್ಪಿಗೆ ಕೂಡ ಸಿಕ್ಕಿದೆ. ಈ ನೀತಿಯ ಅನುಸಾರ ನಿಗದಿ ಮಾಡಿದ ಮಾನದಂಡಗಳನ್ನು ಸಾಧಿಸಲು ಈ ಕ್ಷೇತ್ರದಲ್ಲಿ ತರಬೇತಿ ಪಡೆದ ವೃತ್ತಿಪರರು ಅವಶ್ಯವಾಗಿಬೇಕು. ನಮ್ಮ ದೇಶದ ಉನ್ನತ ಶಿಕ್ಷಣವು ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ಶಿಕ್ಷಣವನ್ನುಅಧ್ಯಯನಕ್ಕೆ ಮುಖ್ಯವಾದ ಕ್ಷೇತ್ರಗಳೆಂದು ಗುರುತಿಸಿರುವುದು ಸಾಫಲ್ಯ ಕಂಡಿದೆ. ಆರಂಭಿಕ ಬಾಲ್ಯದ ಶಿಕ್ಷಣವನ್ನೂ ಹಾಗೆ ಸಫಲಗೊಳಿಸುವುದಕ್ಕೆ ಇದು ಸಕಾಲ.





ಫೋಟೋ ಕೃಪೆ: ಮೇದಕ್ ಇಸಿಇ ಇನಿಷಿಯೇಟಿವ್ ಟೀಮ್, ಅಜೀಂ ಪ್ರೇಮ್‌ಜಿ ಫೌಂಡೇಷನ್

**ಕಿನ್ನರಿ ಪಾಂಡ್ಯ** ಇವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಬೋಧಕರು ಮತ್ತು ಎಂಎ ವ್ಯಾಸಂಗ ಕ್ರಮದಲ್ಲಿ ಪಾಠಮಾಡುತ್ತಾರೆ. ಆರಂಭಿಕ ಬಾಲ್ಯದ ಶಿಕ್ಷಣ ಪ್ರಗತಿ ಪ್ರೇರಕ ತಂಡದ ಭಾಗವಾಗಿದ್ದಾರೆ. ತಮ್ಮ ಶೈಕ್ಷಣಿಕ ಕೆಲಸಗಳ ಜೊತೆ ಜೊತೆಗೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಜತೆ ಸೇರಿ ಕೆಲಸ ಮಾಡುತ್ತಿದ್ದಾರೆ. ಗುಜರಾತ್‌ನಲ್ಲಿ ಶಾಲಾ ಮೌಲ್ಯಮಾಪನ ವಿಧಾನಗಳನ್ನು ರೂಪಿಸಲು ನಡೆದ ಜಿಲ್ಲಾ ಮಟ್ಟದ ಪ್ರಯತ್ನದಲ್ಲಿ ಭಾಗಿಯಾಗಿದ್ದಾರೆ. ಉತ್ತರಾಖಂಡ ಹಾಗೂ ಛತ್ತೀಸಗಢದಲ್ಲಿ ಪಠ್ಯಕ್ರಮ ಕುರಿತು ನಡೆದ ಯೋಜನೆಯಲ್ಲಿ ಭಾಗಿದಾರರು. ಆಂಧ್ರಪ್ರದೇಶದಲ್ಲಿ ಐಸಿಡಿಎಸ್ ಕೇಂದ್ರಗಳ ಜತೆ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರನ್ನು ಸಂಪರ್ಕಿಸಲು ವಿಳಾಸ: kinnari@azimpremjifoundation.org

**ಜಿಗಿಶಾ ಶಾಸ್ತ್ರಿ** ಇವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಹಬೋಧಕರು ಮತ್ತು ಎಂಎ ವ್ಯಾಸಂಗ ಕ್ರಮದಲ್ಲಿ ಪಾಠಮಾಡುತ್ತಾರೆ. ಆಂಧ್ರ ಪ್ರದೇಶದಲ್ಲಿ ಐಸಿಡಿಎಸ್ ಅಂಗನವಾಡಿ ಕೇಂದ್ರಗಳ ಜತೆ ಚಿಕ್ಕಮಕ್ಕಳ ಬೆಳವಣಿಗೆ ಬಗ್ಗೆ ಪ್ರಗತಿ ಪ್ರೇರಕ ತಂಡದ ಜತೆ ಕೆಲಸ ಮಾಡಿದ್ದು, ಪುಟಾಣಿ ಮಕ್ಕಳ ಬೆಳವಣಿಗೆ ಸಂಬಂಧಿ ಉಪಕ್ರಮದಲ್ಲಿ ಹಲವು ಯೋಜನೆಗಳಲ್ಲಿ ಪಾಲ್ಗೊಂಡಿದ್ದಾರೆ. ಬರೋಡಾದ ಮಹಾರಾಜಾ ಸಯ್ಯಾಜಿರಾವ್ ವಿಶ್ವವಿದ್ಯಾಲಯದಲ್ಲಿ ಈ ಮೊದಲು ಸಹಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಯುನಿಸೆಫ್ ಗುಜರಾತ್ ಘಟಕಕ್ಕೆ ಇಸಿಇ ಸಲಹಾಗಾರರಾಗಿ ಸೇವೆ ಸಲ್ಲಿಸಿದ್ದಾರೆ. ತರಬೇತಿ, ಪಠ್ಯಕ್ರಮ ರಚನೆ, ಮೌಲ್ಯಮಾಪನ ಹಾಗೂ ಸಾಮಾಜಿಕ ಕ್ಷಮತೆ ಅವರ ಆಸಕ್ತಿಯ ಕ್ಷೇತ್ರಗಳು. ಇವರನ್ನು ಸಂಪರ್ಕಿಸಲು ವಿಳಾಸ jigisha.shastri@azimpremjifoundation.org



# ಬಾಲ್ಯದಲ್ಲಿ ಲಿಂಗ ಆಧಾರಿತ ಹಕ್ಕುಗಳು

**ಮೀನಾ ಸ್ವಾಮಿನಾಥನ್**

ಗರ್ಭಾಂಕುರದಿಂದ ಪ್ರಾರಂಭಿಸಿ ಆರು ವರ್ಷಗಳವರೆಗಿನ ಅವಧಿಯ ಬಾಲ್ಯಾವಸ್ಥೆಯನ್ನು ಮಾನವ ಬೆಳವಣಿಗೆಯ ಬಹು ಮುಖ್ಯವಾದ ಸಮಯ ಎಂದು ಪರಿಗಣಿಸಲಾಗುತ್ತದೆ. ಈ ಹಂತದಲ್ಲಿ ಅನುಭವಿಸುವ ತಿರಸ್ಕಾರ ಅಥವಾ ಅವಘಡಗಳು ಗಂಭೀರವಾದ ಹಾನಿಗೆ, ಕೆಲವೊಮ್ಮೆ ಶಾಶ್ವತವಾದಂತಹ ತೊಂದರೆಗೆ ಕಾರಣವಾಗಬಹುದು. ಲಿಂಗಾಧಾರಿತ ಪರಿಕಲ್ಪನೆ ಆಧಾರದ ಮೇಲೆ ಮಕ್ಕಳ ಹಕ್ಕಾಗಿ ಐದು ಅಂಶಗಳನ್ನು ಪರಿಕಲ್ಪಿಸಿಕೊಳ್ಳಬಹುದು. ಅಂದರೆ ಲಿಂಗ ತಾರತಮ್ಯವನ್ನು ಮಕ್ಕಳ ದೃಷ್ಟಿಕೋನದಲ್ಲಿ ನೋಡುವುದು.

1. ಮೊದಲನೆಯದಾಗಿ ಹೆಣ್ಣಾಗಿ ಹುಟ್ಟುವ ಹಕ್ಕು.
2. ಎರಡನೆಯದು ಆರೋಗ್ಯವಾಗಿ ಹುಟ್ಟುವ ಹಕ್ಕು.
3. ಮೂರನೆಯದಾಗಿ ತಾಯಿ ಹಾಲು ಸೇವನೆಯ ಹಕ್ಕು– ಎದೆಹಾಲು ಕುಡಿಯುವ ಮಗುವಿನ ಹಕ್ಕು ಮತ್ತು ಎದೆಹಾಲು ಕುಡಿಸಲು ತಾಯಿಯ ಹಕ್ಕು
4. ನಾಲ್ಕನೆಯದಾಗಿ ಎಳೆಯ ಮಗುವಾಗಿದ್ದಾಗಿನಿಂದಲೂ ಲಾಲನೆ ಪಾಲನೆ ಪಡೆಯುವ ಹಕ್ಕು (ಬೆಳವಣಿಗೆ ಮತ್ತು ಶಿಕ್ಷಣದ ಹಕ್ಕೂ ಸೇರಿಸಿ)
5. ಐದನೆಯದಾಗಿ ಮಗುವಿನ ಆರೈಕೆ ಮಾಡುವವರಿಗೆ ಮಾನ್ಯತೆ ಪಡೆಯಲು ಮತ್ತು ಪ್ರತಿಫಲ ಪಡೆಯಲು ಹಕ್ಕು

### 1. ಲಿಂಗ ಆಯ್ಕೆ

ಶಿಶು ಮತ್ತು ಮಕ್ಕಳ ಮರಣ ಪ್ರಮಾಣವು ಕಳೆದ ಕೆಲವು ದಶಕಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಶಿಶು ಮರಣ ಪ್ರಮಾಣವು ಸರಾಸರಿ 1971 ರಲ್ಲಿ 1,000 ಜನನಕ್ಕೆ 129 ಇದ್ದದ್ದು 2010ರಲ್ಲಿ ಇದು 1,000 ಜನನಕ್ಕೆ 47 ಆಗಿದೆ. ಮಕ್ಕಳ ಮರಣ ಪ್ರಮಾಣವು 1971ರಲ್ಲಿ ಸರಾಸರಿ 1000ಕ್ಕೆ 51.9 ಶೇಕಡಾ ಇದ್ದದ್ದು 2010ರಲ್ಲಿ 13.3ಕ್ಕೆ ಇಳಿದಿದೆ (ಭಾರತದ ಜನಗಣತಿ). ಕಳೆದ ನಲವತ್ತು ವರ್ಷಗಳಲ್ಲಿ ಲಿಂಗಾಧಾರಿತ ಮಕ್ಕಳ ಹಂಚಿಕೆಯ ಅನುಪಾತವನ್ನು ಗಮನಿಸಿದಾಗ ಅಸಮಾನ ಹಂಚಿಕೆಯ ಪ್ರಮಾಣವು ಗಣನೀಯವಾಗಿ ಹೆಚ್ಚಾಗಿರುವುದು ಕಂಡುಬರುತ್ತಿದೆ. ಪ್ರತಿ 1000 ಪುರುಷರಿಗೆ 962 ಮಹಿಳೆಯರ ಪ್ರಮಾಣವಿದ್ದದ್ದು 1991ರಲ್ಲಿ ಇದು 945/1000ಕ್ಕೆ ಆಗಿದೆ. 927/1000 2001ರಲ್ಲಿ ಮತ್ತು ಎಲ್ಲಕ್ಕಿಂತ ಕಡಿಮೆ ಅನುಪಾತವು 2011ರಲ್ಲಿ ಪ್ರತಿ 1000 ಪುರುಷರಿಗೆ 914 ಮಹಿಳೆಯರ ಅನುಪಾತವು (ಭಾರತದ ಜನಗಣತಿ) ಕಂಡುಬಂದಿದೆ. ಕಾಣೆಯಾಗುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆಯನ್ನು ಕುರಿತು ವಿವಿಧ ಸಂಘ ಸಂಸ್ಥೆಗಳು ಗಾಬರಿ ಹುಟ್ಟಿಸುವ ಅಂಕಿಅಂಶಗಳನ್ನು ನೀಡುತ್ತಿವೆ. 1 ರಿಂದ 15 ವರ್ಷ ವಯಸ್ಸಿನ ಸುಮಾರು 4.15 ಮಿಲಿಯನ್ ಹೆಣ್ಣುಮಕ್ಕಳು "ಅದೃಶ್ಯ"ವಾಗಿರುವ ಬಗ್ಗೆ ವರದಿಯಾಗಿದೆ (ಜೆಂಡರ್‌ಬೈಟ್ಸ್, ವರ್ಡ್‌ಪ್ರೆಸ್). ಲಿಂಗಾನುಪಾತದಲ್ಲಿ ಕಂಡುಬರುತ್ತಿರುವ ಈ ಕೊರತೆಗೆ ಈ ಹಿಂದಿನ ದಶಕಗಳಲ್ಲಿ ಕಂಡುಬಂದ ಹೆಣ್ಣು ಶಿಶುವಿನ ಹತ್ಯೆ ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಭ್ರೂಣಾವಸ್ಥೆಯಲ್ಲೇ ಲಿಂಗ ಆಯ್ಕೆಮಾಡಿ ತದನಂತರ ಗರ್ಭಪಾತ ಮಾಡುವುದು ಕಾರಣವಾಯಿತು. ಇದು ಯಾವ ಪ್ರಮಾಣದಲ್ಲಿ ಕಂಡುಬಂದಿತು ಎಂದರೆ, ಹೆಣ್ಣು ಮಗುವಿಗೆ ಹುಟ್ಟುವ ಹಕ್ಕು ಇದೆಯಾ ಎಂಬುದನ್ನು ಪ್ರಶ್ನಿಸುವ ಮಟ್ಟಕ್ಕೆ ಇದು ಬೆಳೆಯಿತು. ಇದು ಲಿಂಗ ತಾರತಮ್ಯದ ಪರಮಾವಧಿಯ ಉದಾಹರಣೆಯಾಯಿತು.

ಹುಟ್ಟುವ ಮಗುವಿನ ಲಿಂಗ ಆಯ್ಕೆಯು ಅದು ಹೆಣ್ಣೇ ಗಂಡೇ ಎಂಬುದನ್ನು ಆಧರಿಸಿದ್ದು, ಇದು ಮಗು ಹುಟ್ಟುವುದಕ್ಕಿಂತ ಮೊದಲೇ ನಿರ್ಧರಿತವಾಗುವುದರಿಂದ ಇದು ಮಗುವಿನ ಹಕ್ಕಿನ ಅಡಿಯಲ್ಲಿ ಬರುವುದಿಲ್ಲ ಬದಲಾಗಿ ಅದರ ತಾಯಿಯ ಹಕ್ಕಿಗೆ ಸಂಬಂಧಿಸಿದ್ದಾಗಿದೆ. ಗರ್ಭಪಾತ ಮಾಡಿಸಿಕೊಳ್ಳಲು ಮಹಿಳೆಯ ಹಕ್ಕನ್ನು ವೈದ್ಯಕೀಯವಾಗಿ ಗರ್ಭತೆಗೆಸುವ ಕಾಯಿದೆಯು ವಿವರಿಸುವ ಪ್ರಕಾರ ಮೂರು ಕಾರಣಗಳಿಗೆ ಗರ್ಭ ತೆಗೆಸುವ ಹಕ್ಕನ್ನು ಕಾನೂನಾತ್ಮಕವಾಗಿ ಒಪ್ಪಿಕೊಳ್ಳುತ್ತವೆ. ಆದರೆ ಇದರಲ್ಲಿ ಲಿಂಗ ನಿರ್ಧಾರದ ನಂತರ ಗರ್ಭಪಾತ ಮಾಡಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳಲಾಗುವುದಿಲ್ಲ. ಇನ್ನೂ ಹೆಚ್ಚಿನದಾಗಿ ಗರ್ಭಪೂರ್ವ ಮತ್ತು ಜನನ ಪೂರ್ವ ತಪಾಸಣೆ ತಂತ್ರಜ್ಞಾನ (PCPNDT) ಕಾಯಿದೆಯು ಸ್ಪಷ್ಟವಾಗಿ ಲಿಂಗ ಆಯ್ಕೆಯನ್ನು ನಿಷೇಧಿಸಲಾಗಿದೆ ಎಂದು ತಿಳಿಸುತ್ತದೆ. ಸತ್ಯ ಏನೆಂದರೆ ನಮ್ಮ ಸಮಾಜದಲ್ಲಿ ಹೆಣ್ಣುದೇವತೆಗಳನ್ನು ಹಾಡಿ ಆರಾಧಿಸುವ

ಪದ್ಧತಿ ಇದ್ದಾಗ್ಯೂ ಮನೋಭೂಮಿಕೆಯಲ್ಲಿ ಸಮಾಜವು ಹೆಚ್ಚು ಮಹಿಳಾ ವಿರೋಧಿಯಾಗಿರುವುದು ಕಂಡುಬರುತ್ತದೆ. ಹಲವಾರು ಮಹಿಳೆಯರು ಸ್ಪಷ್ಟವಾಗಿ ಹೇಳುವ ಪ್ರಕಾರ ಅವರು ಹೆಣ್ಣು ಮಗುವನ್ನು ಒಪ್ಪಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅವರು ಹೆಣ್ಣು ಮಗುವಿನ ಭ್ರೂಣ ಹತ್ಯೆಗೆ ಒಪ್ಪಿಕೊಳ್ಳುತ್ತಾರೆ ಏಕೆಂದರೆ ಅವರನ್ನು ಹಾಗೆ ಮಾಡಿಸಿಕೊಳ್ಳಲು ಒತ್ತಡ ತರಲಾಗಿರುತ್ತದೆ ಮತ್ತು ಅವರು ಅದನ್ನು ನಿರಾಕರಿಸುವ ಸ್ಥಿತಿಯಲ್ಲಿರುವುದಿಲ್ಲ.

ಅತಿ ಆಧುನಿಕ ತಂತ್ರಜ್ಞಾನವನ್ನು ಮಹಿಳೆಯರ ವಿರುದ್ಧ ಬಳಸಲಾಗುತ್ತಿದೆ ಎಂಬುದು ದುಃಖದಾಯಕವಾದರೂ ಸತ್ಯ. ವಿಜ್ಞಾನ ಯಾರ ಪರ ಅಥವಾ ಯಾರ ವಿರೋಧವೂ ಅಲ್ಲ ಇದು ನಿರ್ಲಿಪ್ತವಾಗಿದೆ ಎಂಬುದು ವಿಜ್ಞಾನಿಗಳ ವಾದ. ನಿಖರ ಅರ್ಥದಲ್ಲಿ ಇದನ್ನು ಒಪ್ಪಿಕೊಳ್ಳಬಹುದು, ಆದರೆ ವಿಜ್ಞಾನಿಗಳೂ ಕೂಡಾ ಮನುಷ್ಯರೇ ಮಾನವ ಸಮಾಜಕ್ಕೆ ಸೇರಿದವರೇ ಆಗಿದ್ದಾರೆ. ಅವರ ಮೌಲ್ಯಗಳು ಮತ್ತು ನಡತೆಗಳು ಒಂದು ನಂಬಿಕೆ ಮತ್ತು ಅವರು ಯಾವ ಸಮಾಜದ ಪ್ರಭಾವಕ್ಕೆ ಒಳಗಾಗಿರುತ್ತಾರೋ ಆ ಸಮಾಜದ ಅನುಭವವನ್ನು ಬಿಂಬಿಸುತ್ತಿರುತ್ತದೆ. ಗಮನಿಸಬೇಕಾದ ವಿಷಯವೆಂದರೆ ವೈದ್ಯವೃತ್ತಿ ಬಾಂಧವರಲ್ಲೂ ಕೆಲವೇ ಕೆಲವು ಮಂದಿ ಮಾತ್ರ ಈ ಅಪಾಯಕಾರಿ ರೂಢಿಯ ವಿರುದ್ಧ ಧ್ವನಿಯೆತ್ತಿದ್ದಾರೆ. ಹೆಚ್ಚು ಪ್ರಭಾವವನ್ನು ಹೊಂದಿರುವ ಖಾಸಗಿ ವಲಯದ ಹೆಚ್ಚಿನ ಎಲ್ಲರೂ ಈ ಅಪರಾಧವನ್ನು ಸಹಜವೆಂಬಂತೆ ರೂಢಿಸಿಕೊಂಡಿದ್ದಾರೆ ಎಂಬ ನಿರ್ಧಾರಕ್ಕೆ ಬಂದರೆ ತಪ್ಪಿಲ್ಲ ಎನಿಸುತ್ತದೆ.

CASSA (ಲಿಂಗ ನಿರ್ಧಾರಿತ ಗರ್ಭಪಾತದ ವಿರುದ್ಧ ಹೋರಾಟ) ದಿಂದ ಆಯೋಜಿಸಲಾಗಿದ್ದ ಅಭಿಯಾನದಲ್ಲಿ 90ನೇ ದಶಕದಲ್ಲಿ ತಮಿಳುನಾಡಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಆಗಾಗ ಗರ್ಭಾವಸ್ಥೆಯ ಸಮಯದಲ್ಲಿ ಅಲ್ಟ್ರಾ-ಸೋನಿಕ್ ಪರೀಕ್ಷೆಗಳನ್ನು (ಸಮರ್ಥಿಸಿಕೊಳ್ಳಬಲ್ಲ ಮತ್ತು ಸಮರ್ಥಿಸಿಕೊಳ್ಳಲಾರದ ಕಾರಣಗಳ ಮೇಲೆ) ನಡೆಸುವ ಮಹಿಳಾ ಗೈನಕಾಲಜಿಸ್ಟ್‌ಗಳಿಗೂ ಅಂಥ ಮಕ್ಕಳನ್ನು ಉಳಿಸಿ ಅವನ್ನು ರಕ್ಷಿಸಿ ಶಿಶುಗಳ ಆರೋಗ್ಯವನ್ನು ಉತ್ತಮವಾಗಿರಿಸಬೇಕೆನ್ನುವ ಪುರುಷ ವೈದ್ಯರಿಗೂ ಜಟಾಪಟಿ ಆಗುತ್ತಿತ್ತು.

ಇದರಲ್ಲಿದ್ದ ಇನ್ನೊಂದು ವಿಚಿತ್ರ ಅಂಶವೆಂದರೆ ಹೀಗೆ ಪರಸ್ಪರ ವಿರುದ್ಧವಾಗಿ ವಾದಿಸುವ ಈ ವೈದ್ಯರುಗಳು ದಂಪತಿಗಳಾಗಿರುತ್ತಿದ್ದರು. ಈ ವಿಷಯಗಳನ್ನು ಕುರಿತು ಚರ್ಚೆಯಲ್ಲಿ ಅವರ ವೈಯಕ್ತಿಕ ಜೀವನ ಕೂಡಾ ಹೈರಣಾಗಿದ್ದು ಕಂಡುಬಂದಿತ್ತು!

## 2. ಹುಟ್ಟಿದಾಗ ಕಡಿಮೆ ತೂಕ

ಪ್ರಪಂಚದಲ್ಲಿ ಸುಮಾರು ಶೇ 15 ಶಿಶುಗಳು ಹುಟ್ಟಿದಾಗ ಕಡಿಮೆ ತೂಕವನ್ನು (ಎಲ್‌ಬಿಡಬ್ಲ್ಯೂ) ಹೊಂದಿರುತ್ತಾರೆ. ಅಂದರೆ 2,500 ಗ್ರಾಂಗಳಿಗಿಂತಲೂ ಕಡಿಮೆ. ಇವುಗಳಲ್ಲಿ ಹೆಚ್ಚಿನವು ದಕ್ಷಿಣ ಏಷಿಯಾದಲ್ಲಿ ಮತ್ತು ಇವುಗಳಲ್ಲಿ ಶೇ 75 ಭಾರತದಲ್ಲಿ ಕಂಡುಬರುತ್ತಿದ್ದು ಹುಟ್ಟಿದಾಗ ಕಡಿಮೆ ತೂಕ ಹೊಂದಿರುವ ಮಕ್ಕಳ ಸಂಖ್ಯೆಗೆ ಪ್ರತಿವರ್ಷ 8.3 ಮಿಲಿಯನ್‌ನಷ್ಟು ಸೇರ್ಪಡೆಯಾಗುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ಈ ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ. (ಯೂನಿಸೆಫ್ 2006) NFHS III ಅಂದಾಜು ಮಾಡಿರುವ ಪ್ರಕಾರ 2005-06ರಲ್ಲಿ ಸುಮಾರು ಶೇ 21 ರಷ್ಟು ಕಡಿಮೆ ತೂಕವನ್ನು ಹೊಂದಿರುವ ಮಕ್ಕಳ ಜನನವಾಗಿದೆ. ಕಡಿಮೆ ತೂಕದ ಮಕ್ಕಳ ಜನನವಾಗಲು ಮುಖ್ಯ ಕಾರಣ ಗರ್ಭಾವಸ್ಥೆಯ ಸಮಯದಲ್ಲಿ ಪೋಷಕಾಂಶದ ಆಹಾರ ಸರಿಯಾಗಿ ಸಿಗದಿರುವುದು, ಅದರಲ್ಲಿಯೂ ಗರ್ಭಾವಸ್ಥೆಯ ಮೂರನೇ ತ್ರೈಮಾಸಿಕದ ಅವಧಿಯಲ್ಲಿ ಸರಿಯಾದ ಆಹಾರ ಲಭ್ಯವಾಗದಿರುವುದು ಇದಕ್ಕೆ ಕಾರಣವಾಗಿರುತ್ತದೆ. ಇದು ಹಲವಾರು ಬಾಧಕ ಅಂಶಗಳಿಗೆ ಕಾರಣವಾಗುತ್ತದೆ ಅಂದರೆ – ಮೆದುಳಿನ ಬೆಳವಣಿಗೆ, ದೇಹದ ಬೆಳವಣಿಗೆ ಮತ್ತು ದೇಹದ ಸಂಯೋಜನೆ, ಚಯಾಪಚಯ ಬೆಳವಣಿಗೆಯ ಮೇಲೆ ಪರಿಣಾಮ ಬೀರುವುದರಿಂದ ಇದು ಮಗುವಿನ ಚಲನೆಯ ಮೇಲೆ ಪರಿಣಾಮ ಬೀರುತ್ತದೆ, (ಭವಿಷ್ಯದಲ್ಲಿ ಶಿಕ್ಷಣ ವಿಷಯದಲ್ಲಿ ಸಾಮರ್ಥ್ಯ ತೋರ್ಪಡಿಕೆಯ ಮೇಲೆ ಸಹ ಪರಿಣಾಮ ಬೀರುತ್ತದೆ) ಅಲ್ಲದೆ ರೋಗ ನಿರೋಧಕಶಕ್ತಿ ಮತ್ತು ಕಾರ್ಯನಿರ್ವಹಣೆಯ ಸಾಮರ್ಥ್ಯದ ಮೇಲೆ ದೀರ್ಘಾವಧಿಯ ಪರಿಣಾಮ ಬೀರುತ್ತದೆ. ಇದು ನಮ್ಮಲ್ಲಿರುವ 'ಅಪ್ಪ ಮಾಡಿದ ಪಾಪ ಮಗ ಹೊರಬೇಕು' ಎಂಬ ಹಳೆಯ ಗಾದೆಯೊಂದರ ಅಕ್ಷರಶಃ ನಿಜರೂಪವಾಗಿದೆ. ಅಂದರೆ ಅಪ್ಪನಾದವನು ಗರ್ಭಿಣಿಯಾಗಿದ್ದ ತಾಯಿಗೆ ಅಗತ್ಯವಿರುವ ಸಮಯದಲ್ಲಿ ಸರಿಯಾದ ಆಹಾರವನ್ನು ನೀಡದಿದ್ದಲ್ಲಿ ಅದರಲ್ಲಿಯೂ ಕೊನೆಯ ತ್ರೈಮಾಸಿಕದಲ್ಲಿ ಸರಿಯಾದ ಪೋಷಣೆ ನೀಡದಿದ್ದಲ್ಲಿ, ಕಡಿಮೆ ತೂಕದ ಮಗು ಜನಿಸಲು ಕಾರಣವಾಗುತ್ತದೆ.

ಕಡಿಮೆ ತೂಕದಲ್ಲಿ ಜನಿಸುವ ಮಕ್ಕಳನ್ನು ಕುರಿತು ಅವರ ಮುಂದಿನ ಜೀವನದ ಮೇಲೆ ಅದರ ಪರಿಣಾಮದ ಬಗ್ಗೆ ಕೆಲವೇ ಕೆಲವು ದೀರ್ಘಕಾಲದ ಅಧ್ಯಯನಗಳು ನಡೆದಿವೆ. ಕಡಿಮೆ ತೂಕದಲ್ಲಿ ಜನಿಸಿದ ಮಕ್ಕಳಿಗೆ ಭವಿಷ್ಯದಲ್ಲಿ ಅವರ ಬೆಳವಣಿಗೆಯ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ ಎಂಬುದನ್ನು ಕಂಡುಕೊಳ್ಳುವುದು ಸಾಧ್ಯವಾಗಿಲ್ಲ. ಕಡಿಮೆ ತೂಕದಲ್ಲಿ ಜನಿಸಿದ ಮಗುವನ್ನು ಅದರ ಸಮಸ್ಯೆ ಪರಿಹರಿಸದೇ ಭವಿಷ್ಯದಲ್ಲಿ ಉಂಟಾಗುವ ತೊಂದರೆಗಳನ್ನು ಗಮನಿಸಲು ಚಿಕಿತ್ಸೆ ನೀಡದೇ ಹಾಗೆಯೇ ಬಿಡುವುದು ಮಾನವೀಯತೆಯ ದೃಷ್ಟಿಯಲ್ಲಿ ತಪ್ಪಾಗುತ್ತದೆ. ಅದೇನೆ

ಇದ್ದರೂ, ಡಯಾಬಿಟಿಸ್, ಸ್ಥೂಲಕಾಯ, ಅಧಿಕ ರಕ್ತದ ಒತ್ತಡ ಮತ್ತು ಹೃದಯ ರೋಗ ಮುಂತಾದವುಗಳು ಕಂಡುಬರಲು ಇದು ಕಾರಣವಾಗುವ ಸಾಧ್ಯತೆಗಳು ಇವೆ ಎಂಬುದನ್ನು ಇತ್ತೀಚಿನ ಕೆಲವು ಸಂಶೋಧನೆಗಳಿಂದ ತಿಳಿದುಕೊಳ್ಳಲಾಗಿದೆ (Bhat et al, 2013.) Barker et al (2007). ಬಾರ್ಕರ್ ಎಂಬುವವರು ಹೆಲ್ಸೆಂಕಿಯಲ್ಲಿ ಒಂದು ಜನಸಮುದಾಯವನ್ನು ಗಮನಿಸುತ್ತಿದ್ದರು ಇವರ ಪ್ರಕಾರ ಹುಟ್ಟಿದಾಗ ಅತಿ ಕಡಿಮೆ ತೂಕವನ್ನು ಹೊಂದಿರುವವರು 3–11 ವರ್ಷಗಳಲ್ಲಿ ಉತ್ತಮ ಬೆಳವಣಿಗೆಯನ್ನು ಹೊಂದಿದ್ದರೂ ಕೂಡಾ ಮುಂದಿನ ಜೀವನದಲ್ಲಿ ಒತ್ತಡದ ಜೀವನಕ್ಕೆ ಹೊಂದಿಕೊಳ್ಳದಿರುವುದು ಕಂಡುಬಂದಿದೆ. ಚೌದರಿಯವರು (2004 ರಲ್ಲಿ) ಹುಟ್ಟಿದಾಗ ಕಡಿಮೆ ತೂಕವನ್ನು ಹೊಂದಿರುವ ಕೆಲವರು ಕಡಿಮೆ ಜ್ಞಾನ, ಕಾಣುವ ಚಲನೆಯ ಸಾಮರ್ಥ್ಯ, ಶಾಲೆಯಲ್ಲಿ ಕಡಿಮೆ ಪ್ರಮಾಣದ ಸಾಮರ್ಥ್ಯವನ್ನು ತೋರ್ಪಡಿಸಿರುವುದು ಕಂಡುಬಂದಿದೆ. ಓದುವಿಕೆಯಲ್ಲಿ ಮತ್ತು ಗಣಿತ ಕಲಿಕೆಯಲ್ಲಿ ಕಡಿಮೆ ಪ್ರಮಾಣದ ಸಾಮರ್ಥ್ಯವನ್ನು ಉಳಿದ ಮಕ್ಕಳಿಗೆ ಹೋಲಿಸಿದರೆ ನೀಡಿರುವುದು ಕಂಡುಬಂದಿದೆ. ಆದ್ದರಿಂದ, ಬಾಲ್ಯದಲ್ಲಿ, ಶಾಲೆಯ ಸಮಯದಲ್ಲಿ ಮತ್ತು ಮುಂದಿನ ಜೀವನವನ್ನು ಕಡಿಮೆ ತೂಕದ ಜನನ ಹಾಗೂ ಗರ್ಭಾವಸ್ಥೆಯ ಸಮಯದಲ್ಲಿ ಪೋಷಕಾಂಶಗಳನ್ನು ಸರಿಯಾಗಿ ನೀಡದಿರುವುದು ಕಾರಣ ಎಂಬುದು ಕೂಡಾ ಅಂಗ ತಾರತಮ್ಯದ ಒಂದು ಸಹವರ್ತಿ ಸೂಚಕವಾಗಿದೆ. ಇಲ್ಲಿ ಗಮನಿಸಬೇಕಾಗಿರುವುದೆಂದರೆ ಈ ರೀತಿಯ ತಾರತಮ್ಯವು ಪ್ರಾರಂಭಿಕ ಜೀವನದಲ್ಲಿ ಕಂಡುಬರುತ್ತದೆ, ಅಂದರೆ ಹುಟ್ಟುವುದಕ್ಕಿಂತಲೂ ಮೊದಲೇ ಪ್ರಾರಂಭವಾಗುತ್ತದೆ ಆದರೂ ದೀರ್ಘಾವಧಿಯ ಪರಿಣಾಮವನ್ನು ಹೊಂದಿರುತ್ತದೆ.

### 3. ಎದೆಹಾಲು ಕುಡಿಸುವುದು

ಶಿಶುಗಳಿಗೆ ಎದೆಹಾಲು ಕುಡಿಸುವುದನ್ನು ಈಗ ಎಲ್ಲರೂ ಶಿಫಾರಸ್ಸು ಮಾಡುತ್ತಾರೆ. ಮಗು ಹುಟ್ಟಿದ ಸಮಯದಿಂದ ಆರು ತಿಂಗಳವರೆಗೆ ಎದೆಹಾಲನ್ನು ಮಾತ್ರ ಕುಡಿಸುವುದು ಮತ್ತು ನಂತರದಲ್ಲಿ ಎರಡು ವರ್ಷಗಳವರೆಗೆ ಹೆಚ್ಚುವರಿ ಆಹಾರದೊಂದಿಗೆ ಇದನ್ನು ಮುಂದುವರೆಸಬಹುದಾಗಿದೆ. ಇದನ್ನು ವಿಶ್ವ ಆರೋಗ್ಯ ಸಂಸ್ಥೆ (WHO) ಯು ಶಿಫಾರಸ್ಸು ಮಾಡಿದೆ. ಆದರೂ ಭಾರತದಲ್ಲಿ ಎದೆಹಾಲು ಕುಡಿಸುವ ಪ್ರಮಾಣದ ದರವು ಅತಿ ಕಡಿಮೆಯಾಗಿದೆ.

**ವಯಸ್ಸಿಗನುಗುಣವಾಗಿ ಎದೆಹಾಲು ಕುಡಿಸುವ ಪ್ರಮಾಣ (ತಾಯಿಯ ಜೊತೆಗೆ ಬದುಕುತ್ತಿರುವ 3 ವರ್ಷ ವಯಸ್ಸಿನ ಮಕ್ಕಳು)**

| ವಯಸ್ಸು (ತಿಂಗಳುಗಳು) | ಎದೆಹಾಲು ಕುಡಿಸದೇ ಇರುವುದು | ಕೇವಲ ಎದೆಹಾಲು ಮಾತ್ರ ಕುಡಿಸುತ್ತಿರುವುದು | ಎದೆ ಹಾಲಿನ ಜೊತೆಗೆ ಕೇವಲ ನೀರು | ಹಾಲಲ್ಲದ ದ್ರವ/ಜ್ಯೂಸ್ | ಇತರೆ ಹಾಲು | ಹೆಚ್ಚುವರಿ ಆಹಾರಗಳು |
|---|---|---|---|---|---|---|
| <2 | 2.7 | 69 | 16.2 | 2.6 | 7.8 | 1.7 |
| 2 – 3 | 1.5 | 50.9 | 23.1 | 4.9 | 14.6 | 5.0 |
| 4-5 | 1.5 | 27.6 | 25.6 | 6.4 | 20.2 | 18.6 |
| 6-8 | 4.0 | 9.7 | 18.8 | 3.2 | 11.6 | 52.7 |

*ಎದೆಹಾಲು ಕುಡಿಯುವ ಮಕ್ಕಳಿಗೆ 24 ಗಂಟೆಗಳಲ್ಲಿ ಎದೆಹಾಲು ಕುಡಿಸಿದ ಪ್ರಮಾಣವನ್ನು (ನಿನ್ನೆ ಹಗಲು ಮತ್ತು ಹಿಂದಿನ ದಿನದ ರಾತ್ರಿ) ಇಲ್ಲಿ ನೀಡಲಾಗಿದೆ. ಮಕ್ಕಳನ್ನು ಎದೆಹಾಲು ಕುಡಿಸುವ ಮತ್ತು ಕೇವಲ ನೀರು ಕುಡಿಯುವ ಮಕ್ಕಳು ಎಂದು ವಿಂಗಡಿಸಲಾಗಿದೆ. ಯಾವುದೇ ದ್ರವ ಅಥವಾ ಗಟ್ಟಿ ಪದಾರ್ಥವನ್ನು ನೀಡಲಾಗಿಲ್ಲ. ಎದೆಹಾಲು ಕುಡಿಸದಿರುವುದು, ಕೇವಲ ಎದೆಹಾಲು ಮಾತ್ರ ಕುಡಿಸಿರುವುದು, ಎದೆಹಾಲು ಕುಡಿಸಿರುವುದು ಮತ್ತು ಬರೀ ನೀರನ್ನು ಕುಡಿಸಿರುವುದು, ಹಾಲಿನ ಹೊರತಾದ ದ್ರವ/ಜ್ಯೂಸ್, ಇತರೆ ಹಾಲು ಮತ್ತು ಹೆಚ್ಚುವರಿ ಆಹಾರ(ಘನ ಮತ್ತು ಅರ್ಧಘನ) ಪ್ರಮಾಣವು ಶ್ರೇಣಿಕೃತವಾಗಿದೆ ಮತ್ತು ಅವರ ಶೇಕಡಾ ಪ್ರಮಾಣವು ಶೇಕಡಾ 100ರಷ್ಟು ಆಗುತ್ತದೆ.(NFHS III, 2006)*

ನಿರಂತರವಾಗಿ ಎದೆಹಾಲು ಕುಡಿಸಲು ತಾಯಿ ಮತ್ತು ಮಗುವು ದಿನಪೂರ್ತಿ ಜೊತೆಯಲ್ಲಿರಬೇಕಾಗುತ್ತದೆ. ಬೆಳೆಯುತ್ತಿರುವ ಮಗುವಿಗೆ ಹಾಲುಣಿಸಲು ಯಾವುದೇ ನಿರ್ದಿಷ್ಟವಾದ ಅವಧಿ ಇಲ್ಲದೆ ಇರುವುದು ಹಾಗೂ ತಾಯಿ ಮಗುವಿನ ಬಾಂಧವ್ಯ ಉತ್ತಮವಾಗಲು ಇದು ಅತ್ಯಗತ್ಯವಾಗುತ್ತದೆ. ಅಲ್ಲದೆ ಇದು ಮಗುವಿನ ಮಾನಸಿಕ–ಸಾಮಾಜಿಕ ಅಭಿವೃದ್ಧಿಗೆ ತುಂಬಾ ಮುಖ್ಯವಾಗಿರುತ್ತದೆ.

ಆದರೆ ಇದು ಇಂದಿನ ವೃತ್ತಿನಿರತ ಬಡಮಹಿಳೆಯರಿಗೆ ಸಾಧ್ಯವಿಲ್ಲ. ಮಹಿಳೆಯರು ಅನಿವಾರ್ಯವಾಗಿ ಸಂಪಾದನೆ ನೀಡುವ ಮತ್ತು ನೀಡದಿರುವ ಉತ್ಪಾದಕ ಕೆಲಸಗಳಲ್ಲಿ ನಿರತರಾಗಬೇಕಾಗುತ್ತದೆ. ಅಂದರೆ ತಮ್ಮ ವೃತ್ತಿಯನ್ನು ಮಾತ್ರವಲ್ಲದೆ ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳುವುದು, ಗಂಡ ಹಾಗೂ ವಯಸ್ಸಾದವರ ಕುರಿತು ಕಾಳಜಿವಹಿಸುವುದು ಅಲ್ಲದೆ ಮನೆಯಲ್ಲಿ ಸಾಕಿರುವ ಪ್ರಾಣಿಗಳನ್ನು ಕುರಿತು ಕೂಡಾ

ಲಕ್ಷ್ಯವಹಿಸಬೇಕಾದ ಜವಾಬ್ದಾರಿ ಅವರಿಗಿರುತ್ತದೆ. ಇವೆಲ್ಲವೂ ಅವರ ದಿನದ ಸಮಯವನ್ನು ಆವರಿಸಿಕೊಂಡಿರುತ್ತದೆ. ಇಷ್ಟೆಲ್ಲ ಜವಾಬ್ದಾರಿಗಳಿದ್ದರೂ 'ಮಹಿಳೆಯ ಆದಾಯ ನೀಡದ ಆರೈಕೆಯ ಕೆಲಸ' ಎಂಬ ಪರಿಕಲ್ಪನೆಯು ಇತ್ತೀಚೆಗೆ ಬೆಳಕು ಕಾಣುತ್ತಿದೆ. ಮಹಿಳೆ ಈ ಕಾರ್ಯದಲ್ಲಿ ಸಕ್ರಿಯವಾಗಿರುವ ಅವಧಿ, ಪ್ರಮಾಣ ಮತ್ತು ವೈವಿಧ್ಯತೆಯನ್ನು ಈಗ ಮೌಲ್ಯಮಾಪನಕ್ಕೊಳಪಡಿಸಬೇಕಾಗಿದೆ. ಬಳಕೆಯಾದ ಸಮಯ ಅಧ್ಯಯನ ಎಂಬ ಸಂಶೋಧನಾ ವಿಧಾನವು ಈ ಅದೃಶ್ಯ ಕೆಲಸದ ಹೊರೆಯನ್ನು ಅಳೆಯಲು ಸಮರ್ಪಕವಾದ ಒಂದು ವಿಧಾನ. ಆದರೆ ಇದನ್ನು ಅತೀ ಕಡಿಮೆ ಪ್ರಮಾಣದಲ್ಲಿ ಇಲ್ಲಿಯವರೆಗೆ ಬಳಸಲಾಗಿದೆ. ಏನೇ ಇರಲಿ ಇದು ನೀಡುವ ಕೆಲವು ಅಂಶಗಳು ಆಶ್ಚರ್ಯ ಎನಿಸುವಂತಿವೆ, ಉದಾಹರಣೆಗೆ ಭಾರತೀಯ ಪುರುಷರು ದಿನಕ್ಕೆ ಎರಡು ತಾಸುಗಳ ವಿಶ್ರಾಂತಿ ಅವಧಿಯನ್ನು ಹೊಂದಿದ್ದರೆ, ಮಹಿಳೆಯರು ದಿನದಲ್ಲಿ ಕೇವಲ 5 ನಿಮಿಷಗಳ ಅವಧಿಯನ್ನು ವಿಶ್ರಾಂತಿಗಾಗಿ ಹೊಂದಿದ್ದಾರೆ. ಸಾಮಾನ್ಯ ಭಾರತೀಯ ಪುರುಷ ದಿನಕ್ಕೆ 9 ತಾಸು ದುಡಿದರೆ, ಸಾಮಾನ್ಯ ಭಾರತೀಯ ಮಹಿಳೆಯು ದಿನಕ್ಕೆ 14 ತಾಸು ಕೆಲಸ ಮಾಡುತ್ತಾಳೆ. ಹೀಗಿರುವಾಗ ಮಹಿಳೆಯರಿಗೆ ಮಗುವಿಗೆ ಎದೆಹಾಲು ಕುಡಿಸುವುದಕ್ಕಾಗಿಯೇ ಸಮಯ ಸಿಗುವುದು ಎಲ್ಲಿ ಸಾಧ್ಯ?

ಉದಾಹರಣೆಗೆ, ಹೆರಿಗೆ ಸೌಲಭ್ಯ ಕಾಯಿದೆಯು ಕೆಲಸಕ್ಕೆ ಹೋಗುತ್ತಿರುವ ಕೇವಲ ಶೇಕಡಾ 11 ರಷ್ಟು ಮಹಿಳೆಯರಿಗೆ ಮಾತ್ರ ಅನ್ವಯವಾಗುತ್ತದೆ. ಈ ಹೆರಿಗೆ ಸೌಲಭ್ಯಗಳು ಕೇವಲ ಸಂಘಟಿತ ವಲಯದಲ್ಲಿ ಕಾರ್ಯ ನಿರ್ವಹಿಸುವ ಮಹಿಳೆಯರಿಗೆ ಮಾತ್ರ ಅಲ್ಲದೆ ಉಳಿದ ಮಹಿಳೆಯರಿಗೂ ಅನ್ವಯವಾಗಬೇಕು. ಹಾಗಾದರೆ ಮಾತ್ರ ತಮ್ಮ ಕೆಲಸದ ಒತ್ತಡದಿಂದ ತಾಯಂದಿರು ಬಿಡುವಾಗುವ ಸಾಧ್ಯತೆ ಇದೆ ಹಾಗೂ ಸಮರ್ಪಕವಾಗಿ ಮಗುವಿಗೆ ಎದೆಹಾಲು ಕುಡಿಸಲು ಸಾಧ್ಯವಿದೆ ಮತ್ತು ಮಗು ಹಾಗೂ ತಾಯಿಯ ಬಾಂಧವ್ಯ ಗಟ್ಟಿಯಾಗುವುದು ಸಾಧ್ಯವಿದೆ. ರಾಷ್ಟ್ರೀಯ ಆಹಾರ ಸುರಕ್ಷತಾ ಕಾಯ್ದೆ (2013) ಯು ಮೊಟ್ಟಮೊದಲ ಬಾರಿಗೆ ಎಲ್ಲ ಮಹಿಳೆಯರಿಗೂ ಒಂಬತ್ತು ತಿಂಗಳವರೆಗೆ ಹೆರಿಗೆ ಸೌಲಭ್ಯವನ್ನು ಒದಗಿಸಲು ಸೂಚಿಸುತ್ತದೆ (ಗರ್ಭಿಣಿಯಾಗಿರುವ ಕೊನೆಯ ಮೂರು ತಿಂಗಳು ಮತ್ತು ಮಗುವಿನ ಜನನದ ನಂತರದ ಕೊನೆಯ ಆರು ತಿಂಗಳು). ಆದರೆ ಇದರ ಪ್ರಕಾರ ಹೇಳಲಾದ ರೂ.1000ಕ್ಕಿಂತ ಕಡಿಮೆ ಇಲ್ಲದಂತೆ ನೀಡಬೇಕೆನ್ನುವ ಭತ್ಯೆಯು ಯಾವ ಮಹಿಳೆಯೂ ಒಂಬತ್ತು ತಿಂಗಳು ಕೆಲಸ ಬಿಡಲು ಸಮರ್ಪಕವಾಗುವಷ್ಟು ಇಲ್ಲ. ಇನ್ನೊಂದು ಕಠೋರ ಸತ್ಯ ಎಂದರೆ ಆಕೆ ತಾಯಿ ಎಂದು ಗುರುತಿಸಿಕೊಳ್ಳುವವರೆಗೆ ಮಾತ್ರ ಆಕೆಗೆ ಹೆರಿಗೆ ಸೌಲಭ್ಯಗಳು ಲಭ್ಯವಾಗುತ್ತವೆ. ಆದರೆ ಆಕೆ ಮಗುವಿಗೆ ಸತತವಾಗಿ ಹಾಲುಣಿಸಲು ಬೇಕಾಗುವ ಸೌಲಭ್ಯಗಳು ದೊರೆಯುವುದು ಸುಲಭ ಸಾಧ್ಯವಲ್ಲ. 'ಮಹಿಳೆಯ ಆದಾಯ ನೀಡದ ಆರೈಕೆಯ ಕೆಲಸ'ಕ್ಕೆ ಸಂಬಂಧಿಸಿದಂತೆ ಸರಿಯಾದ ವ್ಯವಸ್ಥೆ ಆಗುವವರೆಗೆ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ದೊರೆಯುವುದು ಕಷ್ಟಸಾಧ್ಯ.

### 4. ಡೇ ಕೇರ್


ನಾಲ್ಕನೇ ಅಂಶವು ಕುಟುಂಬವನ್ನು ಮೀರಿ ಬೆಳೆದಿರುವ ಸಮಸ್ಯೆಯಾಗಿದೆ. ಎಲ್ಲ ತಾಯಂದಿರಿಗೂ ಉತ್ತಮ ಸೌಲಭ್ಯವಿರುವ ಡೇ ಕೇರ್ (ಶಿಶು ಪಾಲನಾ ಕೇಂದ್ರ) ಒದಗಿಸುವುದು ಈ ಸಮಸ್ಯೆಯಾಗಿದೆ. ಎರಡು ವರ್ಷಕ್ಕೂ ಕೆಳಗಿನ ವಯಸ್ಸಿನ ಮಕ್ಕಳಿಗೆ ಪರಿಪೂರ್ಣ ಪ್ರಮಾಣದ ಹಾಗೂ ಗುಣಮಟ್ಟದ ಆಹಾರವನ್ನು ಒದಗಿಸಿಕೊಡಬೇಕಾಗುತ್ತದೆ. ಅಲ್ಲದೆ ದಿನದ ಸಮಯದಲ್ಲಿ ನಿರಂತರವಾಗಿ ನಿಗದಿತ ಬಿಡುವಿನ ಸಮಯದಲ್ಲಿ ಎದೆಹಾಲು ಕುಡಿಸಲು ಅಗತ್ಯವಾಗುವಂತಹ ವಾತಾವರಣವನ್ನು ನಿರ್ಮಿಸಿಕೊಡಬೇಕಾಗುತ್ತದೆ. ನಾಲ್ಕರಿಂದ ಐದು ಬಾರಿ ದಿನಕ್ಕೆ ಹಾಲುಣಿಸಬೇಕಾಗುತ್ತದೆ. ಪ್ರತಿ ಬಾರಿ ಕನಿಷ್ಠವೆಂದರೂ 20 ನಿಮಿಷಗಳ ಅಗತ್ಯವಿರುತ್ತದೆ. ಇದಲ್ಲದೆ ಅದಕ್ಕೆ ತಯಾರಿ, ಸಂಗ್ರಹಿಸಿಕೊಳ್ಳುವುದು ಮತ್ತು ಅಗತ್ಯವಿದ್ದರೆ ಬಿಸಿಮಾಡಿಕೊಳ್ಳುವುದು ಮುಂತಾದವುಗಳಿಗೆ ಸುಮಾರು 2-3 ತಾಸುಗಳ ಅಗತ್ಯವಿರುತ್ತದೆ. ಇವೆಲ್ಲಕ್ಕೂ ಯಾವ ವೃತ್ತಿನಿರತ ಮಹಿಳೆಯು ಸಮಯ ಹೊಂದಿಸಿಕೊಳ್ಳುವುದು ಸಾಧ್ಯವಿದೆ? ಹಲವಾರು ಕೆಲಸಕ್ಕೆ ಹೋಗುವ ಮಹಿಳೆಯರು ಬಹಳ ಸಮಯದವರೆಗೆ ಮನೆಯಿಂದ ಹೊರಗೆ ಇರುತ್ತಾರೆ. ಹೆಚ್ಚಾಗಿ ಎಳೆಯಮಕ್ಕಳನ್ನು ಅದರ ಅಣ್ಣನ ಅಥವಾ ಅಕ್ಕನ ಜೊತೆ ಬಿಟ್ಟು ಹೋಗಿರುತ್ತಾರೆ. ಇದು ಮಕ್ಕಳ ಪೋಷಕಾಂಶ ಕೊರತೆ, ವಿವಿಧ ರೋಗಗಳು ಮತ್ತು ಕೆಲವೊಮ್ಮೆ ಸಾವಿಗೂ ಕಾರಣವಾಗಬಹುದಾಗಿದೆ. ಅಲ್ಲದೆ ಮಗುವನ್ನು ನೋಡಿಕೊಳ್ಳುತ್ತಿರುವ ದೊಡ್ಡಮಗುವಿನ ಶೈಕ್ಷಣಿಕ ಹಿನ್ನೆಡೆಗೆ ಕೂಡಾ ಇದು ಕಾರಣವಾಗಬಹುದು. ಆಹಾರ ಮಗುವಿನ ಪ್ರಮುಖ ಅಗತ್ಯತೆಯಲ್ಲಿ ಒಂದು.

ನಮ್ಮಲ್ಲಿರುವ ಶಿಶು ಪಾಲನೆಯ ಸೇವೆಯನ್ನು ಒದಗಿಸುವವರು ಈ ವಿಷಯಗಳ ಕಡೆ ಗಮನಕೊಡುವುದು ಸಾಧ್ಯವಾಗುತ್ತಿಲ್ಲ ಏಕೆಂದರೆ ಅವರು ಮಗುವಿಗೆ ಆಹಾರವನ್ನು ಹೇಗೆ ದೊರಕಿಸಿಕೊಳ್ಳುವುದು ಎಂಬ ವಿಷಯವನ್ನು ಕುರಿತು ಹೆಚ್ಚು ಗಮನವಹಿಸುತ್ತಾರೆಯೇ ಹೊರತು ಮಗುವಿಗೆ ಹೇಗೆ ತಿನ್ನಿಸುವುದು ಮಗುವಿನ ಆರೈಕೆಯನ್ನು ಹೇಗೆ ಮಾಡಬೇಕು ಎಂಬುದನ್ನು ಕುರಿತು ಗಮನವಹಿಸುತ್ತಿಲ್ಲ. ಮನೆಗೆ ಒಯ್ಯುವ ಆಹಾರ ಮತ್ತು ಅಲ್ಲೆ ತಿನ್ನುವ ಆಹಾರ ಎಂಬುದನ್ನು ಕುರಿತು ಚರ್ಚೆಗಳು ಅನೇಕ ವರ್ಷಗಳಿಂದ ನಡೆಯುತ್ತಿದೆ. ಮನೆಗೆ ಒಯ್ದ ಆಹಾರವನ್ನು ಇಡೀ ಕುಟುಂಬವು ಹಂಚಿಕೊಂಡು ತಿನ್ನುತ್ತದೆ; ಇನ್ನು ಅಲ್ಲೇ ತಿನ್ನುವ ಆಹಾರದ ವಿಷಯಕ್ಕೆ

ಬಂದಾಗ ಮಗುವಿಗೆ ತನ್ನ ಇಡೀ ದಿನದ ಆಹಾರದ ಭಾಗವನ್ನು ಅಲ್ಪ ಸಮಯದಲ್ಲಿಯೇ ತಿನ್ನುವುದು ಕಷ್ಟಕರ ಎನಿಸುತ್ತಿದೆ. ಇದರ ಹಿಂದಿರುವ ಪ್ರಮುಖ ಕಾರಣವೆಂದರೆ ಐಸಿಡಿಎಸ್. ಇದು 'ಸೇವೆ ಆಧಾರಿತ'ವಾಗಿದೆಯೇ ಹೊರತು 'ಕಾಳಜಿ-ಆಧಾರಿತ'ವಲ್ಲ ಮತ್ತು ಎಳೆಯ ಮಕ್ಕಳಿಗಾಗಿ ಅವರ ತಾಯಂದಿರು ಕೆಲಸದಲ್ಲಿರುವಾಗ ಅವರನ್ನು ನೋಡಿಕೊಳ್ಳುವ ಮತ್ತು ಅವರಿಗೆ ಅಗತ್ಯವಿರುವ ಆಹಾರವನ್ನು ನೀಡುವ ವ್ಯವಸ್ಥೆಯನ್ನು ಇದುವರೆಗೂ ಒಪ್ಪಿಕೊಳ್ಳಲಾಗಿಲ್ಲ. 11.5 ಕೋಟಿ ಮಹಿಳೆಯರು ವೃತ್ತಿನಿರತರಿದ್ದಾರೆ (ಅದರಲ್ಲಿ ಶೇಕಡಾ 90ರಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ) ಮತ್ತು 3.5 ಕೋಟಿ ಮಹಿಳೆಯರು ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊಂದಿದ್ದಾರೆ. ಇದಕ್ಕೆ ಡೇ ಕೇರ್ ವ್ಯವಸ್ಥೆಯು ಒಂದು ಉತ್ತಮ ಪರಿಹಾರದಂತೆ ಕಂಡುಬರುತ್ತದೆ. ಏಕೆಂದರೆ ಇದರಿಂದ ತಮ್ಮ ತಂಗಿ ತಮ್ಮರನ್ನು ನೋಡಿಕೊಳ್ಳುತ್ತಿರುವ ಎಷ್ಟೋ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಇದು ಅವಕಾಶ ನೀಡುತ್ತದೆ.

ಐಎಲ್‌ಒ ಅಧ್ಯಯನದ ಪ್ರಕಾರ (1996) ಶೇ 38 ಹುಡುಗರು ಮತ್ತು ಶೇ 60 ಹುಡುಗಿಯರನ್ನು 'ಅದೃಶ್ಯ ಮಕ್ಕಳು' ಎಂದು ಕರೆಯಲಾಗಿದೆ. ಏಕೆಂದರೆ ಅವರು ಶಾಲೆಯಲ್ಲಿಯೂ ಇರುವುದಿಲ್ಲ, ಕೆಲಸದಲ್ಲಿಯೂ ಇರುವುದಿಲ್ಲ ಎಂದಾಗುತ್ತದೆ. ಈ ವಿಭಾಗದಲ್ಲಿ ಹುಡುಗರಿಗಿಂತ ಹುಡುಗಿಯರು ಎರಡು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಒಂದು ಅಂದಾಜು ಏನೆಂದರೆ ಹೆಚ್ಚಿನ ಮಕ್ಕಳು ಅದರಲ್ಲಿಯೂ ಹೆಣ್ಣು ಮಕ್ಕಳು ತಮ್ಮ ತಂಗಿ-ತಮ್ಮರನ್ನು ನೋಡಿಕೊಳ್ಳುವ ಕಾರ್ಯದಲ್ಲಿ ನಿರತರಾಗಿದ್ದಾರೆ ಇದು ಅವರ ಶಿಕ್ಷಣಕ್ಕೆ ಮಾರಕವಾಗಿ ಕಂಡುಬರುತ್ತಿದೆ. ಆದ್ದರಿಂದ ಈ ಗುಂಪಿಗೆ ಕೂಡಾ ಡೇ ಕೇರ್ ಒಂದು ಅಗತ್ಯವಾಗಿ ಕಂಡುಬರುತ್ತದೆ. ಆದರೆ ಇದು ಇಲ್ಲದಿರುವ ಸಂದರ್ಭದಲ್ಲಿ ಬೆಳೆಯುವ ಮಕ್ಕಳು, ವಯಸ್ಸಾದ ಮಕ್ಕಳು ಮತ್ತು ಮಹಿಳೆಯರಿಗೆ ನೀಡಲಾಗುವ ಹಣದಲ್ಲಿ ಕೂಡಾ ತಾರತಮ್ಯ ಕಂಡುಬರುತ್ತಿದೆ. ಇಲ್ಲಿ ಕೂಡಾ ಕೆಲಸದಲ್ಲಿ ಲಿಂಗತಾರತಮ್ಯ ಕಂಡುಬರುತ್ತಿದೆ.

**ಚಿತ್ರ 1: ಅದೃಶ್ಯ ಮಕ್ಕಳು**




ಐಎಲ್‌ಒ, 1996

## 5. ಮಾನ್ಯತೆ ಪಡೆಯಲು ಮತ್ತು ಪ್ರತಿಫಲ ಪಡೆಯಲು ಹಕ್ಕು

ಅಂತಿಮವಾಗಿ ಇದರಿಂದ ಕಂಡುಬರುವ ವಿಷಯವೆಂದರೆ ಹೆಚ್ಚಾಗಿ ಮಹಿಳೆಯರೇ ಮಕ್ಕಳನ್ನು ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದು ಇದರಲ್ಲಿ ಲಿಂಗ ತಾರತಮ್ಯ ಕಂಡುಬರುತ್ತಿದೆ. ಅದೆ ಇತರೆ ವೃತ್ತಿಗಳಾದ ಆರೋಗ್ಯ ಮತ್ತು ಶಿಕ್ಷಣದಲ್ಲಿ ಈ ತಾರತಮ್ಯವು ಕಂಡುಬರುತ್ತಿಲ್ಲ. ದೇಶದಲ್ಲಿ ಸುಮಾರು ಮೂರು ಮಿಲಿಯನ್‌ಗಿಂತಲೂ ಹೆಚ್ಚಿನ ಮಕ್ಕಳನ್ನು ನೋಡಿಕೊಳ್ಳುವ ಕೆಲಸಗಾರರು ಕಂಡುಬರುತ್ತಾರೆ (ಅಷ್ಟೇ ಸಂಖ್ಯೆಯ ಸಹಾಯಕರು ಕೂಡಾ) ಸಮಾಜಕ್ಕೆ ಅವರು ನೀಡುವ ಕೊಡುಗೆಯನ್ನು ಎಲ್ಲರೂ ಗಮನಿಸಿದ್ದರೂ ಅವರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅವರನ್ನು ಇಂದಿಗೂ 'ವೃತ್ತಿನಿರತರು' ಎಂದು ಪರಿಗಣಿಸಲಾಗಿಲ್ಲ. ಸ್ವಯಂಸೇವಾ ಕೆಲಸಗಾರರು ಎಂದು ಪರಿಗಣಿಸಲಾಗುತ್ತಿದೆ. ದಿನದಲ್ಲಿ

ಹಲವಾರು ತಾಸುಗಳ ಕಾಲ ಮಕ್ಕಳ ಆರೈಕೆ ಮಾಡುವ ಇವರಿಗೆ ಯಾವುದೇ ಸೂಕ್ತ ಮಜೂರಿ ಎಂಬುದನ್ನು ನೀಡಲಾಗುತ್ತಿಲ್ಲ, ಬದಲಾಗಿ ಇವರಿಗೆ ಗೌರವ ಧನ ಎಂದು ಅಷ್ಟೊ ಇಷ್ಟೊ ನೀಡಲಾಗುತ್ತಿದೆ. ಹಲವು ಪ್ರಕಾರದ ಕೆಲಸಗಳನ್ನು ಮಾಡಿಯೂ ಅಂದರೆ ಕಸಗುಡಿಸುವುದು, ಅಡುಗೆ ಮಾಡುವುದು, ತಿನಿಸುವುದು, ಹಾಜರಾತಿಯನ್ನು ತೆಗೆದುಕೊಳ್ಳುವುದು ಎತ್ತರ ಮತ್ತು ತೂಕವನ್ನು ಅಳೆಯುವುದು ಮುಂತಾದವುಗಳನ್ನು ಮಾಡುವುದು ಅಲ್ಲದೆ ನಿಮ್ಮ ಬೆಳೆಯುವ ಮಗುವನ್ನು ನೋಡಿಕೊಳ್ಳುವುದು ಮುಂತಾದವುಗಳನ್ನು ಇವರು ಮಾಡುತ್ತಾರೆ. ಇವೆಲ್ಲವುಗಳಿಗೆ ಕೌಶಲ್ಯದ ಅಗತ್ಯವಿದೆ ಎಂದು ಯಾರೂ ಯಾವತ್ತೂ ನಿರ್ಧರಿಸುವುದಿಲ್ಲ. ಹೆಣ್ಣು ಮಕ್ಕಳಿಗೆ ಈ ಎಲ್ಲ ಕೆಲಸಗಳೂ ಸಹಜವಾಗಿ ಬಂದಿರುತ್ತವೆ ಎಂದು ನಿರ್ಧರಿಸಲಾಗಿರುತ್ತದೆ! ಹಲವಾರು ಕೆಲಸಗಳನ್ನು ಮಾಡುವ ಅವರುಗಳು ಮೌನವಾಗಿ ಎಲ್ಲವನ್ನು ಸಹಿಸುತ್ತಿರುವ ಮತ್ತು ಹೆಚ್ಚು ಶೋಷಣೆಗೆ ಒಳಗಾಗುತ್ತಿರುವ ಗುಂಪಾಗಿದೆ. ಇವರುಗಳಿಗೆ ಸಾಮಾನ್ಯವಾಗಿ ತರಬೇತಿಯನ್ನು ನೀಡಲಾಗುವುದಿಲ್ಲ. ಅಲ್ಲದೆ ಕೌಶಲ್ಯ ಹೊಂದಿರುವ ಕೆಲಸಗಾರರಿಗೆ ನೀಡಲಾಗುವ ಕೆಲಸದ ಸ್ಥಳದ ಸೌಲಭ್ಯವನ್ನು ಕೂಡಾ ನೀಡಲಾಗುವುದಿಲ್ಲ. ಈ ಸಮುದಾಯವು ಅದನ್ನೆಲ್ಲಾ ಏಕೆ ಸಹಿಸಿಕೊಂಡು ಬರುತ್ತಿದೆ ಎಂದರೆ ಇದನ್ನು ಬಿಟ್ಟು ಪರ್ಯಾಯ ಇಲ್ಲ ಎಂಬುದು ಅವರ ಸ್ಥಿತಿಯಾಗಿದೆ. ರಾಷ್ಟ್ರದ ಆದ್ಯತೆಗಳಲ್ಲಿ ಮಕ್ಕಳ ಸ್ಥಾನಮಾನ ಎಷ್ಟು ಕೆಳಮಟ್ಟದಲ್ಲಿದೆ ಎಂದರೆ ಮಕ್ಕಳ ಲಾಲನೆ ಪಾಲನೆಯ ಕೆಲಸ ಮಾಡುವವರೂ ಇದೇ ಅವಜ್ಞೆಗೆ ಒಳಗಾಗಿರುತ್ತಾರೆ. ಅವರು ಕೂಡಾ ಇದರ ಕುರಿತು ಗಮನವಹಿಸುತ್ತಿಲ್ಲ. ಅವರಿಗೆ ಸಲ್ಲತಕ್ಕ ಗೌರವವನ್ನು ಅವರಿಗೆ ನೀಡಲು ಇದು ಸೂಕ್ತ ಸಮಯವಲ್ಲವೇ? ಅವರ ಕೆಲಸಕ್ಕೆ ತಕ್ಕಂತಹ ಮಜೂರಿ, ಕೆಲಸ ನಿರ್ವಹಿಸಲು ಅನುಕೂಲಕರವಾದ ವಾತಾವರಣ ಮುಂತಾದವನ್ನು ಒದಗಿಸುವ ಮೂಲಕ ಅವರಿಗೆ ದಕ್ಕಬೇಕಾದ ಸೌಲಭ್ಯವನ್ನು ನಾವು ನೀಡಬೇಕಾಗಿದೆ. ಒಂದು ವೇಳೆ ಈ ಕೆಲಸ ನಿರ್ವಹಿಸುವವರು ಪುರುಷರಾಗಿದ್ದರೇ ಇಲ್ಲಿಯವರೆಗೂ ಪರಿಸ್ಥಿತಿ ಹೀಗೆ ಇರುತ್ತಿತ್ತೇ? ಇಲ್ಲಿ ಮತ್ತೆ ಲಿಂಗತಾರತಮ್ಯ ಇಣುಕುತ್ತದೆ!

ಈ ಲೇಖನದಲ್ಲಿ ನೀಡಲಾಗಿರುವ ದತ್ತಾಂಶಗಳ ಸಂಗ್ರಹಣೆಗೆ ತುಂಬಾ ಸಹಾಯ ಮಾಡಿದ ಡಾ.ಜಿಗಿಶಾ ಶಾಸ್ತ್ರಿ ಮತ್ತು ಡಾ.ರಾಮ ನಾರಾಯಣ್ ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಇಲ್ಲಿ ಅದರ ಬಳಕೆಯ ಸಂಪೂರ್ಣ ಜವಾಬ್ದಾರಿ ನನ್ನದಾಗಿರುತ್ತದೆ.

**References:**


1. Barker, DJP, Eriksson, JG, Forsan, T and Osmond, C ( 2002) Fetal origins of adult disease : study of effects and biological basis International Journal of Epidemiology Vol 31, Issue 6, pp 1235 – 1239.
2. Bhat, Vishnu and Adhisivam, B (2013) Trends and Outcome of Low Birth Weight Infants in India The Indian Journal of Paediatrics, Vol 80, Issue 1.
3. Central Statistical Organisation Time Use Survey 1998-99
4. Chaudhuri, S Otiv, M Chitale, H Pandit, A and Hoge, M (2004) Pune Low birth weight study - cognitive abilities and educational performance at 12 years Indian Paediatrics, February 14 (2),pp121 - 8.
5. International Labour Organisation (1996) Invisible Children
6. National Institute for Population Sciences, Mumbai, 2006, National Family Health Survey III 2005 2006 (Low Birth Weight)
7. National Institute for Population Sciences, Mumbai, 2006, National Family Health Survey III 2005 2006 (Exclusive Breastfeeding )
8. Registrar General Census of India – IMR and CMR : www.censusindia.gov.in/vital_statistics/srs/Chap_4_-_2010.pdf
9. Registrar General Census of India Sex Ratio www.censusindia.gov.in/Census_And_You/gender_composition.aspx
10. UNICEF ( 2006). Progress for Children- a Report Card on Nutrition



**ಮೀನಾ ಸ್ವಾಮಿನಾಥನ್** ಅವರು ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ೬೦ರ ದಶಕದಿಂದ ಇಲ್ಲಿಯವರೆಗೆ ಶಿಕ್ಷಕರಾಗಿ, ಶಿಕ್ಷಕರ ತರಬೇತಿದಾರರಾಗಿ, ಪ್ರಾಕ್ಟಿಷನರ್, ಪಾಲಿಸಿ ಮೇಕರ್ ಆಗಿ ಮತ್ತು ಬರಹಗಾರರಾಗಿ ಕೆಲಸಮಾಡಿದ್ದಾರೆ. ಐಸಿಡಿಎಸ್ ಪ್ರಾರಂಭಿಸಲು ಕಾರಣರಾಗಿರುವ ಇವರು ಮೊಬೈಲ್ ಕ್ರಿಷ್‌ನಲ್ಲಿ ಕಾರ್ಯನಿರ್ವಹಿಸಿದ್ದಾರೆ. ಐಸಿಡಿಎಸ್ ಮತ್ತು ಇತರೆ ಗುಂಪುಗಳಲ್ಲಿ ಹಲವಾರು ವರ್ಷ ಕಾರ್ಯನಿರ್ವಹಿಸಿರುವ ಇವರು ಡೇ ಕೇರ್‌ನಲ್ಲಿ ಅತ್ಯುತ್ತಮವಾದ ಅನುಭವ ಹೊಂದಿದ್ದಾರೆ. ಆಗ್ನೇಯ ಏಷ್ಯಾದ ರಾಷ್ಟ್ರಗಳಾದ ವಿಯೆಟ್ನಾಮ್, ಕಾಂಬೋಡಿಯಾ ಮತ್ತು ಫಿಲಿಫೈನ್ಸ್‌ನಲ್ಲಿ ಡೇ ಕೇರ್ ವಲಯದ ಅನುಭವ ಇವರಿಗಿದೆ. ಇಂಡಿಯನ್ ಅಸೋಸಿಯೇಷನ್ ಫಾರ್ ಪ್ರಿಸ್ಕೂಲ್ ಎಜ್ಯುಕೇಷನ್‌ನ ಸಂಪಾದಕರು, ಸೆಕ್ರೆಟರಿ ಮತ್ತು ಅಧ್ಯಕ್ಷರಾಗಿದ್ದವರು ಮತ್ತು ಐಎಪಿಇ ಇಂದ ವಾರ್ಷಿಕವಾಗಿ ನಡೆಸಲಾಗುವ ಸಂವಾದದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ದೇಶದೆಲ್ಲೆಡೆ ಈ ಕಾರ್ಯಕ್ರಮವನ್ನು ಕುರಿತು ನಡೆಸಲಾಗುವ ವಿಮರ್ಶೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಅವರು ನಡೆಸಿದ ಅಧ್ಯಯನವು ದೇಶದಲ್ಲಿ ಈ ಕುರಿತು ಹಲವಾರು ಸಂಶೋಧನೆಗಳು ನಡೆಯಲು ಸಹಕಾರಿಯಾಯಿತು. ಅಲ್ಲದೆ ಇದು ಆಟ ಮತ್ತು ಗುಣಮಟ್ಟದ ನಡುವೆ ಇರುವ ಸಂಬಂಧವನ್ನು ತಿಳಿದುಕೊಳ್ಳಲು ಸಹಕಾರಿಯಾಯಿತು. ಉತ್ತಮ ಬರಹಗಾರರಾಗಿರುವ ಇವರು ಆರಂಭಿಕ ಬಾಲ್ಯದ ಶಿಕ್ಷಣದ ಕುರಿತಾಗಿ ಮೂರು ಪ್ರಮುಖ ಶಿಕ್ಷಕರ ಕೈಪಿಡಿಯನ್ನು ಹೊರತಂದಿರುವುದಲ್ಲದೆ ಹಲವಾರು ಪುಸ್ತಕಗಳಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅಲ್ಲದೆ ಹಲವಾರು ಪ್ರಬಂಧಗಳು ಮತ್ತು ಜನಪ್ರಿಯ ಲೇಖನಗಳನ್ನು ಬರೆದಿದ್ದಾರೆ. mimams@dataone.in ಇ-ಮೇಲ್‌ನಲ್ಲಿ ಅವರನ್ನು ಸಂಪರ್ಕಿಸಬಹುದು.

ವಿಭಾಗ ಬಿ

# ಚಿಕ್ಕ ಮಕ್ಕಳೊಂದಿಗೆ ಕೆಲಸ ಮಾಡುವುದು





# ಶಿಶುವಿಹಾರಗಳನ್ನು ಸಮನ್ವಯದ ಸ್ಥಳವಾಗಿಸುವುದು

ಆನಂದಲಕ್ಷ್ಮಿ

ಸಮನ್ವಯಎನ್ನುವುದು ಇತ್ತೀಚೆಗೆ ಹೆಚ್ಚಾಗಿ ಕೇಳಬರುತ್ತಿರುವ ಪದ. ಇದು ಬಹಳ ಚಲಾವಣೆಯಲ್ಲಿರುವ ಮತ್ತು ಒಂದು ಹಿತವಾದ ಅನುಭವವನ್ನು ನೀಡುವಂತಹ ಪದ. ಆದರೆ ಸಮನ್ವಯ ಶಿಕ್ಷಣ ಹೇಗೆ ನಡೆಯಬೇಕು ಎಂಬುದು ಹೆಚ್ಚಿನಂಶ ಬೀಜಗಣಿತದ ಬೀಜಾಕ್ಷರ x ನಂತೆ ಅಜ್ಞಾತವಾಗಿ ಉಳಿದಿದೆ.

ಎಲ್ಲಾ ವಯೋಮಾನದ ಗುಂಪುಗಳವರನ್ನು ಮತ್ತು ವಿವಿಧ ಮಟ್ಟದ ಸಾಮರ್ಥ್ಯದ ಗುಂಪುಗಳನ್ನು ಸಮಾವೇಶನಗೊಳಿಸುವುದು ಸಾಧ್ಯ ಎಂಬುದನ್ನು ತೋರಿಸಿಕೊಡುವ ಒಂದು ಯಶಸ್ವೀ ಪ್ರಯೋಗದ ದೃಷ್ಟಾಂತವನ್ನು ಇಲ್ಲಿ ನಾನು ನಿಮ್ಮ ಮುಂದೆ ಇಡುತ್ತಿದ್ದೇನೆ.

ರಾಜಕುಮಾರಿ ಅಮೃತ್ ಕೌರ್ ಶಿಶು ಅಧ್ಯಯನ ಕೇಂದ್ರ ಮತ್ತು ಶಿಶುವಿಹಾರವು ದೆಹಲಿಯ ಲೇಡಿ ಇರ್ವಿನ್ ಕಾಲೇಜ್‌ನ ಶಿಶು ಅಭಿವೃದ್ಧಿ ವಿಭಾಗದ ಕ್ರಿಯಾಶೀಲ ಪ್ರಯೋಗಾಲಯವಾಗಿ 1959ರಲ್ಲಿ ಪ್ರಾರಂಭವಾಯಿತು. ಈಗ ಇದು ಸ್ಥಳಾಂತರಗೊಂಡಿದ್ದರೂ ಇದರ ತತ್ವಗಳು ಅದೇ ರೀತಿ ಸ್ಥಿರವಾಗಿ ಉಳಿದಿವೆ. ಸ್ನಾತಕೋತ್ತರ ವಿಭಾಗಕ್ಕೆ ಸೇರಿರುವುದರಿಂದ ಹಲವಾರು ಅನುಕೂಲಗಳನ್ನು ಇದು ಹೊಂದಿದೆ. ಸುಮಾರು 1980ರಲ್ಲಿ ಸಣ್ಣ ಮಕ್ಕಳಿಗಾಗಿ ಒಂದು ಸುಂದರವಾದ ಕೇಂದ್ರವನ್ನು ನಿರ್ಮಿಸಲು ನಮಗೆ ಧನಸಹಾಯ ದೊರೆಯಿತು. ಕಟ್ಟಡದ ವಿನ್ಯಾಸಕಾರರಾದ ಸ್ಟೈನ್, ದೋಶಿ ಮತ್ತು ಭಲ್ಲ (ದೆಹಲಿಯಲ್ಲಿ ಹೆಚ್ಚು ಮೆಚ್ಚುಗೆ ಗಳಿಸಿದಂತಹವರು) ನಮ್ಮೊಡನೆ ಚರ್ಚಿಸಿ ಕಟ್ಟಡವನ್ನು ನಿರ್ಮಾಣ ಮಾಡಲು ಒಪ್ಪಿದರು. ಫಲವಾಗಿ ಸ್ಟೈನ್ ಅವರ ಅತ್ಯುತ್ತಮ ಸೋಪಜ್ಞ ಕೃತಿಯನ್ನು ಪಡೆಯುವ ಅದೃಷ್ಟ ನಮ್ಮದಾಯಿತು. ಹುಲ್ಲು ಹಾಸಿನಿಂದ ಕೂಡಿದ ತೆರೆದ ಹಿಂಬದಿಯ ಅಂಗಳ, ವಿಶಾಲವಾದ ಕೋಣೆಗಳು, ಹೊರಾಂಗಣ ಆಟದ ಮೈದಾನಗಳು, ವಿಶಾಲವಾದ ಲಾನ್ ಮತ್ತು ಸ್ವಾಗತವನ್ನು ಬಯಸುವ ದಿಡ್ಡಿಬಾಗಿಲು ಇಲ್ಲಿ ನಿರ್ಮಾಣವಾಯಿತು.

### ದಾಖಲಾತಿ ನಿಯಮಗಳು: ಬದಲಾಗುತ್ತಿರುವ ನಮ್ಮ ದೃಷ್ಟಿಕೋನಕ್ಕೊಂದು ಕನ್ನಡಿ

ಶಿಶುವಿಹಾರವು ಒಂದು ಸಣ್ಣ ಘಟಕವಾಗಿದ್ದ ಪ್ರಾರಂಭಿಕ ದಿನಗಳಲ್ಲಿ, ಅರ್ಜಿ ಹಾಕಿದ ಎಲ್ಲಾ ಮಕ್ಕಳನ್ನೂ ದಾಖಲಿಸಿಕೊಳ್ಳಲಾಗುತ್ತಿತ್ತು. ವರ್ಷಾಂತರದಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚಿದಂತೆ, ಪೋಷಕರು ಮತ್ತು ಮಕ್ಕಳೊಂದಿಗೆ ಅನೌಪಚಾರಿಕವಾದ ಭೇಟಿಯನ್ನು ಏರ್ಪಡಿಸಲಾಗುತ್ತಿತ್ತು ಮತ್ತು ಇಲ್ಲಿ ಮಗುವು ಶಾಲೆಯಿಂದ ಪ್ರಯೋಜನವನ್ನು ಪಡೆಯುತ್ತದೆ ಎಂಬುದನ್ನು ದೃಢಪಡಿಸಿಕೊಳ್ಳಲು ತ್ವರಿತವಾಗಿ ಮೌಲ್ಯಾಂಕನವನ್ನು ಮಾಡಲಾಗುತ್ತಿತ್ತು. ಅನಂತರ, ಕೆಲವು ಪ್ರಶ್ನೆಗಳನ್ನು ಕೇಳಿ, ಅವರಿಗೆ ಕೊಟ್ಟಂತಹ ಆಟದ ವಸ್ತುಗಳ ಜೊತೆ ಅವರು ಹೇಗೆ ಆಟವಾಡುವರು ಎನ್ನುವುದನ್ನು ಗಮನಿಸಿ ಪ್ರತಿಯೊಂದು ಮಗುವನ್ನೂ ದಾಖಲಿಸಿಕೊಳ್ಳಲಾಗುತ್ತಿತ್ತು. ನಾವು ಅರಿಯುವ ಮೊದಲೇ ಈ ಪೂರ್ವ ದಾಖಲಾತಿಯ ಭೇಟಿ ಪ್ರಕ್ರಿಯೆಯು ದಾಖಲಾತಿಯನ್ನು ಬಯಸುವ ಮಕ್ಕಳ ಪರೀಕ್ಷೆಯ ಅವಧಿಗಳಾಗಿ ಬದಲಾದವು. ಇಲ್ಲಿ ಮಕ್ಕಳು ಮತ್ತು ಪೋಷಕರು ಕೆಲವೊಂದು ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತಿತ್ತು. ಈ ಅದೃಶ್ಯ ಮಾನದಂಡಗಳು ಪ್ರಮುಖವಾಗಿ ಎರಡು ವರ್ಗಗಳಲ್ಲಿ ಬಂದವು: ಮಗುವಿನ ಗ್ರಹಣಶಕ್ತಿ ಬೆಳವಣಿಗೆ ಮತ್ತು ಸಾಮಾಜಿಕ ಕ್ರಿಯಾಶೀಲತೆಯ ಮಟ್ಟ ಮತ್ತು ತಮ್ಮ ಮಕ್ಕಳ ಪ್ರಗತಿಯಲ್ಲಿ ತಂದೆತಾಯಿಯರು ಎಷ್ಟು ಆಸಕ್ತಿಯಿಂದ ತೊಡಗಿಸಿಕೊಳ್ಳುವರು ಎಂಬುದು. ಈ ಸಮಯದಲ್ಲಿ, ಉತ್ತಮವಾಗಿ ಅಂಕಗಳಿಸಿದ ಮಕ್ಕಳು ಮತ್ತು ಅತ್ಯಂತ ಮುತುವರ್ಜಿ ಹೊಂದಿದ ಪೋಷಕರು ಆಯ್ಕೆಯಾಗುತ್ತಿದ್ದರು. ಪ್ರತಿಯೊಂದು ಸಣ್ಣ ಮಗುವನ್ನು ದಾಖಲಿಸಿಕೊಳ್ಳಲು ಸಾಧ್ಯವಾಗದ ಕಾರಣ ಕೆಲವು ಕುಟುಂಬಗಳು ನಿರಾಶೆಯಿಂದ ಹಿಂತಿರುಗಬೇಕಾಗುತ್ತಿತ್ತು.

ಆಗ ನಾವು ಸಾಮರ್ಥ್ಯವುಳ್ಳ ಪೋಷಕರನ್ನು ಹೊಂದಿರುವ ಚುರುಕಾಗಿರುವ ಮಕ್ಕಳನ್ನು ಮಾತ್ರ ಏಕೆ ದಾಖಲಿಸಿಕೊಳ್ಳಬೇಕು, ನಮಗಿರುವ ಪರಿಣಿತಿ ಮತ್ತು ಬದ್ಧತೆಯ ಮಟ್ಟದಲ್ಲಿ ನಾವು ಎಲ್ಲಾ ವರ್ಗದ ಮಕ್ಕಳಿಗೂ ಶಿಕ್ಷಣ ನೀಡುವುದಕ್ಕೆ ಸಾಧ್ಯವಿಲ್ಲವೇ? ಎಂದು ಒಂದು ಸಿಬ್ಬಂದಿ ಸಭೆಯಲ್ಲಿ ನಾನು ಮಧ್ಯೆ ಪ್ರವೇಶಿಸಿ ಶಿಶುವಿಹಾರದ ಶಿಕ್ಷಕರನ್ನು ಪ್ರಶ್ನಿಸಿದೆ. ಒಂದು ಒಳ್ಳೆಯ ಶಿಶುವಿಹಾರದಲ್ಲಿ ಅನೇಕರು ಪ್ರಗತಿಯನ್ನು ಹೊಂದಬಹುದು, ಆದರೆ ನಾವು ನೀಡುವಂತಹ ಶಿಕ್ಷಣವಿಲ್ಲದೇ ಅವರು ಎಲ್ಲಿಯೂ ಸೇರದಂತೆ ಆಗಬಹುದು. ಇದರ ಬಗ್ಗೆ ಬಿಸಿ–ಬಿಸಿಯಾದ

ಚರ್ಚೆಯಾಯಿತು, ಆದರೆ ಅಂತಿಮವಾಗಿ ನಾವು ದಾಖಲಾತಿ ನಿಯಮಗಳ ಬಗ್ಗೆ ಒಂದು ಒಪ್ಪಂದಕ್ಕೆ ಬಂದೆವು. ಈಗ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಒಡಹುಟ್ಟಿದವರು, ಇದೇ ಶಿಕ್ಷಣ ಸಂಸ್ಥೆಯ ಬೋಧಕ ವರ್ಗದವರ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಆದ್ಯತೆಯನ್ನು ನೀಡುವುದು ಎಂದು ತೀರ್ಮಾನಿಸಲಾಯಿತು. ಶಿಶು ಅಭಿವೃದ್ಧಿಯ ಸ್ನಾತಕೋತ್ತರ ವಿಭಾಗಕ್ಕೆ ಈ ಸಂಸ್ಥೆಯು ಸೇರಿರುವುದರಿಂದ ಮತ್ತು ಅಲ್ಲಿನ ವಿದ್ಯಾರ್ಥಿಗಳಿಗೆ ಪ್ರಯೋಗಾಲಯವಾಗಿರುವುದರಿಂದ, ದತ್ತು ತೆಗೆದುಕೊಂಡ ಮಕ್ಕಳಿಗೆ ಮತ್ತು ಅವಳಿಗಳಿಗೆ ಆದ್ಯತೆ ನೀಡುವುದು ಎಂದು ನಾವು ತೀರ್ಮಾನಿಸಿದೆವು. ಉಳಿದ ಸ್ಥಳಗಳನ್ನು ಮುಕ್ತವಾಗಿ ಇಡಲಾಯಿತು.

ದಾಖಲಾತಿಗೆ ಯಾವುದೇ ರೀತಿಯ ಪರೀಕ್ಷೆಗಳನ್ನು ಮಾಡದಿರಲು ನಾವು ತೀರ್ಮಾನಿಸಿದ್ದರಿಂದ, ಮೊದಲು ಬಂದವರಿಗೆ ಆದ್ಯತೆ ನೀಡುವ ನಿಯಮವನ್ನು ಪಾಲಿಸಲು ತೊಡಗಿದೆವು. ಅರ್ಜಿ ನೀಡುವ ಪ್ರಾರಂಭದ ದಿನ ಅರ್ಜಿ ವಿತರಿಸಲು ಇರುವ ಕೋಣೆಯ ಕಿಟಕಿಯ ಹೊರಗೆ ಬೆಳಗ್ಗೆ 5.00 ಗಂಟೆಯಿಂದಲೂ ಸರದಿಯ ಸಾಲು ಸೇರಲು ಪ್ರಾರಂಭವಾಗುತ್ತಿತ್ತು. ತಮ್ಮ ಪರವಾಗಿ ನಿಲ್ಲಲು ಯಾರನ್ನಾದರು ಕಳುಹಿಸುವ ಶಕ್ತಿ ಇದ್ದವರು ಸಹಜವಾಗಿ ಮೊದಲಿಗರಾಗಿರುತ್ತಿದ್ದರು. ಸರದಿ ಸಾಲಿನಲ್ಲಿ ಬಹಳಷ್ಟು ಜನ ಜವಾನರು, ಚಾಲಕರು ಮತ್ತು ಗುಮಾಸ್ತರು ಇರುತ್ತಿದ್ದರು. ಕೆಲವು ಪೋಷಕರು ತಮಗಿರುವ ಬುದ್ಧಿವಂತಿಕೆ ಮತ್ತು ಆರ್ಥಿಕ ಸಂಪನ್ಮೂಲ ಪಡೆದುಕೊಳ್ಳುವ ಚಾಕಚಕ್ಯತೆಯನ್ನು ತೋರಿಸಿಕೊಟ್ಟರು!

ಈ ಪ್ರಕ್ರಿಯೆಯಲ್ಲಿ, ಆಸಕ್ತಿಕರವಾದ ವಿಷಯವೊಂದು ನಡೆಯಿತು. ಬಂದಂತಹ ಮಕ್ಕಳು ವಿಶಾಲ ವ್ಯಾಪ್ತಿಗೆ ಒಳಪಡುವವರಾಗಿದ್ದು ಅನೇಕ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಹೊಂದಿದವರಾಗಿದ್ದರು. ಅಂಗವೈಕಲ್ಯವನ್ನು ಹೊಂದಿರುವ ನಾಲ್ಕೈದು ಮಕ್ಕಳಿದ್ದರು (ಉದಾಹರಣೆಗೆ, ಡೌನ್ ಸಿಂಡ್ರೋಮ್, ದೃಷ್ಟಿಮಾಂದ್ಯತೆ, ಸ್ಪಾಸ್ಟಿಕ್-ಮಿದುಳಿನ ಪಾರ್ಶ್ವವಾಯು). ನಾವು ಅವರನ್ನೂ ದಾಖಲಿಸಿಕೊಂಡೆವು ಮತ್ತು ಅವರಿಗಾಗಿ ಶೀಘ್ರವೇ ಒಂದು ವಿಶೇಷ ವಿಭಾಗವನ್ನೂ ಪ್ರಾರಂಭಿಸಿದೆವು. ನಮ್ಮ ಶಿಕ್ಷಕರಲ್ಲಿ ಒಬ್ಬರು, ತರಬೇತಿ, ಅನುಭವವನ್ನು ಹೊಂದಿದ್ದು ಅತ್ಯಂತ ಸೌಹಾರ್ದತೆಯುಳ್ಳವರಾಗಿದ್ದವರು ಇದರ ಹೊಣೆಯನ್ನು ಹೊತ್ತರು. ನಂತರದ ವರ್ಷ, ಸಣ್ಣ ಮತ್ತು ಸಾಧಾರಣ ಅಂಗವೈಕಲ್ಯವನ್ನು ಹೊಂದಿದ್ದ ಮಕ್ಕಳಿಗೆ ಆದ್ಯತೆಯನ್ನು ನೀಡಿ ಮತ್ತೆ ಐದು ಮಕ್ಕಳನ್ನು ದಾಖಲಿಸಿಕೊಂಡು ತರಗತಿಯನ್ನು ಹತ್ತು ಮಕ್ಕಳ ತರಗತಿಯನ್ನಾಗಿ ವಿಸ್ತರಿಸಿದೆವು.

ನಮ್ಮ ಪ್ರತಿಯೊಂದು ವಿಭಾಗವೂ ನದಿಯ ಹೆಸರನ್ನು ಹೊಂದಿದ್ದವು: ಕಾವೇರಿ, ಯಮುನಾ, ನರ್ಮದಾ ಹೀಗೆ. ವಿಶೇಷ ಅಗತ್ಯವನ್ನು ಹೊಂದಿದ ಮಕ್ಕಳಿರುವ ತರಗತಿಯನ್ನು ಸಂಗಮ ಎಂದು ಕರೆಯಲಾಯಿತು.

ಆದರೂ ನಾವು ಇನ್ನೂ ಒಂದು ಸಮಸ್ಯೆಯನ್ನು ಎದುರಿಸಬೇಕಾಯಿತು. ಮೈಲುಗಳಷ್ಟು ದೂರದಲ್ಲಿದ್ದ ಕೆಲವೊಂದು ಮಕ್ಕಳನ್ನು ನಾವು ಕರೆದುಕೊಂಡು ಬರಬೇಕಾಗಿತ್ತು ಅಂತಹ ಸಮಯದಲ್ಲಿ ಕೆಲವು ಮಕ್ಕಳು ಶಾಲಾ ಅವಧಿಯಲ್ಲಿ ನಿದ್ದೆ ಮಾಡುತ್ತಿದ್ದರು. ಅವರು ಮನೆಯನ್ನು ತಲುಪುವಷ್ಟರಲ್ಲಿ ಬಹಳಷ್ಟು ದಣಿದಿರುತ್ತಿದ್ದರು ಎಂದು ನಮಗೆ ಅನ್ನಿಸಿತ್ತು. ಪ್ರತಿಯೊಂದು ಮಗುವೂ ಶಾಲೆಗೆ ಬರುವಾಗ ಮತ್ತು ಶಾಲೆಯಿಂದ ಮನೆಗೆ ಹೋಗುವಾಗ ಶಾಲಾ ವಾಹನದಲ್ಲಿ 30 ನಿಮಿಷಕ್ಕೆ ಮೀರಿ ತಮ್ಮ ಸಮಯವನ್ನು ಕಳೆಯದಿರುವಂತೆ ನೋಡಿಕೊಳ್ಳುವುದು ನಮಗೆ ಸೂಕ್ತವೆನಿಸಿತು. ಅಥವಾ ಅವರು ತಮ್ಮ ಮನೆಯವರೊಂದಿಗೆ ಕಾರಿನಲ್ಲಿ ಬಂದರೂ ಶಾಲೆಗೆ ಬರಲು ಒಂದು ಸಾಧಾರಣ ಸಮಯವನ್ನು ಮಾತ್ರ ತೆಗೆದುಕೊಳ್ಳುವತ್ತ ಗಮನ ನೀಡಿದೆವು. ಇದರ ನಂತರದ ವರ್ಷದ ದಾಖಲಾತಿಯ ನಿಯಮದಲ್ಲಿ, ಶಾಲೆಯ ಐದು ಕಿ.ಮೀ. ಫಾಸಲೆಯಲ್ಲಿ ಬರುವ ಮಕ್ಕಳನ್ನು ಮಾತ್ರವೇ ಹೊಸದಾಗಿ ದಾಖಲಿಸಿಕೊಳ್ಳಲು ತೀರ್ಮಾನಿಸಿದೆವು. ಪೋಷಕರಲ್ಲಿ ಕೆಲವರು ಇದನ್ನು ಪ್ರತಿಭಟಿಸಿದ್ದರಿಂದ ಹೊಸದಾಗಿ ದಾಖಲಾದ ಒಂದೆರಡು ಮಕ್ಕಳಿಗೆ ಒಂದೆರಡು ಕಿ.ಮೀ. ವ್ಯಾಪ್ತಿಯಲ್ಲಿ ರಿಯಾಯ್ತಿಯನ್ನು ನೀಡಬೇಕಾಯಿತು. ಅನೇಕ ಪೋಷಕರು ತಮ್ಮ ಮಕ್ಕಳನ್ನು ಇಲ್ಲಿ ದಾಖಲಿಸಲು ಇರುವ ಈ "ಮಾಯಾ ವ್ಯಾಪ್ತಿ"ಯಲ್ಲಿ ಬರಲು ತಮ್ಮ ಗೆಳೆಯರ, ಸಂಬಂಧಿಕರ ವಿಳಾಸಗಳನ್ನು ನೀಡಿದ್ದರೆಂದು ನಮಗೆ ನಂತರ ತಿಳಿದುಬಂತು. ಅವರು ಯಾವಾಗಲೂ ನಮಗಿಂತ ಒಂದು ಹಜ್ಜೆ ಮುಂದಿರುತ್ತಿದ್ದರು.

## ಕಾರ್ಯಕ್ರಮಗಳು: ಸಂಗಮ, ಸಬಲೀಕರಣ ಕೇಂದ್ರ ಮತ್ತು ಬೆಳಗಿನ ನಿಗಾ ಘಟಕ

### ಸಂಗಮ

ಸಂಗಮ ತರಗತಿಯಲ್ಲಿ ನಮಗೆ 3 ರಿಂದ 7 ವರ್ಷದ ಒಳಗಿರುವ ಹತ್ತು ಮಕ್ಕಳಿದ್ದರು. ಇದರಲ್ಲಿ ಒಂದು ಅಥವಾ ಎರಡು ಮಕ್ಕಳು ಮುಖ್ಯ ಗುಂಪಿಗೆ ಸಂಗೀತ ಅಥವಾ ಮಣ್ಣಿನ ಕಲಾ ತರಗತಿಗಳ ಚಟುವಟಿಕೆಗಳಿಗೆ ಬರುತ್ತಿದ್ದರು. ಇದನ್ನು ಮಕ್ಕಳು ಸಂಪೂರ್ಣವಾಗಿ ಶಾಲೆಗೆ ಮತ್ತು ದಿನಚರಿಗೆ ಹೊಂದಿಕೊಂಡ ನಂತರವೇ ಮಾಡಲಾಗುತ್ತಿತ್ತು. ಕೆಲವೊಮ್ಮೆ ಹಿರಿಯ ಮಕ್ಕಳ ನೃತ್ಯಕ್ಕೆ ಸಂಪೂರ್ಣ ತರಗತಿಯನ್ನು ವೀಕ್ಷಕರನ್ನಾಗಿ ಕರೆದೊಯ್ಯಲಾಗುತ್ತಿತ್ತು. ಕೆಲವೊಂದು ಸಲ ಹತ್ತಿರದಲ್ಲಿರುವ ತರಕಾರಿಯ ತೋಟಕ್ಕೆ ಅವರು

ತಮ್ಮ ಶಿಕ್ಷಕರೊಂದಿಗೆ ಹೋಗುತ್ತಿದ್ದರು. ಅವರಲ್ಲಿ ಎಲ್ಲರೂ ಓದಲು, ಬರೆಯಲು ಕಲಿಯುತ್ತಿರದಿದ್ದರೂ, ಅವರು ಅಲ್ಲಿನ ವಾತಾವರಣಕ್ಕೆ ಪರಿಚಿತರಾಗಿ ತಾವು ಅಲ್ಲಿಗೆ ಸೇರಿದವರು ಎಂಬ ಭಾವನೆಯನ್ನು ಹೊಂದುತ್ತಿದ್ದರು. ಅದು ಅವರ ಶಾಲೆ. ನನ್ನ ದೃಷ್ಟಿಯಲ್ಲಿ ಇದು ಯಾವುದೇ ಒಂದು ಕುಟುಂಬದಲ್ಲಿ ಸಹಜವಾಗಿ ಆಗುವಂತಹ ಮಾದರಿಯಲ್ಲಿ ಇರುವ ಸಮಾವೇಶಣೆ.

ವಿಶೇಷ ಅಗತ್ಯವಿರುವ ಮಕ್ಕಳಿಗೆ ನಾವು ಆದ್ಯತೆ ನೀಡುತ್ತೇವೆ ಎಂಬ ವಿಷಯ ಬಲು ಬೇಗ ಹರಡಿತು, ಆದರೆ ನಮ್ಮದು ಶುಲ್ಕ ವಿಧಿಸುವ ಶಾಲೆಯಾಗಿತ್ತು. ಕೆಲವೊಮ್ಮೆ ಕೆಳ ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬದಿಂದ ಜನರು ತಮ್ಮ ಮಕ್ಕಳನ್ನು ನಮ್ಮ ಶಾಲೆಗೆ ಕರೆತರುತ್ತಿದ್ದರು. ನಾವು ಮಕ್ಕಳನ್ನು ದಾಖಲಿಸಿಕೊಳ್ಳುವುದೇ ಆದಲ್ಲಿ ನಮ್ಮ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಲ್ಲಿರುವ ಸಿರಿವಂತ ಪೋಷಕರನ್ನು ಇನ್ನೊಂದು ಮಗುವಿನ ವೆಚ್ಚವನ್ನು ಭರಿಸುವುದು ಸಾಧ್ಯವೇ ಎಂದು ಕೇಳುತ್ತಿದ್ದೆವು. ನಮ್ಮ ಈ ಮನವಿ ತಿರಸ್ಕೃತವಾಗುತ್ತಿದ್ದದ್ದು ಅಪರೂಪ. ಇದರ ಬಗ್ಗೆ ಇನ್ನೂ ಅನೇಕ ವಿವರಣೆಯನ್ನು ಕೊಡಬಹುದು. ಆದರೆ ನಾನು ಸದ್ಯಕ್ಕೆ ಇಲ್ಲಿಗೆ ನಿಲ್ಲಿಸುತ್ತೇನೆ.

**ಸಬಲೀಕರಣ ಕೇಂದ್ರ**

ನಮ್ಮ ಶಾಲೆಯ ಎರಡು ಕಿಲೋಮೀಟರ್ ಫಾಸಲೆಯಲ್ಲಿ ಪ್ರಾಥಮಿಕ ಶಾಲೆಗೆ ಹೋಗುವ ವಯಸ್ಸಿನ ಮಕ್ಕಳು ಯಾರಾದರೂ ಮಾನಸಿಕ ಅಥವಾ ದೈಹಿಕ ನ್ಯೂನತೆಯ ಕಾರಣದಿಂದ ಶಾಲೆ ಬಿಟ್ಟವರು ಇದ್ದಾರೆಯೇ ಅಥವಾ ಅವರನ್ನು ಸೇರಿಸಿಕೊಳ್ಳುವಂತಹ ಸೂಕ್ತವಾದ ಶಾಲೆ ಸಿಗದಿರುವುದರಿಂದ ಮನೆಯಲ್ಲಿಯೇ ಉಳಿದಿರುವರೇ ಎಂಬುದನ್ನು ತಿಳಿಯಲು ಒಂದು ಸಮೀಕ್ಷೆಯನ್ನು ನಡೆಸಿದೆವು. ಈ ವರ್ಗದವರಿಗೆ ನೆರವು ನೀಡಲು, ಮಾನವ ಸಂಪನ್ಮೂಲ ಸಚಿವಾಲಯದ "ಪ್ರಾಥಮಿಕ ಶಿಕ್ಷಣದಲ್ಲಿ ನೂತನ ಮತ್ತು ಪ್ರಯೋಗಾತ್ಮಕ ಕಾರ್ಯಕ್ರಮ"ದ ಅಡಿಯಲ್ಲಿ ಧನಸಹಾಯಕ್ಕೆ ಅರ್ಜಿ ಸಲ್ಲಿಸಿದೆವು ಮತ್ತು ಎಂಟು ವರ್ಷಗಳವರೆಗೆ ಅವರಿಂದ ಧನಸಹಾಯ ಪಡೆದ ಅದೃಷ್ಟ ನಮ್ಮದು. ಪ್ರತಿಯೊಂದು ಸೀಟಿನಲ್ಲೂ ವಿಶೇಷ ಸೀಟ್ ಬೆಲ್ಟ್ ಇರುವ ಒಂದು ವಾಹನವನ್ನು ತೆಗೆದುಕೊಂಡೆವು. ಹೀಗಾಗಿ ಪ್ರತಿಯೊಂದು ಮಗುವನ್ನು ಮನೆಯಿಂದ ಕರೆದುಕೊಂಡು ಬಂದು ಅವರನ್ನು ಪುನಃ ಮನೆಬಾಗಿಲಿಗೇ ಮರಳಿ ಕಳುಹಿಸುವುದು ಸಾಧ್ಯವಾಯಿತು. ವಿವಿಧ ಚಟುವಟಿಕೆಗಳನ್ನು ನಡೆಸಲು ಯೋಜನೆ ಮಾಡಲಾಯಿತು. ಅದರಲ್ಲಿ ಹೆಚ್ಚು ಪ್ರಚಲಿತವಾಗಿದ್ದು ಜನ ಮಾಧ್ಯಮದವರ ಗೊಂಬೆಯಾಟ. ಜನ ಮಾಧ್ಯಮವು ಪ್ರತಿಭಾಪೂರ್ಣ ಸಂಗೀತಗಾರರು ಮತ್ತು ಕಲಾವಿದರು ಇರುವ ಒಂದು ಸ್ವಯಂಸೇವಕರ ತಂಡ. ಯುಜಿಸಿಯ ವಿಸ್ತರಣಾ ಚಟುವಟಿಕೆಗಳ ಯೋಜನೆಯ ಅಡಿಯಲ್ಲಿ ಸ್ವಲ್ಪ ಧನಸಹಾಯವನ್ನು ಪಡೆಯಲು ನಮಗೆ ಸಾಧ್ಯವಾಯಿತು. ಅಲ್ಪ ಪ್ರಮಾಣದ ಹಾಗೂ ಸಾಧಾರಣ ಅಸಾಮರ್ಥ್ಯವುಳ್ಳ ಮಕ್ಕಳ ಮಿಶ್ರ ಗುಂಪಿಗೆ ಶಾಲಾ ಚಟುವಟಿಕೆಗಳನ್ನು ಯಾವ ರೀತಿ ಮಾಡಬೇಕು ಎಂಬುದನ್ನು ತೋರಿಸಿಕೊಡುವ ಉದ್ದೇಶ ಸಬಲೀಕರಣ ಕೇಂದ್ರದ್ದಾಗಿತ್ತು. ನಮ್ಮ ಶಾಲೆಗೆ ಅನೇಕರು ಭೇಟಿಕೊಡುತ್ತಿದ್ದರು.

**ಹಗಲು ಆರೈಕೆ ಕೇಂದ್ರ**

ನಮ್ಮ ಶಿಶುವಿಹಾರದಲ್ಲಿರುವ ಮಕ್ಕಳ ಕೆಲವು ತಾಯಂದಿರು ಪೂರ್ಣಾವಧಿಯ ವೃತ್ತಿಯಲ್ಲಿ ಇರುವವರು, ಇವರಿಗೆ 12 ಗಂಟೆಗೆ ಶಾಲೆ ಬಿಟ್ಟ ನಂತರ ತಮ್ಮ ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗುವುದು ಸಾಧ್ಯವಿಲ್ಲವೆಂದು ನಾವು ಕಂಡುಕೊಂಡೆವು. ಹೀಗಾಗಿ, ನಿಗದಿ ಪಡಿಸಿದ ಪ್ರತ್ಯೇಕ ಶುಲ್ಕವನ್ನು ನೀಡಿ ಅವರು ತಮ್ಮ ಮಕ್ಕಳನ್ನು ಮಧ್ಯಾಹ್ನದ ಅವಧಿಯಲ್ಲಿ ನಮ್ಮ ಶಾಲೆಯಲ್ಲಿಯೇ ಬಿಡುವ ಅವಕಾಶ ಕಲ್ಪಿಸಿದೆವು. ಈ ಮಕ್ಕಳ ಅಣ್ಣ ಅಥವಾ ಅಕ್ಕ ಯಾರಾದರೂ ಇದ್ದಲ್ಲಿ ಅವರೂ ನಿತ್ಯ ತಮ್ಮ ಶಾಲೆಯ ಅವಧಿ ಮುಗಿದ ನಂತರ ಇಲ್ಲಿಯೇ ಬಂದು ಇರುವುದಕ್ಕೆ ಅನುಮತಿಯನ್ನು ನೀಡಿದೆವು. ಕೆಲವೊಮ್ಮೆ, ತಮ್ಮ ಚಿಕ್ಕ ಮಕ್ಕಳು ನಮ್ಮ ಶಾಲೆಯಲ್ಲಿ ವಿದ್ಯಾರ್ಥಿ ಅಲ್ಲದಿದ್ದ ಕೆಲವರು ನಮ್ಮ ಹಗಲು ಆರೈಕೆ ಕೇಂದ್ರಕ್ಕೆ ತಮ್ಮ ದೊಡ್ಡಮಕ್ಕಳನ್ನು ಸೇರಿಸಿಕೊಳ್ಳುವಂತೆ ಕೇಳಿಕೊಳ್ಳುತ್ತಿದ್ದರು. ಹೀಗಾಗಿ, ನಮ್ಮ ಹಗಲು ಆರೈಕೆ ಕೇಂದ್ರದಲ್ಲಿ ಮಿಶ್ರ ವಯೋಮಾನದ ಮಕ್ಕಳು ಇದ್ದರು. ಇದನ್ನು ಲಂಬಾಂತರ ಗುಂಪು ಎಂದು ಕರೆಯುವ ಪರಿಪಾಠ ಪ್ರಾರಂಭವಾಯಿತು. ಎಲ್ಲ ಮಕ್ಕಳಿಗೂ ಬಿಸಿ ಊಟ ಸಿಗುತ್ತಿತ್ತು. ಮಧ್ಯಾಹ್ನ ಸಣ್ಣ ಮಕ್ಕಳನ್ನು ಮಲಗಿಸಲಾಗುತ್ತಿತ್ತು, ಉಳಿದವರಿಗೆ, ಕಲೆ, ಕಸೂತಿ, ಆಟ ಮತ್ತು ಸಂಗೀತ, ನಾಟಕ ಹಾಗೂ ಗೊಂಬೆಯಾಟದ ಅಭ್ಯಾಸಗಳು ಇರುತ್ತಿದ್ದವು. ಈ ವಿಭಾಗವು ಸಂಜೆ 5.00ರವರೆಗೂ ತೆರೆದಿರುತ್ತಿತ್ತು. ತಮ್ಮ ಮಕ್ಕಳು ಸುರಕ್ಷಿತ ಪರಿಸರದಲ್ಲಿ ಇರುವರು ಮತ್ತು ಉತ್ತಮ ಸಹವಾಸವನ್ನು ಹೊಂದಿರುವರು ಹಾಗೂ ವೃತ್ತಿನಿರತ ನಿಗಾವಹಿಸುವವರೊಂದಿಗೆ ಇರುವರು ಎಂದು ಪೋಷಕರಿಗೆ ತಿಳಿದು ಬಂದಿದ್ದರಿಂದ ಈ ಸೇವೆಗಳು ಹೆಚ್ಚು ಜನಪ್ರಿಯವಾದವು. ಅನೇಕ ಶಾಲೆಗಳಿಗೆ ಇದು ಮಾದರಿಯಾಯಿತು ಎಂದು ನನಗೆ ಅನಿಸುತ್ತದೆ. ಇಂತಹ ಕಾರ್ಯಕ್ರಮಗಳು ಸಮುದಾಯಕ್ಕೆ ಬೆಲೆಕಟ್ಟಲಾಗದ ಸಂಪತ್ತು.

**ವಿಶೇಷಚೇತನ ಯುವಕರಿಗೆ ವ್ಯಕ್ತಿಗತ ಬೆಳವಣಿಗೆ ಮತ್ತು ತರಬೇತಿ**

ರಜತ ಮಹೋತ್ಸವದ ವರ್ಷವಾದ 2015ರಲ್ಲಿ, ಎಸ್‌ಇಟಿಯು, ವ್ಯವಸ್ಥಿತ ಪೂರ್ವ ತರಬೇತಿ ಘಟಕ (ದಿ ಸಿಸ್ಟಮಿಕ್ ಅರ್ಲಿ

**ರಾಜಕುಮಾರಿ ಅಮೃತ್ ಕೌರ್ ಶಿಶು ಅಧ್ಯಯನ ಕೇಂದ್ರದ ಪ್ರಸ್ತುತ ಮಾಹಿತಿ**

ಸುಧಾ ಪಾರ್ಥಸಾರಥಿ

**ಕೇಂದ್ರವು ನೀಡುತ್ತಿರುವ ವಿವಿಧ ಸೇವೆಗಳನ್ನು ಈ ಕೆಳಗೆ ನೀಡಲಾಗಿದೆ:**

**ಹಸುಗೂಸುಗಳ ಆರೈಕೆ ಮತ್ತು ಹಗಲು ಆರೈಕೆ ಕಾರ್ಯಕ್ರಮ** (ಆರು ತಿಂಗಳಂದ – ಹನ್ನೆರಡು ವರ್ಷದವರೆಗೆ)

**ಕಿಲ್ಕಾರಿ: ಎಳೆ ಮಕ್ಕಳ ಸಂಘ** (ಆರು ತಿಂಗಳಂದ – ಎರಡು ವರ್ಷದವರೆಗೆ)

**ಆಟದ ಕೇಂದ್ರ** (2 – 3 ವರ್ಷದವರಿಗೆ)

**ಶಿಶುವಿಹಾರ** (3 – 5 ವರ್ಷದವರಿಗೆ)

**ಎಸ್‌ಇಟಿಯು:** ಅಪಾಯದಲ್ಲಿರುವ ಹುಸುಗೂಸುಗಳಗಾಗಿ ಶೀಘ್ರ ಉಪಕ್ರಮ ಘಟಕ (ಹುಟ್ಟಿನಿಂದ – 3 ವರ್ಷದವರೆಗೆ)

**ವಿಶೇಷ ಅಗತ್ಯವಿರುವ ಮಕ್ಕಳಗೆ ಶೈಕ್ಷಣಿಕ ಮತ್ತು ಪರಿಹಾರಾತ್ಮಕ ಕಾರ್ಯಕ್ರಮ** (3–12 ವರ್ಷದವರಿಗೆ)

**ವಾಕ್ ಮತ್ತು ವೃತ್ತಿನಿಷ್ಠ ಚಿಕಿತ್ಸೆ**

**ಸಾಥಿ:** ಸಮಾಲೋಚನಾ ಘಟಕ

ಟ್ರೈನಿಂಗ್ ಯುನಿಟ್) ಪ್ರಾರಂಭಿಸಿತು. ಇದು ಬೆಳವಣಿಗೆ ವೈಕಲ್ಯದ (ಹುಟ್ಟಿದ ನಂತರ) ಅಪಾಯವನ್ನು ಹೊಂದಿರುವ ಎಳೆಯ ಮಕ್ಕಳ ಅಗತ್ಯವನ್ನು ಪೂರೈಸುವುದಕ್ಕಾಗಿ ಪ್ರಾರಂಭಿಸಲಾದ ಉಪಕ್ರಮ.

ಈ ಕೇಂದ್ರವು ಪ್ರಸ್ತುತ (2013 –2014) 150 ವಿದ್ಯಾರ್ಥಿಗಳನ್ನು ಹೊಂದಿದ್ದು ಅವರನ್ನು ಒಂಭತ್ತು ತರಗತಿಗಳಲ್ಲಿ ವಿಭಾಗಿಸಲಾಗಿದೆ. ಎಲ್ಲಾ ತರಗತಿಗಳಗೆ ನದಿಗಳ ಹೆಸರನ್ನು ನೀಡಲಾಗಿದೆ: ಶಿಪ್ರ, ನರ್ಮದಾ, ಕಾವೇರಿ, ಸರಯೂ ಮತ್ತು ಸಂಗಮ – ಪ್ರತಿಯೊಂದು ತರಗತಿಯೂ ಯಾವುದೇ ಬಲವಂತವಿಲ್ಲದೆ ಅಥವಾ ಹಿಡಿದಿಟ್ಟುಕೊಳ್ಳದೆ ಹರಿಯುವ ನೀರಿನ ಹರಿವನ್ನು ಹೊಂದಿರುವ ನದಿಯಂತೆ – ಕೇಂದ್ರದ ವಿಧಾನವಾದ ಮಕ್ಕಳ ಬೋಧನೆ ಮತ್ತು ಆರೈಕೆಯನ್ನು ಎತ್ತಿ ಹೇಳುವ ಒಂದು ಆದರ್ಶ.

ಕೇಂದ್ರದ ಸಮನ್ವಯ ಕಾರ್ಯಕ್ರಮವಾದ "ಸಂಗಮ" ವಿಭಿನ್ನ ಮೂಲಗಳಂದ ಬಂದ ನೀರು ಒಂದು ತೊರೆಯಾಗಿ ಕೂಡಿಹರಿಯುವುದನ್ನು ಬಿಂಬಿಸುತ್ತದೆ. ನಮ್ಮ ಕಾರ್ಯಕ್ರಮವೂ ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿರುವ ವಿಭಿನ್ನ ಹಿನ್ನೆಲೆಯಿಂದ ಬಂದ ಮಕ್ಕಳು ಒಂದೆಡೆ ಸೇರಿ ಒಟ್ಟಾಗಿ ಕಲಿತು ವಿಕಸನಗೊಳ್ಳುವ ಕಾರ್ಯಕ್ರಮ. ಪೂರ್ವ ಉಪಕ್ರಮ ಘಟಕ – ಎಸ್‌ಇಟಿಯು ಮನೆ ಮತ್ತು ಶಾಲಾ ವಿದ್ಯಾಭ್ಯಾಸದ ನಡುವೆ ಉಂಟಾಗುವ ಅಂತರವನ್ನು ಬೆಸೆಯುತ್ತದೆ.

ಎರಡು ತರಗತಿ ಕೋಣೆಗಳನ್ನು ವಿಶೇಷ ಅಗತ್ಯವಿರುವ ಮಕ್ಕಳಗಾಗಿ ಪ್ರತ್ಯೇಕವಾಗಿ ಇಡಲಾಗಿದ್ದರೂ ಈ ತರಗತಿ ಕೋಣೆಗಳು ಸಾಧಾರಣ ತರಗತಿಗಳಗೆ ಭೌತಿಕವಾಗಿ ಹೊಂದಿಕೊಂಡಿವೆ. ಶಿಶುವಿಹಾರದ ಎರಡು ವಿಭಾಗಗಳು ಸಮನ್ವಯ ವ್ಯವಸ್ಥೆಯನ್ನು ಹೊಂದಿರುವಂತಹದ್ದಾಗಿವೆ. ಪ್ರಾರ್ಥನಾ ಸಮಯ, ಆಟದ ಸಮಯ, ಪಠ್ಯೇತರ ಚಟುವಟಿಕೆಗಳಲ್ಲಿನ ಭಾಗವಹಿಸುವಿಕೆ, ಹಬ್ಬಗಳ ಆಚರಣೆ, ಪ್ರವಾಸ ಇಂತಹ ಕಾರ್ಯಕ್ರಮಗಳಲ್ಲಿ ಎಲ್ಲಾ ಮಕ್ಕಳೂ ಒಟ್ಟಾಗಿ ಪಾಲ್ಗೊಳ್ಳುತ್ತಾರೆ. ಇದರಿಂದಾಗಿ ವಾತಾವರಣವು ಜೊತೆಗಾರರನ್ನು ಗಮನಿಸುವುದು ಮತ್ತು ಅನುಕರಣೆ ಮಾಡುವುದರಿಂದ ಕಲಿಕೆಗೆ ಅನುಕೂಲವನ್ನು ಒದಗಿಸುವುದಲ್ಲದೇ ಒಬ್ಬರೊಂದಿಗೆ ಇನ್ನೊಬ್ಬರು ಉತ್ತಮ ಸಂವೇದನೆಯನ್ನು ಬೆಳಸಿಕೊಳ್ಳುವ ವಾತಾವರಣವನ್ನು ಸೃಷ್ಟಿಸುತ್ತದೆ. ಶೈಕ್ಷಣಿಕ ಕಾರ್ಯಕ್ರಮವನ್ನು ವೈಯಕ್ತೀಕರಣಗೊಳಸಲಾಗಿರುವುದರಿಂದ ಯಾವುದಕ್ಕೆ ವಿಶೇಷ ಮತ್ತು ಹೆಚ್ಚಿನ ಕೊಡುಗೆ ಅವಶ್ಯಕತೆ ಇದೆಯೋ ಅದರ ಬಗ್ಗೆ ನಿಗಾವಹಿಸುವಂತೆ ಮಾಡುತ್ತದೆ.

ಒಗ್ಗೂಡಿಸುವಿಕೆ ಮತ್ತು ಸಮಾವೇಶನವು ಇಂತಹ ಮಕ್ಕಳ ಅಗತ್ಯತೆಗಳು ಮತ್ತು ಹಕ್ಕುಗಳ ಬಗ್ಗೆ ಸಮುದಾಯವು ಸೂಕ್ಷ್ಮತೆಯನ್ನು ಬೆಳಸಿಕೊಳ್ಳುವುದಕ್ಕೆ ನೆರವು ನೀಡುತ್ತದೆ. ಇದಲ್ಲದೇ, ಇಂತಹ ಮಕ್ಕಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಪಡೆದುಕೊಳ್ಳಲು ಮತ್ತು ಸಮುದಾಯದ ಫಲದಾಯಿ ಸದಸ್ಯರಾಗಲು ಈ ಮಕ್ಕಳ ಬಗ್ಗೆ ಸಮುದಾಯವು ತನ್ನ ಕರ್ತವ್ಯವನ್ನು ಅರಿತುಕೊಳ್ಳುವಂತೆ ಮಾಡುತ್ತದೆ. ಇಲ್ಲಿ ಇಂತಹ ಮಕ್ಕಳು ಮಾತ್ರವಲ್ಲದೇ, ಪೋಷಕರು, ವಾಹನ ಚಾಲಕರು, ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಎಲ್ಲರೂ ಎಲ್ಲಾ ಮಕ್ಕಳೊಡನೆ ಒಡನಾಡುವಂತೆ ಮಾಡಲಾಗುತ್ತದೆ ಎಂಬುದನ್ನೂ ಹೇಳ ಬೇಕು. ಕೇಂದ್ರದ ಹಿಂದಿನ ವಿದ್ಯಾರ್ಥಿಯಾದ ಸಾರ ಸಿಂಗ್ ಅವರ ತಂದೆ ಶ್ರೀಯುತ ಪ್ರಕಾಶ್ ಸಿಂಗ್ ಅವರ ಹೇಳಕೆಯು ಈ ರೀತಿಯಾಗಿದೆ – "ವಿಶೇಷಚೇತನ ಮಕ್ಕಳು ಮತ್ತು ಅವರು ಎದುರಿಸುವ ಸವಾಲುಗಳೆಡೆಗೆ ಸದಭಿಪ್ರಾಯದ ಧೋರಣೆಯನ್ನು ಬೆಳಸಿಕೊಳ್ಳುವಂತೆ ನಾನು ವೈಯಕ್ತಿಕವಾಗಿ ಪ್ರಭಾವಿತನಾಗಿದ್ದೇನೆ." ಮತ್ತೊಬ್ಬ ಹಿಂದಿನ ವಿದ್ಯಾರ್ಥಿ ಶೋಹುಮ್ ಖಾನ್‌ನ ತಾಯಿ ಸಬಿಹಾ ಖಾನ್‌ರವರು ದೈಹಿಕ

ಮತ್ತು ಮಾನಸಿಕ ಸಮಸ್ಯೆಗಳನ್ನು ಹೊಂದಿದ ಮಕ್ಕಳು ಎಂದಿಗೂ ಏನನ್ನು ಮಾಡಲು ಬಾರದವರು ಎಂದು ತಾವು ಪರಿಗಣಿಸಿದ್ದನ್ನು ಸ್ಮರಿಸಿಕೊಳ್ಳುತ್ತಾರೆ. ಅವರ ಮಗ ಶಿಶುವಿಹಾರ ವಿಭಾಗದಲ್ಲಿ ಓದುತ್ತಿದ್ದಾಗ ಕೇಂದ್ರಕ್ಕೆ ಅವರು ಪದೇ-ಪದೇ ಭೇಟಿ ನೀಡುತ್ತಿದ್ದುದರಿಂದ ಮತ್ತು ಇತರ ಪೋಷಕರೊಂದಿಗಿನ ಅವರ ಒಡನಾಟದಿಂದ ವಿಶೇಷ ಮಕ್ಕಳ ವಿಭಿನ್ನ ಅಗತ್ಯತೆಗಳ ಬಗ್ಗೆ ಅವರು ಅರಿವನ್ನು ಪಡೆದರು ಮತ್ತು ಅವರ ಬಗ್ಗೆ ಹೇಗೆ ಸದಭಿಪ್ರಾಯದ ಧೋರಣೆಯನ್ನು ಪಡೆದರು ಎಂಬುದನ್ನೂ ಅವರು ಸ್ಮರಿಸಿಕೊಳ್ಳುತ್ತಾರೆ.

ಸೇತು(SETU) ಕಾರ್ಯಕ್ರಮದ ಅಡಿಯಲ್ಲಿ, ಹುಟ್ಟಿದಾರಾಭ್ಯ ಅಪಾಯದಂಚಿನಲ್ಲಿರುವ ಮಕ್ಕಳನ್ನು ಪರಿಣಿತರ ಒಂದು ತಂಡವು ಪರೀಕ್ಷಿಸುತ್ತದೆ ಮತ್ತು ಸೂಕ್ತವಾದ ಕಾರ್ಯಕ್ರಮವನ್ನು ನೀಡಲಾಗುತ್ತದೆ. ಈ ಉಪಕ್ರಮವು ವೈಯಕ್ತಿಕ ಅವಧಿಗಳು, ಗುಂಪು ಅವಧಿಗಳು ಅಥವಾ ಸಮನ್ವಯ ಅವಧಿಗಳಾಗಿದ್ದು ಮಗುವಿನ ಅಗತ್ಯ ಮತ್ತು ಸ್ಥಿತಿಯನ್ನು ಅವಲಂಬಿಸಿರುತ್ತದೆ. ಅವಧಿಯ ಸಮಯದಲ್ಲಿ ಸಮಾಲೋಚನೆಯು ಮಕ್ಕಳನ್ನು, ಆರೈಕೆ ನೀಡುವವರನ್ನು, ಕುಟುಂಬದ ಸದಸ್ಯರನ್ನು, ಜೊತೆಗಾರರು ಹಾಗೂ ಒಡಹುಟ್ಟಿದವರನ್ನು ಸಬಲಗೊಳಿಸಿ ವಿಶೇಷ ಅಗತ್ಯವಿರುವ ಮಕ್ಕಳನ್ನು ಬೆಳೆಸುವಾಗ ಎದುರಾಗುವ ಸಮಸ್ಯೆಗಳನ್ನು ಎದುರಿಸುವ ಶಕ್ತಿಯನ್ನು ನೀಡುತ್ತದೆ. ನೀಡಿರುವ ಕಾರ್ಯಕ್ರಮವನ್ನು ಮನೆಯಲ್ಲಿಯೂ ಅನುಸರಿಸಲು ಮತ್ತು ತಮ್ಮ ಸಮಯವನ್ನು ಫಲಕಾರಿಯಾಗಿ ಮಗುವಿನೊಂದಿಗೆ ಕಳೆಯಲು ಇದು ಪ್ರೋತ್ಸಾಹಿಸುತ್ತದೆ.

ವೃತ್ತಿ ತರಬೇತಿ ಕಾರ್ಯಕ್ರಮದ ಭಾಗವಾಗಿ, ನಮ್ಮ ವಿಶೇಷ ಶಿಕ್ಷಕರು ವಿಶೇಷಚೇತನ ಯುವಜನತೆಗೆ ತರಬೇತಿಯನ್ನು ನೀಡುತ್ತಾರೆ. ಈ ರೀತಿ ತರಬೇತಿ ಹೊಂದಿರುವ ವ್ಯಕ್ತಿಗಳಿಗೆ ವೃತ್ತಿಯನ್ನು ಹುಡುಕಿಕೊಡಲು ಸಹ ಸಹಾಯವನ್ನು ಒದಗಿಸಲಾಗುತ್ತದೆ.

ಗುಣಾತ್ಮಕ ಸೇವೆಗಳನ್ನು ಪಡೆಯಲಾರದ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಸಮುದಾಯದ ಮಕ್ಕಳಿಗೆ ಅಗತ್ಯವಿರುವ ಧನಸಹಾಯವನ್ನು ಪ್ರಾಯೋಜಕ ಕಾರ್ಯಕ್ರಮದ ಮೂಲಕ ಒದಗಿಸಿ ಅವರನ್ನು ಸಮನ್ವಯ ಶಿಕ್ಷಣದಲ್ಲಿ ಒಳಗೊಳ್ಳಲಾಗುತ್ತದೆ.

ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಪೋಷಕರಿಗೆ ನಡೆಸಲಾಗುವ ಕಾರ್ಯಾಗಾರವನ್ನು ಸಮನ್ವಯ ಮಾದರಿಯಲ್ಲಿ ನಡೆಸಲಾಗುತ್ತದೆ. ಇಲ್ಲಿ ಪೋಷಕರಿಗೆ ಒಬ್ಬರೊಡನೆ ಇನ್ನೊಬ್ಬರು ಬೆರೆತು ಮಕ್ಕಳ ಕಾಳಜಿವಹಿಸುವಿಕೆಯಲ್ಲಿ ಎದುರಾಗುವ ಸವಾಲುಗಳನ್ನು ಹಂಚಿಕೊಳ್ಳುವಂತೆ ಮತ್ತು ತಮ್ಮ ಅನುಭವಗಳನ್ನು ವ್ಯಕ್ತಪಡಿಸುವಂತೆ ಏರ್ಪಡಿಸಲಾಗಿರುತ್ತದೆ. ಇತ್ತೀಚೆಗೆ, ನಡೆದ ಪ್ರತಿ ವರ್ಷ ಡಿಸೆಂಬರ್ 3ರಂದು ಆಚರಿಸುವ ಅಂತಾರಾಷ್ಟ್ರೀಯ ಅಸಮರ್ಥ ವ್ಯಕ್ತಿಗಳ ದಿನದಲ್ಲಿ, ನ್ಯಾಷನಲ್ ಟ್ರಸ್ಟ್‌ನ ಮುಖ್ಯಸ್ಥರಾಗಿರುವ ಕುಮಾರಿ ಪೂನಂ ನಟರಾಜನ್ ಪೋಷಕರನ್ನು ಉದ್ದೇಶಿಸಿ ಟ್ರಸ್ಟ್‌ನಲ್ಲಿ ಕ್ರಿಯಾಶೀಲವಾಗಿರುವ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ವೀಕ್ಷಕರಲ್ಲಿ ಪೋಷಕರನ್ನೂ ಸೇರಿಸಲಾಗಿದ್ದು ಇವರೆಲ್ಲರೂ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.






**ಆನಂದಲಕ್ಷ್ಮೀ**ಯವರು ಮಾಡಿಸನ್‌ನಲ್ಲಿರುವ ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯದಿಂದ ಮಾನವ ಅಭಿವೃದ್ಧಿ ವಿಷಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಚೆನ್ನೈನಲ್ಲಿರುವ ಒಂದು ವಿನೂತನ ಶಾಲೆಯಾದ ವಿದ್ಯಾ ಮಂದಿರದ ಪ್ರಾರಂಭಿಕ ಏಳಿಗೆಗೆ ಇವರು ಕಾರಣಕರ್ತರು. ಅನಂತರ ಇವರು ಲೇಡಿ ಇರ್ವಿನ್ ಕಾಲೇಜಿನಲ್ಲಿ ಬೋಧಿಸಲು ಪ್ರಾರಂಭಿಸಿದರು. ಇಲ್ಲಿ ಇವರು ಮಕ್ಕಳ ಅಭಿವೃದ್ಧಿ ವಿಭಾಗವನ್ನು ಪ್ರಾರಂಭಿಸಿ ಕಾಲೇಜಿನ ನಿರ್ದೇಶಕರಾಗುವವರೆಗೂ ಇದರ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದರು. ನಿವೃತ್ತಿಯಾದ ನಂತರ, ಇವರು ಎಸ್‌ಇಡಬ್ಲ್ಯುಎ ಅಹ್ಮದಾಬಾದ್, ಎಸ್‌ಡಬ್ಲ್ಯುಆರ್‌ಸಿ (ಬೇರ್‌ಫುಟ್ ಕಾಲೇಜ್) ಟಿಲೋನಿಯ ಮತ್ತು ವಾಲಂಟರಿಯಟ್, ಪಾಂಡಿಚೆರಿ ಹಾಗೂ ಬಾಲ ಮಂದಿರ ಚೆನ್ನೈ ಹೀಗೆ ಮುಂತಾದೆಡೆಗಳಲ್ಲಿ ಸ್ವಯಂಸೇವಾ ಕಾರ್ಯಕ್ರಮದಲ್ಲಿ ಕ್ರಿಯಾಶೀಲರಾದರು. ಕಾಗ್ನಿಟಿವ್ ಡೆವೆಲಪ್ಮೆಂಟ್ ಅಂಡ್ ಸೋಷಿಯಲೈಸೇಷನ್, ರಿಸರ್ಚ್ ಮೆಥೆಡ್ಸ್ ಅಂಡ್ ಇಂಡಿಯನ್ ಕಲ್ಚರಲ್ ಆಸ್ಪೆಕ್ಟ್ಸ್ ಇವರ ಕೆಲವು ಪ್ರಕಟಣೆಗಳು. ಇವರನ್ನು anandalakshmy@vsnl.net ಇಲ್ಲಿ ಸಂಪರ್ಕಿಸಬಹುದು.



# ವಿಶೇಷ ಅಗತ್ಯಗಳು: ಆರಂಭಿಕ ಬಾಲ್ಯದ ವರ್ಷಗಳಲ್ಲಿ ಅವನ್ನು ಗುರುತಿಸುವುದು ಮತ್ತು ಅಗತ್ಯ ಉಪಕ್ರಮಗಳು

ಅನುರಾಧ ನಾಯ್ಡು

ನೀವು ಮೊದಲ ಹೆಜ್ಜೆ ಇಟ್ಟ ದಿನದ ನೆನಪು ನಿಮಗಿದೆಯೇ? ಇಲ್ಲದಿರುವ ಸಾಧ್ಯತೆಯೇ ಹೆಚ್ಚು. ನಮ್ಮ ಬಾಲ್ಯ ನಮಗೆ ಮಸುಕಾಗಿ ನೆನಪಿದೆ. ಹೆಚ್ಚೆಂದರೆ ನಮಗೆ ನಮ್ಮ 3ನೇ ವರ್ಷದಲ್ಲಿನ ಕೆಲವು ಘಟನೆಗಳ ನೆನಪಿರಬಹುದು. ನಾವು ಅದರ ಬಗ್ಗೆ ಯೋಚಿಸಿದರೆ, ಬಾಲ್ಯದಲ್ಲಿನ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಒಂದು ಪವಾಡ ಎಂದೇ ಹೇಳಬಹುದು. ಜೀವನದ ಮೊದಲ ಮೂರು ವರ್ಷಗಳಲ್ಲಿ 90 ಪ್ರತಿಶತ ಮೆದುಳಿನ ಬೆಳವಣಿಗೆ ಆಗುತ್ತದೆ. ಆರು ವರ್ಷವಾದಾಗ ನಾವು ನಡೆಯಲು, ಮಾತನಾಡಲು, ತಿನ್ನಲು, ಗೆಳೆಯರೊಂದಿಗೆ ಆಟವಾಡಲು, ಕುತೂಹಲ ತೋರಿಸಲು ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಕಲಿತಿರುತ್ತೇವೆ.

ಪ್ರಕೃತಿಯಲ್ಲಿನ ಪ್ರತಿಯೊಂದು, ಒಂದು ನಿರ್ದಿಷ್ಟ ವಿನ್ಯಾಸವು ತೆರೆದುಕೊಳ್ಳುವಂತೆ ಪೂರ್ವ ನಿರ್ಧರಿತ ಕಾರ್ಯವಾಗಿ ಯೋಜಿತಗೊಂಡಿದೆ. ಉದಾಹರಣೆಗೆ, ಹಸುಗೂಸುಗಳು ತಮ್ಮ ದೇಹದ ಮೇಲಿನ ಹಿಡಿತವನ್ನು ಅನುಕ್ರಮವಾಗಿ ಕುತ್ತಿಗೆಯಿಂದ ಸೊಂಟದವರೆಗೂ ದೇಹದೊಳಗಿಂದ ಕೈಕಾಲಿನವರೆಗೆ ಪಡೆಯುತ್ತವೆ. ಹುಟ್ಟಿದಾಗ ಹಸುಗೂಸುಗಳ ಮೆದುಳು 100 ಬಿಲಿಯನ್ ನ್ಯೂರಾನ್‌ಗಳನ್ನು ಹೊಂದಿರುತ್ತದೆ! ಮೊದಲ ಕೆಲವು ದಿನಗಳಲ್ಲಿ ಸಿನಾಪ್ಸಿಸ್ ಸಂಪರ್ಕವು ಪ್ರತಿ ನ್ಯೂರಾನ್‌ಗೆ 2500ರಷ್ಟು ಇರುತ್ತದೆ. ಮೂರುವರ್ಷಗಳು ತುಂಬಿದ ಮೇಲೆ ಅದರ ಸಂಖ್ಯೆ ಸುಮಾರು ಆರು ಪಟ್ಟು ಹೆಚ್ಚಾಗುತ್ತದೆ.

ಬೆಳವಣಿಗೆ ಮನಃಶಾಸ್ತ್ರಜ್ಞರಾದ ಜಾನ್ ಪಿಯಾಜೆ ಮತ್ತು ಲೆವ್ ವಿಗೋಟ್ಸ್ಕಿಯವರು ಮಕ್ಕಳ ಬೆಳವಣಿಗೆ ಸಿದ್ಧಾಂತವನ್ನು ಪ್ರತಿಪಾದಿಸಿದರು. ಸಮಕಾಲೀನ ಸಂಶೋಧನೆಗಳೂ ಅವರ ಸಿದ್ಧಾಂತದಲ್ಲಿನ ಹೇಳಿಕೆಗಳನ್ನು ವೈಜ್ಞಾನಿಕ ದತ್ತಾಂಶದೊಂದಿಗೆ ಮಾನ್ಯಗೊಳಿಸುತ್ತವೆ. ನವಜಾತ ಶಿಶುಗಳು ಮುಖದಲ್ಲಿನ ಸಂತೋಷದ ಮತ್ತು ದುಃಖದ ಭಾವನೆಗಳನ್ನು ಗುರುತಿಸಬಲ್ಲವು ಅಥವಾ ಹುಟ್ಟಿದ ಕೂಡಲೆ ಶಿಶುಗಳು 8ರಿಂದ 10 ಇಂಚುಗಳಷ್ಟು ದೂರದಲ್ಲಿರುವ ವಸ್ತುಗಳನ್ನು ಮತ್ತು ಮನುಷ್ಯರ ಮುಖಗಳನ್ನು ನೋಡಬಲ್ಲವು ಎಂದು ನಿಮಗೆ ತಿಳಿದಿದೆಯೇ? ಮಗುವಿಗೆ ಆರು ವರ್ಷ ತಲುಪಿದಾಗ ಅದಕ್ಕಿರುವ ಕಲಿಕೆಯ ಸಾಮರ್ಥ್ಯ ಅಪಾರ.

ಎಳೆ ವಯಸ್ಸಿನ ಮಕ್ಕಳ ಬೆಳವಣಿಗೆಗೆ ಸಹಾಯ ಮಾಡುವ ಕಾರ್ಯದಲ್ಲಿ ನಿರತರಾದ ನನ್ನಂತಹವರಿಗೆ ಈ ಎಳೆಯ ವಯಸ್ಸಿನಲ್ಲಾಗುವ ನರವೈಜ್ಞಾನಿಕ ಬೆಳವಣಿಗೆಗಳು ಮಂತ್ರ-ಮುಗ್ಧಗೊಳಿಸುವುದೇ ಅಲ್ಲದೇ ನಮ್ಮನ್ನು ವಿನಮ್ರರನ್ನಾಗಿ ಮಾಡುತ್ತದೆ. ಯಾವ ಮಕ್ಕಳ ಬೆಳವಣಿಗೆ ವಿನ್ಯಾಸವು ನ್ಯೂನತೆ, ಕುಂಠಿತ ಅಥವಾ ವಿಳಂಬವಾಗಿದೆಯೋ ಅಂತಹ ಮಕ್ಕಳ ಕುಟುಂಬದವರೊಂದಿಗೆ ಸಕ್ರಿಯವಾಗಿ ಪಾಲ್ಗೊಂಡು ಅವರನ್ನ ಬೆಂಬಲಿಸಬೇಕಾದಂತಹ ಸಮಯವಿದು. ವಿಶಾಲಾರ್ಥದಲ್ಲಿ ಮಗುವಿನ ಜೀವನದಲ್ಲಿರುವ ಪ್ರತಿಯೊಬ್ಬರೂ ಎಳೆ ವಯಸ್ಸಿನ ಮಕ್ಕಳ ಬೆಳವಣಿಗೆಗೆ ಸಹಾಯ ಮಾಡುವ ಕಾರ್ಯದಲ್ಲಿ ನಿರತರಾದವರೇ. ಇದಕ್ಕೆ ಬೇಕಾಗಿರುವುದು ಉತ್ತಮ ವೀಕ್ಷಣಾ ಕೌಶಲ್ಯ ಮತ್ತು ಬೆಳವಣಿಗೆಯ ಗುರಿಗಳು ಮತ್ತು ಮಹತ್ವದ ಘಟ್ಟಗಳ ಬಗ್ಗೆ ಆಳವಾದ ಅರಿವು.

## ಹುಟ್ಟು ಮತ್ತು ಮೊದಲ ವರ್ಷ

ಹಾಂಗ್‌ಕಾಂಗ್‌ನಲ್ಲಿ ಇತ್ತೀಚಿನವರೆಗೂ ನಾನು ಸರ್ಕಾರಿ ಆರೋಗ್ಯ ಸೇವೆಗಳಿಂದ ಕಳುಹಿಸಿಕೊಡಲಾದ 0-3 ವರ್ಷದ ವಯೋಮಾನದವರೊಂದಿಗೆ ಅತ್ಯಂತ ಆಳವಾಗಿ ಕೆಲಸ ಮಾಡಿದೆ. ನಾವು ದಾಖಲಿಸಿಕೊಂಡ ವಿನ್ಯಾಸವು ಎಳೆವಯಸ್ಸಿನಲ್ಲಿ ಬೆಳವಣಿಗೆ ನ್ಯೂನತೆಯನ್ನು ಶೀಘ್ರವಾಗಿ ಗುರುತಿಸಲು ಮೂರು ಅವಕಾಶಗಳಿವೆ ಎಂಬುದನ್ನು ತೋರಿಸಿತು.

ನಮ್ಮಲ್ಲಿಗೆ ಬಂದ ಅತ್ಯಂತ ಕಿರಿಯ ಶಿಶುವೆಂದರೆ ಕೆಲವೇ ದಿನಗಳ ಮಗುವಾಗಿತ್ತು. ಆಸ್ಪತ್ರೆಯಲ್ಲಿ ಪೂರ್ವಭಾವಿ ಆರಂಭಿಕ ಸಕ್ರಿಯ ಪತ್ತೆ ಸೇವೆಗಳು ಲಭ್ಯವಿದ್ದಲ್ಲಿ, ಅಪಘಾತದ ಕಾರಣದಿಂದಾದ ಅಥವಾ ಆನುವಂಶೀಯ ನ್ಯೂನತೆಗಳನ್ನು ಹುಟ್ಟಿದ ಕೂಡಲೆ (ಅಥವಾ ಹುಟ್ಟುವ ಮೊದಲೇ), ಅದೇ ಆಸ್ಪತ್ರೆಯಲ್ಲಿಯೇ ಪತ್ತೆ ಹಚ್ಚಬಹುದು. ನಮ್ಮ ಬಳಿ ಬಂದ ಶಿಶುವನ್ನು ಮೊದಲ ಬಾರಿಗೆ ನಾವು ನೋಡಿದಾಗ ಅವಳಿಗೆ ಕೇವಲ 18 ದಿನಗಳಾಗಿತ್ತು. ಅವಳ ಸ್ಥಿತಿಯು ಒಂದು ಅಪರೂಪವಾದ ಅನುವಂಶೀಯ ನ್ಯೂನತೆಯಾಗಿದ್ದು ಅದನ್ನು ಪ್ರಡೆರ್-ವಿಲಿ ಸಿಂಡ್ರೋಮ್ ಎಂದು ಕರೆಯಲಾಗುವುದು. ಇದನ್ನು ಮಗು ಹುಟ್ಟಿದಾಗಲೇ ಒಂದು ಸರ್ಕಾರಿ ಆಸ್ಪತ್ರೆಯಲ್ಲಿ

ಪತ್ತೆ ಹಚ್ಚಲಾಗಿತ್ತು. ಪಿಡಬ್ಲ್ಯುಎಸ್ ನ್ಯೂನತೆಯು 12,000 – 15,000 ಜನರಲ್ಲಿ ಒಬ್ಬರಿಗೆ ಬರಬಹುದಾದ ಅಪರೂಪವಾದ ನ್ಯೂನತೆಯಾಗಿತ್ತು.

ಸಾಮಾನ್ಯ ಸ್ಥಿತಿ ಮತ್ತು ಬೆಳವಣಿಗೆಯ ಬಗ್ಗೆ ಇರುವ ನಮ್ಮ ಆಲೋಚನೆಗಳನ್ನು ನಾವು ಬಲವಂತವಾಗಿ ಪುನರ್ವಿಮರ್ಶಿಸಿಕೊಳ್ಳುವಂತೆ ಪ್ರಕೃತಿಯು ಯಾವಾಗಲೂ ನಮಗೆ ಸವಾಲನ್ನು ಒಡ್ಡುತ್ತಿರುತ್ತದೆ. ಅಂತಹ ಒಂದು ಸವಾಲೆಂದರೆ ಆನುವಂಶೀಯ ನ್ಯೂನತೆಗಳನ್ನು ಹೊಂದಿರುವ ಮಕ್ಕಳ ಅಗತ್ಯಗಳಿಗೆ ಪ್ರತಿಸ್ಪಂದಿಸುವ ಸಾಮರ್ಥ್ಯವನ್ನು ಹೊಂದುವುದು. ಅಪರೂಪವಾದ ಆನುವಂಶೀಯ ನ್ಯೂನತೆಗಳಾದ ಪ್ರಡೆರ್–ವಿಲಿ ಸಿಂಡ್ರೋಮ್, ಕ್ರೈ–ಡು–ಚಾಟ್, ರುಬಿನ್‌ಸ್ಟೈನ್–ಟೇಬಿ ಸಿಂಡ್ರೋಮ್, ಮೈಟೋಕಾಂಡ್ರಿಯಲ್ ರೋಗ, ಈ ರೀತಿಯ ಕೆಲವೊಂದು ನ್ಯೂನತೆಗಳನ್ನು ಜನನವಾದ ಕೂಡಲೆ ಪತ್ತೆ ಹಚ್ಚುವಂತಹದ್ದಾಗಿದ್ದು, ಇಂದು, ಇಂತಹಾ ನ್ಯೂನತೆಗಳ ಬಗ್ಗೆ ಅಪರಿಮಿತವಾದ ಮಾಹಿತಿಯು ಲಭ್ಯವಿದೆ ಮತ್ತು ಇಂತಹ ನ್ಯೂನತೆಗಳಿಂದ ಬಳಲುತ್ತಿದ್ದಾರೆ ಎಂದು ಪತ್ತೆ ಹಚ್ಚಲಾದ ಮಕ್ಕಳ ಪೋಷಕರ ಸಹಾಯಕ್ಕೆ ಸಂಪರ್ಕಜಾಲಗಳು ಲಭ್ಯವಿವೆ. ಆರಂಭದ ಕೆಲವು ವರ್ಷಗಳಲ್ಲಿ ಪೋಷಕರು ದುಃಖ, ಹತಾಶೆ ಮತ್ತು ಕೋಪವನ್ನು ಸಂಭಾಳಿಸಲು ಕಷ್ಟಪಡಬೇಕಾಗುತ್ತದೆ. ತಾಯಂದಿರಿಗೆ ಮನೆಯಲ್ಲಿ ಸಂತೈಸಿ ಧೈರ್ಯ ತುಂಬುವ ಸಹಾಯ ದೊರೆಯದಿದ್ದಲ್ಲಿ ಅವರು ಖಿನ್ನತೆಗೆ ಒಳಗಾಗುತ್ತಾರೆ. ಹೀಗಿದ್ದರೂ ಒಬ್ಬ ಡೌನ್ ಸಿಂಡ್ರೋಮ್ ಹೊಂದಿದ್ದ ಮಗುವನ್ನು ಪಡೆಯಲು ತೀರ್ಮಾನಿಸಿದ ಮತ್ತು ಪೂರ್ಣ ಮನಸ್ಸಿನಿಂದ ಅವನನ್ನು ಅಪ್ಪಿ ಮುದ್ದಾಡುತ್ತಿದ್ದ ಒಬ್ಬ ತಾಯಿಯ ಬಗ್ಗೆಯೂ ನನಗೆ ತಿಳಿದಿದೆ.

ನಾನು ಹಾಂಗ್‌ಕಾಂಗ್ ಮತ್ತು ಭಾರತ ಇವೆರಡೂ ಕಡೆಯಲ್ಲಿ ನೋಡಿರುವಂತೆ, ಇಂತಹ ಮಕ್ಕಳ ಮೊದಲ ವರ್ಷದಲ್ಲಿ ವೈದ್ಯಕೀಯ ಕ್ರಮಗಳಾದ – ಶಸ್ತ್ರಚಿಕಿತ್ಸೆ, ಆಹಾರವನ್ನು ಉಣಿಸುವ ಚಿಕಿತ್ಸಾಲಯಗಳು – ತುರ್ತು ಗಮನ ನೀಡುವ ಅಗತ್ಯಗಳು ಮುಂತಾದವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಿದ್ದರೂ, ಆರಂಭಿಕ ಹಂತದಲ್ಲೇ ಚಟುವಟಿಕೆಯ ಕಾರ್ಯಕ್ರಮಗಳಿಗೆ ಅವಕಾಶವಿದೆ. ಈ ಹಂತದಲ್ಲಿ ಇಂದ್ರಿಯಗಳ ಸಂವೇದನೆ, ಚಲನೆ ಮತ್ತು ಮಾತುಗಾರಿಕೆ ಹುರಿದುಂಬಿಸಲು ಮತ್ತು ಗಮನಿಸಲು ಕೆಲವೊಂದು ಚಟುವಟಿಕೆಗಳನ್ನು ಶಿಫಾರಸು ಮಾಡಲಾಗುತ್ತದೆ. ಅವುಗಳೆಂದರೆ:

- ವಿಭಿನ್ನ ಭಂಗಿಗಳಲ್ಲಿ ಆಟವಾಡುವಂತೆ ಪ್ರೋತ್ಸಾಹಿಸುವುದು: ಹೊಟ್ಟೆಯ ಮೇಲೆ ಮಲಗಿ, ಕುಳಿತು, ನಿಂತು, ಮಂಡಿಯೂರಿಕೊಂಡು.
- ಬೆಳವಣಿಗೆಗೆ ಸೂಕ್ತವಾದ ಆಟಿಕೆಗಳನ್ನು ಬಳಸಿ ಆಟವಾಡುವುದು: ಗಿಲಕಿಗಳು, ಚೆಂಡು, ಅಥವಾ ಬಾಕ್ಸ್ ಜೋಡಣೆ ಮಾಡಬಹುದಾದ ಬಟ್ಟಲುಗಳು, ಪೆಗ್ ರಿಂಗುಗಳು ಮತ್ತು ತಳ್ಳುವ ಕಾರುಗಳು.
- ಇಂದ್ರಿಯಗಳನ್ನು ಪ್ರಚೋದಿಸುವ ಆಟಗಳು: ಪರಿಸರದಲ್ಲಿನ ಶಬ್ಧಗಳನ್ನು ಆಲಿಸುವುದು, ವಸ್ತುಗಳ ಜಾಡನ್ನು ಹಿಡಿದು ಹೋಗುವುದು, ಶಬ್ದಗಳನ್ನು ಅನುಕರಿಸುವುದು, ಕ್ರಿಯೆಗಳನ್ನು ಅನುಕರಿಸುವುದು, ಉದಾಹರಣೆಗೆ, ಚಪ್ಪಾಳೆ ಹೊಡೆಯುವುದು, ಕೈ ಬೀಸುವುದು, ತಟ್ಟುವುದು ಇತ್ಯಾದಿ.
- ಬೆರಳು ಮಾಡಿ ತೋರಿಸುವುದು, ಪ್ರತಿಕ್ರಿಯಿಸುವುದು, ವಸ್ತುಗಳನ್ನು ಲೇಬಲ್ ಮಾಡುವುದು, ಓದುವಾಗ ಆಯ್ಕೆ ಮಾಡುವುದು, ಕಥೆ ಹೇಳುವುದು ಮತ್ತು ಹಾಡುವುದನ್ನು ಪ್ರೋತ್ಸಾಹಿಸುವುದು.

## ಎರಡನೆಯ ವರ್ಷ: ಮಾತನಾಡುವ ಸಮಯ

ಜೀವನದಲ್ಲಿನ ಎರಡನೆಯ ವರ್ಷದಲ್ಲಿ ಎಳೆವಯಸ್ಸಿನಲ್ಲೇ ಹೀಗೆ ತೊಡಗಿಸಿಕೊಂಡು ಸಹಾಯಮಾಡುವ ಎರಡನೆಯ ಅವಕಾಶ ಸಿಗುತ್ತದೆ. ಮಗುವಿನ ಮೊದಲ ವರ್ಷದಿಂದ ಎರಡನೇ ವರ್ಷದ ಹುಟ್ಟುಹಬ್ಬದ ಒಳಗೆ ಅದರ ಶಬ್ದಕೋಶವು ನಾಲ್ಕು ಪಟ್ಟು ಹೆಚ್ಚಾಗುತ್ತದೆ. ಈ ಮಹತ್ವವಾದ ಘಟ್ಟವು ತಡವಾದ ಒಂದು ಸನ್ನಿವೇಶದ ಉದಾಹರಣೆಯು ಇಲ್ಲಿದೆ. ಜೋಶನಿಗೆ 2–1/2 ವರ್ಷಗಳಾದಾಗ, ಅವನನ್ನು ನಿಗಾವಹಿಸುತ್ತಿದ್ದ ಮಕ್ಕಳ ತಜ್ಞರು ಅವನಿಗೆ ಭಾಷೆ ಮತ್ತು ಮಾತನಾಡುವ ಕೌಶಲ್ಯವು ನಿಧಾನವಾಗಿದೆ ಎಂದು ಪತ್ತೆ ಹಚ್ಚಿದರು. ಮೊದಲಿನಿಂದಲೂ ಜೋಶಾ ಕಾರುಗಳೊಡನೆ ಎಡೆಬಿಡದೇ ಆಡಲು ಇಚ್ಛಿಸುತ್ತಿದ್ದ. ಅವನ ನಗು ಸುಂದರವಾಗಿತ್ತು ಆದರೆ ನಮ್ಮ ಕಡೆ ನೋಡಿ ಮಾತನಾಡಲು ಅವನಿಗೆ ಕಷ್ಟವಾಗುತ್ತಿತ್ತು. ಅವನು ಯಾವಾಗಲೂ ಯಾರ ಗಮನಕ್ಕೂ ಬರದಂತಿರಲು ಬಯಸುತ್ತಿದ್ದ.

ಎಳೆವಯಸ್ಸಿನಲ್ಲಿ ಈ ರೀತಿ ತೊಡಗಿಸಿಕೊಂಡು ನೆರವಾಗುವುದೆಂದರೆ ಒಂದರ್ಥದಲ್ಲಿ ಪ್ರಕೃತಿಯ ಜೊತೆ ಮಾತುಕತೆ ಒಡನಾಟ ಎನ್ನಬಹುದು. ಪ್ರಕೃತಿ ನಾವು ನಿರಂತರ ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಜೋಶಾನಂತಹ ಮಕ್ಕಳ ಪ್ರಕರಣಗಳಲ್ಲಿ, ಕಲಿಕೆಯ ಅಗತ್ಯತೆಗಳು ಸಂಕೀರ್ಣವಾಗಿರುತ್ತವೆ ಮತ್ತು ಪತ್ತೆ ಹಚ್ಚಲಾಗದ ಬೆಳವಣಿಗೆ ಮತ್ತು ಸಂಯೋಜನಾ ನ್ಯೂನತೆಯೊಂದಿಗೆ ಒಡಗೂಡಿರುತ್ತದೆ. ಈ ಕ್ಷಣದಲ್ಲಿ, ಅವನು ತನ್ನ ಉತ್ಸಾಹವನ್ನು ಇತರರಿಗೆ ತಿಳಿಸಬೇಕು ಮತ್ತು ಹಂಚಿಕೊಳ್ಳುವ ಪ್ರಯತ್ನ ಮಾಡಬೇಕು ಮತ್ತು ನಾವು ಅವನನ್ನು ಅನುಸರಿಸಬೇಕು. ಅವನ ನಿಗಾ ವಹಿಸುವವರಿಗೆ ಅವನ ಭಾಷೆ ಮತ್ತು ಮಾತಿನ

ಬೆಳವಣಿಗೆಗೆ ನೆರವಾಗುವ ವಿಧಾನಗಳು ತಿಳಿದಿರಲಿಲ್ಲ. ದುರದೃಷ್ಟಕರವಾಗಿ, ಎಲ್ಲಿ ಮಾತನಾಡುವುದು ನಿಂತೇ ಹೋಗುತ್ತದೋ ಎಂಬ ಭಯದಿಂದ ಶಿಶು ಸಂಕೇತಗಳು ಮತ್ತು ಸಂವಹನದ ಚಿತ್ರಗಳನ್ನು ಬಳಸುವಂತಹ ಸರಳ ಸಂವಹನದ ತಂತ್ರಗಳನ್ನು ಬಳಸಲು ಹಿಂಜರಿಯುತ್ತಿದ್ದರು. ಆದರೆ ಈ ಭಯ ಆಧಾರರಹಿತ. ಜೋಶಾನಂತಹ ಮಕ್ಕಳಿಗೆ ಆಹಾರ, ಆಟಿಕೆ, ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳುವ, ಬೇಕು/ಬೇಡ, ಹೌದು/ಇಲ್ಲ, ಜಾಸ್ತಿ/ಮಗಿಯಿತು ಎಂದು ಹೇಳುವ ಅವಕಾಶಗಳು ಸಿಕ್ಕಲ್ಲಿ ವಾಸ್ತವವಾಗಿ ಹತಾಶೆಯ ಮಟ್ಟ ತಗ್ಗುತ್ತದೆ ಮತ್ತು ಪಾಲ್ಗೊಳ್ಳಲು ಪ್ರೋತ್ಸಾಹಿಸುತ್ತದೆ. ಸಹಜವಾಗಿ, ಮಕ್ಕಳು ತಾವು ಸುರಕ್ಷಿತ ಎಂಬ ಭಾವನೆಗೆ ಒಳಗಾಗುತ್ತಾರೆ ಮತ್ತು ಅವರಿಗೆ ಒತ್ತಾಸೆ ದೊರೆಯುತ್ತದೆ – ಇದೇ ಆಟವಾಡಲು, ಮಾತನಾಡಲು ಮತ್ತು ಭಾಷೆಯ ಬೆಳವಣಿಗೆಗೆ ಅತ್ಯಾವಶ್ಯಕವಾಗಿ ಬೇಕಾಗಿರುವಂತಹುದು.

ಮಕಾಟನ್ ಸಂಕೇತ ವ್ಯವಸ್ಥೆಯ ಆಧಾರದ ಮೇಲೆ ನಾನು ಶಿಶು ಸಂಕೇತಗಳನ್ನು ಬಹಳ ವರ್ಷಗಳವರೆಗೂ ಬಳಸಿದೆ. ಇದರ ಯಶಸ್ಸಿನ ಮೂರು ಕಥೆಗಳನ್ನು ವಿವರಿಸುತ್ತೇನೆ:

- 2 ವರ್ಷ ಮೀರಿದ ಪೀಟರ್ (ಡೌನ್ ಸಿಂಡ್ರೋಮ್ ಇದೆ ಎಂದು ಪತ್ತೆ ಹಚ್ಚಲಾಗಿತ್ತು) ತನ್ನ ಅಚ್ಚು ಮೆಚ್ಚಿನ ಹಾಡಿಗೆ, ಪುಸ್ತಕಕ್ಕೆ ಮತ್ತು ಆಟಿಕೆಗಳಿಗಾಗಿ ಸಂಕೇತವನ್ನು ಮಾಡುವನು.
- 24ನೇ ತಿಂಗಳಿನಲ್ಲಿ ಶಿಯಾ (ಪಿಡಬ್ಲ್ಯೂಎಸ್ ಎಂದು ಪತ್ತೆ ಹಚ್ಚಲಾಗಿತ್ತು) ನಿಲ್ಲುವುದಕ್ಕೆ ಪ್ರಾರಂಭಿಸುವ ಮೊದಲೇ ಸಂಕೇತಗಳನ್ನು ಮಾಡಲು ಪ್ರಾರಂಭಿಸಿದ್ದಳು. ಅವಳ ಕುಟುಂಬದವರು ಮತ್ತು ಶಿಕ್ಷಕರು ಅವಳನ್ನು ಅರ್ಥಮಾಡಿಕೊಂಡಂತೆ ಅವರ ಹತಾಶೆ ಮತ್ತು ಕಣ್ಣೀರು ಕ್ರಮೇಣ ಕರಗಿತು.
- ಆಂತಿಯಾಳಿಗೆ ಮಾತು ಮತ್ತು ಭಾಷೆಯ ನಿಧಾನವಾದ ನ್ಯೂನತೆ ಇದೆ ಎಂದು ಪತ್ತೆ ಹಚ್ಚಲಾಗಿತ್ತು ಆದರೆ 3ನೇ ವರ್ಷದಲ್ಲಿ ಮಾತು ಪ್ರಾರಂಭವಾಯಿತು ಮತ್ತು ಅವಳ ಬೆರಳು–ಸಂಕೇತಗಳ ಸಂವಹನ ನಿಂತಿತು.

ಮಾತು ಮತ್ತು ಭಾಷೆ ಬೆಳವಣಿಗೆಯ ಪ್ರಚೋದನೆಗೆ ಆಟದ ಗುಂಪುಗಳಲ್ಲಿ ಮತ್ತು ಮನೆಯಲ್ಲಿ ಮಾಡಬಹುದಾದ ಶಿಫಾರಸು ಮಾಡಲಾದ ಚಟುವಟಿಕೆಗಳು:

- ನಿಮ್ಮ ಮಗುವು ಏನು ಮಾಡುತ್ತದೋ ಅದನ್ನು ಅನುಸರಿಸಿ, ಅವಳು ಹೇಳುವುದನ್ನು ಪುನರಾವರ್ತಿಸಿ, ವಾಕ್ಯಗಳನ್ನು ಹೆಚ್ಚುಮಾಡಿ ಮತ್ತು ಅನುಕರಿಸಲು ಪ್ರೋತ್ಸಾಹಿಸಿ. ಅವಳ ಅಚ್ಚು ಮೆಚ್ಚಿನ ಆಟಗಳು, ಪುಸ್ತಕಗಳು, ಹಾಡುಗಳನ್ನು ಬಳಸಿ ಮತ್ತು ಪ್ರತಿ ನಿತ್ಯದ ಜೀವನದಲ್ಲಿ ಬಹಳಷ್ಟು ಆಯ್ಕೆಗಳನ್ನು ನೀಡಿ.
- ಪ್ರತಿ ವಾರವೂ ಅಭ್ಯಾಸ ಮಾಡಲು ಕೆಲವು ಶಿಶು ಸಂಕೇತಗಳನ್ನು ಆಯ್ಕೆ ಮಾಡಿಕೊಳ್ಳಿ. ಸಂವಹನದ ವೃತ್ತವು ವಿಸ್ತರಿಸುವುದನ್ನು ದೃಢಪಡಿಸಿಕೊಳ್ಳಲು ಪೋಷಕರನ್ನು ಮತ್ತು ನಿಗಾವಹಿಸುವವರನ್ನು ತರಬೇತುಗೊಳಿಸಿ. ಮಾತನಾಡುವಾಗ, ಓದುವಾಗ ಮತ್ತು ಹಾಡುವಾಗ ಯಾವಾಗಲೂ ಸಂಕೇತ ಮಾತುಕತೆ ಬಳಸಿ.
- ಪ್ರತಿ ದಿನ ಓದಲು ಮೂರು ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳಿ ಮತ್ತು ಅದೇ ಪುಸ್ತಕವನ್ನು 2–3 ವಾರಗಳವರೆಗೂ ಓದಿ. ಕಥೆಗೆ ಹೊಂದಿಸಲು ಆಟಿಕೆಗಳು ಮತ್ತು ಚಿತ್ರದ ಕಾರ್ಡುಗಳನ್ನು ಬಳಸಿ. ಪುಸ್ತಕಗಳು ಇಲ್ಲದಿದ್ದಲ್ಲಿ, ಚಿತ್ರದ ಕಾರ್ಡುಗಳು ಮತ್ತು ಚಿರಪರಿಚಿತವಾದ ಕಥೆಗಳನ್ನು ಬಳಸಿ.
- ಪ್ರತಿ ದಿನ ಐದು ಹಾಡುಗಳನ್ನು ಹಾಡಿ. ಹಾಡುವಾಗ ಕೆಲವೊಂದು ಪದಗಳನ್ನು ಬಿಟ್ಟು ನಿಮ್ಮ ಮಗುವು ಪಂಕ್ತಿಗಳನ್ನು ಮುಕ್ತಾಯ ಮಾಡಲು ಪ್ರೋತ್ಸಾಹಿಸಿ.
- ಸರದಿಯಲ್ಲಿ ಆಡುವ ಆಟಗಳನ್ನು ಆಡಿ: ಹೊಂದಿಸುವುದು ಮತ್ತು ಚಿತ್ರಗಳನ್ನು ಬೇರೆ ಮಾಡುವುದು, ಜೊತೆಯಲ್ಲಿ ಚಿತ್ರ ಬರೆಯುವುದು, ಚೆಂಡಿನ ಆಟ ಮುಂತಾದವು.

### ಶಿಶುವಿಹಾರ: 3–6 ವರ್ಷಗಳು

ಎಳೆಯ ವಯಸ್ಸಿನಲ್ಲಿನ ನೆರವಿನ ಪ್ರಯತ್ನಕ್ಕೆ 3ನೆಯ ಬಹುದೊಡ್ಡ ಅವಕಾಶವು ಶಿಶುವಿಹಾರಕ್ಕೆ ಮಗುವು ಪ್ರವೇಶ ಪಡೆದಾಗ ದೊರೆಯುತ್ತದೆ. ಮುಜುಗರ, ಸ್ವಯಂ–ನಿಯಂತ್ರಣ ಸಾಮಾಜಿಕ ಆತಂಕ ಅಥವಾ ಕಡಿಮೆ ಉತ್ಸಾಹವಿದ್ದು ಕಷ್ಟಪಡುತ್ತಿರುವ ಮಕ್ಕಳನ್ನು ಗುರುತಿಸಿ ಅವರಿಗೆ ನೆರವು ನೀಡಲು ಶಿಶುವಿಹಾರದ ಶಿಕ್ಷಕರು ಸಹಾಯ ಮಾಡಬಹುದು. ಆಟ ಮತ್ತು ಸಾಮಾಜಿಕ ಮಾತುಕತೆಗಳು ವಿಶೇಷ ಗಮನ ನೀಡತಕ್ಕ ಬೆಳವಣಿಗೆಯ ವಲಯಗಳಾಗಿದ್ದು ಭವಿಷ್ಯದಲ್ಲಿ ಶಾಲೆಯಲ್ಲಿನ ಸಮನ್ವಯ ಆಗುವುದಕ್ಕೆ ಮತ್ತು ಗೆಳೆಯರ ಬಳಗವನ್ನು ಬೆಳಸಿಕೊಳ್ಳುವುದಕ್ಕಾಗಿ ಇದಕ್ಕೆ ವಿಶೇಷ ಗಮನ ನೀಡಬೇಕು. ಡ್ರೇಕ್‌ನ ಕಥೆಯು ಇದಕ್ಕೆ ಒಂದು ದೃಷ್ಟಾಂತವಾಗಿದೆ. ಡ್ರೇಕ್ ಶಿಶುವಿಹಾರದಲ್ಲಿ ಮೌನವಾಗಿ ಕುಳಿತುಕೊಳ್ಳುತ್ತಾನೆ. ಅವನ ಜೊತೆಗಾರರು ಜೋಡಿಗಳಾಗಿ ಆಟವಾಡುತ್ತಿದ್ದರೆ, ಅವನು ಸಾಮಾನ್ಯವಾಗಿ ತನ್ನಷ್ಟಕ್ಕೆ ತಾನೇ ಆಟವಾಡುತ್ತಾನೆ. ಅವನು ಸಿಟ್ಟುಗೊಂಡರೆ, ಜೋರಾಗಿ ಅಳುತ್ತಾನೆ ಮತ್ತು ತನ್ನಷ್ಟಕ್ಕೆ ತಾನೇ ಸಮಾಧಾನಗೊಳ್ಳಲು ಹೆಣಗಾಡುತ್ತಾನೆ. ಡ್ರೇಕನು ನಿರರ್ಗಳವಾಗಿ ಓದಬಲ್ಲನಾದರೂ ಸರಳ ವಾಕ್ಯಗಳಲ್ಲಿ ತನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವನಿಗೆ ಸಾಧ್ಯವಾಗುವುದಿಲ್ಲ.

ಮಗುವಿನ ಬೆಳವಣಿಗೆಯ ಎಲ್ಲಾ ಕ್ಷೇತ್ರಗಳ ಅಗತ್ಯತೆಗಳನ್ನು ಪೂರೈಕೆ ಆಗುವಂತೆ ನೋಡಿಕೊಳ್ಳುವುದು ಎಳೆಯವಯಸ್ಸಿನ ಮಕ್ಕಳಿಗೆ ನೆರವು ನೀಡುವವರಿಗೆ ಡೊಂಬರಾಟವೇ ಸರಿ. ನನ್ನ ಅನುಭವದಲ್ಲಿ, ಮಗುವಿನ ಶಿಶುವಿಹಾರದ ಶಿಕ್ಷಕರೊಂದಿಗೆ ನಿಕಟವಾಗಿ ಕೆಲಸ ಮಾಡುವುದರಿಂದ ನೆರವುದಾಯಕ ಆಟಗಳು ಮತ್ತು ಕಲಿಕಾ ವಾತಾವರಣವನ್ನು ಸೃಷ್ಟಿಸಲು ಸಹಾಯವಾಗುತ್ತದೆ.

ಸಮನ್ವಯ ತರಗತಿಗಳನ್ನು ಸೃಷ್ಟಿಸುವುದಕ್ಕಾಗಿ ಶಿಶುವಿಹಾರದ ಶಿಕ್ಷಕರಿಗೆ ಶಿಫಾರಸು ಮಾಡಲಾಗಿರುವ ತಂತ್ರಗಳು:

- ಮಗುವಿನಲ್ಲಿ ಭಿನ್ನವಾಗಿ ಕಾಣುವ ವರ್ತನೆಯಿಂದಾಗಿ ಅವರಿಗೆ ಹಣೆಪಟ್ಟಿ ಹಚ್ಚಬೇಡಿ. ಪೋಷಕರಿಗೆ ಮಕ್ಕಳ ತಜ್ಞರನ್ನು ಸಂಪರ್ಕಿಸುವಂತೆ ತಿಳಿಸಿ. ನಿಮ್ಮ ವಿದ್ಯಾರ್ಥಿಗಳ ಬೇಕು ಬೇಡಗಳನ್ನು ಪರಿಶೀಲಿಸಿ. ಮಕ್ಕಳ ಸಂವೇದನಾ ವಿನ್ಯಾಸಗಳಲ್ಲಿ ಭಿನ್ನತೆ ಇರುತ್ತದೆ. ತರಗತಿಯಲ್ಲಿನ ವಸ್ತುಗಳಿಗೆ ನೀಡಬಹುದಾದ ಸಂವೇದನೆಯ ಪಟ್ಟಿಯನ್ನು ತಯಾರಿಸಿಕೊಳ್ಳಿ ಮತ್ತು ಸಾಮಾನ್ಯವಲ್ಲದ ಪ್ರತಿಕ್ರಿಯೆಗಳನ್ನು ಗುರುತಿಸಿ.
- ತಾಳ್ಮೆಯಿಂದಿರಿ ಮತ್ತು ಭರವಸೆ ನೀಡಿ ಹಾಗೂ ಮಕ್ಕಳಿಗೆ ಪ್ರತಿಕ್ರಿಯಿಸಲು ಸಮಯ ನೀಡಿ. ಕೆಲವು ಮಕ್ಕಳಿಗೆ ಮಾಹಿತಿಯನ್ನು ಅರ್ಥಮಾಡಿಕೊಳ್ಳಲು ಸಮಯ ಬೇಕಾಗುತ್ತದೆ.
- ಸಾದೃಶ್ಯ ವೇಳಾ ಪಟ್ಟಿಗಳು, ಗುಂಪು ಸಮಯದಲ್ಲಿನ ಉತ್ತಮ ಆಲಿಸುವಿಕೆಗೆ ಮತ್ತು ವೀಕ್ಷಿಸುವುದಕ್ಕೆ ಸೂಚನೆ ನೀಡುವ ಕಾರ್ಡುಗಳು, ಹೀಗೆ ದೃಶ್ಯ ಮಾಧ್ಯಮಗಳನ್ನು ಉಪಯೋಗಿಸಿ ಸಮನ್ವಯ ತರಗತಿಗಳನ್ನು ಸೃಷ್ಟಿಸಿ. ಇದಲ್ಲದೇ ಹಂತ–ಹಂತವಾಗಿ ಕಾರ್ಯ ಮಾಡುವುದನ್ನು ತೋರಿಸುವ ದೃಶ್ಯಾವಳಿಯ ಸರಣಿಯನ್ನು ಹೊಂದಿರುವ ಕಾರ್ಡುಗಳನ್ನು ಬಳಸಬಹುದು.
- ಮಾತು ನಿಧಾನವಾಗಿರುವ ಮಕ್ಕಳೊಂದಿಗೆ ನಿಮ್ಮದೇ ಆದ ಸಂವಹನಾ ತಂತ್ರಗಳನ್ನು ಬಳಸಲು ಪ್ರಯತ್ನಿಸಿ. ನೀವು ಶಿಶು ಸಂಕೇತಗಳು ಮತ್ತು ಚಿತ್ರ ಸಂವಹನ ಹಾಗೂ ಚಾಯ್ಸ್ ಬೋರ್ಡುಗಳನ್ನು ಬಳಸಬಹುದು. ಡಿಜಿಟಲ್ ಟ್ಯಾಬ್ಲೆಟ್‌ಗಳು, ಅದರಲ್ಲಿರುವ ಆಪ್‌ಗಳ ಖಜಾನೆಯಿಂದಾಗಿ ಸಂವಹನಕ್ಕೆ ಹೆಚ್ಚಿನ ನೆರವು ನೀಡುವ ಆಯ್ಕೆಯಾಗುತ್ತದೆ. ಇದಕ್ಕಾಗಿ ಚಿಕಿತ್ಸಕರು ಮತ್ತು ಪೋಷಕರೊಂದಿಗೆ ಸಮಾಲೋಚಿಸಿ.
- ಸುರಕ್ಷತೆಗೆ ಮತ್ತು ಭರವಸೆಗೆ, ನಿಮ್ಮ ಭಾವಚಿತ್ರವಿರುವ ಸಹಾಯ ಚೀಟಿಯನ್ನು ಬೋರ್ಡ್ ಮೇಲೆ ಹಾಕಿ ಮತ್ತು ನಾಲ್ಕು ಭಾವನೆಗಳಿರುವ (ಸಂತೋಷ, ದುಃಖ, ಕೋಪ ಮತ್ತು ದಣಿದಿರುವ) ಕಾರ್ಡುಗಳನ್ನು ಚಾರ್ಟ್ ಮೇಲೆ ಹಾಕಿ ಇದರಿಂದ ತಮಗೆ ಏನಾಗುತ್ತಿದೆ ಎಂದು ಮಕ್ಕಳು ನಿಮಗೆ ತಿಳಿಸಲು ಸಹಾಯವಾಗುತ್ತದೆ.
- ಓಡಾಟವನ್ನು ಅತ್ಯಂತ ಇಷ್ಟಪಡುವ ಮಕ್ಕಳಿಗಾಗಿ ಆಟದ ಮೈದಾನದಲ್ಲಿನ ಅವರ ಸಮಯವನ್ನು ಹೆಚ್ಚಿಸಿ ಮತ್ತು ಜಿಮ್ ಚೆಂಡಿನ ಮೇಲೆ ಕುಣಿಯುವ ಆಟ, ನೇರವಾದ ಗೆರೆಯ ಮೇಲೆ ಸಮತೋಲನದಲ್ಲಿ ನಡೆಯುವುದು ಇಂಥ ಚಟುವಟಿಕೆಗಳನ್ನು ನಿಮ್ಮ ಆಟದ ಸಮಯದಲ್ಲಿ ಸೇರಿಸಿ.
- ಫಿಡಲ್ ಬಾಕ್ಸ್ (ಚಟುವಟಿಕೆ ಪೆಟ್ಟಿಗೆ) ಚಡಪಡಿಸುವ ಮಕ್ಕಳ ಬೆರಳುಗಳಿಗೆ ಒಳ್ಳೆಯ ಸಮಾಧಾನವನ್ನು ಒದಗಿಸುತ್ತವೆ. ರಬ್ಬರಿನ ಸಂಖ್ಯೆಗಳು, ವರ್ಣಮಾಲೆಗಳು, ಆಕಾರಗಳು ಮತ್ತು ಸುರಕ್ಷಿತ ಗಾತ್ರದ ಬಟ್ಟೆಯ ಗೊಂಬೆಗಳು ಪ್ರಕ್ಷುಬ್ಧಗೊಂಡ ಮಕ್ಕಳನ್ನು ಅವರು ನೀರ್ಗುಳ್ಳೆಗಳನ್ನು ಊದುವಾಗ, ಹಿಟ್ಟಿನೊಂದಿಗೆ ಆಡುವಾಗ ಮತ್ತು ಗೊಂಬೆಗಳನ್ನು ಮುದ್ದಾಡುವಾಗ ಅವರು ಸಮಾಧಾನವಾಗುವ ರೀತಿಯಲ್ಲಿ ಸಮಾಧಾನ ಹೊಂದುವಂತೆ ಮಾಡುತ್ತವೆ.
- ಸೂಕ್ಷ್ಮವಾದ ಭಾವನೆಗಳನ್ನು ಹೊಂದಿರುವ ಮಕ್ಕಳು ಸಂಗೀತದಿಂದ ಸಮಾಧಾನವನ್ನು ಹೊಂದುವರು. ಸೂಕ್ಷ್ಮತೆಯುಳ್ಳ ಒಬ್ಬ ಶಿಕ್ಷಕರು ಆ ಮಗುವಿನ ಅಚ್ಚು ಮೆಚ್ಚಿನ ಸಿ.ಡಿಯನ್ನು ತಂದಿಡುವಂತೆ ಅದರ ತಾಯಿಯನ್ನು ಕೇಳಬಹುದು.
- ಆಟದ ಸಮಯದಲ್ಲಿ ಅವರ ವೇಗಕ್ಕೆ ತಕ್ಕಂತೆ ಆಟವಾಡಬಲ್ಲ ಸಹಪಾಠಿಗಳನ್ನು ತರಗತಿಯಲ್ಲಿ ಗುರುತಿಸಿ. ಎಲ್ಲರ ಜೊತೆಗೂಡಿ ಆಟ ಆಡುವುದು ಹೇಗೆ, ಸರದಿಯಲ್ಲಿ ಆಡುವ ಆಟಗಳನ್ನು ಆಡುವುದು ಹೇಗೆ ಎಂದು ತಿಳಿಸಿ ಹೇಳಿ ಮತ್ತು ಇಂತಹ ಸರಳವಾದ ಆಟಗಳನ್ನು ಸಣ್ಣ ಗುಂಪಿನಲ್ಲಿ ಆಡಲು ಅಭ್ಯಾಸ ಮಾಡಿಸಿ.

## ಮುಕ್ತಾಯ

ಮಗುವಿನ ಜೀವನದ ಮೊದಲ ಮೂರು ವರ್ಷಗಳಲ್ಲಿ ಆಗುವ ಬೆಳವಣಿಗೆಯ ವೇಗದ ಗತಿ ಮತ್ತು ಅಗಾಧತೆ ಅಸಾಧಾರಣವಾದದ್ದು. ಈ ಜೈವಿಕ ಸಮಯವು ವಿಶೇಷ ಅಗತ್ಯವಿರುವ ಎಳೆಯ ಮಕ್ಕಳಿಗೆ ಅತ್ಯಂತ ಹೆಚ್ಚಿನ ಪರಿಸರ ಪ್ರಚೋದಕಗಳೊಂದಿಗೆ ವಿಪುಲವಾದ ಅವಕಾಶಗಳನ್ನು ಒದಗಿಸುತ್ತದೆ. ಅವರ ಎಳೆಯ ವಯಸ್ಸಿನಲ್ಲಿ ನಾವು ಮಾಡುವ ಪ್ರತಿಯೊಂದು ಕಾರ್ಯವು ಮಗುವಿನ ನರಕೋಶದ ಬೆಳವಣಿಗೆಗೆ ಕೊಡುಗೆಯನ್ನು ನೀಡುತ್ತದೆ ಮತ್ತು ಆ ಮಗುವಿನ ಅಗತ್ಯತೆಗಳಿಗೆ ಸ್ಪಂದಿಸುವಂತೆ ಅದರ ಕುಟುಂಬದವರನ್ನು ತಯಾರುಗೊಳಿಸುತ್ತದೆ. ತರುವಾಯದ

ಕ್ರಮಗಳನ್ನು ಮಾಡಲು ಹೆಚ್ಚಿನ ದೃಢನಿರ್ಧಾರ ಬೇಕಾಗುತ್ತದೆ. ಆನುವಂಶೀಯ ನ್ಯೂನತೆಗಳಿರುವ ಮತ್ತು ಜನನ ಸಮಯದಲ್ಲಿನ ಅಪಘಾತಗಳಿಗೆ ಒಳಗಾಗಿರುವ ಮಕ್ಕಳನ್ನು ಹುಟ್ಟಿದ ಕೂಡಲೇ ಆಸ್ಪತ್ರೆಯಲ್ಲಿಯೇ ಗುರುತಿಸಬಹುದು. ಇನ್ನಿತರ ವಿಶೇಷ ನ್ಯೂನತೆಗಳು ಮಗುವಿನ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಅನಾವರಣಗೊಳ್ಳುತ್ತಾ ಹೋದಂತೆ ಗೋಚರವಾಗುತ್ತಾ ಹೋಗುತ್ತವೆ .

ಎರಡನೆಯ ವಯಸ್ಸಿನಲ್ಲಿ ಮಗುವಿನ ಶಬ್ದಕೋಶವು ಚಿಮ್ಮಿ ತುಳುಕುತ್ತದೆಯಾದ್ದರಿಂದ ನಾವು ಇದರ ಉಪಯೋಗವನ್ನು ಪಡೆಯಬಹುದು. ಪರ್ಯಾಯ ವಿಧಾನದ ಮಾತುಕತೆ ಬಳಸಿದರೆ ಮಗು ಬಾಯ್ತೆರೆದು ಮಾತನಾಡುವ ಶಕ್ತಿ ಕಡಿಮೆಯಾಗುತ್ತದೆ ಎಂಬ ಗ್ರಹಿಕೆ ಇದೆ. ಆದರೆ ಹಾವಭಾವದ ಭಾಷೆಯನ್ನು ಕಲಿಯುವುದರಿಂದ ಮತ್ತು ಚಿತ್ರ ಸಂವಹನವನ್ನು ಶಿಶುಗೀತೆಗಳು, ಹಾಡುಗಳು ಮತ್ತು ಕಥೆಗಳೊಂದಿಗೆ ಬಳಸುವುದರಿಂದ, ಮಾತು ಮತ್ತು ಭಾಷೆಯು ಅಭಿವೃದ್ಧಿಯಾಗಲು ಸಹಾಯಕವಾಗುತ್ತದೆ. ಶಿಶುವಿಹಾರದ ಶಿಕ್ಷಕರು ಹೀಗೆ ಆರಂಭದ ಘಟ್ಟದಲ್ಲಿ ನೆರವು ನೀಡುವುದನ್ನು ಪೋಷಕರು ಮತ್ತು ವೃತ್ತಿಪರರೊಂದಿಗಿನ ನಿರಂತರ ಒಡನಾಟದಿಂದ ಮಾಡಬಹುದು. ನನ್ನ ಅನುಭವದಿಂದ ಮನಗಂಡಿರುವ ಪ್ರಕಾರ ಯಾರಿಗೆ ಯಾರೂ ಬೆರೆಯದ ಮಹಾನಗರಗಳಲ್ಲಿ ಎಳೆಯವಯಸ್ಸಿನಲ್ಲಿಯೆ ನೆರವು ನೀಡುವ ತಂಡವು ಅಂಥ ಮಕ್ಕಳ ಕುಟುಂಬದಲ್ಲಿ ತಾವೂ ಒಬ್ಬರು ಆಗಿ ಬಿಡುತ್ತಾರೆ. ಈ ರೀತಿಯಾಗಿ ಗೆಳೆತನದ ಬಳ್ಳಿ ಹಬ್ಬಿ ಆಶಾ ಭಾವನೆಯು ಉಗಮಿಸುತ್ತದೆ ಮತ್ತು ಮುಂದುವರೆಯುತ್ತಾ ಹೋಗುತ್ತದೆ.

*(ಇಲ್ಲಿ ಹೇಳಿರುವ ಎಲ್ಲಾ ಪ್ರಕರಣಾಧ್ಯಯನಗಳು ನಾನು ಕಾರ್ಯ ಮಾಡುತ್ತಿದ್ದಾಗ ಅಭ್ಯಸಿಸಿರುವುದಾಗಿದೆ. ಖಾಸಗೀ ಜೀವನಕ್ಕೆ ಸುರಕ್ಷತೆ ಒದಗಿಸಲು ಮಕ್ಕಳ ಹೆಸರುಗಳನ್ನು ಬದಲಾಯಿಸಲಾಗಿದೆ.)*






**References:**

1. Engaging Families in the Early Childhood Development Story, Page 7, Para5 line 9http://www.mceecdya.edu.au/verve/_resources/ECD_Story-Neuroscience_and_early_childhood_dev.pdf
2. Children and Brain Development: What We Know About How Children Learn, Bulletin #4356, Cooperative Extension Publications, The University of Maine, para 2 line 1. http://umaine.edu/publications/4356e/
3. Children and Brain Development: What We Know About How Children Learn, Bulletin #4356, Cooperative Extension Publications, The University of Maine, para 3 line 2. http://umaine.edu/publications/4356e/
4. Baby's brain begins now- Conception to age three http://www.urbanchildinstitute.org/why-0-3/baby-and-brain



**ಅನುರಾಧ** ಅವರು ತೀರ ಇತ್ತೀಚಿನವರೆಗೂ ಹಾಂಗ್‌ಕಾಂಗ್‌ನಲ್ಲಿರುವ, ಚೈನೀಸ್ ಭಾಷೆಯವರಲ್ಲದ ಜನರಿಗೆ ಹಾಂಗ್‌ಕಾಂಗ್ ಸರ್ಕಾರದ ನೆರವಿನ ಕಾರ್ಯಕ್ರಮವಾದ ಆರಂಭಿಕ ಬಾಲ್ಯದ ಶಿಕ್ಷಣ ಕೇಂದ್ರದಲ್ಲಿ ಚಿಕ್ಕವಯಸ್ಸಿನಲ್ಲೇ ನೆರವು ನೀಡುವ ಕಾರ್ಯಕ್ರಮಗಾರರಾಗಿ ೦–೬ ವರ್ಷದ ಒಳಗಿರುವ ವಿಶೇಷ ಅಗತ್ಯವಿರುವ ಮಕ್ಕಳೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಚೆನ್ನೈನಲ್ಲಿರುವ ವಿದ್ಯಾಸಾಗರದಲ್ಲಿ ಇಪ್ಪತ್ತು ವರ್ಷದ ಹಿಂದೆ ವಿಶೇಷ ಪ್ರಶಿಕ್ಷಕರಾಗಿ ತರಬೇತಿಯನ್ನು ಪಡೆದಿದ್ದಾರೆ ಮತ್ತು ಅಂತರ ವಿದ್ಯಾವಿಷಯ ವಿಧಾನಗಳನ್ನು ಬಳಸುವುದನ್ನು ಕಲಿತರು. ಇವರು ಚಿಕಿತ್ಸೆ, ಶಿಕ್ಷಣ ಮತ್ತು ಪರ್ಯಾಯ ಸಂವಹನವನ್ನು ಒಟ್ಟಾಗಿ ಬೆಸೆದು ತಮ್ಮ ವಿದ್ಯಾರ್ಥಿಗಳಿಗೆ ಕಲಿಕೆಯು ಒಂದು ಆನಂದದಾಯಕ ಅನುಭವವಾಗುವಂತೆ ಸತತ ಪ್ರಯತ್ನವನ್ನು ಮಾಡುತ್ತಿರುವುದನ್ನು ಇವರ ವೃತ್ತಿ ಚಟುವಟಿಕೆಗಳು ಪ್ರತಿಬಿಂಬಿಸುತ್ತವೆ. ಅನುರಾಧ ಅವರನ್ನು anuradha.naidu@gmail.com ಇಲ್ಲಿ ಸಂಪರ್ಕಿಸಬಹುದು.



# ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಮೌಲ್ಯಮಾಪನ

**ರೇಖಾ ಶರ್ಮಾ ಸೇನ್ ಮತ್ತು ಶ್ರುತಿ ಭಾರ್ಗವ**



## ಪರಿಚಯ

ಮೌಲ್ಯಮಾಪನವು ಶಿಕ್ಷಣದ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗ. ನಮ್ಮಲ್ಲಿ ಬಹಳಷ್ಟು ಜನರಿಗೆ 'ಮೌಲ್ಯಮಾಪನ' ಎಂದೊಡನೆಯೇ ನೆನಪಾಗುವುದು ಪರೀಕ್ಷಾ ಕೊಠಡಿ, ಅಂಕಗಳು ಮತ್ತು ಅಂಕ ಪಟ್ಟಿಗಳು, ಹಾಗೂ ಹಿರಿಯರ ನಿರೀಕ್ಷೆಗೆ ತಕ್ಕಂತೆ ನಮ್ಮ ಅಂಕಗಳು ಇರದಿದ್ದಲ್ಲಿ ಅವರ ಮುಖದಲ್ಲಿನ ಅತೃಪ್ತಿ, ಭಯ ಮತ್ತು ಅಸುರಕ್ಷಿತ ಭಾವನೆ ಇವು ಬಹುಶಃ 'ಮೌಲ್ಯಮಾಪನ' ಪದದ ಜೊತೆಜೊತೆಯಲ್ಲಿ ಸಾಮಾನ್ಯವಾಗಿ ಬರುವ ಭಾವನೆಗಳು. ಅನೇಕಾನೇಕ ವ್ಯಕ್ತಿಗಳನ್ನು ಬುದ್ಧಿವಂತರು, ಸಾಧಾರಣ, ದಡ್ಡ, ಚುರುಕು, ಮಂದಮತಿಗಳು, ವಿಫಲರು ಎಂದು ಸುಲಭವಾಗಿ ವಿಂಗಡಿಸುವಂಥ ಸುಗ್ಗಿ ಸರಕು ವಿಂಗಡನೆಯಾಗಿ ಶಿಕ್ಷಣವನ್ನು ನೋಡುವ ಪರಿಣಾಮವೇ ಮೌಲ್ಯಮಾಪನದ ಈ ಚಿತ್ರಕ್ಕೆ ಕಾರಣವಿರಬಹುದು. ಈ ಹಣೆಪಟ್ಟಿಗಳನ್ನು ಚಿಕ್ಕಂದಿನಲ್ಲೇ ವಿದ್ಯಾರ್ಥಿಗಳಿಗೆ ಕಟ್ಟಿಬಿಟ್ಟರೆ ಇನ್ನೇನೂ ಬೇಕಾಗಿಲ್ಲ ಜೀವನವಿಡಿ ಅದು ಅವರಿಗೆ ಅಂಟಿಬಿಡುತ್ತದೆ. ಅವನೇನು ಮಾಡಲು ಹೊರಟರೂ ತನಗೆ ಇಷ್ಟೇ ಸಾಧ್ಯವಾಗುವುದು ಎಂಬ ಭಾವನೆ ಮೂಡಿ ವಿದ್ಯಾಭ್ಯಾಸ ಮುಗಿದ ಅನಂತರವೂ ಜೀವನದಲ್ಲಿ ಬಹಳಷ್ಟು ಬಾರಿ ಅವನ ಕಾರ್ಯಕ್ಷಮತೆಯನ್ನು ಬಾಧಿಸುತ್ತಾ ಇರುತ್ತದೆ. ಶಿಕ್ಷಣವು ಮಗುವಿನ ಸಾಮರ್ಥ್ಯ ಹೆಚ್ಚಿಸುವ ಪ್ರಕ್ರಿಯೆಯ ಬದಲಾಗಿ ಅವನ ಆತ್ಮವಿಶ್ವಾಸ ಮತ್ತು ಸ್ವ-ಪ್ರತಿಷ್ಠೆಯನ್ನು ತಗ್ಗಿಸುತ್ತದೆ. ಈ ಹಣೆಪಟ್ಟಿಕಾರ್ಯವು ಶಿಕ್ಷಣದ ಪ್ರಾರಂಭಿಕ ಹಂತವಾದ ಶಿಶುವಿಹಾರದಲ್ಲಿಯೇ ಪ್ರಾರಂಭವಾಗುತ್ತದೆ.

ಮಗುವಿನ ವಿದ್ಯಾಭ್ಯಾಸ ಮತ್ತು ಶಾಲಾ ಜೀವನವನ್ನು ಅರ್ಥಪೂರ್ಣ ಹಾಗೂ ಆನಂದದಾಯಕ ಅನುಭವವನ್ನಾಗಿ ಮಾಡಬೇಕಾದರೆ ಮೌಲ್ಯಮಾಪನ ಪರಿಕಲ್ಪನೆಯನ್ನೂ ಮತ್ತೊಮ್ಮೆ ಪರಿಶೀಲಿಸುವುದು ಅವಶ್ಯ. ಅಂದರೆ ಮೌಲ್ಯಮಾಪನವನ್ನು ಏತಕ್ಕೆ ಮಾಡಬೇಕು ಎಂಬುದನ್ನು ಮರು ವ್ಯಾಖ್ಯಾನಿಸುವುದು ಮತ್ತು ಮೌಲ್ಯಮಾಪನಕ್ಕೆ ಬಳಸುವ ವಿಧಾನಗಳ ಬಗ್ಗೆ ಮರು ಚಿಂತನೆ ಮಾಡುವುದೂ ಇದರಲ್ಲಿ ಒಳಗೊಂಡಿರಬೇಕು.

## ಮೌಲ್ಯಮಾಪನದ ಉದ್ದೇಶ

ಸಂಕುಚಿತ ದೃಷ್ಟಿಯಿಂದ ನೋಡಿದಾಗ ಮೌಲ್ಯಮಾಪನವು ಒಂದು ನಿರ್ದಿಷ್ಟ ಕಾಲ ಘಟ್ಟದಿಂದ ಮತ್ತೊಂದು ಕಾಲ ಘಟ್ಟದ ಒಳಗೆ ಮಗು ಏನು ಕಲಿತಿದೆ ಮತ್ತು ಮಗುವಿನ ಪ್ರಗತಿ ಎಷ್ಟು ಎಂಬುದನ್ನು ಕಂಡುಕೊಳ್ಳುವ ಒಂದು ಸಾಧನ. ಆದರೆ ಮಗುವಿನ ವೈಯಕ್ತಿಕ ಪ್ರಗತಿಯನ್ನು ದಾಖಲಿಸುವುದು ಮೌಲ್ಯಮಾಪನದ ಒಂದು ಮುಖ್ಯ ಉದ್ದೇಶವಾಗಿದ್ದರೂ, ವಾಸ್ತವವಾಗಿ ಮೌಲ್ಯಮಾಪನದ ಉದ್ದೇಶ ಇದೊಂದೇ ಅಲ್ಲ. ಪಠ್ಯಕ್ರಮದ ವಿಷಯವನ್ನು ಶಿಕ್ಷಕರು ಎಷ್ಟು ಪರಿಣಾಮಕಾರಿಯಾಗಿ ತರಗತಿಯಲ್ಲಿ ಹೇಳಿಕೊಟ್ಟಿದ್ದಾರೆ ಮತ್ತು ಬೋಧಿಸಲು ಬಳಸಿಕೊಂಡ ಬೋಧನಾ ತಂತ್ರಗಳು ಎಷ್ಟು ಸೂಕ್ತ ಎಂಬುದನ್ನೂ ಅಳೆಯುವುದೂ ಅಷ್ಟೇ ಪ್ರಮುಖ ಉದ್ದೇಶವಾಗಿರುತ್ತದೆ. ತರಗತಿಯಲ್ಲಿನ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಉತ್ತಮಗೊಳಿಸುವ ಒಂದು ಮಾರ್ಗವೆಂದರೆ ಮಕ್ಕಳು ಏನನ್ನು ಕಲಿಯಬೇಕೆಂದು ಅಪೇಕ್ಷಿಸಲಾಗಿತ್ತೋ ಅದನ್ನು ಎಷ್ಟು ಉತ್ತಮವಾಗಿ ಕಲಿತಿದ್ದಾರೆ ಎಂದು ಕಂಡುಕೊಳ್ಳುವುದಾಗಿದೆ. ಈ ತರಹದ ದೃಷ್ಟಿಕೋನವು ಕಲಿಕೆಗೆ ವಿದ್ಯಾರ್ಥಿ ಮಾತ್ರ ಜವಾಬ್ದಾರಿಯಾಗಿರದೇ ಅದಕ್ಕೆ ವಿದ್ಯಾರ್ಥಿ ಮತ್ತು ಶಿಕ್ಷಕರು ಇಬ್ಬರೂ ಜವಾಬ್ದಾರರು ಎಂದು ನೋಡುತ್ತದೆ. ಮಗು ಕಲಿಯಬೇಕು ಎನ್ನುವುದು ಮಾತ್ರವಲ್ಲದೇ ಮಗು ಕಲಿಯಲು ಸಾಧ್ಯವಾಗುವಂತೆ ಶಿಕ್ಷಕರು ಬೋಧಿಸಬೇಕು. ಮಗು ಕಲಿಯಬೇಕು ಎಂದು ಅಪೇಕ್ಷಿಸಲಾದಷ್ಟು ಕಲಿತಿಲ್ಲವೆಂದು ಮೌಲ್ಯಮಾಪನವು ಸೂಚಿಸಿದರೆ ಆಗ ನಿರೀಕ್ಷಿಸಿದಷ್ಟು ಕಲಿಯಲು ಮಗುವಿಗೆ ಏಕೆ ಸಾಧ್ಯವಾಗುತ್ತಿಲ್ಲ ಎಂಬ ಕಾರಣವನ್ನು ಕಂಡುಕೊಳ್ಳಲು ಶಿಕ್ಷಕರು ತಮ್ಮ ಬೋಧನೆಯ ವಿಧಾನದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಮತ್ತು ಪರಿಸ್ಥಿತಿಗೆ ತಕ್ಕಂತೆ ತಮ್ಮ ಬೋಧನಾ-ಕಲಿಕಾ ಯೋಜನೆಯನ್ನು ಮಾಡಿಕೊಳ್ಳಬೇಕೆಂದು ಇದು ಸೂಚಿಸುತ್ತದೆ.

ಮಗುವಿನ ಪ್ರಗತಿಯನ್ನು ನಿರ್ಧರಿಸುವ ಉದ್ದೇಶದಿಂದ ಮೌಲ್ಯಾಂಕನವನ್ನು ಮಾಡುವಾಗಲೂ, ಒಂದು ನಿರ್ದಿಷ್ಟ ಕಾಲದಲ್ಲಿ ಮಗುವಿನ ಕಲಿಕೆಯ ದಾಖಲೆಯನ್ನು

ನೀಡುವುದಕ್ಕೆ ಬದಲಾಗಿ ಅದನ್ನು ಮೀರಿ ಇತರ ವಿಷಯಗಳನ್ನೂ ಪರಿಗಣಿಸುವ ಅಗತ್ಯವಿದೆ. ಮೌಲ್ಯಮಾಪನ ಫಲಿತಾಂಶಗಳನ್ನು ಪ್ರತಿಯೊಬ್ಬ ಮಗುವಿನ ಕಲಿಕೆ ಮತ್ತು ಅಭಿವೃದ್ಧಿಗೆ ನೆರವು ನೀಡಿ ಉತ್ತಮಪಡಿಸಲು ಉಪಯೋಗಿಸಬೇಕು. ಪ್ರತಿಯೊಂದು ಮಗುವಿನ ಅಗತ್ಯತೆಗೆ ಅನುಗುಣವಾಗಿ ಬೋಧನೆಯನ್ನು ವೈಯಕ್ತೀಕರಿಸಲು ಬಳಸಬೇಕು. ಕೆಲವು ಮಕ್ಕಳಿಗೆ ವಿಶೇಷ ಅಗತ್ಯಗಳು ಮತ್ತು ಅವಶ್ಯಕತೆಗಳು ಇರಬಹುದು ಇವುಗಳನ್ನು ವಿಶೇಷ ಉಪಕರಣಗಳು ಮತ್ತು ಬೋಧನಾ ತಂತ್ರಗಳನ್ನು ಉಪಯೋಗಿಸಿ ಪೂರೈಸಬೇಕಾಗುತ್ತದೆ. ಹೀಗಾಗಿ, ಮೌಲ್ಯಾಂಕನವೆಂದರೆ ಒಂದು ಗುಂಪಿನ ನಿರ್ವಹಣೆಯ ದಾಖಲೆ ಮಾತ್ರವಲ್ಲ. ಬೋಧನೆ, ಕಲಿಕೆ ಮತ್ತು ಮೌಲ್ಯಾಂಕನದ ನಡುವಿನ ಸಂಬಂಧವು ಚಕ್ರಾಕಾರದಲ್ಲಿದ್ದು ಅವು ಒಂದಕ್ಕೊಂದು ಪೂರಕವಾಗಿವೆ. ನಾವು ಬೋಧಿಸಿದ ಅನಂತರ ಮಗುವಿನ ಕಲಿಕೆಯ ಮೌಲ್ಯಾಂಕನವನ್ನು ಮಾಡಬೇಕಾಗುತ್ತದೆ. ಅನಂತರ ಮಗುವಿನ ಕಲಿಕೆಯನ್ನು ವೃದ್ಧಿಸಲು ನಾವು ನಮ್ಮ ಬೋಧನೆಯನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಮೌಲ್ಯಮಾಪನವು ತಿಳಿಸುತ್ತದೆ.

ಮಗುವಿನ ಶಿಕ್ಷಣದಲ್ಲಿ ಪೋಷಕರು ಹಿತಾಸಕ್ತಿದಾರರಾಗಿರುತ್ತಾರೆ. ಪೋಷಕರಿಗೆ ಅವರ ಮಗುವಿನ ಕಲಿಕೆಯ ಪ್ರಗತಿಯನ್ನು ತಿಳಿಸಿ ಮಗುವು ಶಾಲೆಯಲ್ಲಿ ಕಲಿತಿರುವುದಕ್ಕೆ ಪೂರಕವಾಗಿ ಅವರು ಮನೆಯಲ್ಲಿ ತಾವೂ ನೆರವು ನೀಡಿ ತಮ್ಮ ಮಗುವಿನ ಕಲಿಕೆಯಲ್ಲಿ ಪಾಲುದಾರರಾಗುವಂತೆ ಮಾಡಲು ಮೌಲ್ಯಮಾಪನವು ಒಂದು ಸಾಧನವಾಗಿದೆ.

ಮಗುವಿನ ದೃಷ್ಟಿಕೋನದಿಂದ ಮೌಲ್ಯಮಾಪನವನ್ನು ನೋಡುವುದಾದರೆ ಅದು, ಮಗುವಿನಲ್ಲಿ ಭಯ, ಒತ್ತಡ ಮತ್ತು ಅಸಾಮರ್ಥ್ಯಕ್ಕೆ ಬದಲಾಗಿ ಸ್ವ–ಮೌಲ್ಯ, ಆತ್ಮವಿಶ್ವಾಸ ಮತ್ತು ಸಾಧನೆಯ ಭಾವನೆಗಳನ್ನು ಮೂಡಿಸುವಂತೆ ಇರಬೇಕು. ಇದು ಮಗುವನ್ನು ಅವನ ದೃಷ್ಟಿಯಲ್ಲಿಯೇ ಮೇಲಕ್ಕೆತ್ತಿ ಅವನನ್ನು ಸ್ವ–ಸುಧಾರಣೆಗೆ ಪ್ರೇರೇಪಿಸುವಂತೆ ಇರಬೇಕು. ಒಂದು ಸಣ್ಣ ಮಗುವಿಗೆ ಇದನ್ನು ಪ್ರಭಾವಕಾರಿಯಾಗಿ ಹೇಳಲು ಸಾಧ್ಯವಾಗುವುದಿಲ್ಲ ಅಥವಾ ತಿಳಿದಿರುವ ಸಾಧ್ಯತೆಯೂ ಇಲ್ಲ. ಹೀಗಿದ್ದರೂ ಮಗುವು ಪ್ರತಿ ದಿನ ಶಾಲೆಗೆ ಬರಲು ತೋರುವ ಉತ್ಸಾಹದಲ್ಲಿ, ಅವನ ಕಣ್ಣ ಹೊಳಪಿನಲ್ಲಿ ಹಾಗೂ ಹೊಸದಾದ ಮತ್ತು ಸವಾಲೊಡ್ಡುವ ವಿಷಯಗಳನ್ನು ಕಲಿಯಲು ವ್ಯಕ್ತಪಡಿಸುವ ಇಚ್ಛೆಯಲ್ಲಿ ಮೌಲ್ಯಮಾಪನವು ಒದಗಿಸುವ ಶಕ್ತಿಯು ಪ್ರತಿಫಲಿಸುತ್ತದೆ.

ಮೌಲ್ಯಮಾಪನವು ಪ್ರತಿಯೊಂದು ಕಾರ್ಯದ ಆಂತರಿಕ ಭಾಗವಾಗಿರಬೇಕು, ಮಗುವಿಗೆ ಲಾಭದಾಯಕವಾಗಿರಬೇಕು, ಪಠ್ಯಕ್ರಮದಲ್ಲಿ ಮತ್ತು ಬೋಧನೆಯಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಲು ಬಳಕೆಯಾಗಬೇಕು, ಹಾಗೂ ಒಂದು ವಿದ್ಯಾಕ್ರಮದ ಮೌಲ್ಯವನ್ನು ಮೌಲ್ಯಮಾಪನ ಮಾಡುವಂತೆ ಇರಬೇಕು. ಮಕ್ಕಳನ್ನು ಪ್ರತ್ಯೇಕಿಸುವುದು, ಹೊರಗಿಡುವುದು ಅಥವಾ ಮುಂದುವರೆಯದಂತೆ ತಡೆಯುವುದು ಮೌಲ್ಯಮಾಪನದ ಉದ್ದೇಶವಲ್ಲ.

## ಮೌಲ್ಯಮಾಪನದ ಸ್ವರೂಪ

ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಶೈಕ್ಷಣಿಕ ಸಾಧನೆಯ ಮೌಲ್ಯಮಾಪನ ಮಾಡುವುದಕ್ಕೇ ಹೆಚ್ಚಿನ ಪ್ರಾಧಾನ್ಯ. ಇಂತಹ ಮೌಲ್ಯಮಾಪನವು ಮಗುವಿನ ಇಡೀ ವ್ಯಕ್ತಿತ್ವದ ಒಂದು ಭಾಗವನ್ನು ಮಾತ್ರ ಮೌಲ್ಯಮಾಪನ ಮಾಡುತ್ತದೆ. ಇದು ಮಗುವಿನ ಗ್ರಹಣಶಕ್ತಿ ಬೆಳವಣಿಗೆಯ ಸಾಮರ್ಥ್ಯದ ಸಮಗ್ರ ಮೌಲ್ಯಮಾಪನ ಕೂಡ ಅಲ್ಲ. ಯಾವಾಗಲೂ, ಅದರಲ್ಲೂ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಮಗುವಿನ ಎಲ್ಲಾ ಕೌಶಲ ಕ್ಷೇತ್ರಗಳಲ್ಲಿ ಅಂದರೆ ದೈಹಿಕ, ಚಲನೆ, ಗ್ರಹಣಶಕ್ತಿ, ಭಾಷೆ ಮತ್ತು ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ಬಗ್ಗೆಯೂ ಮೌಲ್ಯಾಂಕನವು ಪರಿಗಣನೆ ಮಾಡಬೇಕಾಗುತ್ತದೆ. ಮಗುವಿಗೆ ಎಲ್ಲಾ ಬಣ್ಣಗಳ ಹೆಸರು ತಿಳಿದಿದೆಯೇ ಎನ್ನುವುದರ ಜೊತೆಗೆ, ಒಂದು ಮಗು ಮತ್ತೊಂದು ಮಗು ತನ್ನ ಕೈಯಲ್ಲಿರುವ ಆಟಿಕೆಯನ್ನು ಕಿತ್ತುಕೊಂಡಾಗ ನೀಡುವ ಪ್ರತಿಸ್ಪಂದನೆಯನ್ನೂ ಗಮನಿಸಬೇಕಾಗುತ್ತದೆ. ಇದರ ಜೊತೆಯಲ್ಲಿ, ಮೌಲ್ಯಮಾಪನವು ಒಂದು ಮಗುವಿನ ಇಷ್ಟಾನಿಷ್ಟಗಳು, ಆಸಕ್ತಿಗಳ ಚಿತ್ರಣವನ್ನು ನೀಡಬೇಕು. ಇಂತಹ ಮೌಲ್ಯಮಾಪನವೇ ಸಮಗ್ರವಾದ ಮೌಲ್ಯಮಾಪನ.

ಶಿಕ್ಷಕರನ್ನಲ್ಲದೇ, ಮಗುವನ್ನು ಗಮನದಲ್ಲಿ ಇರಿಸಿಕೊಂಡು ಮೌಲ್ಯಮಾಪನವನ್ನು ಯೋಜನೆ ಮಾಡಬೇಕು. ಲಿಖಿತ ರೂಪದಲ್ಲಿರುವ ಪರೀಕ್ಷೆಗಳನ್ನು ಒಂದು ನಿಯಮಿತ ಅವಧಿಯಲ್ಲಿ ಮಾಡುವುದು ಶಿಕ್ಷಕರಿಗೆ ನಿರ್ವಹಿಸಲು ಮತ್ತು ಮೌಲ್ಯಮಾಪನ ಮಾಡಲು ಸುಲಭವೆನಿಸಬಹುದು, ಆದರೆ ಮಕ್ಕಳಲ್ಲಿರುವ ವಿವಿಧ ಸಾಮರ್ಥ್ಯ ತಿಳಿದುಕೊಳ್ಳಲು ಇದು ಪರ್ಯಾಪ್ತವಾಗಿರುವುದಿಲ್ಲ. ಭಯ ಹುಟ್ಟಿಸುವಂತಹ ರೀತಿಯಲ್ಲಿ ಒಮ್ಮೆ ಮಾತ್ರ ಮಾಡುವ ಮೌಲ್ಯಮಾಪನದ ಸಂದರ್ಭಗಳಲ್ಲಿ ಮಗುವು ತನ್ನಲ್ಲಿನ ಅತ್ಯುತ್ತಮ ಸಾಮರ್ಥ್ಯವನ್ನು ತೋರಲು ಸಾಧ್ಯವಾಗುವುದಿಲ್ಲ. ಇದಕ್ಕೆ ಬದಲಾಗಿ, ಮಗುವಿನ ಪ್ರಗತಿಯ ಸಮಗ್ರ ದಾಖಲೆಯನ್ನು ಒದಗಿಸಲು ಸಾಧ್ಯವಾಗುವಂತೆ, ಮಗುವಿನ ವ್ಯಕ್ತಿತ್ವದ ಅಭಿವೃದ್ಧಿ ಮತ್ತು ವಿಭಿನ್ನ ಆಯಾಮಗಳ ಮೇಲೆ ಗಮನ ಹರಿಸುವಂತೆ, ಹಾಗೂ ಪ್ರತಿಯೊಂದು ಮಗುವಿನ ಕಲಿಕೆಯ ಶೈಲಿ, ವೇಗ ಮತ್ತು ಅಗತ್ಯವನ್ನು ಪೂರೈಸುವಂತೆ ನಿರ್ದಿಷ್ಟ ಅವಧಿಯ ಉದ್ದಕ್ಕೂ ಮೌಲ್ಯಮಾಪನಗಳನ್ನು ವಿಸ್ತರಿಸಬೇಕು. ಮೌಲ್ಯಮಾಪನವು ದಿನ–ನಿತ್ಯದ ಅಲ್ಲದೇ ನಿರ್ದಿಷ್ಟ ಅವಧಿಯ

ದಾಖಲೆಗಳನ್ನು ಪ್ರತಿ 3–4 ತಿಂಗಳಿಗೆ ಒಮ್ಮೆ ಪರಿಶೀಲನೆ ನಡೆಸುವಂತಹ ಒಂದು ನಿರಂತರ ಪ್ರಕ್ರಿಯೆ ಆಗಬೇಕು.

## ಮೌಲ್ಯಮಾಪನದ ಮೂಲಗಳು, ವಿಧಾನಗಳು ಮತ್ತು ತಂತ್ರಗಳು

ಮಗುವು ಶಾಲೆಯಲ್ಲಿ ಕಳೆಯುವ ಸಮಯಕ್ಕೆ ಮಾತ್ರ ಅವನ ಕಲಿಕೆಯು ಸೀಮಿತಗೊಳ್ಳುವುದಿಲ್ಲ. ಹೀಗಾಗಿ, ಮಗುವಿನ ಬಗ್ಗೆ ವಿಭಿನ್ನ ಮೂಲಗಳಿಂದ ದೊರೆಯುವ ಮಾಹಿತಿಯನ್ನು ಆಧರಿಸಿ ಮೌಲ್ಯಮಾಪನವನ್ನು ಮಾಡಬೇಕಾಗುತ್ತದೆ. ಮೌಲ್ಯಮಾಪನದ ಬಗ್ಗೆ ಆಲೋಚಿಸಿದ ಕೂಡಲೇ ನಮ್ಮ ಮನದಲ್ಲಿ ಹೊಳೆಯುವುದು ಶಿಕ್ಷಕರು ಮಾಹಿತಿಯನ್ನು ಒದಗಿಸುವ ಮೂಲವಾಗಿ, ಆದರೆ ಶಿಕ್ಷಕರಲ್ಲದೇ ಮಗುವಿನ ಪೋಷಕರು, ಸಮುದಾಯದ ಸದಸ್ಯರು/ನೆರೆ–ಹೊರೆಯವರು, ಮಗುವಿನ ಸ್ನೇಹಿತರು, ಸಹಪಾಠಿಗಳು ಮತ್ತು ಸ್ವತಃ ಮಗು ತನ್ನ ಕಲಿಕೆ ಮತ್ತು ಅಭಿವೃದ್ಧಿಯ ಬಗ್ಗೆ ಉಪಯುಕ್ತವಾದ ಮಾಹಿತಿಯನ್ನು ನೀಡಬಹುದು–ಇವರನ್ನೆಲ್ಲಾ ಒಳಗೊಂಡು ಮೌಲ್ಯಮಾಪನವನ್ನು ಮಾಡಿದಲ್ಲಿ ಮಗುವಿನ ಬಗ್ಗೆ ಯಾರಿಗಾದರೂ ಸಂಪೂರ್ಣ ಚಿತ್ರ ದೊರೆಯುತ್ತದೆ.

ಮೌಲ್ಯಾಂಕನದಲ್ಲಿ ವೈಯಕ್ತಿಕ ಮೌಲ್ಯಾಂಕನ, ಗುಂಪು ಮೌಲ್ಯಾಂಕನ, ಮಗುವಿನ ಸ್ವಯಂ ಮೌಲ್ಯಾಂಕನ ಮತ್ತು ಸಹಪಾಠಿ ಮೌಲ್ಯಾಂಕನವೆಂಬ ಈ ನಾಲ್ಕು ವಿಧಾನಗಳಲ್ಲಿ ಒಂದನ್ನು ಬಳಸಿ ಅಥವಾ ನಾಲ್ಕು ವಿಧಾನಗಳನ್ನು ಸಂಯೋಜಿಸಿಯೂ ಮಾಡಬಹುದು. ಎಳೆ ವಯಸ್ಸಿನ ಮಗುವಿಗಾದರೆ, ಮಗುವಿನ ಸ್ವತಃ ಮೌಲ್ಯಾಂಕನ ಮತ್ತು ಸಹಪಾಠಿ ಮೌಲ್ಯಾಂಕನ ವಿಧಾನಗಳು ಸೂಕ್ತವಲ್ಲ. ವೈಯಕ್ತಿಕ ಮೌಲ್ಯಮಾಪನದ ಸಮಯದಲ್ಲಿ, ಶಿಕ್ಷಕರು ಮಗು ಮಾಡುವ ಒಂದು ನಿರ್ದಿಷ್ಟ ಕಾರ್ಯದ ಮೇಲೆ ಗಮನ ಹರಿಸುತ್ತಾರೆ ಮತ್ತು ಮಗುವಿನ ವೈಯಕ್ತಿಕ ಸಾಧನೆಯನ್ನು ದಾಖಲಿಸುತ್ತಾರೆ. ಇದು ಸರ್ವೇ ಸಾಮಾನ್ಯವಾಗಿ ಉಪಯೋಗಿಸುವ ವಿಧಾನವಾದ್ದರಿಂದ ನಮಗೆಲ್ಲಾ ಈ ವಿಧಾನ ಚೆನ್ನಾಗಿ ಪರಿಚಿತ. ಗುಂಪು ಮೌಲ್ಯಮಾಪನದಲ್ಲಿ ಶಿಕ್ಷಕರು ನೀಡಿರುವ ಕಾರ್ಯವನ್ನು ಪೂರ್ಣಗೊಳಿಸಲು ಗುಂಪಿನಲ್ಲಿ ಮಕ್ಕಳು ಜೊತೆಗೂಡಿ ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ದಾಖಲಿಸುತ್ತಾರೆ. ನಾವು ಸಾಮಾಜಿಕ ಕೌಶಲ್ಯಗಳು, ಮೌಲ್ಯಗಳು ಮತ್ತು ಮನೋಧೋರಣೆಗಳನ್ನು ಮೌಲ್ಯಮಾಪನ ಮಾಡಬೇಕಾಗಿರುವಾಗ ಈ ವಿಧಾನವು ಅತ್ಯಂತ ಸೂಕ್ತವಾಗಿರುತ್ತದೆ. ಮಗುವಿನ ಸ್ವಯಂ ಮೌಲ್ಯಮಾಪನದಲ್ಲಿ ಮಗು ಸ್ವತಃ ತನ್ನ ಪ್ರಗತಿಯ ದಾಖಲೆಯನ್ನು ನೀಡುತ್ತದೆ ಮತ್ತು ಸಹಪಾಠಿ ಮೌಲ್ಯಮಾಪನದಲ್ಲಿ ಇತರ ಮಕ್ಕಳು ತಮ್ಮ ಜೊತೆಯಲ್ಲಿ ಕಲಿಯುತ್ತಿರುವ ಇನ್ನೊಂದು ಮಗುವಿನ ಸಾಮರ್ಥ್ಯಗಳು, ಆಸಕ್ತಿಗಳು ಮತ್ತು ಅರಿವಿನ ಬಗ್ಗೆ ಮಾಹಿತಿಯನ್ನು ಒದಗಿಸುತ್ತಾರೆ.

ಶಾಲೆಗಳಲ್ಲಿ ಸಾಮಾನ್ಯವಾಗಿ ಬಳಸುವ ಮೌಲ್ಯಮಾಪನದ ತಂತ್ರವೆಂದರೆ ಲಿಖಿತ ಮತ್ತು ಮೌಖಿಕ ಪರೀಕ್ಷೆಗಳು. ಇದನ್ನು ಅತ್ಯಂತ ಸಣ್ಣ ಮಕ್ಕಳ ಮೌಲ್ಯಮಾಪನದಲ್ಲಿಯೂ ಬಳಸಲಾಗುತ್ತದೆ. ಅನೇಕ ಶಿಶುವಿಹಾರಗಳಲ್ಲಿ, ಮಕ್ಕಳು 'A to Z' ಅಥವಾ '1 to 20' ಬರೆಯುವ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೌಖಿಕ ಪರೀಕ್ಷೆಯಲ್ಲಿ ಅಭಿನಯಗೀತೆ ಅಥವಾ ವರ್ಣಮಾಲೆ ಅಥವಾ ಸಂಖ್ಯೆಗಳನ್ನು ಹೇಳುವುದು ಇರುತ್ತದೆ. ಪರೀಕ್ಷೆಯಂತಹ ವಾತಾವರಣ ಒಂದು ಅಸಹಜ ಪರಿಸ್ಥಿತಿಯನ್ನು ಸೃಷ್ಟಿಸುವುದಲ್ಲದೇ ಮಕ್ಕಳಲ್ಲಿ ಅಧೈರ್ಯವನ್ನು ಬೆಳೆಯುವಂತೆ ಮಾಡಿ ಮಕ್ಕಳ ಫಲಿತಾಂಶವನ್ನು ಹಾಳುಗೆಡುವುತ್ತದೆ. ಇಂತಹಾ ಮೌಲ್ಯಮಾಪನ ಅಥವಾ ಮೌಲ್ಯಾಂಕನಗಳು ಮಕ್ಕಳಸ್ನೇಹಿ ಅಲ್ಲ. ವಿಶೇಷವಾಗಿ ಎಳೆ ವಯಸ್ಸಿನ ಮಕ್ಕಳ ಕಲಿಕೆ ಮತ್ತು ಬೆಳವಣಿಗೆ ಮೌಲ್ಯಮಾಪನವನ್ನು ಮಾಡುವಾಗ ಇದು ಸೂಕ್ತವಾದ ಆಯ್ಕೆಯಲ್ಲ. ಇದಕ್ಕೆ ಬದಲಾಗಿ, ಮಕ್ಕಳು ತಮ್ಮ ಸಹಜ ವಾತಾವರಣದಲ್ಲಿರುವಾಗ ತಮ್ಮ ದೈನಂದಿನ ಚಟುವಟಿಕೆಗಳನ್ನು ಮಾಡುವಾಗ ಅವರ ಅವಲೋಕನವನ್ನು ಮಾಡುವುದು ಮತ್ತು ಮಕ್ಕಳು ತಮ್ಮ ಮನೆಯಲ್ಲಿ ಅಥವಾ ತರಗತಿಯಲ್ಲಿ ಮಾಡಿರುವ ನಿತ್ಯದ ಕಾರ್ಯವಾದ ಚಿತ್ರ ಬರೆಯುವುದು, ಜೇಡಿ ಮಣ್ಣಿನಿಂದ ಆಕೃತಿ ಅಥವಾ ವಸ್ತುಗಳನ್ನು ಮಾಡುವುದು ಇವುಗಳನ್ನು ಅವಲೋಕಿಸುವುದರಿಂದ ಮಗುವಿನ ಬಗ್ಗೆ ಸಂಪೂರ್ಣ ಮಾಹಿತಿ ದೊರೆಯುತ್ತದೆ. ಇಂತಹ ತಂತ್ರಗಳನ್ನು ಬಳಸಿ ಮಗುವಿನ ಮೌಲ್ಯಮಾಪನವನ್ನು ಮಾಡಿದಾಗ, ಮಗುವಿನ ಸಹಜ ಬೆಳವಣಿಗೆಯ ನೋಟವು ದೊರೆಯುತ್ತದೆ. ಶಿಕ್ಷಕರ ಅವಲೋಕನ ಮತ್ತು ಪೋರ್ಟ್ ಫೋಲಿಯೊ ವಿಧಾನಗಳು ಒಮ್ಮೆ ಮಾತ್ರ ಮಾಡುವ ಪರೀಕ್ಷೆಗಳಂತೆ ಗೊಂದಲಮಯವಿಲ್ಲದೇ ಹೆಚ್ಚು ಸಮಗ್ರವಾಗಿರುತ್ತವೆ. ಮೌಲ್ಯಮಾಪನವು ಕ್ರಮಬದ್ಧವಾಗಿದ್ದು ಸಂಪೂರ್ಣ ಮಗುವಿನ ಬೆಳವಣಿಗೆಯನ್ನು ಒಳಗೊಂಡಿರಬೇಕು ಮತ್ತು ಕಾಲಾಂತರದಲ್ಲಿ ನಿರಂತರವಾಗಿ ನಡೆಯುವಂತಹದ್ದಾಗಿದ್ದು ಅನೇಕ ವಿಧಾನಗಳನ್ನು ಬಳಸಿಕೊಳ್ಳಬೇಕು.

## ಅವಲೋಕನ ಮೌಲ್ಯಮಾಪನದ ಒಂದು ಪ್ರಮುಖ ವಿಧಾನ

ಮಕ್ಕಳ ಬಗ್ಗೆ ಮಾಹಿತಿಯನ್ನು ಕಲೆಹಾಕುವ ಒಂದು ಸಾಧಾರಣ ವಿಧಾನವೆಂದರೆ ಅವರನ್ನು ಗಮನಿಸುವುದು ಮತ್ತು ಅವರ ಮಾತುಗಳನ್ನು ಆಲಿಸುವುದು. ಎಲ್ಲಾ ಶಿಕ್ಷಕರು ತಾವು ಬೋಧಿಸುವ ಮಕ್ಕಳನ್ನು ಗಮನಿಸುತ್ತಾರೆ. ಈ ರೀತಿಯ ಅವಲೋಕನಗಳು ಅನೌಪಚಾರಿಕವಾಗಿರಬಹುದು ಅಥವಾ ಒಳಮನಸ್ಸಿನ ಹೊಳವು ಅಥವಾ ವ್ಯವಸ್ಥಿತ, ಯೋಜಿತ

ಮತ್ತು ಕೇಂದ್ರೀಕೃತವಾಗಿ ಇರಬಹುದು. ಅಧಿಕೃತವಾದ ಮತ್ತು ಅರ್ಥಪೂರ್ಣ ಮಾಹಿತಿಯನ್ನು ಕಲೆಹಾಕಲು ಮಕ್ಕಳ ಅವಲೋಕನಕ್ಕೆ ಅನೇಕ ಮಾರ್ಗಗಳಿವೆ.

ಅವಲೋಕನವು ಮೌಲ್ಯಾಂಕನದ ಒಂದು ವಿಧಾನವಾಗಿ ಅನೇಕ ಉದ್ದೇಶಗಳನ್ನು ಪೂರೈಸುತ್ತದೆ.

- ಮಕ್ಕಳ ಆಸಕ್ತಿಗಳನ್ನು ತಿಳಿಯಲು ಶಿಕ್ಷಕರಿಗೆ ನೆರವಾಗುತ್ತದೆ ಮತ್ತು ಶಿಕ್ಷಕರು ಶೈಕ್ಷಣಿಕ ಅನುಭವಗಳನ್ನು ಮಕ್ಕಳ ಆಸಕ್ತಿಗೆ ಅನುಗುಣವಾಗಿ ಯೋಜನೆ ಮಾಡುವಂತೆ ಅನುವುಗೊಳಿಸುತ್ತದೆ ಹಾಗೂ ಇದರಿಂದಾಗಿ ಹೆಚ್ಚಿನ ಕಲಿಕೆಯು ಉಂಟಾಗುತ್ತದೆ.
- ಪ್ರತಿಯೊಂದು ಕೌಶಲ ಕ್ಷೇತ್ರಗಳಲ್ಲಿಯೂ ಮಗುವಿನ ಬೆಳವಣಿಗೆಯ ಮಟ್ಟವನ್ನು ಗುರುತಿಸಲು ಸಹಾಯ ಮಾಡುತ್ತದೆ –ಗುಂಪಿನಲ್ಲಿರುವ ಮಕ್ಕಳು ವಿಭಿನ್ನ ಕೌಶಲ ಕ್ಷೇತ್ರಗಳಲ್ಲಿ ವಿಭಿನ್ನ ಬೆಳವಣಿಗೆಯ ಹಂತಗಳಲ್ಲಿ ಇರಬಹುದು. ಬೇರೆ–ಬೇರೆ ಸಮಯದಲ್ಲಿ ಮತ್ತು ವಿವಿಧ ಸನ್ನಿವೇಶಗಳಲ್ಲಿ ಅವಲೋಕನದ ವಿವಿಧ ತಂತ್ರಗಳನ್ನು ಉಪಯೋಗಿಸಿ ಮಾಡಿದ ಅವಲೋಕನಗಳು ಮಗುವಿನ ಬೆಳವಣಿಗೆಯ ಸಂಪೂರ್ಣ ಚಿತ್ರಣವನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಇದರಿಂದ ದೊರೆಯುವ ಮಾಹಿತಿಯು ಬೋಧನೆಯನ್ನು ವೈಯಕ್ತಿಕ ಮಟ್ಟದಲ್ಲಿ ನೀಡಲು ಮತ್ತು ಕಾಳಜಿವಹಿಸುವಂತೆ ಮಾಡಲು ಶಿಕ್ಷಕರಿಗೆ ನೆರವಾಗುತ್ತದೆ.
- ಕಾಲಕ್ರಮದಲ್ಲಿ ನಡೆಸುವ ಅವಲೋಕನಗಳು ಮಕ್ಕಳ ಪ್ರಗತಿಯ ಜಾಡನ್ನು ಗಮನಿಸಲು ನೆರವಾಗುತ್ತದೆ – ಒಂದು ವ್ಯವಸ್ಥಿತವಾದ ವೇಳಾಪಟ್ಟಿಯಿರುವ ಅವಲೋಕನವು ಒಂದು ಮಗುವಿನ ಅಥವಾ ಮಕ್ಕಳ ವರ್ತನೆಯಲ್ಲಿನ ಬದಲಾವಣೆಯನ್ನು ದಾಖಲಿಸಲು ಸಹಾಯ ಮಾಡುತ್ತದೆ.
- ತಮ್ಮ ಬೋಧನಾ ಅಭ್ಯಾಸಗಳನ್ನು ಮೌಲ್ಯಮಾಪನ ಮಾಡಿಕೊಳ್ಳಲು ಅವಲೋಕನವು ಒಂದು ಪರಿಣಾಮಕಾರಿ ತಂತ್ರವಾಗಿದೆ ಮತ್ತು ಸಿಬ್ಬಂದಿಯ ಸಾಮರ್ಥ್ಯಗಳು ಮತ್ತು ದೌರ್ಬಲ್ಯಗಳ ಬಗ್ಗೆ ಒಳನೋಟವನ್ನು ಒದಗಿಸುತ್ತದೆ.

ತರಗತಿಯಲ್ಲಿನ ನಿರ್ದಿಷ್ಟ ಸಮಸ್ಯೆಗಳು ಮತ್ತು ಸಾಮಾನ್ಯ ಕಾರ್ಯಕ್ರಮಗಳ ಬಗ್ಗೆ ಅವಲೋಕನವು ಒಳನೋಟವನ್ನು ಒದಗಿಸುತ್ತದೆ. ಪ್ರತಿಯೊಂದು ಮಗುವಿನ ಬಗ್ಗೆ ಲಿಖಿತ ರೂಪದಲ್ಲಿರುವ ಅವಲೋಕನಗಳನ್ನು ಪೋಷಕರು ಮತ್ತು ಆಡಳಿತ ವರ್ಗದವರೊಂದಿಗೆ ಹಂಚಿಕೊಳ್ಳುವ ಇತರ ಮಾಹಿತಿಯೊಂದಿಗೆ ಸೇರಿಸಬಹುದು.

## ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಅವಲೋಕನವನ್ನು ಮಾಡುವುದು ಹೇಗೆ?

ಅವಲೋಕನಗಾರರು ಯಾವುದೇ ವಾತಾವರಣವನ್ನು ಪ್ರವೇಶಿಸಿದೊಡನೆಯೇ ಅವರ ಇರುವಿಕೆಯೇ ಅಲ್ಲಿ ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆಯನ್ನು ಬದಲಾಯಿಸಬಹುದು. ಚಿಕ್ಕ ಮಕ್ಕಳು ಸಾಕಷ್ಟು ಶೀಘ್ರವಾಗಿ ಹೊಂದಿಕೊಳ್ಳುವುದರಿಂದ ಮತ್ತು ಅವಲೋಕನ ಮಾಡುವ ವ್ಯಕ್ತಿಯು ಅವರಿಗೆ ತಿಳಿದವರಾಗಿದ್ದರೆ, ಅವಲೋಕನ ಮಾಡುವವರನ್ನು ಗಮನಿಸದೇ ತಮ್ಮ ಸಹಜ ವರ್ತನೆಯಲ್ಲಿಯೇ ತೊಡಗುತ್ತಾರೆ. ಅವಲೋಕನದ ವ್ಯವಸ್ಥೆಯಲ್ಲಿ ಸಾಧ್ಯವಾದಷ್ಟೂ ಯಾರ ದೃಷ್ಟಿಗೂ ಬೀಳದೇ ಇರುವುದನ್ನು ಗುರಿಯಾಗಿ ಇರಿಸಿಕೊಳ್ಳಬೇಕು. ಇದು ಸಾಧ್ಯವಾಗುವುದು ಹೇಗೆಂದರೆ –

- ಅವಲೋಕನವನ್ನು ಮೊದಲೇ ಯೋಜನೆ ಮಾಡಿದ್ದಲ್ಲಿ
- ಅವಲೋಕನದ ವಿವಿಧ ವಿಧಾನಗಳು ತಿಳಿದಿದ್ದು ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಬಳಸಬಹುದಾದ ಸೂಕ್ತ ವಿಧಾನವು ತಿಳಿದಿದ್ದಲ್ಲಿ
- ಅವಲೋಕನದ ಗುರಿಯ ಬಗ್ಗೆ ಸ್ಪಷ್ಟತೆ ಇದ್ದು ಯಾವ ರೀತಿಯ ಮಾಹಿತಿಯ ಅಗತ್ಯತೆ ಇದೆ ಎಂದು ತಿಳಿದಿದ್ದಲ್ಲಿ
- ಯಾರ ಅವಲೋಕನವನ್ನು ಯಾವಾಗ ಮಾಡಬೇಕು ಎಂಬ ವೇಳಾಪಟ್ಟಿಯನ್ನು ಹೊಂದಿದ್ದಲ್ಲಿ
- ರೆಕಾರ್ಡರ್, ಸ್ಟಾಪ್ ವಾಚ್, ಟೇಪ್ ರೆಕಾರ್ಡರ್, ಕ್ಯಾಮೆರಾ, ವಿಡಿಯೊ ಕ್ಯಾಮೆರಾ ಮುಂತಾದ ಸಲಕರಣೆಗಳು ಲಭ್ಯವಿದ್ದಲ್ಲಿ
- ಅವಲೋಕನಗಾರರು ಯಾರ ದೃಷ್ಟಿಗೂ ಬೀಳದೇ ಇರುವಂತಹಾ ಜಾಗವನ್ನು ಗುರುತಿಸಿಕೊಳ್ಳಬೇಕು. ಸಂಪೂರ್ಣ ನೋಟವನ್ನು ಒದಗಿಸುವ ಮತ್ತು ಸಂಪೂರ್ಣ ಆಲಿಸುವಿಕೆ ಸಾಧ್ಯವಾಗುವ ಜಾಗವನ್ನು ಆಯ್ಕೆ ಮಾಡಿಕೊಳ್ಳಬೇಕು ಆದರೆ ಏನನ್ನು ಗಮನಿಸಬೇಕು ಎಂದು ಪ್ರಯತಿಸುತ್ತಿದ್ದೀರೋ ಅದಕ್ಕೆ ಅಡ್ಡಿಯಾಗುವಂತೆ ಇರಬಾರದು.

ಮಾಹಿತಿಯನ್ನು ದಾಖಲಿಸಲು ಅವಲೋಕನವನ್ನು ಮಾಡುವಾಗ ಸಾಧ್ಯವಾದಷ್ಟು ವಸ್ತುನಿಷ್ಠವಾಗಿರಿ. ತೀರ್ಮಾನಗಳನ್ನು, ಮುಕ್ತಾಯ ಮತ್ತು ಅರ್ಥದ ಇತರ ವ್ಯಾಖ್ಯಾನಗಳನ್ನು ಅವಲೋಕನವು ಸಂಪೂರ್ಣ ಆಗುವವರೆಗೆ ತಡೆಹಿಡಿಯಿರಿ. ಮಗುವಿನ ನಿರ್ದಿಷ್ಟ ವರ್ತನೆ, ಸನ್ನಿವೇಶ ಮತ್ತು ಗುರಿಗೆ ಸಂಬಂಧಿಸಿರುವುದರ ಬಗ್ಗೆ ನಿಮ್ಮ ಗಮನ ಕೇಂದ್ರಿಕರಿಸಿ– ಎಲ್ಲವನ್ನೂ ಒಮ್ಮೆಲೇ

ನೋಡುವುದಕ್ಕೆ ಸಾಧ್ಯವಿಲ್ಲ. ಅವಲೋಕನದ ಸಂದರ್ಭವನ್ನು ದಾಖಲಿಸಿ ಮತ್ತು ಮಾತಾಡುವ ಮತ್ತು ಮಾತಾಡದೇ ಮಾಡುವ ವರ್ತನೆಗಳನ್ನು ಅವಲೋಕಿಸಿರಿ.

### ಚಿಕ್ಕ ಮಕ್ಕಳ ಬಗ್ಗೆ ಗಮನಿಸಿದ ಅಂಶಗಳನ್ನು ದಾಖಲಿಸುವ ವಿಧಾನಗಳು

ಯಾವುದೇ ಮಾಹಿತಿಯೂ ತಪ್ಪಿ ಹೋಗದಂತೆ ಕೈಬರಹದಲ್ಲಿ ಅಥವಾ ಟೇಪ್ ರೆಕಾರ್ಡರ್ ಮೂಲಕ ಗಮನಿಸಿದ ಅಂಶಗಳನ್ನು ದಾಖಲಿಸುವುದು ಅಗತ್ಯ. ಮಕ್ಕಳನ್ನು ವೀಕ್ಷಿಸಿದರೆ ಮಾತ್ರ ಸಾಲದು, ವೀಕ್ಷಿಸಿದ್ದನ್ನು ದಾಖಲಿಸಲು ಯಾವುದಾದರೂ ವಿಧಾನಗಳನ್ನು ಬಳಸಬೇಕು. ಅವಲೋಕನ ಮಾಡಿದ್ದನ್ನು ನೆನಪಿಸಿಕೊಂಡು ವಿಶ್ಲೇಷಣೆ ಮಾಡುವುದು ಕಷ್ಟ ಹಾಗಾಗಿ ಅವಲೋಕನಗಳನ್ನು ದಾಖಲಿಸಲು ವೈವಿಧ್ಯಮಯ ವಿಧಾನಗಳು ಅವಶ್ಯಕ.

- ಪರ್ಯಾಲೋಚನೆಗೆ ತೊಡಗಿಸುವ ಒಂದು ದಿನಚರಿ/ ಜರ್ನಲ್/ಲಾಗ್ – ಇದು ಮಗುವಿನ/ಮಕ್ಕಳ ನಿರ್ದಿಷ್ಟ ವರ್ತನೆಯ ಮೇಲೆ ಅಥವಾ ಎಲ್ಲಾ ಬೆಳವಣಿಗೆಯ ಕ್ಷೇತ್ರಗಳ ಮೇಲೆ ಗಮನ ಕೇಂದ್ರಿಸಿರುವ ಬೆಳವಣಿಗೆ ಕುರಿತ ಲಿಖಿತ ವಿವರಣೆ. ಇಂತಹ ಲಿಖಿತ ದಾಖಲೆಗಳು ಕಾಲಕ್ರಮದಲ್ಲಿ ಬೆಳವಣಿಗೆ ಹೇಗೆ ಎತ್ತ ಸಾಗುತ್ತಿದೆ ಎಂಬುದನ್ನು ಗುರುತಿಸಲು ಸಹಾಯವಾಗುತ್ತವೆ. ಇದು ಬಹಳ ಸಮಯ ತೆಗೆದುಕೊಂಡರೂ, ವಿವರವಾದ ಮಾಹಿತಿಯನ್ನು ಒದಗಿಸುತ್ತದೆ. ದಿನಚರಿಯನ್ನು ಯಾವ ಸಮಯದಲ್ಲಿಯಾದರೂ ಮತ್ತು ಎಲ್ಲಿಯಾದರೂ ಬರೆಯಬಹುದು ಆದರೆ ವರ್ತನೆಯನ್ನು ಕಂಡ ಕೂಡಲೇ ಬರೆದು ದಾಖಲಿಸುವುದು ಅತ್ಯುತ್ತಮ.
- ಧ್ವನಿ ರೆಕಾರ್ಡು ಮಾಡುವುದು – ಮಕ್ಕಳ ಮಾತುಗಾರಿಕೆ ಕೌಶಲ್ಯವನ್ನು ಅಳೆಯಲು, ಮಕ್ಕಳ ಸಂಭಾಷಣೆಗಳನ್ನು ಧ್ವನಿ ರೆಕಾರ್ಡು ಮಾಡಬಹುದು. ಮಕ್ಕಳು ಮತ್ತು ಶಿಕ್ಷಕರ ನಡುವೆ ಸಂಭಾಷಣೆಯನ್ನು ಅಥವಾ ಮಕ್ಕಳು ಇತರ ಮಕ್ಕಳೊಂದಿಗೆ ಸಂಭಾಷಿಸುವುದನ್ನು ದಾಖಲಿಸಿ ವಿಶ್ಲೇಷಿಸುವುದಕ್ಕೆ ಈ ವಿಧಾನವು ಉಪಯುಕ್ತ.
- ವಿಡಿಯೊ ದಾಖಲೀಕರಣ – ಗುಂಪಿನ ಅಥವಾ ತರಗತಿಯೊಳಗಿನ ವ್ಯವಹಾರಗಳನ್ನು ಅವಲೋಕಿಸುವುದಕ್ಕೆ ಮತ್ತು ದಾಖಲಿಸುವುದಕ್ಕೆ ಇದು ಅತ್ಯಂತ ನಿಖರವಾದ ವಿಧಾನ. ಇದು ಹೆಚ್ಚು ದುಬಾರಿಯಾದರೂ ತರಗತಿಯಲ್ಲಿ ಏನು ನಡೆಯುತ್ತದೆ ಎನ್ನುವುದಕ್ಕೆ ಇದು ನೋಡಬಹುದಾದ ಮತ್ತು ಕೇಳಬಹುದಾದ ದಾಖಲೆಯಾಗಿದೆ.
- ಪ್ರಸಂಗ ದಾಖಲೆ – ಪ್ರಸಂಗವೆಂದರೆ ಒಂದು ಪ್ರಮುಖ ಬೆಳವಣಿಗೆಯ ಘಟನೆ. ಮಕ್ಕಳ ಆಟದ ಅಥವಾ ಕಾರ್ಯದ ಘಟನೆಯನ್ನು ಬರೆಯುವುದು ಅವರ ಅನೇಕ ಕೌಶಲ ಕ್ಷೇತ್ರಗಳಲ್ಲಿ ಬೆಳವಣಿಗೆಯ ಮಟ್ಟದ ವಿವರಣಾತ್ಮಕ ದಾಖಲೆ. ಇದು ಉಪಯುಕ್ತ ಏಕೆಂದರೆ ಇದು ಮಗುವಿನ ವರ್ತನೆಯು ಯಾವ ಸಂದರ್ಭದಲ್ಲಿ ಮತ್ತು ಯಾವ ಸನ್ನಿವೇಶದಲ್ಲಿ ಆಗಿದೆ ಎನ್ನುವುದರ ವಿವರಣೆಯನ್ನು ನೀಡುತ್ತದೆ. ಆದರೆ ಇದು ವರ್ತನೆಯ ಸಂಪೂರ್ಣ ಚಿತ್ರಣವನ್ನು ನೀಡದಿರಬಹುದು.
- ರೇಟಿಂಗ್ ಮಾಪಕಗಳು/ಪರಿಶೀಲನಾಪಟ್ಟಿ/ಚೆಕ್‌ಲಿಸ್ಟ್ ಶೀಘ್ರವಾಗಿ ಮತ್ತು ಸುಲಭವಾಗಿ ಮಾಹಿತಿಯನ್ನು ದಾಖಲಿಸುವ ಒಂದು ವಿಧಾನ. ಗಮನಿಸುವುದು ಮುಖ್ಯವೆಂದು ಭಾವಿಸುವ ಕೌಶಲ್ಯಗಳ/ಸಾಮರ್ಥ್ಯಗಳ ಅಥವಾ ವರ್ತನೆಗಳ ಪಟ್ಟಿಯೇ ರೇಟಿಂಗ್ ಮಾಪಕ. ಮಗು ಒಂದು ನಿರ್ದಿಷ್ಟವಾದ ವರ್ತನೆಯನ್ನು ತೋರಿದಾಗ ಅದನ್ನು ಪರಿಶೀಲನಾಪಟ್ಟಿಯಲ್ಲಿ ಗುರುತಿಸಲಾಗುವುದು. ಅವಲೋಕನದ ಕರಡು ಮಾಹಿತಿಯನ್ನು ಪರಿಶೀಲನಾಪಟ್ಟಿಗಳಿಗೆ ವರ್ಗಾಯಿಸ ಬಹುದು. ಇವು ಅನೇಕ ಮಕ್ಕಳ ವರ್ತನೆಗಳನ್ನು ಹೋಲಿಸಲು ಸ್ವಯಂ ಎಡೆ ಮಾಡಿಕೊಡುತ್ತವೆ.
- ಪೋರ್ಟ್‌ಫೋಲಿಯೋಗಳು– ಪ್ರತಿಯೊಂದು ಮಗುವಿನ ಬಗ್ಗೆಯೂ ಮಾಹಿತಿ ಸಂಗ್ರಹಿಸಲು ಇದೊಂದು ಪರಿಣಾಮಕಾರಿ ವಿಧಾನ. ಇದರಲ್ಲಿ ಆಯ್ದ ಚಿತ್ರಗಳು, ಭಾವಚಿತ್ರಗಳು, ಟೇಪ್ ರೆಕಾರ್ಡಿಂಗ್‌ಗಳು, ಲಿಖಿತ ನಮೂನೆಗಳು, ಶಿಕ್ಷಕರುಗಳ ಪರಿಶೀಲನಾಪಟ್ಟಿಗಳು, ರೇಟಿಂಗ್ ಮಾಪಕಗಳು ಮುಂತಾದುವುಗಳ ಮೂಲಕ ದಾಖಲಿಸಿರುವ ಗಮನಿಸಿದ ಅಂಶಗಳು ಇರುತ್ತವೆ. ಪಠ್ಯಕ್ರಮದ ವಿಭಿನ್ನ ವಲಯಗಳಲ್ಲಿ ಮಗುವಿನ ಸಾಮರ್ಥ್ಯದ ಸಮಗ್ರ ಚಿತ್ರಣವನ್ನು ಪೋರ್ಟ್‌ಫೋಲಿಯೊ ನೀಡುತ್ತದೆ.

### ಗಮನಿಸಿ ನೋಡುವುದು ಮತ್ತು ಮಗುವಿನ ಗೌಪ್ಯತೆ

ಎಲ್ಲಾ ಸಮಯಗಳಲ್ಲೂ ಮಕ್ಕಳ ಖಾಸಗೀತನದ / ಗೌಪ್ಯತೆಯ ಹಕ್ಕನ್ನು ಎತ್ತಿ ಹಿಡಿಯಬೇಕು. ತಂದೆತಾಯಿಯರಿಗೆ ವರದಿ ಸಲ್ಲಿಸುವಾಗ ಅವರ ಮಕ್ಕಳಿಗೆ ಇರುವ ಅಗತ್ಯತೆಗಳನ್ನು ಮಾತ್ರ ಚರ್ಚಿಸಬೇಕು. ಶಾಲಾ ಸಿಬ್ಬಂದಿ ಮತ್ತು ಆಡಳಿತವರ್ಗದವರೊಂದಿಗೆ ಚರ್ಚಿಸುವಾಗ ಮಕ್ಕಳ ಮತ್ತು ಮಕ್ಕಳ ಗುಂಪಿನ ಗುರುತನ್ನು ಸಂರಕ್ಷಿಸಬೇಕು. ಲಿಖಿತ ವರದಿಗಳಲ್ಲಿ ಸಾಧ್ಯವಾದಷ್ಟೂ ಹೆಸರು ಬರೆಯುವುದನ್ನು ಬಿಡಬೇಕು.

**References**

1. National Council of Educational Research and Training, (2008). Source Book on assessment for classes I-V.
2. Billman, J., & Sherman, J. A. (1997). Observation and participation in early childhood settings- A practicum guide, birth to age five. Boston: Allyn and Bacon.
3. McAfee, O., & Leong, D. (1997). Assessing and guiding young children's development and learning (3rd ed.). Boston: Allyn and Bacon.



**ರೇಖಾ** ಅವರು ನವದೆಹಲಿಯಲ್ಲಿರುವ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದಿಂದ ನಿಯೋಜನೆಗೊಂಡು ಜಾಮಿಯಾ ಮಿಲಿಯಾ ಇಸ್ಲಾಮಿಯಾದ ಆರಂಭಿಕ ಬಾಲ್ಯದ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರ(ಸಿಇಸಿಡಿಆರ್)ದಲ್ಲಿ ಮುಖ್ಯ ಪ್ರಾಧ್ಯಾಪಕರಾಗಿದ್ದಾರೆ. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ, ಶಿಕ್ಷಕರ ಪ್ರಶಿಕ್ಷಣ, ಸೃಜನಶೀಲತೆ, ಸಂಶೋಧನಾ ವಿಧಾನಗಳು, ದುರ್ಬಲತೆ ಮತ್ತು ಲಿಂಗ ಹೀಗೆ ವಿವಿಧ ವಲಯಗಳಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರನ್ನು rekha_s_sen@hotmail.com ಇಲ್ಲಿ ಸಂಪರ್ಕಿಸಬಹುದು.

**ಶ್ರುತಿ**ಯವರು ವಡೋದರದಲ್ಲಿ ಇರುವ ಲರ್ನಿಂಗ್ ಇಂಪ್ರಿಂಟ್ಸ್ ಪ್ರೈ.ಲಿ ನಿರ್ದೇಶಕರು. ಆರೈಕೆ ಮತ್ತು ಬೆಳವಣಿಗೆ, ಮಾನಸಿಕ, ಭಾವನಾತ್ಮಕ ಹಾಗೂ ದೈಹಿಕ ಸಮಸ್ಯೆಗಳಿರುವ ವಿಶೇಷ ಮಕ್ಕಳಿಗಾಗಿ ಅಗತ್ಯಾಧಾರಿತ ಕಾರ್ಯಕ್ರಮದ ಅವಶ್ಯಕತೆ ಇರುವ ಮತ್ತು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ, ಕಾರ್ಯಕ್ರಮಗಳಲ್ಲಿ ಇವರನ್ನು ಸಮಾವೇಶಗೊಳಿಸುವ ವಿಷಯಗಳಲ್ಲಿ ಇವರು ಪರಿಣಿತಿಯನ್ನು ಹೊಂದಿದ್ದಾರೆ. ಕಳೆದ 18 ವರ್ಷಗಳಿಂದ ಇವರು ಈ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡಿದ್ದಾರೆ. ಮಕ್ಕಳಲ್ಲಿರುವ ಸಮಸ್ಯೆಗಳನ್ನು ಗುರುತಿಸುವ ಉದ್ದೇಶದಿಂದ ಮಕ್ಕಳ ಮೌಲ್ಯಮಾಪನ, ಪುಟಾಣಿ ಮಕ್ಕಳ ಮೌಲ್ಯಮಾಪನ ಮತ್ತು ಪೋಷಕರ ಸಲಹೆ, ಭಾಷೆ, ಪಠ್ಯಕ್ರಮ ಮತ್ತು ಶಿಕ್ಷಕರ ಪ್ರಶಿಕ್ಷಣದ ಕ್ಷೇತ್ರದಲ್ಲಿ ಕೆಲಸಮಾಡುತ್ತಿದ್ದಾರೆ. ಇವರನ್ನು shrutib20@gmail.com ಇಲ್ಲಿ ಸಂಪರ್ಕಿಸಬಹುದು.



# ಕುತೂಹಲ ಮತ್ತು ಕಲಿಕೆ

**ಶರ್ಮಿಳಾ ಗೊವಾಸ್ದೆ ನೀ ಮಾಂಡ್ಲಿಕ್**

*"ಬೋಧನೆಯು ಕಲಿಕೆಗಿಂತಲೂ ಹೆಚ್ಚು ಕಷ್ಟ ಏಕೆಂದರೆ. ಬೋಧನೆಯೆಂದರೆ ಕಲಿಯಲು ಅವಕಾಶ ನೀಡುವುದು"*

ಮಾರ್ಟಿನ್ ಹೈಡೆಗರ್ (1889–1976)

ಅಂಬೆಗಾಲಿಡುವ ಮಗು ತನ್ನ ತಾಯಿಯ ಕಾಳಜಿಭರಿತ ಗಮನದಲ್ಲಿ ಮೊದಲ ಸಲ ಮರಳಿನಲ್ಲಿ ಗುಳಿಯನ್ನು ತೆಗೆಯುತ್ತಾ ಆಟವಾಡುತ್ತಿತ್ತು. ಮೊಬೈಲಿನ ಕರೆಗಂಟೆ ಕೇಳುತ್ತಿದ್ದಂತೆ ತಾಯಿಯ ಗಮನ ಬೇರೆಡೆಗೆ ತಿರುಗಿತು. ಮಗು ತನ್ನ ಚಿಕ್ಕ ಮುಷ್ಟಿಯಲ್ಲಿ ಒಂದಿಷ್ಟು ಮರಳನ್ನು ಹಿಡಿದುಕೊಳ್ಳಲು ಪ್ರಯತ್ನಿಸುತ್ತಿತ್ತು. ಆದರೆ ಮರಳು ಮುಷ್ಟಿಯಿಂದ ಜಾರಿಬೀಳುತ್ತಿತ್ತು. ಮಗು ಪುನಃ ಪುನಃ ಮುಷ್ಟಿಯಲ್ಲಿ ಮರಳನ್ನು ಹಿಡಿದುಕೊಳ್ಳುತ್ತಾ, ರೋಮಾಂಚಕಾರಿಯಾಗಿ ನೋಡುತ್ತಾ ಇದೇ ಕ್ರಿಯೆಯನ್ನು ಲೋಕದ ಪರಿವೆಯಿಲ್ಲದೇ ಪದೇ ಪದೇ ನಡೆಸುತ್ತಿತ್ತು. ಕ್ರಮೇಣ ಮಗುವಿಗೆ ಮರಳಿನ ಬಗ್ಗೆ ಕುತೂಹಲ ಹೆಚ್ಚಾಗತೊಡಗಿತು. ಮಗು ನಿಧಾನವಾಗಿ ಮರಳನ್ನು ಹಿಡಿದ ಮುಷ್ಟಿಯನ್ನು ತನ್ನ ಬಾಯಿಯತ್ತ ತಂದು ಅದರ ರುಚಿಯನ್ನು ಸವಿಯ ಬೇಕೆಂದಾಗಲಷ್ಟೇ, ಮಗುವಿನ ತಾಯಿ ಮಗುವಿನ ತೋಳುಗಳನ್ನು ಎಳೆದು ಮೇಲೆತ್ತಿ ಅಹಿತಕರ ನುಡಿಗಳಿಂದ ಬೈಯ್ಯಲಾರಂಭಿಸಿದಳು, "ಛೀ ಕೆಟ್ಟವನೇ, ಇದು ಕೊಳೆ ಮರಳು, ಇದನ್ನು ಹಾಗೆಲ್ಲ ತಿನ್ನಬಾರದು." ಎಂದಳು. ಇದಾದ ಬಳಿಕ ಕೆಲವು ದಿನಗಳವರೆಗೆ ಆ ಮಗುವನ್ನು ಮರಳಿನಲ್ಲಿ ಆಟವಾಡಲು ಮತ್ತು ಮರಳಿನತ್ತ ಸುಳಿದಾಡಲೂ ಬಿಡುತ್ತಿರಲಿಲ್ಲ.

ಹೀಗೆಯೇ, ಇನ್ನೊಂದು ಘಟನೆ, ನನ್ನ ಗೆಳತಿಯ ಮೂರು ವರ್ಷದ ಹೆಣ್ಣು ಮಗು ಹಣ್ಣಿನ ಬುಟ್ಟಿಯ ಹತ್ತಿರ ಹೋಗಿ, ಅದರಲ್ಲಿರುವ ಕಿತ್ತಳೆ ಹಣ್ಣನ್ನು ತೆಗೆದಳಲ್ಲದೇ, ಕೆಲವೇ ಕ್ಷಣದಲ್ಲಿಯೇ ಅದನ್ನು ತನ್ನ ಶಕ್ತಿ ಮೀರಿ ಕಿವುಚುವುದರಲ್ಲಿಯೇ ತಲ್ಲೀನಳಾಗಿದ್ದಳು. ಕೂಡಲೇ ಕಿತ್ತಳೆ ಹಣ್ಣಿನ ಅಂಟಾದ ರಸ ಅವಳ ಬಟ್ಟೆ, ಕೈಗಳಿಗೆ ಮತ್ತು ನೆಲದ ಮೇಲೆ ಚೆಲ್ಲಿ ಅಂಟಂಟಾಗ ತೊಡಗಿತು. ಆದರೂ ಮಗು ಕಿತ್ತಳೆ ಹಣ್ಣಿನ ರಸದ ಸವಿಯನ್ನು ಸವಿಯುತ್ತಾ, ಕೆಲ ಸಮಯದ ವರೆಗೆ ನೆಲದ ಮೇಲೆ ಬಿದ್ದ ಹಣ್ಣಿನ ರಸದೊಂದಿಗೆ ಆಟವಾಡಿದಳು. ಕಿತ್ತಳೆ ಹಣ್ಣಿನ ಅಂಟು ಅಂಟಾದ ರಸದ ವಾಸನೆಗೆ ಆಕರ್ಷಿತವಾಗಿ ಹಾರಾಡುತ್ತ ಬಂದ ನೊಣಗಳ ಹಿಂಸೆಯಿಂದ ಮಗು ಗಟ್ಟಿಯಾಗಿ ಅಳಲು ಪ್ರಾರಂಭಿಸಿದಳು. ಮಗುವಿನ ತಾಯಿ ಅವಳನ್ನು ಸಮಾಧಾನವಾಗಿ ಎತ್ತಿಕೊಂಡು ಬಚ್ಚಲು ಮನೆಗೆ ಕರೆತಂದು, ಅವಳನ್ನು ಮತ್ತು ಅವಳ ಬಟ್ಟೆಯನ್ನು ಶುಚಿಗೊಳಿಸಿದಳು. ಮಗು ಮತ್ತೆ ಆಟವಾಡಲು ಹಿಂತಿರುಗಿ ಬಂದಳು, ಆದರೆ ಈ ಬಾರಿ ಹಣ್ಣಿನ ಬುಟ್ಟಿಯ ಬಳಿ ಹೋಗಲಿಲ್ಲ. ಈ ಘಟನೆಯಲ್ಲಿ ನನ್ನ ಗೆಳತಿಯು ತನ್ನ ಮಗುವಿಗೆ ಕಿತ್ತಳೆ ಹಣ್ಣಿನ ಅನುಭವ ಪಡೆಯಲು ಅನುವು ಮಾಡಿಕೊಟ್ಟಳು. ಈ ಅನುಭವದಿಂದ ಮಗು ನಿಜವಾಗಿ ಕಲಿತ ಅಂಶ ಯಾವುದೆಂದು ಹೇಳುವುದು ಕಷ್ಟ. ಆದರೆ, ಒಳ್ಳೆಯ ಅಂಶವೆಂದು ಹೇಳಬಹುದೇನೆಂದರೆ ಮಗುವು ಏನೋ ಒಂದು ಹೊಸ ಜ್ಞಾನವನ್ನು ಪರಿಶೋಧಿಸಿದ ಸಂತೋಷವನ್ನು ಅನುಭವಿಸಿದಳು.

ಇನ್ನೊಂದೆಡೆಯಲ್ಲಿ ತನ್ನ ಅಂಬೆಗಾಲಿಡುವ ಮಗುವನ್ನು ಅನಾರೋಗ್ಯವಾಗುವುದರಿಂದ ತಪ್ಪಿಸಿದೆ, ಕಲುಷಿತವಾದ ಮರಳು ತನ್ನ ಮಗುವನ್ನು ಉಸಿರುಗಟ್ಟುವಂತೆ ಮಾಡಬಹುದಿತ್ತು. ಇದರಿಂದ ನನ್ನ ಮಗು ಮಾರಕ ರೋಗಗಳಿಗೆ ಈಡಾಗುವುದನ್ನು ತಪ್ಪಿಸಿದೆನೆಂಬ ಸಮರ್ಥನೆ ಮಾಡಿಕೊಳ್ಳುವ ತಾಯಿ. ಇವುಗಳನ್ನು ಮೂಕಪ್ರಜ್ಞಳಾಗಿ ನೋಡುತ್ತಿದ್ದ ನನಗೆ ಆಶ್ಚರ್ಯವಾಗುವುದೇನೆಂದರೆ, ಆ ಮಗು ಏನನ್ನು ಯೋಚಿಸುತ್ತಿರಬಹುದು? ತನ್ನ ಸುತ್ತ ಮುತ್ತಲಿನ ಪರಿಸರ ಮತ್ತು ತನ್ನ ತಾಯಿ ನಡುವಳಿಕೆಗಳ ಪ್ರಚೋದನೆಗಳಿಂದ ಮಗು ಏನನ್ನು ಕಲಿತಿರಬಹುದು?" ಒಂದು ವೇಳೆ ಮಗು ಕಲುಷಿತವಾದ ಮರಳನ್ನು ಸೇವಿಸಿದರೆ ಏನಾಗುತ್ತಿತ್ತು?"– ಅವನಿಗೆ ಅದು ಇಷ್ಟವಾಗುತಿತ್ತೇ, ಅಥವಾ ಹೊರಗೆ ಉಗುಳುತಿದ್ದನೇ?" "ಮರಳನ್ನು ತಿಂದು ಮಗುವಿನ ಉಸಿರುಗಟ್ಟುತ್ತಿತ್ತೇ? ಇನ್ನೊಂದೆಡೆಯಲ್ಲಿ ನೋಡಿದರೆ, ನನ್ನ ಗೆಳತಿ ತನ್ನ ಮಗುವಿಗೆ ಕಿತ್ತಳೆ ಹಣ್ಣನ್ನು ಕಿವುಚಲು ಬಿಡದೇ ಅವಳನ್ನು ಅವುಗಳಿಂದ ದೂರವಿಟ್ಟದ್ದರೆ ಮಗುವಿನ ಮುಖದಲ್ಲಿ ಹಾಗೂ ಅವಳ ಕಣ್ಣುಗಳಲ್ಲಿ ಅನುಭವದ ಸಂತೋಷ ಕಾಣುತಿತ್ತೇ? ಆ ಮುಗ್ಧ ತುಟಿಗಳಿಗೆ ಬಡಿದ ಕಿತ್ತಳೆ ಹಣ್ಣಿನ ರಸದ ಸವಿಯನ್ನು ಸವಿಯಲು ಸಾಧ್ಯವಾಗುತ್ತಿತ್ತೇ? ಕಿತ್ತಳೆ ಹಣ್ಣಿನ ಸಿಪ್ಪೆಯ ಅಂಟಾದ ರಸದಿಂದ ಉಂಟಾದ ಹಿಂಸೆಯನ್ನು ಅನುಭವಿಸಲು ಸಾಧ್ಯವಾಗುತ್ತಿತ್ತೇ?

ಈ ಘಟನೆಗಳ ಬಳಿಕ ನನ್ನ ಮನದಲ್ಲಿ ಬಂದ ಪ್ರಶ್ನೆಯೇನೆಂದರೆ, ಒಂದು ವೇಳೆ ಶಾಲಾ ತರಗತಿಯಲ್ಲಿ ಇಂತಹ ಸನ್ನಿವೇಶಗಳು ಬಂದರೆ ಶಿಕ್ಷಕರು ಸಹ ಮಕ್ಕಳನ್ನು ಘಟನೆಗಳಿಂದ ದೂರವಿಡಬಹುದೇ? ಅಥವಾ ಅವರು ಸ್ವತಃ ತಾವೂ ಮಕ್ಕಳೊಂದಿಗೆ ಮಕ್ಕಳಾಗಿ ಅವರು ಮಾಡುವ ಪರಿಶೋಧನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರೇ? ಇಲ್ಲವೇ, ಮಗು ಮಾಡುವ ಅವ್ಯವಸ್ಥೆಯ ಬಗ್ಗೆ ಜಿಗುಪ್ಸೆಯನ್ನು ತೋರಿಸುತ್ತಿದ್ದರೇ? ಅವರು ಮಗುವಿನ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸುವರೆ?

ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ದೇಹಚಲನಾಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಜೀನ್ ಕ್ಲಾರ್ಕ್, "ನಿಯಂತ್ರಿಸಲ್ಪಟ್ಟ ಮಗು"ವಿನ ಬಗ್ಗೆ ಹೇಳುವುದೇನೆಂದರೆ, ಅವರ ಪ್ರಕಾರ, "ಮಕ್ಕಳು ತಮ್ಮ ಸುರಕ್ಷತೆಯ ಕಾರಣದಿಂದ ತಮ್ಮ ಹೆಚ್ಚು ಸಮಯವನ್ನು ಎತ್ತರದ ಕುರ್ಚಿಗಳಲ್ಲಿ, ತಿರುಗಾಟದಲ್ಲಿ, ಮತ್ತು ಕಾರಿನ ಸೀಟ್‌ಗಳ ಮೇಲೆ ಕಳೆಯುತ್ತಾರೆ. (Louv, 2005)." ಭಾರತದಲ್ಲಿಯೂ ಹಾಗೇ, ಇದಕ್ಕೆ ಉದಾಹರಣೆಯಾಗಿ, ನಮಗೆ ಬೇರೆ ಬೇರೆ ರೀತಿಯಲ್ಲಿ ಆಧಾರಗಳು ದೊರೆಯುತ್ತವೆ. ನಗರದ ಶ್ರೀಮಂತ ಮನೆಗಳಲ್ಲಿ ಮಕ್ಕಳನ್ನು ಕೈ ಹಿಡಿದುಕೊಂಡೇ ಸುತ್ತಾಡಿಸುತ್ತಾರೆ, ಕುರ್ಚಿಯ ಮೇಲೆಯೇ ಇರುವಂತೆ ನಿರ್ಬಂಧನೆಯೊಂದಿಗೆ ನಿಯಂತ್ರಿಸಲ್ಪಟ್ಟಿರುತ್ತಾರೆ. ಇನ್ನೊಂದೆಡೆಯಲ್ಲಿ, ನಗರದ ಬಡ ಮನೆಗಳಲ್ಲಿಯೂ ಮಕ್ಕಳನ್ನು ತಮ್ಮ ಚಿಕ್ಕ ವಾಸಸ್ಥಳಗಳಲ್ಲಿಯೇ ಇಟ್ಟು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾರೆ. ಏಕೆಂದರೆ, ತಂದೆತಾಯಿಯರು ತಮ್ಮ ಮಕ್ಕಳು ತಮ್ಮ ಸುತ್ತ ಮುತ್ತಲಿನ ವಿಷಕಾರಿ ಕೀಟಗಳು, ಹೆಚ್ಚುತ್ತಿರುವ ಅಪಘಾತಗಳು, ಗಾಯ ಹಾಗೂ ಆಕಸ್ಮಿಕವಾಗಿ ಆಗಬಹುದಾದ ತೊಂದರೆಗಳಿಗೆ ಅಂಜಿ ಮಕ್ಕಳನ್ನು ಅವುಗಳಿಂದ ದೂರವಿಡುತ್ತಾರೆ. ಇದರಿಂದ, ಮಕ್ಕಳು ಅನುಭವಗಳನ್ನು ಅನುಭವಿಸಲು ಅಸಮರ್ಥರಾಗಿರುತ್ತಾರೆ. ಅದಕ್ಕೆ ಪಾಲಕರ ನಿರ್ಬಂಧಗಳು, ಮನೆಯ ಶುಚಿತ್ವದ ಬಗೆಗಿನ ಕಾಳಜಿಗಳು ಮತ್ತು ಮಕ್ಕಳಿಂದ ಮಾಡಲ್ಪಟ್ಟಿರುವ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ತಗಲುವ ಸಮಯ, ಹೀಗೆ ತಮ್ಮ ಅಸಹಾಯಕತೆಗೆ ಹೆದರಿ ತಮ್ಮ ಮಕ್ಕಳನ್ನು ಅವರ ಸುತ್ತಮುತ್ತಲಿನ ಜ್ಞಾನದ ಅನ್ವೇಷಣೆಗಳಿಂದ ದೂರವಿಡುವುದೇ ಒಳಿತೆಂದು ಭಾವಿಸುತ್ತಾರೆ.

ಇದೇ ರೀತಿ, ಶಿಕ್ಷಕರು ಸಹ ಮಕ್ಕಳನ್ನು ಶಾಲೆಗಳಲ್ಲಿ ಕುರ್ಚಿ ಬೆಂಚುಗಳ ನಡುವೆಯೇ ಕುಳ್ಳಿರಿಸಿ ನಿಯಂತ್ರಿಸುತ್ತಾರೆ. ಇದರಿಂದ ಮಕ್ಕಳಿಗೆ ಆಟೋಟದ ಸ್ವಾತಂತ್ರ್ಯವನ್ನು ಆನಂದಿಸುವ ಹಾಗೂ ಹೊಸ ಜ್ಞಾನವನ್ನು ಪರಿಶೋಧನೆ ಮಾಡುವ ಮತ್ತು ಅನುಭವವನ್ನು ಅನುಭವಿಸುವ ಸ್ವಾತಂತ್ರ್ಯವಿರುವುದಿಲ್ಲ. ಅನೇಕ ಶಿಶು ಶಿಕ್ಷಣ ಕಾರ್ಯಕ್ರಮಗಳು ಕಲಿಕೆಯ ನಡುವಿನ ಅಂತರವನ್ನಷ್ಟೆ ಅಲ್ಲ, ಮಗು ಅನುಭವಿಸ ಬೇಕಾದ ಅನುಭವಗಳಿಗೂ ಕಡಿವಾಣ ಹಾಕಿವೆ. ಸ್ಥಿರವಾದ ಪಠ್ಯಕ್ರಮ, ಬೋಧನಾ ಪದ್ಧತಿಗಳು ಮತ್ತು ಚಟುವಟಿಕೆಗಳು ಮಕ್ಕಳ ಕುತೂಹಲ ಮತ್ತು ಸೃಜನಶೀಲತೆಯನ್ನು ವೃದ್ಧಿಸಲು ಅವಕಾಶ ನೀಡುವುದಿಲ್ಲ. ಶಿಕ್ಷಕರು ಕೇವಲ ಪಠ್ಯಕ್ರಮಗಳಿಗೆ ಮಾತ್ರ ನಿರ್ಬಂಧಿತರಾಗಿಲ್ಲ, ಬದಲಿಗೆ ಮಕ್ಕಳನ್ನು ನಿಯಂತ್ರಿಸಿ ನಿಶ್ಶಬ್ದ ತರಗತಿಯನ್ನಾಗಿಸಿ, ಕುರ್ಚಿ-ಬೆಂಚುಗಳ ಮಧ್ಯದಲ್ಲಿ ಬಂಧಿಸಿ, ತಾವು ಬೋಧಿಸಿದನ್ನಷ್ಟೇ ಸ್ವೀಕರಿಸಿ; ಕಾಟಾಚಾರಕ್ಕೆ ಪ್ರಶ್ನೆಗಳ ರೂಪದಲ್ಲಿ ಮಕ್ಕಳಿಗೆ ಅಭಿವ್ಯಕ್ತಿಸುವ ಅವಕಾಶ ನೀಡಲಾಗುತ್ತದೆ. ಅದರಲ್ಲೂ ಕೆಲವು ಮಕ್ಕಳು ಉತ್ತರವನ್ನು ತಿಳಿದಿದ್ದೂ ಪ್ರಶ್ನೆಗಳನ್ನು ಕೇಳದರೆ, ಮತ್ತೆ ಕೆಲವರು ಕಾಟಾಚಾರಕ್ಕೆ ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಾರೆ.

ಡ್ಯೂಯಿಯವರ ಮಾತಿನಂತೆ "ನಾವು ಏನು ಯೋಚಿಸುತ್ತೇವೆ? ಏನನ್ನು ಅನುಭವಿಸಿ ಆನಂದಿಸುತ್ತೇವೆ? ಅಥವಾ ಅನುಭವಿಸಿದ ಪರಿಣಾಮಗಳಿಂದ ಏನೆಲ್ಲಾ ತೊಂದರೆಗಳನ್ನು ಅನುಭವಿಸುತ್ತೇವೆ? ಯೆಂಬುದು "ಅನುಭವದಿಂದ ಕಲಿಕೆ" ಯೆಂಬುದಕ್ಕೆ ಹಿನ್ನುಡಿ ಮತ್ತು ಮುನ್ನುಡಿಯಂತೆ ಸಂಬಂಧ ಕಲ್ಪಿಸುತ್ತದೆ. (Dewey, 2003). 'ಬೆಂಕಿಯ ಜ್ವಾಲೆಯಲ್ಲಿ ಮಗು ಕೈ ಹಾಕಿದಂತೆ,' ಎಂಬ ಉದಾಹರಣೆ ಕೊಟ್ಟು, ಡ್ಯುಯಿ ಯವರು ಹೇಳುವುದೇನೆಂದರೆ, "ಸನ್ನಿವೇಶದ ಪರಿಣಾಮಕ್ಕೆ ಒಳಗಾದಾಗ ಉಂಟಾಗುವ ನೋವಿನ ಅರಿವು ಸಹ ಒಂದು ಅನುಭವ. 'ಈ ಮೂಲಕ ಮಗು ಕಲಿಯುವುದೇನೆಂದರೆ, ಬೆಂಕಿಯ ಜ್ವಾಲೆಯಲ್ಲಿ ಕೈ ಹಾಕುವುದು ಅಂದರೆ, ಸುಡುವುದು; ಇದರಿಂದ ನೋವು ಉಂಟಾಗುತ್ತದೆ ಎಂದು ಅರ್ಥಮಾಡಿಕೊಳ್ಳುತ್ತದೆ. ಅದೇ ರೀತಿ ಪುಟ್ಟ ಹೆಣ್ಣು ಮಗು ಕಿತ್ತಳೆ ಹಣ್ಣಿನ ಅನುಭವದ ಪರಿಣಾಮದಿಂದ ಅದರ ಅಂಟಾದ ರಸದಿಂದ ಆರಾಮದಾಯಕವಲ್ಲದ ಮತ್ತು ಹಿತಕರವಲ್ಲದ ಅನುಭವವನ್ನು ಗ್ರಹಿಸಿತಲ್ಲದೇ, ಕಿತ್ತಳೆಯ ಸವಿಯಾದ ರಸದಿಂದ ಅದರ ಹಣ್ಣಿನ ಸವಿಯನ್ನು ಅನುಭವಿಸಿದಳು. ಇದರಿಂದ ಪುಟ್ಟ ಮಗು ಕಿತ್ತಳೆ ಹಣ್ಣಿನ ರುಚಿಯನ್ನು ಬೇರೆ ತಿನಿಸುವಿಗಿಂತ ಬೇರೆಯದಾಗಿದೆ ಎಂಬುದಾಗಿ ಗುರುತಿಸಬಲ್ಲಳು.

ಪಿಯಾಜೆಯವರು ಕಲಿಕೆ ಹೇಗೆ ನಡೆಯುತ್ತದೆಂಬುದನ್ನು ಸೂಕ್ಷ್ಮವಾಗಿ ಈ ರೀತಿಯಾಗಿ ಹೇಳುತ್ತಾರೆ. ಅವರು ಹೇಳುವುದೇನೆಂದರೆ, "ಮಕ್ಕಳು ತಮ್ಮ ಕಲಿಕೆಯ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕ ಪಾತ್ರ ವಹಿಸುವುದರಿಂದ ಅವರ ಜ್ಞಾನವನ್ನು ಅವರೇ ಕಟ್ಟಿಕೊಳ್ಳುತ್ತಾರೆ. ಅವರಿಗೆ ನೀಡುವ ಎಲ್ಲಾ ವಿಷಯವನ್ನು ನಿಷ್ಕ್ರಿಯವಾಗಿ ಹೀರಿಕೊಳ್ಳುವವರಲ್ಲ. ಅವರಲ್ಲಿರುವ ಹಳೆಯ ಜ್ಞಾನಕ್ಕೆ ಹೊಸ ಅನುಭವಗಳನ್ನು ಹೊಂದಿಸಿಕೊಳ್ಳುತ್ತಾ ಹೊಸ ಜ್ಞಾನವನ್ನು ಕಟ್ಟಿಕೊಳ್ಳುತ್ತಾರೆ.

ಪಿಯಾಜೆಯವರ ಪ್ರಕಾರ, "ಮಗು ಹೊಸ ಅನುಭವದ ಸನ್ನಿವೇಶಕ್ಕೆ ಎದುರಾದಾಗ, ಅದು ಮೊದಲು ಆ ಸನ್ನಿವೇಶದ ರಚನೆ ಮತ್ತು ನಿಯಮವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಹಳೆಯ ಅನುಭವದಿಂದ ಸಮಾಧಾನ ಸಿಗದಿದ್ದಾಗ, ಗ್ರಹಿಕೆಯಲ್ಲಿ ಅಸಮತೋಲನ ಉಂಟಾಗುತ್ತದೆ. ಈ ಅಸಮತೋಲನಕ್ಕೆ ಹೊಸ ಸನ್ನಿವೇಶ ಎದುರಾಗಿ ಅವುಗಳ ರಚನೆ ಮತ್ತು ನಿಯಮವನ್ನು ಅರ್ಥಮಾಡಿಕೊಂಡಾಗ ಅಸಮತೋಲನಕ್ಕೆ ಪರಿಹಾರ ಸಿಗುತ್ತದೆ. ಮಗು ಹಳೆಯ ಮತ್ತು ಹೊಸ ಅನುಭವಗಳೊಂದಿಗೆ ಮತ್ತೊಂದು ಹೊಸ ಜ್ಞಾನವನ್ನು ರಚಿಸುವ ಮತ್ತು ಸ್ವೀಕರಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಒಂದು ಸಲ ಈ ಅಸಮತೋಲನ ದೂರವಾದ ಮೇಲೆ, ಮಗು ಸಮತೋಲನದ ಗುರಿಯನ್ನು ತಲಪುವುದರಲ್ಲಿ ಯಶಸ್ವಿಯಾಗುತ್ತದೆ. ಈ ಪ್ರಕ್ರಿಯೆಗೆ 'ಸಮತೋಲನಾತ್ಮಕ ಗ್ರಹಿಕೆ' ಎನ್ನುವರು.

ಆ ಚಿಕ್ಕ ಹೆಣ್ಣು ಮಗು ತನ್ನ ಪಂಚೇಂದ್ರಿಯಗಳಾದ ಕಣ್ಣು, ಮೂಗು, ಕಿವಿ, ಬಾಯಿ ಮತ್ತು ಸ್ಪರ್ಶ ಇವುಗಳ ಸಹಾಯದಿಂದ ಕಿತ್ತಳೆ ಹಣ್ಣೆಂದರೇನೆಂಬುದನ್ನು ಅರಿಯುವುದರೊಂದಿಗೆ ಕೆಲವೊಂದಂಶವನ್ನು ಇಷ್ಟ ಪಟ್ಟರೆ ಕೆಲವೊಂದಿಷ್ಟನ್ನು ನಿರಾಕರಿಸುವುದನ್ನು ಕಲಿತಳು. ಇನ್ನೊಂದೆಡೆಯಲ್ಲಿ ಅಂಬೆಗಾಲಿಡುವ ಮಗು ಅವನ ಅನುಭವಗಳಿಂದ ದೂರವಿದ್ದು ಯಾವ ಗ್ರಹಿಕೆಯೂ ಸಿಗದಂತಾಗಿದ್ದಾನೆ. ಆ ಮಗು ತನ್ನ ತಾಯಿಯ ಕಟುನುಡಿಗಳನ್ನು ಅನುಭವಿಸಿದನು ಹಾಗೂ ತನ್ನ ತಾಯಿಯ ನಿರಾಕರಣೆಯಿಂದ ಮರಳಿನ ರುಚಿಯ ಅನುಭವವನ್ನು ಪಡೆಯದಾದನು. ಆದರೆ ಹೆಣ್ಣು ಮಗು ಕಿತ್ತಳೆಯ ಅಂಟಾದ ರಸದ ಅಸಮಾಧಾನದ ಅನುಭವವನ್ನು ಪಡೆದಳು. ಇದರೊಂದಿಗೆ ಅವಳು ಕಿತ್ತಳೆಯ ಸವಿಯಾದ ರಸದ ಸವಿಯ ಅನುಭವವನ್ನು ಸಹ ಪಡೆದಳು. ಹೆಣ್ಣು ಮಗು ಎದುರಿಸಿದ ಪರಿಣಾಮ ನೈಸರ್ಗಿಕವಾದ ಪರಿಣಾಮವಾಗಿತ್ತು. ಇನ್ನೊಂದೆಡೆ ಅಂಬೆಗಾಲಿಡುವ ಮಗು ಪಡೆದ ಅನುಭವ ಅವನ ತಾಯಿಯಿಂದ ನಿಯಂತ್ರಿಸಲ್ಪಟ್ಟಿದ್ದು, ಕೃತಕವಾಗಿತ್ತು. ಈ ಮಗು ಇನ್ನೊಮ್ಮೆ ಮರಳಿನ ರುಚಿಯನ್ನು ಸವಿಯಲು ಹೋಗುವಾಗ ಅದು ಅವನ ಅಮ್ಮನ ಅಹಿತಕರವಾದ ನುಡಿ ಅಥವಾ ಅದರ ಹೆದರಿಕೆಯಿಂದ ಅವನ ಅನುಭವದ ಮೇಲೆ ಪರಿಣಾಮ ಬೀರಬಹುದು.

ಒಂದು ವೇಳೆ ತನ್ನ ತಾಯಿಯ ಒಪ್ಪಿಗೆಯ ಪ್ರಚೋದನೆಯಿಂದ ಅಂಬೆಗಾಲಿಡುವ ಮಗುವಿನ ಅನುಭವ ಬೇರೆ ರೀತಿಯಾಗಿರುತ್ತಿತ್ತೇ? ನಾವು ಕೇಳುವ ಪ್ರಶ್ನೆ ಮತ್ತು ಮಾರ್ಗದರ್ಶನ ನೀಡುವ ರೀತಿ ಮಕ್ಕಳ ಕಲಿಕೆಯ ಮೇಲೆ ಪ್ರಭಾವವನ್ನು ಬೀರುತ್ತವೆ. ಎಡೆಲ್ ಫೆಬರ್ ಮತ್ತು ಎಲೈನ್ ಮಜ್ಲಿಶ್ ಅವರ ಪುಸ್ತಕ, "How to talk to kids so that They learn', ಇದರಲ್ಲಿ ಮಕ್ಕಳ ಸಂರಕ್ಷಣೆಯ ಮಹತ್ವದ ಮೇಲೆ ಬೆಳಕು ಚೆಲ್ಲಿದ್ದಾರೆ. ಅವರ ಪ್ರಕಾರ, "ನಾವು ನಮ್ಮ ಮಕ್ಕಳೊಂದಿಗೆ ಮಾತನಾಡುವ ರೀತಿ ಅವರ ಕಲಿಕೆಗೆ ಒಂದು ಆಕಾರವನ್ನು ನೀಡುತ್ತದೆ. ನಮ್ಮ ಮಾತಿನ ಒರಟು ಧಾಟಿಯಿಂದ ಮಗು ತನ್ನ ಭಾವನೆಗಳನ್ನು ಮತ್ತು ಕುತೂಹಲಗಳನ್ನು ಹೊರತರಲು ನಿರಾಕರಿಸಬಹುದು. ಮಕ್ಕಳಿಗೆ ನಿಯಂತ್ರಣಾತ್ಮಕ ಸನ್ನಿವೇಶದಲ್ಲಿಯೇ ಕಲಿಕೆಯಾಗಬೇಕು ಎನ್ನುವ ಬದಲಿಗೆ, ಒಳ್ಳೆಯ ಮಾತುಗಳಿಂದ ಮಗುವಿಗೆ ಮರಳು ತಿನ್ನುವುದು ಒಳ್ಳೆಯದಲ್ಲಯೆಂಬುದನ್ನು ತಿಳಿಹೇಳಿದರೆ ಮಗು ಅರ್ಥಮಾಡಿಕೊಳ್ಳುತ್ತಿತ್ತು. ಈ ಮೊದಲು, ವ್ಯಗೋಸ್ಕಿ (Vygosky) ಅವರು ಸಾಮಾಜಿಕ ಪರಸ್ಪರ ಕ್ರಿಯೆಗಳು ಮಗುವಿನ ಜ್ಞಾನ ಮತ್ತು ಗ್ರಹಿಕೆಯನ್ನು ಬೆಳೆಸಲು ಹೇಗೆ ನೆರವಾಗುತ್ತವೆಯೆಂಬುದನ್ನು ವಿವರಿಸಿರುತ್ತಾರೆ. ಸಾಮಾಜಿಕ ಕಲಿಕೆಯ ಪ್ರಕ್ರಿಯೆಯಲ್ಲಿ ಮಗು ತನ್ನ ಹಿರಿಯರು ಮತ್ತು ಸುತ್ತಮುತ್ತಲಿನವರೊಂದಿಗೆ ನಡೆಸಿದ ಪರಸ್ಪರ ಪ್ರತಿಕ್ರಿಯೆಗಳು ಅದರ ಗ್ರಹಿಕೆಯನ್ನು ಹೆಚ್ಚಿಸಲು ಸಹಾಯವಾಗುತ್ತದೆ. ವ್ಯಗೋಸ್ಕಿರವರ ಸಾಮಾಜಿಕ ರಚನಾತ್ಮಕ ಸಿದ್ಧಾಂತದ ಪ್ರಕಾರ, "ಮಗುವಿನ ಕಲಿಕೆಯು ಅದರ ಸಾಮಾಜಿಕ ಪರಸ್ಪರ ಪ್ರತಿಕ್ರಿಯೆಗಳು ಮತ್ತು ಸಂಸ್ಕೃತಿ ಆಧಾರದ ಮೇಲೆ ಸಂಭವಿಸುವಂತದ್ದು".

ಈ ಎರಡು ಮಕ್ಕಳಿಗೆ ಅವರವರ ಕುತೂಹಲದ ಪರಿಶೋಧ ಮತ್ತು ಅನುಭವಕ್ಕೆ ಅನುಗುಣವಾಗಿ ಮಾರ್ಗದರ್ಶನ ನೀಡಲಾಗಿದೆ. ಆದರೆ, ಕಿತ್ತಳೆ ಹಣ್ಣಿನ ಅನುಭವ ಪಡೆದ ಮಗು ತನ್ನ ಕುತೂಹಲವನ್ನು ಸ್ವತಂತ್ರವಾಗಿ ಪರಿಶೋಧಿಸಿದರೆ, ಅಂಬೆಗಾಲಿಡುವ ಮಗುವಿನ ಪರಿಶೋಧನೆಯು ಅವನ ತಾಯಿಯಿಂದ ಪೂರ್ಣಗೊಳ್ಳದೇ ಸ್ಥಗಿತಗೊಂಡಿತ್ತು. ಅಂದರೆ ನಿಯಂತ್ರಿಸಲ್ಪಟ್ಟಿತ್ತು. ತೆರೆಸ ವಿಲ್ಲಿಂಗ್ಯಾಮ್ ರವರು ತಮ್ಮ 'ಟೆಡ್ ಕಾನ್ವರ್ಸೇಷನ್' (TED conversation) ನಲ್ಲಿ 'ನಿಷ್ಫಲಗೊಂಡ ಕುತೂಹಲದಿಂದಾಗುವ ಪರಿಣಾಮ' ಇದರ ಮೇಲೆ ಬಹಿರಂಗ ಹೇಳಿಕೆಯನ್ನು ಈ ರೀತಿ ನೀಡಿರುತ್ತಾರೆ. "ಕುತೂಹಲ ಇಲ್ಲದ ಕಾರ್ಯದ ಪರಿಶೋಧನೆಯಲ್ಲಿ ಅಥವಾ ಅನ್ವೇಷಣೆಯಲ್ಲಿ ಪ್ರಚೋದನೆ ಅಲ್ಪ ಪ್ರಮಾಣದ್ದಾಗಿರುತ್ತದೆ. ಕುತೂಹಲವಿಲ್ಲದ ಜೀವನದಲ್ಲಿ ನಿರಾಸಕ್ತಿ ಮತ್ತು ಆಸಕ್ತಿಹೀನತೆಯಿಂದ ಬದುಕು ವಿಚಾರಹೀನವಾಗಿ ನಮ್ಮ ಬದುಕಿನ ಆರ್ಥಿಕ, ಸಾಹಿತ್ಯಿಕ, ವೈಜ್ಞಾನಿಕ, ರಾಜಕೀಯ, ಸಾಮಾಜಿಕ ಸಾಧನೆ ಮತ್ತು ಅಭಿವೃದ್ಧಿ ಮೇಲೆ ಹೀನವಾದ ಪರಿಣಾಮ ಬೀರುತ್ತದೆ.

ಆರಂಭಿಕ ಬಾಲ್ಯದ ಶಿಕ್ಷಣದ ತರಬೇತುದಾರರಾದ ನಾವು, ಮಕ್ಕಳಲ್ಲಿರುವ ಕುತೂಹಲವನ್ನು ಸದಾ ಚೈತನ್ಯಯುತವಾಗಿರುವಂತೆ ಹಾಗೂ ನೈಸರ್ಗಿಕವಾದ ಸಹಜ ಸ್ಥಿತಿಯಲ್ಲಿಯೇ ಹೊಸ ಜ್ಞಾನವನ್ನು ಪರಿಶೋಧಿಸುವಂತೆ

ಮತ್ತು ಆ ಮೂಲಕ ಅನುಭವಿಸುವ ಸ್ಥಿತಿಯನ್ನು ನಮ್ಮ ಮಕ್ಕಳಿಗೆ ಒದಗಿಸುವುದರಲ್ಲಿ ಮಹತ್ವವಾದ ನಿರ್ಣಾಯಕ ಪಾತ್ರವನ್ನು ವಹಿಸುತ್ತೇವೆ. ಈ ಕ್ರಿಯೆಯಲ್ಲಿ ಮಗು ಉತ್ತಮ ಗ್ರಹಿಕೆಯನ್ನು ಪಡೆಯಲು ತನ್ನ ಪಂಚೇದ್ರಿಯಗಳಾದ ಕಿವಿ, ಕಣ್ಣು, ಮೂಗು, ಬಾಯಿ ಮತ್ತು ಸ್ಪರ್ಶ ಇವುಗಳನ್ನು ಬಳಸಿಕೊಳ್ಳಬೇಕು. ಮಕ್ಕಳ ಶಿಕ್ಷಣ ತಜ್ಞರಾದ ಮರಿಯಾ ಮೊಂಟಿಸರಿ ಅವರು ಹೇಳುವುದೇನೆಂದರೆ, "ತರಬೇತಿಯನ್ನು ಮೊದಲು ಜ್ಞಾನೇಂದ್ರಿಯಗಳಿಗೆ ನೀಡಬೇಕು, ನಂತರ ಬುದ್ಧಿಗೆ ನೀಡಬೇಕು ಎಂದಿದ್ದಾರೆ. ಅವರು ಮಕ್ಕಳ ಆತ್ಮ ಸಾಕ್ಷಾತ್ಕಾರದ ಬಗ್ಗೆ ಒತ್ತಿ ಹೇಳುತ್ತಾರೆ ಹಾಗೆಯೇ ಶಿಕ್ಷಕರು ಮಗುವಿನ ಸರ್ವಾಂಗೀಣ ವಿಕಾಸಕ್ಕೆ ಅಗತ್ಯವಾದ ವಾತಾವರಣವನ್ನು ಒದಗಿಸುವವರಾಗಿರುತ್ತಾರೆ". ಎಂಬುದನ್ನು ನಂಬುತ್ತಾರೆ. ಕೊನೆಯದಾಗಿ, ಮರಿಯಾ ಮೊಂಟಿಸರಿಯವರು ಪ್ರಕಾರ, "ನಾವು ಮಕ್ಕಳಿಗೆ ನೀಡುವ ಕಾರ್ಯ ಹೇಗಿರಬೇಕೆಂದರೆ, ಅದರಲ್ಲಿ ಮಗು ಆಸಕ್ತಿಯುತವಾಗಿ ತನ್ನಲ್ಲಿ ತಾನು ಮಗ್ನವಾಗಿ ತೊಡಗಿಸಿಕೊಳ್ಳುವಂತಿರಬೇಕು." (ಮಾಂಟೆಸ್ಸೋರಿ 1949).





[i]Theresa Willingham, USA, 'Celebrating and Inspiring Curiosity as a Key Component in Learning', TED Conversations
**http://www.ted.com/conversations/145/celebrating_and_inspiring_curi.html**

**References:**


1. Dewey, J. (2003). Democracy and Education. New Delhi: Aakar Books.
2. Louv, R. (2005). Last Child in the Woods. Newyork: Atlantic Books.
3. Palmer, J. A. (2004). Fifty Great Modern Thinkers on Education - From Piaget to the Present. London and Newyork: Routledge, Taylor and Francis Group.
4. Siegler, R. S., & Alibali, M. W. (2005). Children's Thinking (4th Edition). NJ: Prentice-Hall.
5. Cook & Cook. (2005) Child Development, Principles and Perspectives. Boston: Allyn & Bacon/Longman.
6. Miller, P. (2011). Theories of Developmental Psychology (5th Edition). USA: Worth Publishers.
7. Wertch James V. (1985) Vygotsky and the social formation of mind, Harvard University Press, USA.
8. Crain, Wlliam C. (2011) Theories of development: concepts and application, 6th edition, Pearson Education Inc.
9. Maria Montessori. (1949). The Absorbent Mind. Madras India: The Theosophical Publishing house.
10. Faber A. Mazlish E. (1996) How to talk so kids can learn.
11. Theresa Willingham, USA, 'Celebrating and Inspiring Curiosity as a Key Component in Learning', TED Conversations http://www.ted.com/conversations/145/celebrating_and_inspiring_curi.html



**ಶರ್ಮಿಳಾ** ಅವರು ಮಕ್ಕಳು ಮತ್ತು ಯುವಕರ ಬಗ್ಗೆ ಕೆಲಸ ಮಾಡಿದ ಹದಿಮೂರು ವರ್ಷಗಳ ಅನುಭವವಿರುವ ಒಬ್ಬ ಸಾಮಾಜಿಕ ಅಭಿವೃದ್ಧಿ ವೃತ್ತಿಪರರು. ಅವರು 2010 ರಲ್ಲಿ ಜರುಗಿದ ಒಂದು ಅಪಘಾತದ ನಂತರ ಶಾಲಾ ಬೋಧನೆ ಕೈಗೊಂಡರು. ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ(ಎಪಿಯು)ನಲ್ಲಿ ಎಂ.ಎ. (ಶಿಕ್ಷಣ) ವ್ಯಾಸಂಗಕ್ರಮಕ್ಕೆ ಸೇರುವ ಮೊದಲು ಮೂರು ವರ್ಷಗಳ ಕಾಲ ಮೈಸೂರಿನಲ್ಲಿ ಒಂದು ಪ್ರಾಥಮಿಕ ಶಾಲೆಯಲ್ಲಿ ಗಣಿತ ಮತ್ತು ಸಾಮಾಜಿಕ ಅಧ್ಯಯನ ಬೋಧಿಸಿದರು. ಪ್ರಸ್ತುತ ಎಪಿಯು ವಿದ್ಯಾರ್ಥಿನಿಯಾಗಿರುವ ಅವರು ಅಧ್ಯಯನ, ಶಿಕ್ಷಕರ ತರಬೇತಿ ಮತ್ತು ಕಲಿಕೆ ತೊಂದರೆಗಳನ್ನು ಹೊಂದಿರುವ ಮಕ್ಕಳಿಗೆ ಸಹಾಯ ಮತ್ತು ನಡುವೆ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ತನ್ನ ಸಮಯ ವನ್ನು ವಿನಿಯೋಗಿಸುತ್ತಾರೆ. ಅವರನ್ನು ಸಂಪರ್ಕಿಸಬಹುದಾದ ವಿಳಾಸ sharmila.mandlik13@apu.edu.in



# ಸೃಜನಶೀಲತೆ: ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಕಲೆಯ ಪಾತ್ರ

**ಆಶಾ ಸಿಂಗ್**

**"ಕಲೆಯು ಶಿಕ್ಷಣದ ಬುನಾದಿ"**

**ದೇವಿ ಪ್ರಸಾದ್**

ಶಿಲ್ಪ ಶಾಸ್ತ್ರಜ್ಞ ಮತ್ತು ಶಾಂತಿ ಕ್ರಿಯಾವಾದಿ

ಪುಟ್ಟ ಮಕ್ಕಳು ತಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥ ಮಾಡಿಕೊಳ್ಳಲು, ಒಂದರೊಡನೆ ಇನ್ನೊಂದಕ್ಕೆ ಸಂಬಂಧ ಕಲ್ಪಿಸುವುದು, ಹೋಲಿಸುವುದು ಮತ್ತು ತಮ್ಮದೇ ನಿರ್ಣಯಕ್ಕೆ ಬರುವುದಕ್ಕೆ ಇರುವ ತಮ್ಮ ಒಲವನ್ನು ತೋರಿಸಲು ಬೇರೆ ಬೇರೆ ರೀತಿಯ ಬಹಳಷ್ಟು ಸಂಭಾಷಣೆಯನ್ನು ಮಾಡುತ್ತಾರೆ. ಅವರ ಒಂದು ಸಂಭಾಷಣೆಯು ಈ ರೀತಿ ಇರಬಹುದು "ಇವತ್ತು ಮಳೆ ಬರ್ತಿದೆ ಯಾಕೇಂದ್ರೆ ನಮ್ಮ ಟೀಚರ್ ಇವತ್ತು ಬಕೆಟ್‌ಗಳಲ್ಲಿ ನೀರನ್ನ ಮೇಲೆ, ಮೇಲೆ, ಮೇಲೆ ಎರಚ್ತಾ ಇದ್ರು". ಮೂರು ವರ್ಷದ ಮಗು ಅವಧಿಗಿಂತ ಸ್ವಲ್ಪ ಮುಂಚೆ ಮನೆಗೆ ಹೋಗಲು ಕಿರಿ-ಕಿರಿಗೊಂಡು ದೂರುತ್ತಾ "ಯಾಕಮ್ಮ ಇಷ್ಟು ಬೇಗ ಬಂದೆ" ಎಂದು ಕೇಳುತ್ತಿತ್ತು. ನಾಲ್ಕು ವರ್ಷದ ಒಂದು ಮಗು ಅಡ್ಡಾ-ದಿಡ್ಡಿ ಇಟ್ಟಿದ್ದ ಕುರ್ಚಿಯ ದಿಂಬುಗಳನ್ನು ತನ್ನ ಅಮ್ಮ ಸರಿಯಾಗಿ ಜೋಡಿಸಿಟ್ಟಾಗ "ನೀನು ಸಿಂಹದ ಗುಹೆಯನ್ನು ಹಾಳು ಮಾಡಿದೆ, ಈಗ ಅದು ಜಿಂಕೆಯನ್ನು ಹಿಡಿದು ಬಿಡತ್ತೆ!" ಎಂದು ಕೂಗಾಡುತ್ತದೆ. ಇಂತಹ ಮಕ್ಕಳ ಮಾತುಗಳು ಮಕ್ಕಳ ಚಿಂತನೆಯ ಉತ್ಸಾಹ, ತುಡಿತ ಮತ್ತು ಚಿಂತನಾ ಪ್ರಕ್ರಿಯೆಯನ್ನು ತಿಳಿಸುತ್ತವೆ. ಇವು ಅವರು ವಿನೂತನವಾಗಿ ಆಲೋಚಿಸುವ ಅವರ ಸಾಮರ್ಥ್ಯವನ್ನು ಹೇಳುವುದಲ್ಲದೆ ವಾಸ್ತವವಾದ ಭೌತಿಕ-ಸಾಮಾಜಿಕ ಜಗತ್ತನ್ನು ಅರ್ಥಮಾಡಿಕೊಳ್ಳಲು ಇರುವ ಸಾಮರ್ಥ್ಯವನ್ನು ತೋರಿಸುತ್ತವೆ. ಅವರ ಹೇಳಿಕೆಗಳು ದೊಡ್ಡವರು ಹೇಳಿಕೊಟ್ಟಿದ್ದರಿಂದ ರೂಪುಗೊಂಡಿರದೇ ಅವರದೇ ಅನುಭವ ಮತ್ತು ಶೋಧನೆಗಳಿಂದ ಹೊರಬಂದ ನವೀನ ದೃಷ್ಟಿಕೋನವನ್ನು ಬೊಟ್ಟುಮಾಡಿ ತೋರಿಸುತ್ತದೆ. ಮಕ್ಕಳು ಸೃಜನಶೀಲ ಮನಸ್ಸು ಮತ್ತು ಬಹುಮುಖಿ ದೃಷ್ಟಿಕೋನಗಳನ್ನು ಪ್ರತಿಬಿಂಬಿಸುತ್ತಾರೆ.

## ಸೃಜನಶೀಲತೆ ಎಂದರೆ ಏನು?

ಸೃಜನಶೀಲತೆಯನ್ನು ವಿಭಿನ್ನ ಮತ್ತು ನವೀನ ಚಿಂತನೆ ಎಂದು ನಿಘಂಟು ವ್ಯಾಖ್ಯಾನಿಸುತ್ತದೆ. ಸೃಜನಶೀಲತೆಯು ಪರಿಶೋಧನೆ ಮತ್ತು ಅನ್ವೇಷಣೆಯಿಂದ ಸೋಪಜ್ಞ ಕಲ್ಪನೆಗಳು ರೂಪುಗೊಳ್ಳುವ ಪ್ರಕ್ರಿಯೆ. ಬೋಧನೆ ಮತ್ತು ಕಲಿಕೆಯಲ್ಲಿ ಸೃಜನಶೀಲತೆಯು ಪ್ರಕ್ರಿಯೆಯಿಂದ ಬರುವ ಅನುಭವದಿಂದ ರೂಪುಗೊಳ್ಳುತ್ತದೆಯೇ ಹೊರತು ಸಿದ್ಧ ಉತ್ಪನ್ನದ ಹೀಗಿರಬೇಕು ಎಂಬ ಕಾಳಜಿಯಿಂದ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಸೃಜನಶೀಲತೆಯು ಪ್ರತಿಭೆ, ಕೌಶಲ್ಯ ಅಥವಾ ಬುದ್ಧಿವಂತಿಕೆಯನ್ನೂ ಮೀರಿದ್ದು. ಸೃಜನಶೀಲತೆಯು ಸ್ಪರ್ಧೆ ಅಥವಾ ಇನ್ನೊಬ್ಬರಿಗಿಂತಾ ಉತ್ತಮವಾಗಿ ಮಾಡುವುದನ್ನೂ ಮೀರಿದೆ. ಅಲ್ಲದೆ ಇದು ಚಿಂತಿಸುವ, ಪರಿಶೋಧಿಸುವ, ಅನ್ವೇಷಿಸುವ ಮತ್ತು ಕಲ್ಪನೆಯನ್ನು ಮಾಡುವ ಕೆಲಸ. ಅನನ್ಯ ಸಾಧ್ಯತೆಗಳು ಮತ್ತು ನವೀನ ಚಿಂತನೆಗಳನ್ನು ಆಸ್ವಾದಿಸುವಂತೆ ಸಕ್ರಿಯವಾಗಿ ತೊಡಗಿಸಿಕೊಳ್ಳುವಿಕೆಯನ್ನು ಮಕ್ಕಳಲ್ಲಿ ಪೋಷಿಸುವುದು ಹೇಗೆ? ಕಲಾವಿದರು ಸೃಜನಶೀಲರು ಮತ್ತು ಕಲೆಯ ಉತ್ಕೃಷ್ಟತೆಯೇ ಸೃಜನಶೀಲತೆ ಎಂದು ಅನೇಕ ಬಾರಿ ನಾವು ಪರಿಭಾವಿಸುತ್ತೇವೆ.

ಅಮುಲ್‌ನಂತಹ ವ್ಯಾಪಾರಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಂದರ್ಭಿಕವಾದ ಮತ್ತು ಹಾಸ್ಯಭರಿತ ಜಾಹೀರಾತುಗಳನ್ನು ನೀಡಿ ಸೃಜನಶೀಲತೆಯನ್ನು ತೋರುವ ಸಾಧ್ಯತೆ ಇದೆ, ಹಾಗೆಯೇ ಒಬ್ಬ ರೈತ ಸಸಿಗಳನ್ನು ನೆಡುವಾಗ ವಿನೂತನ ವಿನ್ಯಾಸಗಳನ್ನು ರೂಪಿಸಿ ಸೃಜನಶೀತೆಯನ್ನು ತೋರಿಸಬಹುದು, ಒಬ್ಬ ತಾಯಿಯು ಮನೆಯಲ್ಲಿನ ಸ್ಥಳಗಳನ್ನು ಆಸಕ್ತಿದಾಯಕ ತಾಣಗಳನ್ನಾಗಿ ವಿನ್ಯಾಸಗೊಳಿಸುವುದರಿಂದ ಸೃಜನಶೀಲತೆಯನ್ನು ತೋರಬಹುದು. ಇದರಂತೆಯೇ ಅನೇಕ ತಂದೆತಾಯಿಯರು ಅದ್ಭುತವಾದ ಕಥೆಗಳನ್ನು ಸೃಷ್ಟಿಸಿ ತಮ್ಮ ಮಕ್ಕಳಿಗೆ ಹೇಳಿ ಅವರಿಗೆ ಆನಂದವನ್ನು ನೀಡುವುದರೊಂದಿಗೆ ಬಾಂಧವ್ಯವನ್ನೂ ಬೆಸೆಯುತ್ತಾರೆ. ದೈನಂದಿನ ಕೆಲಸಕಾರ್ಯದಲ್ಲಿ ಹೊಸ ಮಿಂಚನ್ನು ಹೊಮ್ಮಿಸಲು ಸೃಜನಶೀಲತೆಯು ಸಾಧನವಾದರೂ ವೈವಿಧ್ಯಮಯ ಆಲೋಚನೆಗಳು ಹಾಗೂ ನವೀನ ಚಿಂತನೆಗಳನ್ನು ಪ್ರೋತ್ಸಾಹಿಸಲು ಕಲೆಯು ಹೆಚ್ಚು ಉಪಯುಕ್ತ ಎಂಬುದು ಸತ್ಯ. ಸ್ವತಂತ್ರವಾಗಿ ಆಲೋಚಿಸುವ

ಅನುಭವಗಳು, ಪರಿಶೋಧನೆ, ಪ್ರಯೋಗ ಮತ್ತು ಅನುಭವಗಳು ಈ ಮೂರು ಅಂಶಗಳು ಎಳೆಯ ಮಕ್ಕಳನ್ನು ಸೃಜನಶೀಲ ವ್ಯಕ್ತಿಗಳಾಗುವತ್ತ ಮುನ್ನೆಡೆಸುವ ಪ್ರಮುಖ ಸಾಧನಗಳಾಗಿವೆ. ತಾನು ಚಿಕ್ಕ ವಯಸ್ಸಿನಲ್ಲಿ ಕಲಿತ ಶಾಲೆಯಲ್ಲಿ ತನಗೆ ಸಿಕ್ಕ ಅವಕಾಶ ಮತ್ತು ಸಾಹಸದ ಅನುಭವವು ಇಂದಿನ ತನ್ನ ಅಪೂರ್ವವಾದ ಯಶಸ್ಸಿಗೆ ಕಾರಣ ಎಂದು ಜಪಾನ್ ದೂರದರ್ಶನದ ಕಾರ್ಯಕ್ರಮ ನಿರೂಪಕಿಯು ತಾನು ಬರೆದಿರುವ ಪುಸ್ತಕ ಟೋಟೋಚನ್‌ನಲ್ಲಿ ಹೇಳಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಮಾಡಿ ಕಲಿಯುವ ಸ್ವಾತಂತ್ರ್ಯ ಮತ್ತು ಇದೆಲ್ಲಕ್ಕಿಂತ ಹೆಚ್ಚಾಗಿ ತಪ್ಪು ಮಾಡುವ ಸ್ವಾತಂತ್ರ್ಯ ಮತ್ತು ಪರ್ಯಾಯ ಮಾರ್ಗಗಳನ್ನು ಆಲೋಚಿಸಲು ಸಿಕ್ಕ ಮಾರ್ಗದರ್ಶನವು ಸಮಸ್ಯಾ ಪರಿಹಾರ, ಆತ್ಮವಿಶ್ವಾಸ ಮತ್ತು ಸ್ವತಂತ್ರ ಚಿಂತನೆಗಳಂತಹ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಅವಕಾಶ ನೀಡುತ್ತದೆ. ಆಟವಾಡುತ್ತಾ ಪ್ರಯೋಗಮಾಡುವ ದಿನ-ನಿತ್ಯದ ಸರಳ ಕಾರ್ಯದ ಸಂಕೀರ್ಣವಾದ ಜಾಲದಲ್ಲಿ ಸೃಜನಶೀಲತೆಯು ಅಡಗಿದೆ.

## ಸೃಜನಶೀಲತೆಯನ್ನು ಪೋಷಿಸುವುದು

ಶಾಲಾ ವಿದ್ಯಾಭ್ಯಾಸವು ಸಮುದಾಯ ನಿರ್ದೇಶಿತ ವಿಧಾನಗಳನ್ನು ಬಳಸುವತ್ತ ಒಲವನ್ನು ಹೊಂದಿದ್ದು ಸಾಮರ್ಥ್ಯ ಮತ್ತು ಆಸಕ್ತಿಗಳಲ್ಲಿರುವ ವ್ಯಕ್ತಿಗತ ಭಿನ್ನತೆಯ ಕಡೆಗೆ ಗಮನ ಹರಿಸುವುದಿಲ್ಲ. ಇಂದಿನ ವಿದ್ಯಾಭ್ಯಾಸದ ಪರಿಯು ಮುದ್ರಿತ ಜ್ಞಾನಬಂಡಾರವನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಸೀಮಿತವಾಗಿದ್ದು ವಿದ್ಯಾರ್ಥಿಯು ಹೊಂದಿರಬಹುದಾದ ನೋಡಿ ಅರಿತ ಅಥವಾ ಆಯಾಮ ಪರಿಣಿತಿಗೆ ಪ್ರೋತ್ಸಾಹ ನೀಡುವುದಿಲ್ಲ. ಕಲಿಕೆಯ ಆಧಾರವಾಗಿ ಕಲೆಯನ್ನು ತೆಗೆದುಕೊಂಡಾಗ ತರಗತಿಯಲ್ಲಿನ ಏಕತಾನತೆಯನ್ನು ತೊಡೆದುಹಾಕಿ ಮಾಡಿ ಕಲಿಯುವ ಮತ್ತು ನೋಡಿ ಕಲಿಯುವ ವಿದ್ಯಾರ್ಥಿಗಳನ್ನು ಒಳಗೊಳ್ಳುವ ವಿಧಾನದಿಂದ ಮಾಂತ್ರಿಕ ಅಚ್ಚರಿಗಳನ್ನು ಉಂಟುಮಾಡುತ್ತದೆ.

ಕಲೆಯು ಹೆಚ್ಚು ಸಂವಹನ ಮಾರ್ಗಗಳನ್ನು ತೆರೆಯುವುದರಿಂದ ವಿಭಿನ್ನ ವಿದ್ಯಾರ್ಥಿಗಳ ವರ್ಗದ ಸಮಸ್ಯೆಯನ್ನು ಪರಿಹರಿಸುತ್ತದೆ. ಮುದ್ರಿತ ಪಠ್ಯಕ್ಕೆ ಒಲವಿರದ ಮತ್ತು ಅನುಕ್ರಮ ಸ್ಮರಣೆಯಲ್ಲಿ ಚುರುಕಾಗಿರದ ವಿದ್ಯಾರ್ಥಿಗಳು ವಿನ್ಯಾಸಗೊಂಡಿರದ ಅಭಿವ್ಯಕ್ತತೆಗೆ ಅವಕಾಶವನ್ನು ನೀಡುವ ಮಾಧ್ಯಮದತ್ತ ಹೆಚ್ಚು ಒಲವನ್ನು ತೋರುತ್ತಾರೆ. ಕಲೆಯಲ್ಲಿ ನಿಗದಿಪಡಿಸಿದ ವ್ಯಾಖ್ಯಾನಗಳು ಅಷ್ಟಿಲ್ಲವಾದ್ದರಿಂದ ಮತ್ತು ಮರದ ಒಳಗಿನ ಬೇರುಗಳು ಹಾಗೂ ಮರದ ಮೇಲಿನಿಂದ ತೂಗಾಡುವ ಬಿಳಲುಗಳನ್ನು ಹೊಂದಿರುವ ಎರಡೂ ರೀತಿಯ ಮರಗಳನ್ನು ಸಮಾನವಾಗಿ ಮೆಚ್ಚುತ್ತವೆ. ಕಾಲ ಕಳೆದಂತೆ ಶಾಲಾ ವ್ಯವಸ್ಥೆಯು ಶಿಕ್ಷಣದಲ್ಲಿ ಕಲೆಯು ಎಷ್ಟೊಂದು ಶಕ್ತಿಪೂರ್ಣ ಮತ್ತು ಎಂತಹ ಉತ್ತಮ ಕೊಡುಗೆಯನ್ನು ನೀಡುತ್ತದೆ ಎಂಬುದನ್ನು ಗ್ರಹಿಸಬೇಕು.

ಇಪ್ಪತ್ತನೇ ಶತಮಾನದ ದಾರ್ಶನಿಕರಾದ ರಬೀಂದ್ರನಾಥ ಟಾಗೋರರು ಮತ್ತು ಶ್ರೀ ಅರಬಿಂದೋರವರು ಕಲೆಗೆ ಆದ್ಯತೆಯನ್ನು ನೀಡಿ ಅದನ್ನು ಆಧಾರವಾಗಿಸಿಕೊಳ್ಳುವ ಸಮಗ್ರ ಶಿಕ್ಷಣವಿಧಾನವನ್ನು ಪ್ರತಿಪಾದಿಸಿದ್ದಾರೆ. ಸಾಂಸ್ಕೃತಿಕ ತಳಹದಿಯ ತರಗತಿ ತಂತ್ರಗಳ ಮೂಲಕ ಭಾವನೆಗಳು ಮತ್ತು ಆಧ್ಯಾತ್ಮಿಕತೆಯನ್ನು ಪೋಷಿಸುವ ಶಿಕ್ಷಣದಲ್ಲಿನ ಸಂವೇದನಾಶೀಲತೆಯನ್ನು ಅವರು ಒತ್ತಿ ಹೇಳಿದ್ದಾರೆ. ಕಲೆ ಎಂದರೆ ವಿಭಿನ್ನ ಸಂಸ್ಕೃತಿಗಳ, ಭಾಷೆಯ, ಭೌಗೋಳಿಕ ಪರಿಸರದಲ್ಲಿನ, ಶಿಕ್ಷಣದಲ್ಲಿ ವಿಭಿನ್ನ ಹಿನ್ನಲೆಯನ್ನು ಮತ್ತು ಸಾಮರ್ಥ್ಯಗಳ ಶ್ರೇಣಿಯನ್ನು ಹೊಂದಿರುವ ಅನೇಕ ಜನರು ಮಾತನಾಡುವ ಭಾಷೆಯಾಗಿದೆ. ಸಂಗೀತ ಮತ್ತು ಚಲನೆಯು ಜೀವನದ ಗತಿಗೆ ಆಧಾರವಾಗಿರುವುದರಿಂದಲೇ ರಚ್ಚೆಹಿಡಿದ ಒಂದು ಹಸುಗೂಸು ಸಹ ಪುನರಾವರ್ತಿತ ಶಬ್ದದ ಲಯದಿಂದ ತಾತ್ಕಾಲಿಕ ಸಮಾಧಾನವನ್ನು ಹೊಂದುವುದನ್ನು ಕಾಣಬಹುದಾಗಿದೆ. ಅಂಗವೈಕಲ್ಯವನ್ನು ಹೊಂದಿರುವ ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕಲೆಯು ಹೆಚ್ಚಿನ ಕೊಡುಗೆಯನ್ನು ನೀಡಿರುವುದು ಅನೇಕ ಅಧ್ಯಯನಗಳಲ್ಲಿ ಕಂಡುಬರುತ್ತದೆ. ವಿಭಿನ್ನ ನೈಪುಣ್ಯತೆಯ ವರ್ಗಗಳನ್ನು ಹೊಂದಿರುವ ಸಮುದಾಯಗಳಲ್ಲಿ ಕಲೆಯು ಬೆಸುಗೆಯಾಗಿರುವುದನ್ನು ಇಲ್ಲಿ ಗಮನಿಸುವುದು ಅಷ್ಟೇ ಮುಖ್ಯ.

ಪಾಶ್ಚಾತ್ಯ ಶೈಕ್ಷಣಿಕ ಪ್ರಪಂಚದಲ್ಲಿ "ಸಮಗ್ರ ಶಿಕ್ಷಣವು" ಹೋವರ್ಡ್ ಗಾರ್ಡನರ್‌ರವರ ಬಹುವಿಧ ಬುದ್ಧಿವಂತಿಕೆಯ ಸಿದ್ಧಾಂತವನ್ನೇ ಹೇಳುತ್ತಿದ್ದು ನಮ್ಮ ಶಾಲಾ ವ್ಯವಸ್ಥೆಯು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಆದರೆ ಮೂಲಭೂತವಾಗಿ ಭಾಷೆ ಮತ್ತು ತಾರ್ಕಿಕ-ಗಣಿತ ಈ ಎರಡು ರೀತಿಯ ಬುದ್ಧಿವಂತಿಕೆಯನ್ನು ಬೋಧಿಸುತ್ತದೆ, ಪರೀಕ್ಷಿಸುತ್ತದೆ. ಮನದಟ್ಟು ಮಾಡಿಸುತ್ತದೆ ಮತ್ತು ಅದಕ್ಕೆ ಪ್ರಾಶಸ್ತ್ಯ ನೀಡುತ್ತದೆ ಎನ್ನುವುದನ್ನು ಸೂಚಿಸುತ್ತದೆ. ಇವುಗಳನ್ನು ಯಾವುದೇ ಪ್ರಾಥಮಿಕ ಕೌಶಲ್ಯಗಳ ಮೂಲಾಧಾರ ಎಂದು ಸದಾ ಪರಿಗಣಿಸಲಾಗುತ್ತದೆ. ಹೀಗಿದ್ದರೂ, ಇನ್ನೂ ಐದು ರೀತಿಯ ಬುದ್ಧಿವಂತಿಕೆಯು ಇದರಷ್ಟೇ ಪ್ರಮುಖವಾದವು ಎಂದು ಅವರು ಹೇಳುತ್ತಾರೆ. ಅವುಗಳೆಂದರೆ ತಮ್ಮದೇ ಆದ ಸಾಂಕೇತಿಕ ವ್ಯವಸ್ಥೆಯೊಂದಿಗೆ ಬಹಳಷ್ಟು ಜನರು ಮಾತನಾಡುವ ಮತ್ತು ವೈಯಕ್ತಿಕ ವ್ಯತ್ಯಾಸಗಳ ವಿಶಾಲವ್ಯಾಪ್ತಿಯನ್ನು ತಲುಪುವಂತಹ "ಭಾಷೆಗಳು" ಎನ್ನಬಹುದು. ಇದರಲ್ಲಿ ದೃಶ್ಯ / ಸ್ಥಾನಸಂಬಂಧಿ, ದೈಹಿಕ / ಕ್ರಿಯಾತ್ಮಕ, ಸಂಗೀತಾತ್ಮಕ, ವ್ಯಕ್ತಿಅಂತರ್ಗತ ಮತ್ತು ಅಂತರವ್ಯಕ್ತಿ

ಬುದ್ಧಿವಂತಿಕೆಗಳು ಸೇರುತ್ತವೆ. ಈ ಬುದ್ಧಿವಂತಿಕೆಗಳು ದೃಶ್ಯ ಕಲೆ, ಸಂಗೀತ, ನೃತ್ಯ ಮತ್ತು ನಾಟಕಗಳಿಗೆ ಆಧಾರವನ್ನು ಒದಗಿಸುತ್ತವೆ ಮತ್ತು ಈ ಕಲಾ ಪ್ರಕಾರದ ಮೂಲಕ ಬಹಳಷ್ಟು ವಿದ್ಯಾರ್ಥಿಗಳು ಮಾತುಕತೆ ಮತ್ತು ಸ್ವ-ಅಭಿವ್ಯಕ್ತಿಗೆ ಮಾಧ್ಯಮವನ್ನು ಕಂಡುಕೊಳ್ಳುವುದಲ್ಲದೇ, ಅರ್ಥವನ್ನು ರಚಿಸಿಕೊಳ್ಳುವ ಮತ್ತು ಸಾಧಾರಣವಾಗಿ ಎಲ್ಲಾ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಯುವ ಸಾಧನವನ್ನಾಗಿಯೂ ಬಳಸಿಕೊಳ್ಳುತ್ತಾರೆ. ಕಲೆಯನ್ನು ಕೇವಲ ಒಂದು ಪ್ರತ್ಯೇಕ ವಿಷಯವನ್ನಾಗಿ ಬೋಧಿಸದೇ ಪಠ್ಯಕ್ರಮದ ಎಲ್ಲಾ ಮಟ್ಟಗಳಲ್ಲೂ ಸಂಯೋಜಿಸಿದಾಗ ಇದು ವಿಶೇಷವಾಗಿ ಸಾಧ್ಯವಾಗುತ್ತದೆ.

ಸಂಗೀತ, ಅಭಿನಯ, ವರ್ಣಚಿತ್ರ ರಚನೆ ಮತ್ತ ನಾಟಕವನ್ನು ಒಳಗೊಂಡಿರುವ ಕಲೆಯು ಬಹಳಷ್ಟು ವಿಷಯಗಳಿಗೆ ಜೀವಂತವಾಗಿಸುತ್ತವೆ ಮತ್ತು ಅಮೂರ್ತವಾದುವುಗಳನ್ನು ಅನುಭವಾತ್ಮಕ ವಾಸ್ತವಗಳನ್ನಾಗಿಸಲು ಅವಕಾಶವನ್ನು ನೀಡುತ್ತವೆ.

ಚಿತ್ರಕಲೆಯು ಮಕ್ಕಳು ಹೇಗೆ ಚಿಂತಿಸುತ್ತಿವೆ ಎಂಬುದಕ್ಕೆ ಪ್ರಮುಖವಾದ ಒಳನೋಟವನ್ನು ಒದಗಿಸುತ್ತದೆ. ಮಕ್ಕಳ ಚಿತ್ರಕಲೆಯನ್ನು ಸಂಭಾಷಣೆಗೆ ಆಧಾರವನ್ನಾಗಿ ಬಳಸಿಕೊಳ್ಳುವುದು ಮುಖ್ಯ. ರೇಖೆಗಳ ಸಂಗ್ರಹ ಎನ್ನುವಂತೆ ಮಕ್ಕಳು ವಕ್ರವಾದ, ನೇರವಾದ ಗೆರೆಗಳು ಅಥವಾ ಅಂಕುಡೊಂಕಾದ ಗೆರೆಗಳನ್ನು ರಚಿಸಿದ್ದರೂ ಇವು ಮಕ್ಕಳ ಮನಸ್ಸಿನ 'ಕಣ್ಣಿ'ನಲ್ಲಿ ಒಂದಕ್ಕೊಂದು ಸಂಪರ್ಕವನ್ನು ಸೃಷ್ಟಿಸಿಕೊಂಡಿರುತ್ತವೆ. ತರಗತಿಯಲ್ಲಿ ಕಲೆಯು ಮಗುವು ಪರಿಶೋಧಿಸಲು ಮತ್ತು ಅಭಿವ್ಯಕ್ತಗೊಳಿಸಲು ಅವಕಾಶವನ್ನು ನೀಡುತ್ತದೆ. ನಿಖರವಾಗಿ ಪ್ರತಿಬಿಂಬಿಸುವ ಕೌಶಲ್ಯವು ಕ್ರಮೇಣ ಬರುತ್ತದೆ, ಪುಟಾಣಿ ಮಕ್ಕಳ ತರಗತಿಗಳು ಮಕ್ಕಳು ಪರಿಣಿತಿ ಪಡೆಯುವುದರ ಮೇಲೆ ಗಮನ ಹರಿಸದೆ ಅವರಿಗೆ ಅನುಭವವನ್ನು ಒದಗಿಸಲು ಅವಕಾಶ ನೀಡುವುದು ಅವಶ್ಯ.

ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮಗಳಲ್ಲಿ ಕಲೆಯು ಒಂದು ಅನುಭವವಾಗುವುದಕ್ಕೆ ಮೂರು ವಿಧಾನಗಳಿವೆ. ಒಂದು ಈಗಾಗಲೇ ಹೇಳಿರುವಂತೆ ವಾರ್ಷಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶನಕಲೆಗಳು. ಇನ್ನೊಂದು ಪ್ರತಿ ನಿತ್ಯ ತರಗತಿಯಲ್ಲಿನ ಒಡನಾಟದಲ್ಲಿ ಕಲೆಯನ್ನು ಬಳಸಿಕೊಳ್ಳುವುದು. ವಿಶೇಷವಾಗಿ ವಾರ್ಷಿಕ ಕಾರ್ಯಕ್ರಮಗಳ ಆಚರಣೆಯನ್ನು ಏರ್ಪಡಿಸುವ ಪ್ರಗತಿಪರ ವ್ಯವಸ್ಥೆಗಳು ಬಹಳಷ್ಟು ಶಿಕ್ಷಕರಿಗೆ ತಿಳಿದಿದೆ ಹಾಗೆಯೇ ಕಲೆಯನ್ನು ದಿನ ನಿತ್ಯದ ಕೆಲಸದಲ್ಲಿ ಬಳಸಿಕೊಳ್ಳುವುದು ತಿಳಿದಿದೆ. ಆದರೆ ಅರಿಯ ಬೇಕಾದ ಮೂರನೇ ವಿಚಾರವೆಂದರೆ ಒಬ್ಬ ಕಲಾವಿದನೊಂದಿಗೆ ಮಕ್ಕಳು ದಿನವನ್ನು ಕಳೆಯುವ ಅವಕಾಶ ಕಲ್ಪಿಸುವುದು.

### ಪ್ರತಿ ನಿತ್ಯದ ಲಯದಲ್ಲಿ ಕಲೆ: ವಿನೋದಭರಿತ ಒಡನಾಟಗಳು

ಇತ್ತೀಚಿನ ವರ್ಷಗಳಲ್ಲಿ, 'ಮಗು ಕೇಂದ್ರಿತ ಕಲಿಕೆ' ಕುರಿತು ವಾದಿಸುವವರು ಮಕ್ಕಳ ಕಲಿಕೆಯ ಶೈಲಿಯಲ್ಲಿ ಬಹುವಿಧಗಳ ಬಗ್ಗೆ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ಮಕ್ಕಳ ಸಾಮಾಜಿಕ, ಗ್ರಹಣಶಕ್ತಿ ಮತ್ತು ಭಾವನಾತ್ಮಕ ಸಾಮರ್ಥ್ಯಗಳು ಮತ್ತು ವಿಭಿನ್ನ ಭಾಷೆಗಳ ಭಿನ್ನತೆಯ ಬಗ್ಗೆ ಅರಿವು ಬೆಳೆಯುತ್ತಿದೆ. ಪುಟ್ಟ ಮಕ್ಕಳ ಶಿಕ್ಷಕರಾಗಿ ತರಗತಿಯಲ್ಲಿನ ವೈವಿಧ್ಯ ಮತ್ತು ಔಪಚಾರಿಕ ಕಲಿಕಾ ವಾತಾವರಣದಲ್ಲಿ ಮಕ್ಕಳು ತಮ್ಮ ವೈಯಕ್ತಿಕ ಅವಕಾಶಗಳನ್ನು ಕಂಡುಕೊಳ್ಳುವ ವಿಧಾನಗಳ ಬಗ್ಗೆ ಅರಿತುಕೊಳ್ಳಲು ನಮಗೆ ಚುರುಕಾದ ಮಿದುಳು ಇರಬೇಕಾಗುತ್ತದೆ. ಗೊಂಬೆಗಳನ್ನು ಇಟ್ಟಿರುವ ಒಂದು ಸರಳವಾದ ಜಾಗವು ಅನಿಸಿಕೆಗಳು ಮತ್ತು ಗ್ರಹಿಕೆಗಳನ್ನು ತಿಳಿಸುವ ಪಾತ್ರಾಭಿನಯಕ್ಕೆ, ಸಂಭಾಷಣೆಗೆ ವಿಶಾಲವಾದ ಅವಕಾಶವನ್ನು ಒದಗಿಸುತ್ತದೆ. ಪ್ರಕೃತಿ ವಿಹಾರದ ನಡಿಗೆ ಸಮಯದಲ್ಲಿ ಸಂಗ್ರಹಿಸಲಾದ ಎಲೆಗಳೊಂದಿಗೆ ತರಕಾರಿ ಜೋಡಣೆ ಮತ್ತು ಚಿತ್ರಕಲೆಯು ವಿನೋದವನ್ನು ಒದಗಿಸುವುದಲ್ಲದೇ ನಿಸರ್ಗ, ತರಗತಿ ಮತ್ತು ಕಲಿಕೆಯ ನಡುವೆ ಸಂಪರ್ಕವನ್ನು ಪ್ರಚೋದಿಸುತ್ತದೆ. ಸಂಗೀತ, ಕಥೆಹೇಳುವುದು, ಗೊಂಬೆಯಾಟದ ವೀಕ್ಷಣೆ ಮತ್ತು ಚಲನೆಗೆ ಬಹುವಿಧ ಕೌಶಲ್ಯಗಳನ್ನು ಒಳಗೊಂಡಿದೆ ಮತ್ತು ಬಹು ಆಯಾಮದ ಕಲಿಕೆಯನ್ನು ಒದಗಿಸುತ್ತದೆ. ಸೃಜನಶೀಲತೆಯು ಆರಂಭಿಕ ಬಾಲ್ಯದ ಶಿಕ್ಷಣದ ಪಠ್ಯಕ್ರಮದ ಒಂದು ಭಾಗವಾದ ಚಟುವಟಿಕೆಗಳಲ್ಲದೆ ಹಾಗೂ ಅಭಿವ್ಯಕ್ತತೆಗೆ ಅವಕಾಶವನ್ನು ನೀಡುವಂತೆ ಮಕ್ಕಳ ತೊಡಗಿಸಿಕೊಳ್ಳುವಿಕೆಯನ್ನು ಪೋಷಿಸಲು ಇದು ಒಂದು ವಿನೋದ ಭರಿತ ವಿಧಾನವಾಗಿದೆ.

### ವಾರ್ಷಿಕ ಸಮಾರಂಭದ ಕಾರ್ಯಕ್ರಮಗಳಾಗಿ ಕಲೆ: ಸಂಪರ್ಕವನ್ನು ಸೃಷ್ಟಿಸುವುದು

ಒಂದು ಸರಣಿ ಕಾರ್ಯಕ್ರಮದ ತರಾತುರಿಯನ್ನು ವಾರ್ಷಿಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಸೃಷ್ಟಿಸುವುದರಿಂದ ಇವು ಬಹಳಷ್ಟು ಸಮಯ ವಾರ್ಷಿಕ ಕಾರ್ಯಕ್ರಮಗಳನ್ನು ಹಾಳುಗೆಡವುತ್ತವೆ. ಹೀಗಿದ್ದರೂ, ನಾವು ಪ್ರತಿಯೊಬ್ಬರೂ ವಿಭಿನ್ನ ಸ್ಮರಣೆಯೊಂದಿಗೆ ಶಾಲಾ ವಾರ್ಷಿಕ ಆಚರಣೆಯ ಸವಿ ನೆನಪನ್ನು ಸ್ಮರಿಸುತ್ತೇವೆ. ಶಾಲೆಯ ನಿಶ್ಶಬ್ದ, ಶಿಸ್ತಿನ ವಾತಾವರಣವು ಬದಲಾಗಿ ಚಿತ್ರಕಲೆ, ಕಸೂತಿ ಕೆಲಸ ಅಥವಾ ನೃತ್ಯ ಮತ್ತು ಸಂಗೀತವನ್ನು ಅಭ್ಯಸಿಸುತ್ತಿರುವ ಚಟುವಟಿಕೆ ತುಂಬಿದ ಸ್ಥಳಗಳಾಗಿ ಬಿಡುತ್ತವೆ. ಶಾಲಾ ಪ್ರಾಂಗಣದಲ್ಲಿ ಮಕ್ಕಳ ಕಲೆಯ ಕಾರ್ಯಗಳನ್ನು ಪ್ರದರ್ಶಿಸಲಾಗಿರುತ್ತದೆ; ವಾರ್ಷಿಕ ಕಾರ್ಯಕ್ರಮಗಳು ವಿವಿಧ ಪ್ರದರ್ಶನಗಳನ್ನು ಪ್ರಮುಖವಾಗಿ ಹೊಂದಿರುತ್ತವೆ. ವಿಶೇಷವಾಗಿ ಈ ಪ್ರದರ್ಶನಗಳು ಕಲಿಕೆಯಲ್ಲಿ

ಹುದುಗಿರುವ ಕಲೆಯೊಂದಿಗೆ ಸಂಪರ್ಕವನ್ನು ಹೊಂದಿರುತ್ತದೆ.

ಪೌರಾಣಿಕ ಪಾತ್ರಗಳಾಗಿ ವೇಷ ಭೂಷಣ ಧರಿಸಿದ ಮಕ್ಕಳ ಪಾತ್ರಗಳು ಸಾಂಸ್ಕೃತಿಕ ಸಂಕೇತಗಳನ್ನು ಅರ್ಥೈಸಿಕೊಳ್ಳುವಂತೆ ಮಾಡುತ್ತವೆ, ನಾಗ ಬುಡಕಟ್ಟು ಜನಾಂಗದ ವೇಷದಲ್ಲಿ ಅಥವಾ ಸಂತಾಲೀ ಸೀರೆಯಲ್ಲಿ ಹೀಗೆ ಅಲಂಕರಿಸಿಕೊಳ್ಳುವುದು ಅವರಿಗೆ ಒಂದು ಅವಿಸ್ಮರಣೀಯ ಅನುಭವವನ್ನು ನೀಡುತ್ತದೆ. ವಿವಿಧ ರಾಜ್ಯಗಳಲ್ಲಿನ ಚಿರಪರಿಚಿತವಲ್ಲದ ಉಡುಗೆಗಳಲ್ಲಿ ಅಲಂಕರಿಸಿಕೊಳ್ಳುವುದು ಕ್ಷಣಿಕವಾಗಿ ಮಕ್ಕಳನ್ನು ತಮ್ಮ ಭೌಗೋಳಿಕ ಮಿತಿಯ ಹೊರಗಿನ ವಿಶ್ವದಲ್ಲಿ ನಿಲ್ಲಿಸುತ್ತದೆ. ಉಡುಗೆ-ತೊಡುಗೆಗಳ ಮೂಲಕ ಮಕ್ಕಳ ಕಲ್ಪನೆಯಲ್ಲಿ ಜನರ ಜೀವನದಲ್ಲಿನ ವೈವಿಧ್ಯತೆಯ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಮಕ್ಕಳು ವಿಭಿನ್ನವಾಗಿ ಅಲಂಕರಿಸಿಕೊಂಡಾಗ ಅಥವಾ ಯಾವುದೇ ರೀತಿಯ ನೃತ್ಯದಲ್ಲಿ ಭಾಗವಹಿಸಿದಾಗ ಅವರು ಅವರಂತಲ್ಲದೇ ಆ ಪಾತ್ರವಾಗಿಯೇ ಅಭಿನಯಿಸುತ್ತಾರೆ. ಕಲೆಯು ಒಂದು ಪ್ರದರ್ಶನವಾಗಿ ಬಹು ವಿಧದ ಸಾಮಾಜಿಕ-ಸಾಂಸ್ಕೃತಿಕತೆಯೊಂದಿಗೆ ಸಂಪರ್ಕವನ್ನು ಹೊಂದುವ ಸಾಮರ್ಥ್ಯವನ್ನು ಬೆಳಸುತ್ತದೆ. ನವ್ಯತೆಯನ್ನು ಅನುಭವಿಸಲು ಮತ್ತು ಹೊಸ ದೃಷ್ಟಿಕೋನದ ಸಾಧ್ಯತೆಗಳೊಂದಿಗೆ ಸಂಬಂಧವನ್ನು ಬೆಳಸಿಕೊಳ್ಳಲು ಮಕ್ಕಳು ಸಮರ್ಥರಾಗುತ್ತಾರೆ.

ಸಂಗೀತ ಮತ್ತು ಸಾಹಿತ್ಯಗಳು ಭಾಷೆಗಳ ಸ್ವರದ ಏರಿಳಿತ ಮತ್ತು ಶಬ್ದಗಳನ್ನು ಅನಾವರಣಗೊಳಿಸುತ್ತವೆ. ಚಲನೆಯ ಮೂಲಕ ಅಥವಾ ಚಿತ್ರಕಲೆಯ ರಚನೆಯ ಮೂಲಕ ಕಲಾಪ್ರಕಾರಗಳ ಅನುಭವವನ್ನು ಪಡೆಯುವುದು ವಿವಿಧ ಸಾಮಾಜಿಕ, ಭೌಗೋಳಿಕ ಪರಿಸರದಲ್ಲಿ ಬಣ್ಣ ಅಥವಾ ವರ್ಣಗಳಿರುವ ಸೂಕ್ಷ್ಮತೆಯನ್ನು ಬೆಳೆಸಿಕೊಳ್ಳುವಂತೆ ಮಾಡುವುದಲ್ಲದೇ ಅದಕ್ಕೆ ಸಂಬಂಧಿಸಿದ ಕಥೆಗಳು, ಉಡುಗೆಗಳು ಮತ್ತು ಆಚರಣೆಗಳನ್ನು ತಿಳಿಯಲು ಕುತೂಹಲವನ್ನು ಹುಟ್ಟುಹಾಕುತ್ತವೆ.

## ಪರಿಣಿತರ ಮೂಲಕ ಕಲೆ

ಮಕ್ಕಳಿಗೆ ಶಾಲಾ ಜೀವನದಲ್ಲಿ ಕಲೆಗೆ ಅನೇಕ ಅವಕಾಶಗಳನ್ನು ಒದಗಿಸಲು ಕೆಲವು ಶಾಲೆಗಳು ಬೇರೆಯ ವಿಧಾನಗಳನ್ನು ಅನುಸರಿಸುತ್ತವೆ. ವೃತ್ತಿಪರ ಕಲಾಪರಿಣಿತರೊಂದಿಗೆ ಶಿಬಿರಗಳನ್ನು ಏರ್ಪಡಿಸುವ ಪ್ರಯತ್ನಗಳು, ಪ್ರಸಿದ್ಧ ಕಲಾವಿದರೊಂದಿಗೆ ಕಾರ್ಯ ನಿರ್ವಹಿಸುವುದು ಹೀಗೆ ಅನುಭವಗಳನ್ನು ಮೀರಿ ಆಕರ್ಷಣೆಯನ್ನು ಎದುರಿಸುವಾಗ ಅವರು ಪರಿಣಿತಿಯ ಬಗ್ಗೆ ಮತ್ತು ಕೌಶಲ್ಯಗಳ ಬಗ್ಗೆ ಅಚ್ಚರಿಯನ್ನು ಹೊರ ಹಾಕುವಂತೆ ಮಾಡುತ್ತದೆ. ಮಕ್ಕಳ ಸಂತೋಷಕ್ಕಾಗಿ ಕೆಲವು ಶಾಲೆಗಳು ಇಂತಹ ಪ್ರಯತ್ನಗಳನ್ನು ಮಾಡುವ ಕ್ರಮಗಳನ್ನು ಹೊಂದಿವೆ. ಸ್ಪಿಕ್ ಮ್ಯಾಕೆ ಈ ನಿಟ್ಟಿನಲ್ಲಿ ಇಡುವ ಒಂದು ಹೆಜ್ಜೆಯಾಗಿದೆ. ಕಲಾ ಚಟುವಟಿಕೆಗಳನ್ನು ಕೇಂದ್ರ ಭಾಗಕ್ಕೆ ತರುವುದರಲ್ಲಿ ಅನೇಕ ಸಂಪತ್ತನ್ನು ಹೊಂದಿದೆ. ಅವುಗಳೆಂದರೆ:

- ಸ್ಫೂರ್ತಿದಾಯಕತೆ
- ಬಹುವಿಧ ಪ್ರತಿಭೆಗೆ ಮೌಲ್ಯವನ್ನು ಸೃಷ್ಟಿಸುವುದು
- ವಿವಿಧ ವೃತ್ತಿಗಳೆಡೆಗೆ ಗೌರವವನ್ನು ಸೃಷ್ಟಿಸುವುದು. (ಸಂಗೀತ ಸಾಧನಗಳನ್ನು ನುಡಿಸುವವರು, ಕುಂಬಾರರು, ಗಣಿತಜ್ಞರು ಹೀಗೆ ಪ್ರತಿಯೊಬ್ಬರೂ ಒಂದೇ ವೇದಿಕೆಯನ್ನು ಹಂಚಿಕೊಳ್ಳುವರು)
- ಪರಿಪೂರ್ಣತೆಗೆ ಅಭ್ಯಾಸದ ಪಾತ್ರವನ್ನು ಅರ್ಥಮಾಡಿ-ಕೊಳ್ಳುವುದು.
- ವಿಭಿನ್ನ ಪ್ರತಿಭೆಯನ್ನು ಹೊಂದಿರುವ ಮಕ್ಕಳಿಗೆ ಸಂವಹಿಸಲು ಮತ್ತು ಅಭಿವ್ಯಕ್ತಿಸಲು ಅವಕಾಶವನ್ನು ತೆರೆಯುವುದು.

ತಮ್ಮ ಅನುಭವವಾಗಿ ಕಲೆ ಪುಸ್ತಕದಲ್ಲಿ ಜಾನ್ ಡ್ಯೂಯಿಯವರ್ಲು "ಒಂದು ಸಾಂಪ್ರದಾಯಿಕ ಮತ್ತು ವಾಡಿಕೆಯ ಅರಿವಿನ ಪದರವನ್ನು ಭೇದಿಸಿ ಹೊರಹೊಮ್ಮುವ" ಅನನ್ಯ ಸಾಮರ್ಥ್ಯ ಕಲೆಗೆ ಇದೆ ಎಂದು ಬರೆದಿದ್ದಾರೆ. "ಕಲೆಗಾರ ಸರ್ವದಾ ಹೊಸತನದ ನೈಜ ಪ್ರತಿಪಾದಕನಾಗಿದ್ದಾನೆ. ಇಲ್ಲಿ ಹೊರಗೆ ನಡೆದ ಘಟನೆಗಳಷ್ಟೇ ಹೊಸತಲ್ಲ ಅದು ಪ್ರಚೋದಿಸುವ ಭಾವನೆಗಳು,ದೃಷ್ಟಿಕೋನಗಳು ಮನಗಾಣ್ಕೆ ಮುಖ್ಯವಾಗುತ್ತದೆ." ಎಂದು ಅವರು ಭಾವಿಸುತ್ತಾರೆ. ನಾವೇ ಕಲೆಯನ್ನು ಸೃಷ್ಟಿಸಲು ಮತ್ತು ಅದಕ್ಕೆ ಪ್ರತಿಸ್ಪಂದಿಸಲು ಪ್ರಾರಂಭಿಸಿದಾಗ, ಭಾವನೆ, ದೃಷ್ಟಿಕೋನ ಮತ್ತು ಮನಗಾಣ್ಕೆಯನ್ನು ಪ್ರಚೋದಿಸುತ್ತೇವೆ. ನಾವು ವಿಶ್ವದ ಮೇಲ್ಮೈ ವಾಸ್ತವಿಕತೆಯ ತಳದಲ್ಲಿರುವ ಸತ್ಯವನ್ನು ನೋಡುತ್ತೇವೆ. ನಾವು ನಮ್ಮ ಕಲ್ಪನೆಯನ್ನು ಹೊರಹಾಕುತ್ತೇವೆ.

## ಕಲೆಗಳು ಏಕೆ ಮಹತ್ವದ್ದಾಗಿವೆ?

1. ಇವು, ವರ್ಣೀಯ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಡೆ-ತಡೆಗಳನ್ನು ತುಂಡರಿಸಿ ಎಲ್ಲಾ ಜನರೂ ಮಾತನಾಡುವ ಭಾಷೆಯಾಗಿದೆ ಮತ್ತು ಸಾಂಸ್ಕೃತಿಕ ಮೆಚ್ಚುಗೆಯನ್ನು ಹಾಗೂ ಅರಿವನ್ನು ಹೆಚ್ಚಿಸುವುದಾಗಿದೆ.
2. ಅಕ್ಷರಗಳು ಮತ್ತು ಸಂಖ್ಯೆಗಳಂತೆಯೇ ಇವು ಪ್ರಮುಖವಾದ ಸಾಂಕೇತಿಕ ವ್ಯವಸ್ಥೆಗಳು.
3. ಇವು ಮನಸ್ಸು, ದೇಹ ಮತ್ತು ಆತ್ಮವನ್ನು ಒಗ್ಗೂಡಿಸುತ್ತವೆ.
4. ಸ್ವ-ಅಭಿವ್ಯಕ್ತಿಗೆ ಇವು ಅವಕಾಶವನ್ನು ಒದಗಿಸಿ, ಆಂತರಿಕ ವಿಶ್ವವನ್ನು ಗಟ್ಟಿಯಾದ ವಾಸ್ತವಿಕ ಬಾಹ್ಯವಿಶ್ವಕ್ಕೆ ಹೊಂದಿಸುತ್ತವೆ

5. ಇವು "ಉಲ್ಲಾಸದಸ್ಥಿತಿ"ಗೆ ಮತ್ತು ಅನುಭವದ ಉತ್ತುಂಗತೆಗೆ ಮಾರ್ಗವನ್ನು ನೀಡುತ್ತವೆ.
6. ಉತ್ತೇಜನ, ನಿರ್ದೇಶನ, ಮೌಲ್ಯಾಂಕನ ಮತ್ತು ಆಳವಾದ ಅರ್ಥೈಕೆಯನ್ನು ಉಂಟುಮಾಡುವ ವಾಸ್ತವಿಕ ಅನ್ವಯಗಳ ನಡುವೆ ಪರಿಮಿತಿ ಇಲ್ಲದ ಸಂಪರ್ಕವನ್ನು ರಚಿಸುತ್ತವೆ.
7. ಆರಂಭದಿಂದ ಅಂತ್ಯದವರೆಗೂ ಇವು ಪ್ರಕ್ರಿಯೆಯನ್ನು ಅನುಭವಿಸಲು ಇರುವ ಅವಕಾಶ ಒದಗಿಸುತ್ತವೆ.
8. ಅವು ಸ್ವಾವಲಂಬನೆ ಮತ್ತು ಸಹಯೋಗ ಎರಡನ್ನೂ ಬೆಳಸುತ್ತವೆ.
9. ಅವು ಕೂಡಲೇ ಹಿಮ್ಮಾಹಿತಿಯನ್ನು ಒದಗಿಸುತ್ತವೆ ಮತ್ತು ಪರ್ಯಾಲೋಚನೆಗೆ ಅವಕಾಶವನ್ನು ಒದಗಿಸುತ್ತವೆ.
10. ವೈಯಕ್ತಿಕ ಸಾಮರ್ಥ್ಯಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವುದನ್ನು ಸಾಧ್ಯವಾಗಿಸುತ್ತವೆ ಮತ್ತು ಕೆಲವೊಮ್ಮೆ ಈ ಸಾಮರ್ಥ್ಯಗಳ ಮೂಲಕ ಕಷ್ಟಕರವಾದ ಅಮೂರ್ತತೆಯನ್ನು ಅರ್ಥಮಾಡಿಕೊಳ್ಳಲು ಸೇತುವೆಯಾಗುತ್ತವೆ.
11. ಪ್ರಕ್ರಿಯೆ ಮತ್ತು ವಿಷಯ ಸಾಮಾಗ್ರಿ ಎರಡರ ಕಲಿಕೆಯನ್ನು ಜೋಡಿಸುತ್ತವೆ.
12. ಇವು ಶೈಕ್ಷಣಿಕ ಸಾಧನೆಗಳನ್ನು ಸುಧಾರಿಸುತ್ತವೆ – ಪರೀಕ್ಷೆಯಲ್ಲಿ ತೆಗೆಯುವ ಅಂಕಗಳನ್ನು, ಧೋರಣೆಗಳನ್ನು, ಸಾಮಾಜಿಕ ಕೌಶಲ್ಯಗಳನ್ನು, ನಿರ್ಣಾಯಕ ಮತ್ತು ಸೃಜನಾತ್ಮಕ ಚಿಂತನೆಗಳನ್ನು ವೃದ್ಧಿಸುತ್ತವೆ.
13. ವಿಮರ್ಶೆ, ನಿರ್ಮಾಣ, ಮೌಲ್ಯಮಾಪನ ಮತ್ತು ಸಮಸ್ಯಾ ಪರಿಹಾರದಂತಹ ಉನ್ನತ ಮಟ್ಟದ ಆಲೋಚನೆಗಳ ಕೌಶಲ್ಯಗಳನ್ನು ಅಭಿವೃದ್ಧಿಸುತ್ತವೆ ಮತ್ತು ಅಭ್ಯಸಿಸುವಂತೆ ಮಾಡುತ್ತವೆ.
14. ಇವು ಯಾವುದೇ ಪರ್ಯಾಯ ಮೌಲ್ಯಮಾಪನದ ಪ್ರಮುಖವಾದ ಘಟಕವಾಗಿವೆ.
15. ಪ್ರತಿಯೊಬ್ಬ ವಿದ್ಯಾರ್ಥಿಯು ಕಲಿಯಲು ಇವು ಸಾಧನವನ್ನು ಒದಗಿಸುತ್ತವೆ.

**ಮುಕ್ತಾಯ ಮತ್ತು ಸರಳ ತರಗತಿ ತಂತ್ರಗಳು:**

ನಮ್ಮ ಶಾಲೆಗಳಲ್ಲಿ ಕಲೆಗೆ ಅತ್ಯಂತ ಕಡಿಮೆ ಅವಕಾಶವನ್ನು ನೀಡಿದ್ದೇವೆ. ಹೀಗಿದ್ದರೂ, ವಿದ್ಯಾರ್ಥಿಗಳ ವೈವಿಧ್ಯತೆಯನ್ನು ಪರಿಗಣಿಸಿ ಮಾನವ ಅಭಿವೃದ್ಧಿಗಾಗಿ ಮತ್ತು ಸೃಜನಶೀಲತೆಗಾಗಿ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ವಿವಿಧ ಆಯ್ಕೆಗಳನ್ನು ಒದಗಿಸುವತ್ತ ಹೆಚ್ಚಿನ ಚಿಂತನೆಯನ್ನು ಮಾಡುವ ಕಡೆಗೆ ಇದೊಂದು ಆಂದೋಲನ. ಅಸಮರ್ಥತೆಯುಳ್ಳ ಮಕ್ಕಳಿಗೂ ಅಭಿವ್ಯಕ್ತಿ ಸ್ನೇಹಿ ಏಕತಾನತೆಯಿರದ ಕಲಾ ಪ್ರಕಾರಗಳಲ್ಲಿ ಸಾಕಷ್ಟು ಅವಕಾಶ ಮತ್ತು ಪರಿಸರ ದೊರಕುತ್ತದೆ.

ಆದ್ದರಿಂದ ಶಾಲೆಗಳು ಈ ವಿಷಯಗಳೆಡೆಗೆ ಗಮನ ಹರಿಸಬೇಕು:

- ವಿವಿಧ ಪ್ರಕಾರಗಳನ್ನೊಳಗೊಂಡಂತೆ ಹೆಚ್ಚು ಸಮಾವೇಶಿಯನ್ನಾಗಿಸುವುದು: ಒಂದೇ ರೀತಿಯ ಪ್ರತಿಸ್ಪಂದನೆಗಳ ಬದಲಿಗೆ ವೈವಿಧ್ಯಮಯವಾಗಿಸುವುದು.
- ವಿಭಿನ್ನ ಶಾಲಾ ವ್ಯವಸ್ಥೆಗಳ ಅತ್ಯುತ್ತಮ ಅಭ್ಯಾಸಗಳ ಶೋಧನೆ: ಈ ದಿನದ ಹಾಡು.
- ಸ್ಥಳೀಯ ದಿನಗಳು: ಉಡುಗೆಗಳು, ಮುಖವಾಡಗಳು ಮತ್ತು ತಬಲಾ ವಾದಕಗಳ ವಸ್ತುಸಂಗ್ರಹಾಲಯದ ಬಳಕೆ.
- ಸ್ಥಳೀಯ ಕಲೆಗಳು ಮತ್ತು ಆಚರಣೆಗಳು: ವಿವಿಧ ಕಲಾವಿದರೊಂದಿಗೆ ಸಂಪರ್ಕ.
- ಮಕ್ಕಳಿಗೆ ಅಭಿಮುಖವಾದ ಯೋಜನೆಗಳಿಗಾಗಿ ಕಲಾವಿದರೊಂದಿಗೆ ಸಂಪರ್ಕ.

### ತರಗತಿಯಲ್ಲಿ ಲವಲವಿಕೆ ತುಂಬಲು ಕೆಲವು ಹೊಳಹುಗಳು

- ಕಥೆಗಳನ್ನು ಓದುವುದು, ಒಟ್ಟಿಗೆ ನಗುವುದು, ಮಕ್ಕಳು ಪಾತ್ರಗಳಂತೆ ಅಭಿನಯಿಸಲು ಪ್ರೋತ್ಸಾಹಿಸುವುದು, ಧ್ವನಿಯ ಏರಿಳಿತವನ್ನು ಬಳಸುವುದು.
- ಕಲ್ಪನಾತ್ಮಕ ಆಟಗಳ ಸಮಯದಲ್ಲಿ ಅಥವಾ ಗೊಂಬೆ ಇಡುವ ಸಮಯಗಳಲ್ಲಿ ಮನೆಯ ಚಹಾ ಸಮಾರಂಭಗಳಲ್ಲಿ ಸೇರುವುದು.
- ವಿಭಿನ್ನ ಸಂಸ್ಕೃತಿಯ ಮಕ್ಕಳೊಂದಿಗೆ ಮನೆಯೊಳಗೆ ಮನೆಗೆಲಸ/ಉಡುಪುಗಳನ್ನು ಧರಿಸುವ ಅಂಕಣಗಳನ್ನಾಗಿ ಮಾರ್ಪಡಿಸುವುದು ಅಥವಾ ಅದನ್ನು ಮೂರು ಕರಡಿಗಳ ಕಥೆಯಲ್ಲಿನ ಪಾತ್ರಗಳಾಗಿ ಮಾರ್ಪಡು ಮಾಡುವುದು. ಅದೇ ಉಡುಪುಗಳನ್ನು ಧರಿಸುವ ಅಂಕಣಗಳನ್ನು ಬಾಹ್ಯಾಕಾಶ ನೌಕೆ/ರಾಕೆಟ್, ಹಡಗು ಅಥವಾ ವೈದ್ಯರ ಚಿಕಿತ್ಸಾಲಯವನ್ನಾಗಿ ಪರಿವರ್ತಿಸುವುದು.
- ಮರದ ಚೌಕ ಅಥವಾ ವುಡನ್ ಬಾಕ್ಸ್‌ಗಳಿಂದ ಸೇತುವೆಗಳನ್ನು ಮತ್ತು ಗೋಪುರಗಳನ್ನು ಕಟ್ಟುವ ಆಟದಲ್ಲಿ ಮಕ್ಕಳೊಂದಿಗೆ ತೊಡಗಿಕೊಳ್ಳುವುದು. ವಿವಿಧ ಭೂ ವಿನ್ಯಾಸಗಳನ್ನು ನಿರ್ಮಿಸಲು ಹಳೆಯ ರಟ್ಟಿನ ಪೆಟ್ಟಿಗೆಗಳು ಮತ್ತು ಎಲೆಗಳನ್ನು ಬಳಸುವುದು.
- ಮಕ್ಕಳೊಂದಿಗೆ ಮಾತನಾಡಲು, ಹೊಸ ಹೊಸ ಶಿಶುಗೀತೆಗಳನ್ನು ಕಲಿಯಲು ಮತ್ತು ಬೆರಳಿನಿಂದ

ಆಟವಾಡುವುದನ್ನು ಕಲಿಯಲು ಅವರಿಗೆ ಸೂತ್ರದ ಬೊಂಬೆಗಳನ್ನು ಆಹ್ವಾನಿಸುವುದರ ಮೂಲಕ ಸಹಾಯ ಮಾಡುವುದು.

- ಹೊಸ ಉದ್ದೇಶಗಳು ಮತ್ತು ಕಾರ್ಯಗಳನ್ನು ಪ್ರೋತ್ಸಾಹಿಸಲು ತರಗತಿ ಪೀಠೋಪಕರಣಗಳ ಜೋಡಣೆಯನ್ನು ಬದಲಿಸುವುದು.
- ಎಲ್ಲರೂ ಕೂಡಿ ಕಥೆಗಳನ್ನು ಕೇಳುವುದು ಮತ್ತು ಊಟ ಮಾಡುವುದಕ್ಕಾಗಿ ಮೇಜನ್ನು ಬಳಸುವ ಬದಲು ನೆಲದ ಮೇಲೆ ಕೂರುವುದು.
- ಮಕ್ಕಳು ಕುಳಿತು ಓದುವುದಕ್ಕೆ ಮತ್ತು ಒಗಟುಗಳನ್ನು ಬಿಡಿಸುವುದಕ್ಕೆ ಅನುಕೂಲವಾಗುವ ಸಣ್ಣ ಸಣ್ಣ ಅಂಕಣಗಳು / ಕಾರ್ನರ್‌ಗಳನ್ನು ನಿರ್ಮಿಸುವುದು.
- ಪ್ರತಿ ನಿತ್ಯ ಬಳಸುವ ಸಾಮಾನ್ಯ ವಸ್ತುಗಳನ್ನು ಹೊಸ ಹೊಸ ರೀತಿಯಲ್ಲಿ ಬಳಸುವುದು. ಉದಾಹರಣೆಗೆ, ರಬ್ಬರ್ ಚೆಂಡನ್ನು ಬಣ್ಣದಲ್ಲಿ ಅದ್ದಿ ಚಿತ್ರ ರಚಿಸುವುದು, ಪುಸ್ತಕವನ್ನು ಮಾತನಾಡುವ ಗೊಂಬೆಯನ್ನಾಗಿ ಬದಲಾಯಿಸುವುದು, ಅಥವಾ ಮೇಜನ್ನು ತಲೆಕೆಳಗಾಗಿಸಿ ದೋಣಿಯನ್ನಾಗಿಸುವುದು.







**ಆಶಾ**ರವರು ದೆಹಲಿಯಲ್ಲಿರುವ ಲೇಡಿ ಇರ್ವಿನ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಇವರು ಮಾನವ ಬೆಳವಣಿಗೆ ವಿಷಯವನ್ನು ಬೋಧಿಸುತ್ತಿದ್ದಾರೆ. ಇವರ ಮೂಲ ಆಸಕ್ತಿಯು ಶಿಕ್ಷಣದಲ್ಲಿ ಕಲೆಯನ್ನು ಬಳಸಿಕೊಳ್ಳುವುದು. ಶಿಕ್ಷಣದಲ್ಲಿ ನಾಟಕದ ಪ್ರಯೋಗ ವಿಷಯದಲ್ಲು ಇವರು ಕಾರ್ಯನಿರ್ವಹಿಸಿದ್ದಾರೆ. ಬೋಧಿಸುವುದಲ್ಲದೆ, ಇವರು ನಾಟಕವನ್ನು ಬೋಧನೆಯ ಹಾಗೂ ಸ್ವ-ಪರ್ಯಾಲೋಚನೆಯ ಸಾಧನವನ್ನಾಗಿ ಬಳಸಲು ಶಿಕ್ಷಕರು ಮತ್ತು ಮಕ್ಕಳೊಂದಿಗೂ ಕಾರ್ಯ ನಡೆಸುತ್ತಿದ್ದಾರೆ. ನೃತ್ಯದಲ್ಲಿನ ತರಬೇತಿ ಮತ್ತು ನಾಟಕದಲ್ಲಿ ಇವರಿಗಿರುವ ಆಸಕ್ತಿಯು ನವೀನ ತರಗತಿ ಬೋಧನಾ ತಂತ್ರಗಳನ್ನು ಸೂಚಿಸುತ್ತವೆ. ಆರಂಭಿಕ ಬಾಲ್ಯದ ಶಿಕ್ಷಣಕ್ಕೂ ಇವರು ತಮ್ಮ ಸಮಯವನ್ನು ಮೀಸಲಿಟ್ಟಿದ್ದಾರೆ. ಆರಂಭಿಕ ಬಾಲ್ಯದ ಶಿಕ್ಷಣದ ಮಟ್ಟದಲ್ಲಿ ಪ್ರಾಥಮಿಕ ಮಟ್ಟದವರೆಗೂ ಇವರು ಶಿಕ್ಷಕರೊಂದಿಗೆ ನಿಕಟವಾಗಿ ಕೆಲಸ ಮಾಡಿದ್ದಾರೆ. ಇವರನ್ನು asha.singh903@gmail.com ಇಲ್ಲಿ ಸಂಪರ್ಕಿಸಬಹುದು.



# ಹುಟ್ಟುವ ಮೊದಲೇ ಕೂಸಿಗೆ ಇಂಗ್ಲಿಷ್ ಪಾಠವೇ? ಯಾಕಾಗಬಾರದು?: ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಮಾತೃಭಾಷೆ ವಿರುದ್ಧ ಇಂಗ್ಲಿಷ್ ಭಾಷೆ

**ಅಜಿತ್ ಮೊಹಿಂತೆ**

ಓರಿಸ್ಸಾದ ಗಜಪತಿ ಜಿಲ್ಲೆಯ ತುಮುಲೋ ಎಂಬ ಹಳ್ಳಿಯಲ್ಲಿ ಸೌರಾ ಎಂಬ ಬುಡಕಟ್ಟು ಜನಾಂಗದಲ್ಲಿ ಹೆಣ್ಣು ಮಗು ಪಿಂಕಿ ಜನಿಸಿದಾಗ, ಅವಳ ತಂದೆ ತಾಯಿಗೆ ಹಿಗ್ಗಿನೌತಣ. "ನನ್ನ ಪಿಂಕಿ ಶಾಲೆಗೆ ಹೋಗ್ತಾಳೆ, ಚೆನ್ನಾಗಿ ಓದ್ತಾಳೆ". ಎಂದು ಅವಳ ತಂದೆ ಸಂಭ್ರಮಿಸಿದ. ಇದನ್ನು ಕೇಳಿ ಪಿಂಕಿಯ ತಾಯಿಯೂ ಸಂತಸಪಟ್ಟಳು. "ಅಷ್ಟಾದರೆ ತುಂಬಾ ಒಳ್ಳೆಯದು, ನಮಗಂತೂ ಆ ಸೌಭಾಗ್ಯ ಇರಲಿಲ್ಲ; ಪಿಂಕಿ ಓದಿ ದೊಡ್ಡವಳಾಗಬೇಕು" ಎಂದಳು. ಪಿಂಕಿ ಬೆಳೆದಳು, ನಡೆದಾಡಲು ಪ್ರಾರಂಭಿಸಿದಳು ಮತ್ತು ತನ್ನ ತಂದೆಯ ಬೆರಳನ್ನು ಹಿಡಿದು ಹಳ್ಳಿಯ ಸಂತೆಗೆ ಹೋಗಲಾರಂಭಿಸಿದಳು. ಆಡುತ್ತಾ ನಲಿಯುತ್ತಾ ಹುಸಿನಗೆ ಬೀರಿ ಕೆಲವು ತೊದಲು ನುಡಿಗಳನ್ನು ಆಡುತ್ತಿದ್ದಳು. ಅವಳ ತೊದಲುನುಡಿ ಅರ್ಥ ಆಗದಿದ್ದರೂ ಆ ಬಾಲ ಭಾಷೆ ಕೇಳಿದವರು ಸಂತೋಷ ಪಡುತ್ತಿದ್ದರು. ಬಹು ಬೇಗನೇ ಅವಳು ತನ್ನ ಸೌರಾ ಭಾಷೆಯಲ್ಲಿ ಹರುಕು ಮುರುಕು ವಾಕ್ಯಗಳನ್ನು ತನ್ನ ಪಾಲಕರೊಂದಿಗೆ, ಹಳ್ಳಿಗರೊಂದಿಗೆ ಮತ್ತು ಬೇರೆ ಇತರ ಮಕ್ಕಳೊಂದಿಗೆ ಮಾತನಾಡತೊಡಗಿದಳು. ಅವಳು ತನ್ನ ಸೌರಾ ಭಾಷೆಯಲ್ಲಿ ಅಪ್ಪ ಅಮ್ಮನನ್ನು ಕರೆಯುತಿದ್ದಳು. ತನ್ನ ಹಳ್ಳಿಯ ಸುತ್ತಮುತ್ತಲಿನ ಗಿಡ-ಮರಗಳ, ಹೂವು-ಹಣ್ಣುಗಳ ಮತ್ತು ಪ್ರಾಣಿಗಳ ಹೆಸರನ್ನು ಹೇಳುವಂತಾದಳು. ತನ್ನ ತಂದೆಯ ಹೆಗಲ ಮೇಲೆ ಕುಳಿತು, ಬಗಡಾಕ್ಕೆ (ಓಡಿಸ್ಸಾದ ಗಿರಿಜನರ ಸಾಗುವಳಿ ಭೂಮಿ) ಹೋಗುವ ದಾರಿಯಲ್ಲಿ ಕಂಡ ಎಲ್ಲಾ ಚಿಟ್ಟೆಗಳನ್ನು ತನ್ನ ತಂದೆಯೊಂದಿಗೆ ಎಣಿಸುತ್ತಾ ಹೋಗುತ್ತಿದ್ದಳು. ಹಳ್ಳಿಗರು ಪಿಂಕಿಯ ನಡೆನುಡಿಗಳಿಂದ ಅವಳನ್ನು ಇಷ್ಟ ಪಡುತ್ತಿದ್ದರು. "ಪಿಂಕಿ ತುಂಬಾ ಜಾಣೆ! " ಎನ್ನುತ್ತಿದ್ದರು. ಒಂದು ದಿನ ಹಳ್ಳಿಯ ಶಾಲಾ ಶಿಕ್ಷಕಿ ಬಂದು "ಪಿಂಕಿಗೆ ಆರು ವರ್ಷ ಆಯ್ತಲ್ಲಾ. ಅವಳನ್ನು ಶಾಲೆಗೆ ಕಳುಹಿಸಿ" ಎಂದರು. ಪಿಂಕಿಯ ಅಪ್ಪ ಅಮ್ಮ ಅವಳನ್ನು ಶಾಲೆಗೆ ಸೇರಿಸಲು ತುಂಬಾ ಖುಷಿಯಿಂದ ಕರೆದುಕೊಂಡುಹೋದರು. ಪಿಂಕಿಯೂ ಸಹ ಬಹಳ ಸಂತೋಷ ಪಟ್ಟಳು. ಅವಳಿಗೆ ಶಾಲೆಯಿಂದ ಹೊಸ ಪುಸ್ತಕ ಮತ್ತು ಬರಹದ ಪುಸ್ತಕ ದೊರೆಯಿತು. ಅವಳು ಅವುಗಳನ್ನು ತನ್ನ ತಾಯಿಗೆ ಹೆಮ್ಮೆಯಿಂದ ತೋರಿಸಿದಳು. ಆಗ ಅವಳ ತಾಯಿ "ಈ ಪುಸ್ತಕಗಳನ್ನು ಹೇಗೆ ಓದಬೇಕೆಂಬುದನ್ನು ನಿನ್ನ ಶಿಕ್ಷಕರು ನಿನಗೆ ಹೇಳಿಕೊಡುತ್ತಾರೆ. ನಾನಂತೂ ಓದಲು ಕಲಿಲೇ ಇಲ್ಲ." ಎಂದಳು.

ಪಿಂಕಿ ಪ್ರತಿದಿನ ಶಾಲೆಗೆ ಹೋಗುತ್ತಿದ್ದಳು. ಆದರೆ, ಕ್ರಮೇಣ ಅವಳು ಮೌನಿಯಾದಳು. ಅವಳ ತಾಯಿ "ನೀನು ಶಾಲೆಯಲ್ಲಿ ಏನು ಮಾಡುತ್ತೀಯಾ? ಎಂದು ಕೇಳುತಿದ್ದರೆ, ಅದಕ್ಕೆ ಪಿಂಕಿ ಏನನ್ನೂ ಹೇಳುತ್ತಿರಲಿಲ್ಲ. ಅವಳ ತಂದೆ "ನಿನ್ನ ಶಿಕ್ಷಕರು ನಿನಗೆ ಈ ಪುಸ್ತಕವನ್ನು ಓದಲು ತಿಳಿಸಿ ಕೊಟ್ಟರೇ? ನನಗೊಂದು ಕತೆ ಓದಿ ಹೇಳು" ಎಂದರೂ ಪಿಂಕಿ ಏನೂ ಹೇಳದೇ ಮೌನಿಯಾಗಿರುತ್ತಿದ್ದಳು. ಕ್ರಮೇಣ ಅವಳು ಹೆಚ್ಚು ಹೆಚ್ಚು ಮೌನಿಯಾಗುವುದರೊಂದಿಗೆ ನಿರುತ್ಸಾಹದಿಂದಿರುತ್ತಿದ್ದಳು. ಅವಳು ಶಾಲೆಗೆ ಪ್ರತಿದಿನ ಹೋಗದೇ ಬಿಟ್ಟು ಬಿಟ್ಟು ಹೋಗುತ್ತಿದ್ದಳು. ಒಂದು ದಿನ ಶಾಲಾ ಶಿಕ್ಷಕಿ ಮತ್ತು ಪಿಂಕಿಯ ತಂದೆ ಹಳ್ಳಿಯ ಮಾರುಕಟ್ಟೆಯಲ್ಲಿ ಮುಖಾಮುಖಿಯಾದರು. "ಪಿಂಕಿ ಶಾಲೆಗೆ ನಿರಂತರವಾಗಿ ಬರುತ್ತಿಲ್ಲ; ಏನಾದರೂ ಪ್ರಶ್ನೆಗಳನ್ನು ಕೇಳಿದರೆ ತಲೆಯನ್ನು ತಗ್ಗಿಸಿ ಮೌನವಾಗಿರುತ್ತಾಳೆ." ಎಂದರು. ಅವಳ ತಂದೆಗೆ ಈ ಮಾತನ್ನು ಕೇಳಿ ಬೇಸರವಾಯಿತು. ಯಾಕೆ ಪುಟ್ಟಿ ನೀನು ಶಾಲೆಗೆ ಹೋಗುವುದಿಲ್ಲ? ಶಿಕ್ಷಕರು ಏನಾದರೂ ಕೇಳಿದರೆ ಏಕೆ ಉತ್ತರಿಸುವುದಿಲ್ಲ? ಯಾಕಮ್ಮಾ ಏನಾಯ್ತು? ಎಂದು ಪಿಂಕಿಯನ್ನು ಕೇಳಿದರು. "ಮೇಡಂ ಹೇಳುವುದು ನನಗೆ ಅರ್ಥವಾಗುವುದಿಲ್ಲ; ನಾನು ಪುಸ್ತಕದಲ್ಲಿರುವ ಚಿತ್ರಗಳನ್ನು ಮಾತ್ರ ನೋಡುತ್ತಿರುತ್ತೇನೆ, ಮೇಡಂ ಪುಸ್ತಕ ಓದಿದರೆ ನನಗೆ ಏನೂ ಅರ್ಥವಾಗುತ್ತಿಲ್ಲ." ಎಂದಳು ಪಿಂಕಿ. ಅವಳ ತಂದೆಗೆ ಅರ್ಥವಾಯಿತು. ಶಿಕ್ಷಕರು ಶಾಲೆಯಲ್ಲಿ ಒರಿಯಾ ಭಾಷೆಯನ್ನು ಮಾತನಾಡುತ್ತಾರೆ ಅದು ನನ್ನ ಪಿಂಕಿಗೆ ಅರ್ಥವಾಗುತ್ತಿಲ್ಲ. ಪಿಂಕಿಯ ತಂದೆಗೆ ತನ್ನ ಶಾಲಾದಿನಗಳು ನೆನಪಾದವು; ಅವನು ಸಹ ಶಾಲೆಯಲ್ಲಿರುವ ಬೋಧನಾ ಭಾಷೆಯ ಇದೇ ಕಾರಣಗಳಿಂದ ಶಾಲೆಯನ್ನು ಬಿಟ್ಟಿದ್ದನು. ಶಾಲೆಯಲ್ಲಿ ಬಳಸುತ್ತಿರುವ ಭಾಷೆ ಸೌರಾವಾಗಿರಲಿಲ್ಲ. ಕೆಲವು ದಿನಗಳ ನಂತರ ಪಿಂಕಿಯೂ ಸಹ ಶಾಲೆಗೆ ಹೋಗುವುದನ್ನು ಬಿಟ್ಟಳು.

ಇದು ಕೇವಲ ಪಿಂಕಿ ಮತ್ತು ಅವಳ ತಂದೆಗೆ ಸಂಬಂಧಪಟ್ಟ ಸಮಸ್ಯೆ ಅಲ್ಲ. ಮಿಲಿಯಾಂತರ ಮಕ್ಕಳು ಶಾಲೆಗಳಲ್ಲಿ ತಾವು ಮಾತನಾಡಬಲ್ಲ, ಪ್ರಾಣಿ ಪಕ್ಷಿಗಳನ್ನು ಹೆಸರಿನಿಂದ ಗುರುತಿಸಬಲ್ಲ, ತನ್ನ ಸಮುದಾಯದವರೊಂದಿಗೆ

ಮಾತನಾಡಬಲ್ಲ ಭಾಷೆಯನ್ನು ಕಡೆಗಣಿಸಿ ತಮಗೆ ಗೊತ್ತಿಲ್ಲದ ಭಾಷೆಯನ್ನು ಅವರ ಕಲಿಕೆಯಲ್ಲಿ ಒತ್ತಾಯದಿಂದ ಹೇರುವುದರಿಂದ ಬೇಸತ್ತು ಶಾಲೆಯಿಂದ ಹೊರಬಂದಿರುತ್ತಾರೆ. ಮಗುವಿನ ಮೊದಲ ಭಾಷೆ ಅವಳ ಮೊತ್ತ ಮೊದಲ ಸ್ವಸ್ವರೂಪ ಅಥವಾ ಸ್ವವ್ಯಕ್ತಿತ್ವವಾಗಿರುತ್ತದೆ. ಅದು ಅವಳ ಬಾಲ್ಯದ ಎಲ್ಲಾ ಅನುಭವಗಳು, ಕಲಿಕೆಗಳು, ತನ್ನ ಗೆಳತಿಯರು, ಹಿರಿಯರೊಂದಿಗಿನ ಅವಳ ಸಂಬಂಧ, ಅವಳ ತಿಳಿವಳಿಕೆ ಮತ್ತು ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ವಿಧಾನವಾಗಿರುತ್ತದೆ. ಈ ಭಾಷೆ ಅವಳಿಗೆ ತನ್ನ ಮನೆ, ಕುಟುಂಬ, ಸಮುದಾಯ ಮತ್ತು ಸಾಮಾಜಿಕ ಜಗತ್ತಿನಲ್ಲಿ ವ್ಯವಹರಿಸಲು ಬೇಕಾದ ಸಾಮರ್ಥ್ಯವನ್ನು ಅವಳಿಗೆ ಕೊಡುತ್ತದೆ. ಆದರೆ, ಒಮ್ಮೆ ಅವಳು ಶಾಲೆಗೆ ಸೇರಿದರೆ ಎಲ್ಲವೂ ಬದಲಾಗುತ್ತದೆ. ಶಾಲೆಯೇನೋ ಅವಳಿಗೋಸ್ಕರ ತನ್ನ ಬಾಗಿಲನ್ನು ತೆರೆದರೂ ಅವಳ ಮತ್ತು ಶಾಲಾ ತರಗತಿಯ ನಡುವಣ ಕಣ್ಣಿಗೆ ಕಾಣದ ಹಾಗೂ ದಾಟಿಹೋಗಲಾಗದ ಕೋಟೆಯೊಂದು ಇರುತ್ತದೆ. ಇದ್ದಕ್ಕಿದ್ದಂತೆ ಅವಳ ಆಡು ಭಾಷೆಯು ಶಾಲಾ ಬೋಧನಾ ಭಾಷೆಯ ಮುಂದೆ ಏನೂ ಪ್ರಯೋಜನವಿಲ್ಲ ಎನಿಸಿಕೊಂಡು ಅವಮಾನಕ್ಕೆ ಈಡಾಗುತ್ತದೆ. ಇದರಿಂದ ಇದ್ದಕ್ಕಿದ್ದಂತೆ ಅವಳಲ್ಲಿರುವ ಜ್ಞಾನ, ಅನುಭವಗಳು, ಸಂಪನ್ಮೂಲಗಳು ಮೌಲ್ಯಹೀನವಾಗುತ್ತವೆ. ಇದರ ಪರಿಣಾಮವಾಗಿ ತಾನು ಸಂಪತ್ತು ಎಂದುಕೊಂಡಿದ್ದ ಅವಳ ಮಾತೃಭಾಷೆ ಅವಳಿಗೊಂದು ಹೊರೆಯಾಗಿ ಬಿಡುತ್ತದೆ. ಶಾಲೆಯ ಶಿಕ್ಷಣ ಮಾಧ್ಯಮದ ಭಾಷೆ ಅವಳಿಗೆ ಅಪರಿಚಿತ ಭಾಷೆ, ಅದಕ್ಕೂ ಅವಳ ಅನುಭವ, ಜ್ಞಾನ ಮತ್ತು ಸಾಮಾಜಿಕ ಜೀವನಕ್ಕೂ ಏನೇನೂ ಸಂಬಂಧ ಇರುವುದಿಲ್ಲ. ಅವಳ ಸ್ವಂತ ವ್ಯಕ್ತಿತ್ವವನ್ನು ಕಡೆಗಣಿಸುವ ಅವಳ ಅನುಭವದಿಂದ ಅವಳನ್ನು ದೂರ ಮಾಡುವ ಹೊಸ ಭಾಷೆಯನ್ನು ಆಕೆ ಹೇಗೆ ನಿಭಾಯಿಸಬಲ್ಲಳು ಇಂತಹ ಹಲವಾರು ಮಕ್ಕಳು ಶಾಲೆಯಲ್ಲಿರುವ ಅಪರಿಚಿತ ಭಾಷೆಯ ಹೊರೆಯಿಂದ ಶಾಲೆಯಿಂದ ದೂರವಿದ್ದಾರೆ. ಇದರಲ್ಲಿ ಆಶ್ಚರ್ಯಪಡುವ ಸಂಗತಿಯೇನಿಲ್ಲ.

ಇಂದಿನ ಜಗತ್ತಿನಲ್ಲಿ ಅದರಲ್ಲೂ ಬಹುಭಾಷಾ ದೇಶಗಳಾದ ಅಂದರೆ ನಮ್ಮಂತಹ ದೇಶಗಳಲ್ಲಿ, ಒಂದು ಭಾಷೆ ಕಲಿಕೆ ಸಾಕಾಗುವುದಿಲ್ಲ ಎಂಬುದೇನೋ ನಿಜ; ಶಾಲಾ ಕಲಿಕೆಯು ಬಹುಭಾಷೆಗಳನ್ನು ಒಳಗೊಂಡಿರಲೇಬೇಕು. ಮಾತೃಭಾಷೆ, ಪ್ರಾಂತೀಯ ಭಾಷೆ ಅಂದರೆ, ತಮಿಳು, ಪಂಜಾಬಿ ಮತ್ತು ಬಂಗಾಲಿಯಂತಹ ಪ್ರಾಂತೀಯ ಭಾಷೆಗಳು, ರಾಷ್ಟ್ರ ಮಟ್ಟದ ಸಂಪರ್ಕ ಭಾಷೆ ಅಂದರೆ ಹಿಂದಿ ಮತ್ತು ಅಂತಾರಾಷ್ಟ್ರೀಯ ಭಾಷೆ ಇಂಗ್ಲಿಷ್. ಆದರೆ, ಶಾಲೆಗಳಲ್ಲಿ ಮಕ್ಕಳು ತನಗೆ ಈಗಾಗಲೇ ಗೊತ್ತಿರುವ ಭಾಷೆಯನ್ನು ಏಕೆ ಕಲಿಯಬೇಕು? ಬಾಲ್ಯದಲ್ಲಿಯೇ ಇನ್ನೊಂದು ಪ್ರಮುಖ ಭಾಷೆಯನ್ನು ಏಕೆ ಕಲಿಯಬಾರದು? ಮಕ್ಕಳಿಗೆ ಮಾತೃಭಾಷೆಯು ಬೇಕೇ ಬೇಕು. ಏಕೆಂದರೆ ಶಾಲೆಯಲ್ಲಿ ಚೆನ್ನಾಗಿ ಕಲಿಯಲು ಬೇಕಾದ ಬುನಾದಿ ಜ್ಞಾನವನ್ನು ಅದರಲ್ಲಿ ಸಂಗ್ರಹಿಸಿಡಲಾಗಿರುತ್ತದೆ. ಈ ಭಾಷೆ ಅವರನ್ನು ಶಾಲೆಗೆ ಹೋಗಿ ಕಲಿಯಲು ಸಿದ್ಧ ಪಡಿಸುತ್ತದೆ. ಆದರೆ ಅದೇ ಸಮಯದಲ್ಲಿ, ಅವರು ತಮ್ಮ ಭಾಷಾ ಕೌಶಲ್ಯಗಳನ್ನು ಇನ್ನೂ ಅಭಿವೃದ್ಧಿ ಪಡಿಸಿಕೊಳ್ಳಬೇಕು. ಮಕ್ಕಳೇನೋ ತಮ್ಮ ಆಡುಭಾಷೆಯಲ್ಲಿ ಚೆನ್ನಾಗಿ ಮಾತಾಡ ಬಲ್ಲವರಾದರೂ, ಅದು ಪ್ರಾಥಮಿಕ ಹಂತದಲ್ಲಿ ತನ್ನ ಮನೆ ಮತ್ತು ಸಮುದಾಯದ ನಿಕಟ ಪರಿಸರಗಳಲ್ಲಿ ಸಾಮಾಜಿಕ ಮತ್ತು ವ್ಯಕ್ತಿಗತ ಮಾತುಕತೆಗೆ ಉಪಯೋಗವಾಗುವಂತಹದ್ದು. ಆದರೆ ಶಾಲಾ ಕಲಿಕೆ, ಸಂಕೀರ್ಣ ಮತ್ತು ಅಮೂರ್ತವಾದ ಪರಿಕಲ್ಪನೆಯನ್ನು ಒಳಗೊಂಡಿರುತ್ತದೆ ಮತ್ತು ಭಾಷೆಯನ್ನು ಈ ಪರಿಕಲ್ಪನೆಗಳಲ್ಲಿ ಪ್ರಭುತ್ವವನ್ನು ಗಳಿಸುವುದಕ್ಕಾಗಿ, ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ, ತನ್ನದೇ ಚಿಂತನಾಶಕ್ತಿಯನ್ನು ಕ್ರಮಗೊಳಿಸುವುದಕ್ಕಾಗಿ ಮತ್ತು ಚಿಂತನಾವಸ್ತುವಾಗಿ ಭಾಷೆ ಕುರಿತು ಚಿಂತಿಸುವುದಕ್ಕಾಗಿ ಬಳಸಲಾಗುತ್ತದೆ. ಶಾಲಾಶಿಕ್ಷಣ ಮತ್ತು ಪ್ರಾಥಮಿಕ ಅಕ್ಷರಾಭ್ಯಾಸ ಮಕ್ಕಳ ಭಾಷಾ ಬಳಕೆಯನ್ನು ಸಾಮಾಜಿಕವಾಗಿ ಮತ್ತು ಸಮಯಸಂದರ್ಭಗಳಲ್ಲಿ ಬಳಸುವುದರಿಂದ ಮುಂದಕ್ಕೆ ಹೆಚ್ಚಿನ ಕ್ರಮಬದ್ಧವಾದ ಆಲೋಚನೆ, ಗ್ರಹಣಶಕ್ತಿ ಮತ್ತು ಶೈಕ್ಷಣಿಕ ಕಲಿಕೆಯ ಕಡೆಗೆ ಕೊಂಡೊಯ್ಯುತ್ತದೆ. ಮಕ್ಕಳ ಮೊದಲ ಆಡು ಭಾಷೆ ಈ ಬೌದ್ಧಿಕ/ಗ್ರಹಣಶಕ್ತಿ ಮತ್ತು ಶೈಕ್ಷಣಿಕ ಕಲಿಕೆಯ ಹಂತಕ್ಕೆ ಏರಬೇಕು. ಶೈಕ್ಷಣಿಕ ಸಾಧನೆಯನ್ನು ಮಾಡಲು ಅದೂ ಅಲ್ಲದೇ ಬೇರೆ ಭಾಷೆಯನ್ನು ಕಲಿಯಲು ಬೇಕಾದ ಭಾಷೆಯನ್ನು ಕುರಿತು ಚಿಂತಿಸುವ ಸಾಮರ್ಥ್ಯ ಬೆಳೆಯಲೇಬೇಕು.

ಶಾಲೆಗೆ ಪ್ರವೇಶಿಸಿದ ನಂತರ, ಬುಡಕಟ್ಟು ಸಮುದಾಯದ ಮತ್ತು ಭಾಷಾ ಅಲ್ಪಸಂಖ್ಯಾತರ ಮಕ್ಕಳು ತಮಗೆ ಏನೇನೂ ಪರಿಚಯವಿರದ ಪ್ರಬಲ ಬೋಧನಾ ಭಾಷೆಯ ಹೊರೆ ಹೊರಬೇಕಾಗುತ್ತದೆ. ಇದಲ್ಲದೆ ಅವರಿಗೆ ಪಾಠ ಮಾಡಿದ ವಿಷಯ ಅರ್ಥವಾಗುವುದಿಲ್ಲ ಪರಿಣಾಮವಾಗಿ ನಪಾಸಾಗುತ್ತಾರೆ. ಶಾಲೆಯಲ್ಲಿ ಬಳಸುವ ಪ್ರಬಲ ಭಾಷೆ ಮಗುವಿಗೆ ಭಾಷಾ ಸಾಮರ್ಥ್ಯವನ್ನು ಸಾಮಾನ್ಯ ವ್ಯಕ್ತಿಗತ ಸಂಭಾಷಣೆಗಿಂತ ಹೆಚ್ಚೇನೂ ಬೆಳೆಸುವುದಿಲ್ಲ. ಅಗತ್ಯವಿರುವ ಸಾಮಾನ್ಯ ಭಾಷಾ ಕೌಶಲ್ಯ ಮತ್ತು ಮಾತೃಭಾಷೆಯ ಮೇಲೆಯೂ ಇದು ದುಷ್ಪರಿಣಾಮ ಬೀರುತ್ತದೆ ಅಥವಾ ಕಲಿತದ್ದನ್ನು ಮರೆಸುತ್ತದೆ; ಮಗು ಶಾಲೆಯಲ್ಲಿ ಬಳಸುವ ಪ್ರಬಲ ಭಾಷೆಯನ್ನು ಕಲಿಯುವುದರಿಂದ ಮಗುವಿನಲ್ಲಿರುವ ಮಾತೃಭಾಷಾ ಕೌಶಲ್ಯಗಳು ದಿನೇದಿನೇ ನಶಿಸಿಹೋಗುತ್ತವೆ. ಒಂದು ಭಾಷೆಯಲ್ಲಿ ಮೂಲಭೂತ ಪರಸ್ಪರ ಸಂಭಾಷಣಾ ಕೌಶಲ್ಯಗಳು ಬೆಳೆಯಲು ಎರಡರಿಂದ ಮೂರು ವರ್ಷಗಳು ಬೇಕಾಗುತ್ತವೆ, ಇನ್ನು ಗ್ರಹಣಶಕ್ತಿ ಮತ್ತು ಶೈಕ್ಷಣಿಕ ಭಾಷಾ

ಕೌಶಲ್ಯಗಳು ಬೆಳೆಯಲು ನಿಧಾನವಾಗಿ ಅಂದರೆ ಆರರಿಂದ ಎಂಟು ವರ್ಷಗಳು ಬೇಕಾಗುತ್ತವೆ. ಆದುದರಿಂದ, ಮಕ್ಕಳು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದಕ್ಕೆ ಸಹಾಯ ಮಾಡುವುದಕ್ಕೆ ಮಾತ್ರವಲ್ಲದೆ ಭಾಷೆಯನ್ನು ಉನ್ನತ ಮಟ್ಟದ ಚಿಂತನೆಗೆ ಬಳಸಲು, ಸಮಸ್ಯಾ ಪರಿಹಾರ ಮಾಡಿಕೊಳ್ಳಲು, ಬಹು ಭಾಷಾ ಕುಶಲತೆ ಗಳಿಸಲು ಅನುವಾಗುವಂತೆ ಮಕ್ಕಳಿಗೆ ಅವರವರ ಮಾತೃಭಾಷೆಯನ್ನು ಬಾಲ್ಯದ ಶಿಕ್ಷಣ ಮತ್ತು ಔಪಚಾರಿಕ ಶಿಕ್ಷಣವನ್ನು ನೀಡಲು ಶಿಕ್ಷಣದಲ್ಲಿ ಕನಿಷ್ಠ ಆರು ವರ್ಷ ಉಪಯೋಗಿಸಲೇಬೇಕು. ವಾಸ್ತವವಾಗಿ ಮಾತೃಭಾಷಾ ಶಿಕ್ಷಣವು ಮುಂದೆ ಕಲಿಯುವ ಭಾಷೆಗಳಿಗೆ ಯಾವುದೇ ಹೊರೆಯಾಗದಂತೆ ನಡೆದುಹೋಗುತ್ತದೆ. ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಸಂಭಾಷಣೆ ಮತ್ತು ಸಾಮಾಜಿಕ ಮಾತುಕತೆಗಳನ್ನು ಅನೇಕ ಭಾಷೆಗಳಲ್ಲಿ ಬಲು ಬೇಗ ಕಲಿತುಕೊಳ್ಳುತ್ತಾರಾದರೂ ಅವರ ಮಾತೃಭಾಷೆಯಲ್ಲಿ ಪ್ರಾರಂಭಿಕ ಸಾಮಾಜಿಕ ಬಳಕೆಯನ್ನೂ ಮೀರಿದ ಕೌಶಲ್ಯವನ್ನು ಕಲಿತಿದ್ದರೆ ಬಲು ಬೇಗನೆ ಇತರ ಭಾಷೆಗಳಲ್ಲೂ ಉನ್ನತಮಟ್ಟದ ಓದುಬರಹ ಮತ್ತು ಶೈಕ್ಷಣಿಕ ಕೌಶಲ್ಯಗಳನ್ನು ಕಲಿತುಕೊಳ್ಳುತ್ತಾರೆ. ಇದೇ ಮಾತೃಭಾಷೆ ಆಧಾರಿತ ಶಿಕ್ಷಣಕ್ಕೆ ಮೂಲಭೂತ ತತ್ವ.

ಮಕ್ಕಳು ಪ್ರಾಥಮಿಕ ಶಾಲಾ ಹಂತಕ್ಕೆ ಸೇರುವಾಗ ಅವರ ಮನಸ್ಸು ಕಾಲಿ ಸ್ಲೇಟಿನಂತಿರುವುದಿಲ್ಲ, ಬದಲಿಗೆ ಶ್ರೀಮಂತ ಜ್ಞಾನ ಭಂಡಾರ, ಮಾತೃಭಾಷಾ ಜ್ಞಾನ, ಬಾಲ್ಯದ ಅನುಭವ ಮತ್ತು ತಿಳುವಳಿಕೆಯನ್ನು ಹೊಂದಿರುತ್ತಾರೆ.ಇವೇ ಪ್ರಾಥಮಿಕ ಶಾಲೆಯಲ್ಲಿ ಅವರ ಭಾಷೆ ಬೆಳವಣಿಗೆ, ಓದುಬರಹದ ಬೆಳವಣಿಗೆ ಮತ್ತು ಸಂಖ್ಯಾಜ್ಞಾನದ ಪರಿಕಲ್ಪನೆ ಗ್ರಹಿಸಲು ಮತ್ತು ಪರಿಸರದ ಅರಿವಿನ ಬೆಳವಣಿಗೆಗೆ ಅಗತ್ಯವಿರುವ ಮೂಲ ಸಂಪನ್ಮೂಲ. ಅನೌಪಚಾರಿಕ ಸಂಸ್ಕೃತಿಯ ಅನುಭವದೊಂದಿಗೆ ತನ್ನ ಬಾಲ್ಯ ವ್ಯವಸ್ಥೆಯಿಂದ ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಕಡೆಗೆ ಪದಾರ್ಪಣ ಮಾಡುವುದು ಪ್ರತಿಯೊಂದು ಮಗುವಿಗೂ ದೊಡ್ಡ ಸವಾಲು. ಶಾಲೆ ಮತ್ತು ಮನೆಯ ನಡುವಿನ ಅಂತರ ಕೇವಲ ದೈಹಿಕವಾಗಿ ಕ್ರಮಿಸುವ ದೂರವಲ್ಲ. ಅದು ಶಾಲಾ ಕಲಿಕೆಗೆ ಅಗತ್ಯವಿರುವ ಗ್ರಹಣಶಕ್ತಿಯ, ಸಂಕಲ್ಪ ಶಕ್ತಿಯ ಮತ್ತು ಸಾಮಾಜಿಕ ಸಿದ್ಧತೆಯ ಮನೋವೈಜ್ಞಾನಿಕ ಅಂತರವಾಗಿದೆ. ಆದ್ದರಿಂದ, ಪದ್ಧತಿ ಶಿಕ್ಷಣದ ಪ್ರಯೋಜನಗಳು ದೊರಕಬೇಕಾದರೆ ಶಾಲೆಗೆ ಸೇರುವ ಮೊದಲ ಅಂದರೆ, ಎರಡರಿಂದ ಆರನೇ ವಯಸ್ಸಿನ ಮಕ್ಕಳಿಗೆ ಮನೋವೈಜ್ಞಾನಿಕ, ದೈಹಿಕ, ಸಾಮಾಜಿಕ ಮತ್ತು ಬೌದ್ಧಿಕ ಸನ್ನದ್ಧತೆ ಅಗತ್ಯವಿರುತ್ತದೆ. ಆರಂಭಿಕ ಬಾಲ್ಯ ಶಿಕ್ಷಣದ ಉದ್ದೇಶವೇ ಇಂತಹ ಒಂದು ಸನ್ನದ್ಧತೆಯನ್ನು ಬೆಳಸುವುದು. ಇದರಲ್ಲಿ ಭಾಷೆ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಆರಂಭಿಕ ಬಾಲ್ಯದ ಶಿಕ್ಷಣವು ಮಕ್ಕಳ ಭಾಷೆಯನ್ನು ಸಾಮಾಜಿಕ ಮಾತುಕತೆಯ ಕೌಶಲ್ಯದಿಂದ ಆಲೋಚನೆ ಮಾಡುವ ಮತ್ತು ಪರಿಣಾಮಕಾರಿಯಾಗಿ ತರಗತಿಯಲ್ಲಿ ಪಾಠ ಕಲಿಯುವ ಹಂತಕ್ಕೆ ಬೆಳಸುವುದಕ್ಕೆ ಒಂದು ಸಂಪರ್ಕ ಸೇತುವಾಗಿರುತ್ತದೆ.

ಕೇಂದ್ರ ಸರ್ಕಾರದ ಸಚಿವ ಸಂಪುಟವು 20 ಸೆಪ್ಟಂಬರ್ 2013ರಲ್ಲಿ ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (National Early Childhood Care And Education (ECCE)) ಕಾರ್ಯನೀತಿಯನ್ನು ಅನುಮೋದಿಸಿತು. ಮಗುವಿನ ಸಂಪೂರ್ಣ ಬೆಳವಣಿಗೆ ಮತ್ತು ಗುಣಾತ್ಮಕ ಶಿಕ್ಷಣದಲ್ಲಿ ಸಮಾನ ಅವಕಾಶ ಕಲ್ಪಿಸಲು ಸೂಕ್ತ ಸಿದ್ಧತೆಯಾಗಿ ಶಿಕ್ಷಣದಲ್ಲಿ ಮಾತೃಭಾಷೆಯನ್ನು ಕಡ್ಡಾಯಗೊಳಿಸಿತು. ಆರು ವರ್ಷದ ಒಳಗಿನ ಸುಮಾರು 160 ದಶಲಕ್ಷ ಮಕ್ಕಳಲ್ಲಿ, ಹಣ ನೀಡಬಲ್ಲ ತಂದೆತಾಯಿರ 45 ದಶಲಕ್ಷ ಮಕ್ಕಳು ಖಾಸಗೀ ಶಿಕ್ಷಣ ಸಂಸ್ಥೆಯಡಿಯಲ್ಲಿ ಶಿಶುವಿಹಾರ ಶಿಕ್ಷಣ ಪಡೆಯುತ್ತಿದ್ದಾರೆ. 75 ದಶಲಕ್ಷ ಮಕ್ಕಳು ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (National Early Childhood Care And Education (ECCE)) ನೀತಿಯಡಿ ಸರಕಾರದ ಯೋಜನೆಯಾದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಐಸಿಡಿಎಸ್)ಯ ಕಾರ್ಯಕ್ರಮದಡಿಯಲ್ಲಿ ಅಂಗನವಾಡಿಯಂತಹ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಉಳಿದ 40 ದಶಲಕ್ಷ ಮಕ್ಕಳಿಗೆ ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (National Early Childhood Care And Education (ECCE)) ಅಡಿಯಲ್ಲಿ ಯಾವುದೇ ಅವಕಾಶಗಳು ದೊರೆಯುತ್ತಿಲ್ಲ. ಹೀಗೆ, ಪುಟ್ಟ ಮಕ್ಕಳಾಗಿರುವಾಗಲೇ ಮಾನವ ಸಂಪನ್ಮೂಲ ಮತ್ತು ಸಾಮರ್ಥ್ಯದ ಬೆಳವಣಿಗೆಯ ಅವಕಾಶ ಕಲ್ಪಿಸುವುದರಲ್ಲೇ ಅನ್ಯಾಯವಾದ ತಾರತಮ್ಯ ನಡೆಯುತ್ತಿದೆ. ಆಶಾದಾಯಕವೆಂದರೆ, ರಾಷ್ಟ್ರೀಯ ಪುಟ್ಟ ಮಕ್ಕಳ ಪಾಲನೆ ಮತ್ತು ಶಿಕ್ಷಣ(National Early Childhood Care And Education (ECCE))ದ ಕರಡು ನಿಯಮಾವಳಿಯು ಕನಿಷ್ಠ ಪ್ರಮಾಣದಲ್ಲಾದರೂ ಅಂಥ ತಾರತಮ್ಯವನ್ನು ಪರಿಣಾಮಕಾರಿಯಾಗಿ ಬಗೆಹರಿಸುವ ಸಾಧ್ಯತೆಗಳಿವೆ. ಕರಡು ಕಾರ್ಯನೀತಿಯ ಕಲಂ 5.2.4 ಹೇಳುವುದೇನೆಂದರೆ, (ECCE) ಈ ಕಾರ್ಯಕ್ರಮದ ಅಡಿಯಲ್ಲಿ ಮಗುವಿನ ಮಾತೃಭಾಷೆ ಮತ್ತು ಮನೆಯ ಭಾಷೆ ಇಲ್ಲಿನ ಸಂಭಾಷಣೆ ಮತ್ತು ಪರಸ್ಪರದ ಮಾತುಕತೆಯ ಪ್ರಾಥಮಿಕ ಭಾಷೆಯಾಗಿರುತ್ತದೆ. ಅಲ್ಲದೇ "ಮಕ್ಕಳಿಗೆ ಈ ಪುಟ್ಟ ವಯಸ್ಸಿನಲ್ಲಿ ಅನೇಕ ಭಾಷೆಯನ್ನು ಕಲಿಯುವ ಸಾಮರ್ಥ್ಯವು ಇರುವುದನ್ನು ಗಮನದಲ್ಲಿಟ್ಟುಕೊಂಡು; ರಾಷ್ಟ್ರೀಯ, ಪ್ರಾಂತೀಯ ಮತ್ತು ಇಂಗ್ಲಿಷ್ ಭಾಷೆಯ ಪರಿಚಯವನ್ನು ಮಾತುಕತೆಗಳ ಮೂಲಕ ಅವರಿಗೆ ಒದಗಿಸುವ ಬಗ್ಗೆ ಸಹ ಆಲೋಚನೆ

ನಡೆಸಲಾಗುವುದು. ಆದ್ದುದರಿಂದ ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ National Early Childhood Care And Education (ECCE)) ಕಾರ್ಯನೀತಿಯು "ಮಕ್ಕಳಲ್ಲಿ ವಿಚಾರ ಶಕ್ತಿ, ತಾರ್ಕಿಕ ಶಕ್ತಿ ಮತ್ತು ಗ್ರಹಣಶಕ್ತಿ ಮತ್ತು ಪಾಠಪ್ರವಚನ ಕಲಿಕೆಯ ಬೆಳವಣಿಗೆಯಲ್ಲಿ ಮಾತೃಭಾಷೆಯು ಮುಖ್ಯ ಪಾತ್ರ ವಹಿಸುತ್ತದೆ" ಎಂಬುದನ್ನು ಸ್ವೀಕರಿಸುತ್ತದೆ. ಹೀಗೆಯೇ ಒಂದು ಸಿದ್ಧ ಸಂಶೋಧನೆಯ ಪ್ರಕಾರ "ಅನೇಕ ಭಾಷೆ ಕಲಿತ ಮಕ್ಕಳು ಒಂದೇ ಭಾಷೆ ಕಲಿತ ಮಕ್ಕಳಿಗಿಂತ ಬುದ್ಧಿವಂತಿಕೆಯಲ್ಲಿ ಮತ್ತು ಸೃಜನಾತ್ಮಕತೆಯಲ್ಲಿ ಮುಂದುವರಿದಿರುತ್ತಾರೆ ಎಂಬುದನ್ನೂ ಗುರುತಿಸುತ್ತದೆ. ಆದರೆ, ಇಲ್ಲಿ ಸಮಸ್ಯೆಯಿರುವುದು ಬಹುಭಾಷೆಯನ್ನು ಬಳಸುವುದರಲ್ಲಲ್ಲ; ಬದಲಿಗೆ ಆರಂಭಿಕ ಬಾಲ್ಯದ ಶಿಕ್ಷಣವನ್ನು ಮಾತೃಭಾಷೆಯ ಬದಲಿಗೆ ಅನ್ಯ-ಅಪರಿಚಿತ ಭಾಷೆಯಲ್ಲಿ ನೀಡುವುದು.

ದುರದೃಷ್ಟವಶಾತ್, ಆಧುನಿಕ ತಂದೆತಾಯಿಯರ ಸಮಸ್ಯೆಯೇನೆಂದರೆ, ತಂದೆ-ತಾಯಂದಿರು ಮಗುವಿಗೆ ಚಿಕ್ಕ ವಯಸ್ಸಿನಲ್ಲೇ ಇಂಗ್ಲಿಷನ್ನು ಪರಿಚಯಿಸುವುದಕ್ಕೆ ಅತಿ ಉತ್ಸುಕರಾಗಿರುವುದು. ಇಂಗ್ಲಿಷ್ ಭಾಷೆ ಅವರ ಪಾಲಿಗೆ ಅಧಿಕಾರ ಶಕ್ತಿಯಿರುವ ಭಾಷೆ, ಪ್ರಗತಿ ಮತ್ತು ಆರ್ಥಿಕ ಸದವಕಾಶಗಳಿಗೆ ಹೆಬ್ಬಾಗಿಲು. ಹೀಗಾಗಿ ಆದಷ್ಟು ಚಿಕ್ಕ ವಯಸ್ಸಿನಲ್ಲೇ ಮನೆಯ ವಾತವರಣದಲ್ಲಿಯೇ ಮತ್ತು ಶಾಲಾ ಶಿಕ್ಷಣದಲ್ಲಿ ಇಂಗ್ಲಿಷ್ ಶಿಕ್ಷಣವನ್ನು ತರಬೇಕೆನ್ನುವ ಗೀಳಿಗೆ ಬಲಿಯಾಗಿದ್ದಾರೆ. ಈ ಗೀಳು ಎಷ್ಟು ಅತಿರೇಕಕ್ಕೆ ಹೋಗಿದೆಯೆಂದರೆ "ಪುರಾಣದ ಅಭಿಮನ್ಯು ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಯುದ್ಧನೀತಿಯನ್ನು ಕಲಿತಂತೆ"; ಮಗುವಿಗೆ ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣವನ್ನು ನಾವು ನೀಡುತ್ತೇವೆಂದು ಯಾರಾದರೂ ಜಾಹಿರಾತು ಹಾಕಿದರೆ ತಾಯಂದಿರು ಕ್ಯೂ ನಿಂತರೂ ನಿಂತರೇ. ಇಂಗ್ಲಿಷ್‌ನ ಮೇಲಿರುವ ಈ ಅತಿಯಾದ ವ್ಯಾಮೋಹ ಅಸಮಂಜಸ ಮತ್ತು ಆಧಾರಹೀನ ಅಂಶವಾಗಿದೆ. "ಗುಣಾತ್ಮಕ ಶಿಕ್ಷಣ ನೀಡುವುದಕ್ಕೆ ಮತ್ತು ಇಂಗ್ಲಿಷ್ ಸೇರಿದಂತೆ ಇತರ ಅನ್ಯಭಾಷೆಯನ್ನು ಕಲಿಯುವುದಕ್ಕೆ ಮಾತೃಭಾಷೆಯು ರಾಜಮಾರ್ಗವಿದ್ದಂತೆ" ಎಂಬ ಶೈಕ್ಷಣಿಕ ತತ್ವಕ್ಕೆ ತದ್ವಿರುದ್ಧವಾಗಿದೆ. ಆಧುನಿಕ ಅಭಿಮನ್ಯುಗಳಿಗೆ ಎಳೆಯ ವಯಸ್ಸಿನಲ್ಲೇ ಇಂಗ್ಲಿಷಿನ ಅಗತ್ಯವಿಲ್ಲ. ಅವರಿಗೆ ಬೇಕಾಗಿರುವುದು ಒಳ್ಳೆಯ ಲಾಲನೆ ಪಾಲನೆ, ಸಂಸ್ಕೃತಿ ಮತ್ತು ಮಾತೃಭಾಷಾಧಾರಿತ ಉತ್ತಮ ಗುಣಮಟ್ಟದ ಶಿಕ್ಷಣ ಮಾತ್ರ.





**ಅಜಿತ್ ಮೊಹಂತಿ** NMRC (www.nmrc-jnu.org) ಮುಖ್ಯ ಸಲಹೆಗಾರರು ಆಗಿದ್ದಾರೆ. ಅವರು ಈ ಹಿಂದೆ ದೆಹಲಿಯ ಜವಾಹರ್ ಲಾಲ್ ನೆಹರು ವಿಶ್ವವಿದ್ಯಾನಿಲಯದ ಪ್ರೊಫೆಸರ್ ಮತ್ತು ICSSR ರಾಷ್ಟ್ರೀಯ ಫೆಲೋ ಆಗಿದ್ದರು. ಅವರು ಫುಲ್ಬ್ರೈಟ್ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು (ಕೊಲಂಬಿಯಾ ವಿಶ್ವವಿದ್ಯಾಲಯ), ಫುಲ್ಬ್ರೈಟ್ ಹಿರಿಯ ವಿದ್ವಾಂಸ (ವಿಸ್ಕಾನ್ಸಿನ್), ಕಿಲ್ಲಂ (Killam) ವಿದ್ವಾಂಸರು (ಆಲ್ಬರ್ಟಾ) ಆಗಿದ್ದರು. ಬಹುಭಾಷಿಕ ಶಿಕ್ಷಣದ ಬಗ್ಗೆ ಇವರ ಕೃತಿ ಹೆಸರುವಾಸಿಯಾಗಿದೆ. ಮೋಹಂತಿಯವರು ನೇಪಾಳ ಮತ್ತು ಒಡಿಶಾ (ಭಾರತ) ದಲ್ಲಿ ಬಹುಭಾಷಿಕ ಶಿಕ್ಷಣದ ಕಾರ್ಯ ನೀತಿ ರಚಿಸಿಕೊಟ್ಟಿರುತ್ತಾರೆ. ಅವರು ನ್ಯಾಷನಲ್ ಅಕಾಡೆಮಿ ಆಫ್ ಸೈಕಾಲಜಿ, ಭಾರತ ಮತ್ತು ಅಸೋಸಿಯೇಷನ್ ಸೈಕಾಲಜಿ ಸೈನ್ಸ್, ಯುಎಸ್ಎ ಗಳ ಫೆಲೋ ಆಗಿರುತ್ತಾರೆ ಅವರನ್ನು ajitmohanty@gmail.com ನಲ್ಲಿ ಸಂಪರ್ಕಿಸಬಹುದು.



# ಆರಂಭಿಕ ವರ್ಷಗಳಲ್ಲಿ ಭಾಷೆ ಮತ್ತು ಅಕ್ಷರ ಕಲಿಕೆ: ಇದು ಹೇಗಿರಬೇಕು?

**ಶೈಲಜಾ ಮೆನನ್**

*ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ*

*ಆರು ವರ್ಷದ ಬಾಲಕ ರಾಜು, ತನ್ನ ಶಿಕ್ಷಕರು ತೋರಿಸಿದ ಆನೆಯ ಚಿತ್ರವನ್ನು ತನ್ಮಯನಾಗಿ ಗಮನಿಸುತ್ತಿದ್ದಾನೆ.*

*ಈ ಚಿತ್ರ ಯಾವುದು? ಶಿಕ್ಷಕರು ಕನ್ನಡ ಭಾಷೆಯಲ್ಲಿ ಕೇಳಿದರು.*

*ಕನ್ನಡ ಮಾತೃಭಾಷೆಯವನಾದ ರಾಜು, "ಆನೆ" ಎಂದು ಉತ್ತರಿಸಿದ.*

*ಅವನ ಉತ್ತರ ಸರಿಯಾದ್ದಾದ್ದರಿಂದ ಶಿಕ್ಷಕರು ಒಂದು ನಿಮಿಷ ತಬ್ಬಿಬ್ಬಾದರು.ಆದರೆ ಆನೆ ಎನ್ನುವ ಪದ ತಾವು ಬೋಧಿಸುತಿದ್ದ ಅಕ್ಷರದ ಸರಣಿಗೆ ಹೊಂದಾಣಿಕೆಯಾಗುತ್ತಿರಲಿಲ್ಲ. ನೀನು ಹೇಳಿದ್ದು ಸರಿ, ಆದರೆ ಇದಕ್ಕೆ ಇನ್ನೊಂದು ಹೆಸರಿದೆ ಅದು ಸಲಗ ಎಂದು, ಯಾವ ಪದ ಹೇಳು? ಎಂದು ಶಿಕ್ಷಕರು ಕೇಳಿದರು.*

*ರಾಜು ಪ್ರತಿಕ್ರಿಯಿಸಲಿಲ್ಲ.*

*ಮುಂದಿನ ಚಿತ್ರವನ್ನು ತೋರಿಸುವ ಮೊದಲು ಮುಂದೆ ಮೂರು ಬೇರೆ ಚಿತ್ರಗಳನ್ನು ತೋರಿಸಿದ ಅನಂತರ, ಮೊದಲು ತೋರಿಸಿದ ಚಿತ್ರವನ್ನೇ ಪುನಃ ತೋರಿಸಿ ಶಿಕ್ಷಕರು "ಸಲಗ" ಎಂದು ಒತ್ತಿ ಹೇಳಿದರು.*

*"ಏನಿದು?" ಎಂದು ಕೇಳಿದರು.*

*"ಆನೆ," ಎಂದು ರಾಜು ಉತ್ತರಿಸಿದ.*

*"ಹೌದು, ಸರಿ, ಆದರೆ ಇದಕ್ಕೆ "ಸಲಗ" ಎಂದು ಇನ್ನೊಂದು ಪದವನ್ನು ಹೇಳಿಕೊಟ್ಟಿದ್ದೆ ನೆನಪಿದೆಯಾ? ಹೇಳು, ಸಲಗ."*

*ರಾಜು ವಿಧೇಯನಾಗಿ ಉತ್ತರಿಸಿದ.*

*ಮತ್ತೆ ಮೂರು ಚಿತ್ರಗಳನ್ನು ತೋರಿಸಿದ ಅನಂತರ ಮೊದಲಿನ ಚಿತ್ರವನ್ನು ಪುನಃ ತೋರಿಸಿದಾಗ ರಾಜು, ಆನೆ ಎನ್ನುವ ಪದವನ್ನೇ ಹೇಳಿದ.*

*ಶಿಕ್ಷಕರಿಗೆ ತಾಳ್ಮೆ ತಪ್ಪುತ್ತಿತ್ತು.*

*ಅಂತಿಮ ಸುತ್ತಿನಲ್ಲಿ ಚಿತ್ರವನ್ನು ತೋರಿಸಿ ಪ್ರಶ್ನಿಸಿದಾಗ ರಾಜು, "ನನಗೆ ಗೊತ್ತಿಲ್ಲ" ಎಂದು ಉತ್ತರಿಸಿದ. ಈ ದೃಷ್ಟಾಂತವನ್ನು ಫೆಬ್ರವರಿ 2013 ರಲ್ಲಿ ಮಾಡಿದ ಯೋಜನೆಯಾದ ಎಲ್‌ಆರ್‌ಐಎಲ್ ಕ್ಷೇತ್ರ ಕಾರ್ಯದಿಂದ ತೆಗೆದುಕೊಳ್ಳಲಾಗಿದೆ.*

ಈ ಉದಾಹರಣೆಯನ್ನು ಪ್ರಸ್ತುತ ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿರುವ ಸೊನಾಲೆಯಲ್ಲಿ ಮತ್ತು ಕರ್ನಾಟಕದ ಯಾದಗಿರಿ ಜಿಲ್ಲೆಯಲ್ಲಿ ಮಾಡುತ್ತಿರುವ ಭಾರತೀಯ ಭಾಷೆಗಳಲ್ಲಿ ಸಾಕ್ಷರತೆಯ ಸಂಶೋಧನೆ (ಎಲ್‌ಐಆರ್‌ಐಎಲ್) ಯೋಜನೆಯಲ್ಲಿ ದಾಖಲಿಸಿದ ಸಂಭಾಷಣೆಯ ಅಭ್ಯಂತರದಿಂದ ತೆಗೆದುಕೊಳ್ಳಲಾಗಿದೆ. ಆರಂಭಿಕ ವರ್ಷಗಳಲ್ಲಿ ಭಾಷಾ ಕಲಿಕೆಯ ಬಗ್ಗೆ ಇದು ಅತ್ಯಂತ ಪ್ರಮುಖವಾದ ಮತ್ತು



ಕುತೂಹಲಕರವಾದ ಪ್ರಶ್ನೆಗಳನ್ನು ಉದ್ಭವಿಸುವಂತೆ ಮಾಡಿದ್ದು ವೃತ್ತಿನಿರತರು ಮತ್ತು ಪರಿಣಿತರು ಹೆಚ್ಚಿನ ಗಮನವನ್ನು ಹರಿಸುವಂತೆ ಎಚ್ಚರಿಕೆ ನೀಡುತ್ತಿದೆ.

## ಆರಂಭಿಕ ವರ್ಷಗಳಲ್ಲಿ ಭಾಷೆ ಮತ್ತು ಅಕ್ಷರ ಕಲಿಕೆಯ ಬಗ್ಗೆ ನಮಗೇನು ತಿಳಿದಿದೆ?

ಭಾರತೀಯ ಶಾಲೆಗಳಲ್ಲಿ ಕಲಿಯುತ್ತಿರುವ ಅನೇಕ ಮಕ್ಕಳು ರಾಜುವಿನಂತೆಯೇ ತಮ್ಮ ಕುಟುಂಬದಲ್ಲಿ ಶಾಲೆಗೆ ಹೋಗುತ್ತಿರುವವರಲ್ಲಿ ಮೊದಲ ತಲೆಮಾರಿಗೆ ಸೇರಿದವರಾಗಿದ್ದಾರೆ ಅಥವಾ ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನುಕೂಲವಂಚಿತ ಹಿನ್ನಲೆಯವರಾಗಿದ್ದಾರೆ. ಇಂತಹ ಮಕ್ಕಳಿಗೆ ಶಾಲೆಗೆ ಸೇರುವ ಮೊದಲೇ ಮುದ್ರಿತ ಸಾಮಾಗ್ರಿಗಳು ದೊರೆಯದಿದ್ದು, ಇವರಿಗೆ ಮನೆಯಲ್ಲಿ ಅಥವಾ ಇವರಿರುವ ಸಮುದಾಯಗಳಲ್ಲಿ ಜನರು

ಪುಸ್ತಕಗಳನ್ನು ತಮ್ಮ ಜೀವನದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿರುವಂತಹ ಮಾದರಿಗಳು ಕಂಡುಬರುವುದಿಲ್ಲ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನೂಕೂಲಕರವಾದ ಹಿನ್ನೆಲೆಯನ್ನು ಹೊಂದಿರುವ ಕುಟುಂಬದಿಂದ ಬಂದಿರುವ ಇವರದೇ ವಯಸ್ಸಿನ ಮಕ್ಕಳೊಂದಿಗೆ ಹೋಲಿಸಿದಾಗ ಇವರ ಪದಸಂಪತ್ತು ಮತ್ತು ಆಡುಮಾತಿನ ಕೌಶಲ್ಯ ಸೀಮಿತವಾಗಿರುವುದು ಕಂಡುಬರುತ್ತದೆ.

ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ಯಾವುದೇ ಭಾಷೆಯನ್ನು ಕಲಿಸುವ ಸಂದರ್ಭದಲ್ಲಿ, ಅದರಲ್ಲೂ ಸಾಮಾಜಿಕ ಮತ್ತು ಆರ್ಥಿಕವಾಗಿ ಅನುಕೂಲರಹಿತ ಪರಿಸ್ಥಿತಿಯ ಮಕ್ಕಳಿಗೆ ಸಂಬಂಧಿಸಿದಂತೆ, ಪ್ರಾಥಮಿಕ ಹಂತದ ವಿದ್ಯಾರ್ಥಿಗಳು ತಮ್ಮ ಮನೆ ಮತ್ತು ಸಮುದಾಯದಿಂದ ರೂಢಿಸಿಕೊಂಡಿರುವ ಆಡು ಭಾಷೆಯನ್ನು ಹೆಚ್ಚು ಮನದಟ್ಟು ಮಾಡಿಸುವುದು ಮತ್ತು ಪಠ್ಯ ರೂಪದಲ್ಲಿರುವ ಬರವಣಿಗೆಯ ಸ್ವರೂಪವನ್ನು ಅರ್ಥಮಾಡಿಕೊಂಡು ಬೆಳಸಿಕೊಳ್ಳಲು ಸಹಾಯ ಮಾಡುವುದು ಶಿಕ್ಷಕರು ಪ್ರಮುಖವಾಗಿ ಗಮನಿಸಬೇಕಾಗಿರುವ ಒಂದು ಅಂಶ. ಭಾಷೆ ಮತ್ತು ಅಕ್ಷರ ಕಲಿಕೆಯಲ್ಲಿ ನಿರತರಾದ ಸಣ್ಣ ಮಕ್ಕಳ ಮೂರು ಪ್ರಮುಖ ಕಾರ್ಯಗಳನ್ನು ಮತ್ತು ಈ ಕಾರ್ಯವನ್ನು ಪೂರ್ಣಗೊಳಿಸಲು ಸಹಾಯಕವಾಗುವ ನಿಯಮಗಳನ್ನು ಕೋಷ್ಟಕ 1ರಲ್ಲಿ ಸಾರಾಂಶವಾಗಿ ಹೇಳಲಾಗಿದೆ.

*ನಿಯಮ 1: ಮನೆಯಿಂದ-ಶಾಲೆಗೆ ಯಶಸ್ವೀ ವರ್ಗಾವಣೆಯನ್ನು ಸಾಧ್ಯವಾಗಿಸುವುದು.*

ತಮ್ಮ ವಿದ್ಯಾಭ್ಯಾಸದ ಆರಂಭದ ದಿನಗಳಲ್ಲಿ ಎಳೆಯ ವಿದ್ಯಾರ್ಥಿಗಳು ಮನೆಯ ಪರಿಸರದಿಂದ-ಶಾಲೆಪರಿಸರಕ್ಕೆ ಹೊಂದಿಕೊಳ್ಳುವ ಕ್ರಿಯೆಯಲ್ಲಿ ನಿರತರಾಗಿರುತ್ತಾರೆ. ಮಕ್ಕಳಿಗೆ ಇದೇನು ಸುಲಭದ ಸ್ಥಿತ್ಯಂತರವಲ್ಲ ಬಹಳ ಮಹತ್ವದಘಟ್ಟ ಎಂದೇ ಹೇಳಬೇಕು. ಇದನ್ನು ಮೊದಲ ನಿಯಮವು ಸೂಚಿಸುತ್ತದೆ. ವಿಭಿನ್ನ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭಗಳಲ್ಲಿ ಪುಟ್ಟ ಮಕ್ಕಳು ಹೇಗೆ ಭಾಷೆ ಮತ್ತು ಅಕ್ಷರಾಭ್ಯಾಸವನ್ನು ಕಲಿಯುತ್ತಾರೆ ಎಂಬುದನ್ನು ಕುರಿತು ಸಂಶೋಧನೆ ನಡೆಸಿದ ವಿದ್ವಾಂಸರು ಸಮಾಜದಲ್ಲಿ ಮಧ್ಯಮ ವರ್ಗದಿಂದ ಬರುವ ಮಕ್ಕಳಿಗೆ ಶಾಲೆಯಲ್ಲಿ ಬಳಸುವ ಭಾಷೆಯು ಮನೆಯಲ್ಲಿನ ಭಾಷೆಯಂತೆಯೇ ಇರುತ್ತದೆ. ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನುಕೂಲರಹಿತ ವರ್ಗದಿಂದ ಬಂದಿರುವ ಮಕ್ಕಳ ಭಾಷೆ ಶಾಲೆಯಲ್ಲಿ ಬಳಸುವ ಭಾಷೆಗಿಂತ ಭಿನ್ನವಾಗಿರುತ್ತದೆ ಎಂದು ಗಮನಿಸಿ ಹೇಳಿದ್ದಾರೆ.

**ಕೋಷ್ಟಕ 1**

**ಭಾಷಾ ಕಲಿಕೆಯ ನಿಯಮಗಳು**

| **ಮಗು ಏನು ಮಾಡುತ್ತಿದೆ?** | **ಇಸಿಸಿಇ ನಿಯಮಗಳ ಆಧಾರದ ಮೇಲೆ ನಿರ್ಮಿಸಿರುವ ಕಾರ್ಯಕ್ರಮ:** |
| --- | --- |
| ಮನೆಯ ವಾತಾವರಣದಿಂದ ಶಾಲಾ ವಾತಾವರಣಕ್ಕೆ ಪರಿವರ್ತನೆಗೊಳಿಸುವುದು | • ಮನೆಯ ವಾತಾವರಣದಿಂದ ಶಾಲೆಯ ವಾತಾವರಣಕ್ಕೆ ಮಗು ಹೊಂದಿಕೊಳ್ಳುವಂತೆ ಮಾಡಲು ಪಠ್ಯಕ್ರಮ ಮತ್ತು ಬೋಧನಾಕ್ರಮದ ಸೇತುವೆಗಳನ್ನು ನಿರ್ಮಿಸುವುದು.<br>• ಭಾಷೆ ಮತ್ತು ಅಕ್ಷರ ಕಲಿಕೆಯ ದೊಡ್ಡ ಗುರಿಗಳನ್ನು ಹೊಂದಿಸುವುದು; ಅವುಗಳನ್ನು ಅರ್ಥಪೂರ್ಣ ಮತ್ತು ಉದ್ದೇಶಪೂರ್ವಕವಾಗಿ ಸ್ಥಿರವಾಗಿರುವಂತೆ ಸ್ಥಾಪಿಸುವುದು. |
| ಮೌಖಿಕ ಭಾಷೆಯ ಬೆಳವಣಿಗೆ | • ಮೌಖಿಕ ಭಾಷಾ ಕಲಿಕೆ, ಪದಸಂಪತ್ತಿನ ಅಭಿವೃದ್ಧಿ ಮತ್ತು ಅರ್ಥಮಾಡಿಕೊಳ್ಳುವುದಕ್ಕಾಗಿ ಸಮೃದ್ಧ ಅವಕಾಶಗಳನ್ನು ಒದಗಿಸುವುದು.<br>• ತಿಳಿದಿರುವುದರಿಂದ ಹೊಸದನ್ನು ಕಲಿಯಲು ಸಾಧ್ಯವಾಗುವ ಭಾಷಾ ಸಂಪತ್ತನ್ನು ಬಳಸುವುದು. |
| ಲಿಖಿತ ಭಾಷೆಯನ್ನು ಚಿರಪರಿಚಿತ ಮಾಡಿಕೊಳ್ಳುವುದು | • ಮೌಖಿಕ ಮತ್ತು ಲಿಖಿತ ಭಾಷೆಯ ನಡುವಿನ ಸಂಬಂಧವನ್ನು (ಸಾಮ್ಯತೆ ಮತ್ತು ವ್ಯತ್ಯಾಸಗಳು) ಪರಿಚಯಿಸುವುದು.<br>• ಲಿಖಿತ ಭಾಷೆಯನ್ನು ಬಳಸಲು ಅರ್ಥಪೂರ್ಣವಾದ ಸಂದರ್ಭಗಳನ್ನು ಒದಗಿಸುವುದು.<br>• ಧ್ವನಿ-ಚಿಹ್ನೆಗಳ ಸಂಬಂಧ ಪರಿಚಯಿಸುವುದು. |

ಭಾರತದಲ್ಲಿರುವ ಹಾಗೆ ಬಹು ಭಾಷೆಯ ಸಮಾಜಗಳಲ್ಲಿ ಮಕ್ಕಳನ್ನು ಶಾಲೆಗೆ ಬರುವಾಗ ಅವರ ಆಡು ಭಾಷೆ ಮತ್ತು ಉಪಭಾಷೆಯ ಚೌಕಟ್ಟನ್ನು ದಾಟಿ ಬರುವಂತೆ ಶಾಲೆಗಳಲ್ಲಿ ಹೇಳಲಾಗುತ್ತದೆ. ಮನೆ ಮತ್ತು ಶಾಲೆಯಲ್ಲಿನ ಭಾಷೆಯು ಒಂದೇ ಆದರೂ, ಶಾಲೆಯಲ್ಲಿ ಬಳಸುವ ಪದಸಂಪತ್ತು ಮತ್ತು ಉಪನ್ಯಾಸದ ಸಮಯದಲ್ಲಿ ಅನೇಕ ಸವಾಲುಗಳನ್ನು ಮಕ್ಕಳು ಎದುರಿಸಬೇಕಾಗಿ ಬರುತ್ತದೆ. (ಕನ್ನಡ ತನ್ನ ಮಾತೃಭಾಷೆಯಾಗಿದ್ದು ಕನ್ನಡ ಮಾಧ್ಯಮದ ಶಾಲೆಗೆ ಹೋಗುತ್ತಿರುವ ರಾಜುವಿನ ಪ್ರಕರಣದಲ್ಲಿರುವಂತೆ). ಪದವನ್ನು ಓದಿದರೆ ಪ್ರಪಂಚವನ್ನೇ ಓದಿದಂತೆ ; ನಿಜವಾದ ಕಲಿಕೆ ಮತ್ತು ಸಬಲೀಕರಣವು ಸಾಧ್ಯವಾಗಬೇಕಾದರೆ ಆಯಾ ಜನರ ಪ್ರಪಂಚ ಮತ್ತು ಪದಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು ಎಂಬುದು ಬ್ರೆಜಿಲಿಯಾದ ಪ್ರಸಿದ್ಧ ಶಿಕ್ಷಕರಾದ ಪೌವಲೊ ಫ್ರೈಯೆರಿಯವರ ನಂಬಿಕೆಯಾಗಿದೆ. (ಫ್ರೆಯೆರಿ ಮತ್ತು ಮ್ಯಾಕ್‌ಡಿಯೊ 1987).

ಈ ಲೇಖನದ ಮೊದಲ ಭಾಗದಲ್ಲಿ ಹೇಳಿರುವ ದೃಷ್ಟಾಂತವನ್ನು ಸ್ಮರಿಸಿದರೆ, ಮಗು ಚಿತ್ರದಲ್ಲಿರುವುದು ತನಗೆ ಗೊತ್ತಿದೆ ಎಂದು ಆಲೋಚಿಸುತ್ತಾ ಪ್ರಾರಂಭಿಸಿದರೂ, ಕೊನೆಗೆ 'ನನಗೆ ಗೊತ್ತಿಲ್ಲ' ಎಂದು ಹೇಳಿದ್ದನ್ನು ಗಮನಿಸಬಹುದು. "ನನಗೆ ಗೊತ್ತಿಲ್ಲ" ಎಂಬ ಈ ಅರ್ಥಗರ್ಭಿತ ಹೇಳಿಕೆಯು ಹಿಂದೆಯೂ ಇಂತಹ ಅನೇಕ ಸಂವಾದಗಳು ನಡೆದಿರುವ ಮತ್ತು ಮುಂದೆಯೂ ಇಂತಹಾ ಅನೇಕ ಸಂವಾದಗಳು ನಡೆಯುವ ಸಾಧ್ಯತೆಯನ್ನು ಸೂಚಿಸುತ್ತದೆ. ಹಾಗೆಯೇ ಶಾಲೆ ಹಾಗು ಪಠ್ಯ ಪ್ರಪಂಚಕ್ಕೆ ತಾನು ಪರಕೀಯನೆಂಬ ಭಾವನೆಯು ಮಗುವಿನಲ್ಲಿ ಬೆಳೆಯುತ್ತಾ ಹೋಗುವಂತೆ ಮಾಡುತ್ತದೆ. ಈ ದೃಷ್ಟಾಂತವು, ಇದೇ ಯೋಜನೆಯ ಅನುಷ್ಠಾನದ ಸಮಯದಲ್ಲಿ ದಾಖಲಿಸಲಾದ ಅನೇಕ ಸನ್ನಿವೇಶಗಳಲ್ಲಿ ಒಂದಾಗಿದ್ದು, ಮಗುವಿಗೆ ಚಿರಪರಿಚಿತವಾದ ಪದಗಳ ಬದಲಿಗೆ ಯಾವ ರೀತಿ ಪಠ್ಯದಲ್ಲಿ ಅಪರಿಚಿತ ಮತ್ತು ಔಪಚಾರಿಕ ಪದಗಳನ್ನು ಬಳಸುತ್ತವೆ ಎಂಬುದನ್ನು ಗಮನಿಸಬೇಕು ಎಂಬ ಅಂಶವನ್ನು ಒತ್ತಿ ಹೇಳುತ್ತದೆ. ತನ್ನದೇ ಆದ ವಿಶಿಷ್ಟ ಪದಗಳನ್ನು ಸತತವಾಗಿ ಬಳಸುವ ಪಠ್ಯಕ್ರಮವನ್ನು ಹೊಂದಿದ್ದು ತನಗೆ 'ಗೊತ್ತು' ಎಂದು ನಂಬಿದ್ದ ಮಗುವನ್ನು ತನಗೆ ಗೊತ್ತಿಲ್ಲ ಎಂಬ ಅಸ್ಥಿರತೆಯ ಕಡೆಗೆ ದೂಡುವ ವಿದ್ಯಾಭ್ಯಾಸದಲ್ಲಿ ಒಂದು ಆರು ವರ್ಷದ ಮಗು ತನ್ನ ಆಸಕ್ತಿಯನ್ನು ಹೇಗೆ ಮತ್ತು ಯಾಕೆ ಉಳಿಸಿಕೊಳ್ಳಬೇಕು? ಎಂದು ನಮ್ಮನ್ನು ನಾವೇ ಪ್ರಶ್ನೆ ಕೇಳಿಕೊಳ್ಳಬೇಕು.

*ನಿಯಮ 2: ಆಡುಮಾತಿನ ಭಾಷೆಯ ಜ್ಞಾನವನ್ನು ಬೆಳಸುವುದು ಮತ್ತು ವಿಸ್ತರಿಸುವುದು.*

ಶಾಲೆಗಳಲ್ಲಿ ಕಲಿಯುವ ಎಲ್ಲಾ ಕಲಿಕೆಯೂ ಸದೃಢವಾದ ಆಡುಮಾತಿನ ಭಾಷಾ ಕೌಶಲ್ಯದ ಬುನಾದಿಯ ಮೇಲೆಯೇ ನಿರ್ಮಾಣವಾಗುತ್ತದೆ. ಶಾಲೆಯಲ್ಲಿ ಬಳಸುವ ಆಡುಭಾಷೆಯ ಪರಿಣಿತಿ ಇಲ್ಲದಿದ್ದರೆ ಮಗುವು ಪದಸಂಪತ್ತು ಗಳಿಸಲು ಮತ್ತು ಶಬ್ದಾರ್ಥವನ್ನು ಗ್ರಹಿಸಲು ಕಷ್ಟಪಡುವಂತಾಗುತ್ತದೆ. ಹೀಗಾಗಿ ವಿಷಯಗ್ರಹಣ ಶಕ್ತಿಯ ಬೆಳವಣಿಗೆ ಮತ್ತು ಬರವಣಿಗೆಯನ್ನು ಸುಲಲಿತವಾಗಿ ಕಲಿಯಲು ಇದು ಬಹಳ ಮುಖ್ಯ. ಶಾಲೆಯಲ್ಲಿ ಬಳಸುವ ಭಾಷೆಯು ತಮ್ಮ ಮನೆಯಲ್ಲಿ ಬಳಸುವ ಭಾಷೆಯಂತೆಯೇ ಇರುವ ಮಕ್ಕಳಿಗೂ ಆಡು ಮಾತಿನ ಭಾಷೆಯನ್ನು ಬಳಸಲು ಯೋಜಿತ ಮತ್ತು ನಿರಂತರ ಅವಕಾಶಗಳನ್ನು ಒದಗಿಸುವುದು ಮುಖ್ಯ. ಮಗುವಿಗೆ ತಿಳಿದಿರುವ ಪದಗಳನ್ನು ಅವನಿಗೆ/ಅವಳಿಗೆ ತಿಳಿಯದಿರುವ ಸಮಾನ ಪದಗಳನ್ನು ಬಳಸಲು ಹೇಳುವುದರಿಂದ ಇದು ಸಾಧ್ಯವಾಗುವುದಿಲ್ಲ. ಆಡು ಭಾಷೆಯ ಕೌಶಲ್ಯವನ್ನು ಬೆಳಸಲು ಅನೇಕ ವಿಧಾನಗಳಿವೆ. ಇವು ಸುಧೀರ್ಘ ಸಂಭಾಷಣೆಗಳು, ಚರ್ಚೆಗಳು, ಕಥೆ ಹೇಳುವುದು, ಪುಸ್ತಕ ವಾಚನ, ಮತ್ತು ಬರೆಯುವುದು ಹೀಗೆ ಅನೇಕ ಅವಕಾಶಗಳ ಒದಗಿಸುವಿಕೆಯನ್ನು ಒಳಗೊಂಡಿದೆ. ಆಡು ಭಾಷೆಯ ಮತ್ತು ಗ್ರಹಿಕೆಯ ಅಭಿವೃದ್ಧಿಗೆ ಮಾತನಾಡುವುದನ್ನು "ಸಾಧನಗಳಲ್ಲೇ ಮಹಾ ಸಾಧನ" ಎಂದು ಹೇಳಲಾಗುತ್ತದೆ. ಹೀಗಾಗಿ, ಉತ್ತಮ ಆಡುಭಾಷೆಯನ್ನು ನಿರಂತರವಾಗಿ ಬಳಸುವ, ಅಭ್ಯಾಸಿಸುವ ಮತ್ತು ಮನದಟ್ಟು ಮಾಡಿಸುವ ಪರಿಸರದಲ್ಲಿ ಮಗುವನ್ನು ಎಳೆಯ ವಯಸ್ಸಿನಲ್ಲಿಯೇ ಬಿಡುವ ಅಗತ್ಯವಿದೆ.

ಎಲ್‌ಐಆರ್‌ಐಎಲ್ ಯೋಜನೆಯಲ್ಲಿ, ನಾವು ಗಮನಿಸಿದ ಪುಟಾಣಿ ಮಕ್ಕಳ ಭಾಷಾ ಕಲಿಕೆ ತರಗತಿಗಳಲ್ಲಿ ಆಡು ಮಾತಿನ ಭಾಷೆಯ ಕೌಶಲ್ಯವನ್ನು ಬೆಳಸಿಕೊಳ್ಳಲು ಅವಕಾಶಗಳು ಅಷ್ಟಾಗಿ ಕಂಡುಬರಲಿಲ್ಲ ಅಥವಾ ಅದನ್ನು ಪಠ್ಯಕ್ರಮದಲ್ಲಿ ವ್ಯವಸ್ಥಿತವಾಗಿ ಯೋಜಿಸಿರಲಿಲ್ಲ. ಅದನ್ನು ಎಲ್ಲಿ ಬಳಸಲಾಯಿತೋ ಅಲ್ಲಿ ಅದು ಪ್ರತಿ ನಿತ್ಯ ಗುಂಪಿನಲ್ಲಿ ಹಾಡುವುದು (ಉ.ದಾ. ಯಾದಗಿರಿಯಲ್ಲಿ), ಅಥವಾ ಚಟುವಟಿಕೆಗಳ ಮಧ್ಯೆ ಪೂರ್ವ ಯೋಜನೆ ಇಲ್ಲದೆ ಬಳಸುವಂತೆ (ಉ.ದಾ. ಸೊನಾಲೆ) ಇತ್ತು. ನಾವು ಭೇಟಿ ನೀಡಿದ ಯಾವುದೇ ಕ್ಷೇತ್ರದಲ್ಲೂ ಮಕ್ಕಳ ಸಾಹಿತ್ಯವನ್ನು ಗಟ್ಟಿಯಾಗಿ ಓದುವುದು ಅಥವಾ ಚರ್ಚೆಗೆ ಉತ್ತಮ ಅವಕಾಶವನ್ನು ಒದಗಿಸಲು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು ಕಂಡುಬರಲಿಲ್ಲ. ಇದಕ್ಕೆ ಬದಲಾಗಿ, ನಾವು ಸಂದರ್ಶಿಸಿದ ಎರಡೂ ಸ್ಥಳಗಳಲ್ಲಿ, ಅಕ್ಷರಾಭ್ಯಾಸ ಪರಿಣಿತಿಯನ್ನು ಬೆಳಸುವಂತೆ ಕಂಡುಬಂದಿತು.

*ನಿಯಮ 3: ಲಿಖಿತ ಭಾಷೆಯನ್ನು ಅರಿತುಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು*

ಭಾಷೆ ಮತ್ತು ಅಕ್ಷರಗಳನ್ನು ಕಲಿಯುವ ಎಳೆಯ ಮಕ್ಕಳಿಗೆ ಅದರಲ್ಲಿ ಪರಿಣಿತಿಯನ್ನು ಮತ್ತು ಲಿಪಿಯ ಮೇಲೆ ಹಿಡಿತವನ್ನು ಗಳಿಸಲು ವ್ಯವಸ್ಥಿತವಾದ ಅವಕಾಶಗಳ ಅಗತ್ಯವಿರುವುದು ಸತ್ಯ. ನಾವು ಕೆಲಸ ಮಾಡಿದ ಅನೇಕ

ಪ್ರಾಥಮಿಕ ಶಾಲಾ ತರಗತಿಗಳ ಪಠ್ಯಕ್ರಮದ ಪ್ರಮುಖ ಉದ್ದೇಶ ಇದೇ ಆಗಿದ್ದರೂ, ಮಕ್ಕಳು ಲಿಪಿಯೊಂದಿಗೆ ಭಾಷಾ ಪರಿಣಿತಿಯನ್ನೂ ಬೆಳೆಸಿಕೊಳ್ಳುತ್ತಿದ್ದಾರೆಯೇ? ನಮ್ಮಲ್ಲಿರುವ ದತ್ತಾಂಶಗಳು ಹೀಗಿವೆ – ಯಾದಗಿರಿಯಲ್ಲಿನ ಮೂರನೇ ತರಗತಿಯ 33% ಮತ್ತು ಸೊನಾಲೆಯಲ್ಲಿನ ಸುಮಾರು 28% ಮೂರನೇ ತರಗತಿಯವರು ಎರಡಕ್ಷರದ ಸರಳ ಪದಗಳನ್ನು ಹೊಂದಿರುವ ಪದಗಳ ಸರಣಿಯನ್ನು ನಿರರ್ಗಳವಾಗಿ ಓದಲು ಅಸಮರ್ಥರಾಗಿದ್ದರು. ಅಲ್ಲದೇ ಮೂರನೇ ತರಗತಿಯ ಬಹಳಷ್ಟು ಮಕ್ಕಳು ಸರಳ ಮತ್ತು ಪರಿಚಿತ ಪದಗಳನ್ನು ಹೊಂದಿದ್ದ ಸಣ್ಣ ಪಠ್ಯದ ಒಂದು ತುಣುಕನ್ನು ಓದಿ ಅರ್ಥ ಮಾಡಿಕೊಳ್ಳಲು ಅಸಮರ್ಥರಾಗಿದ್ದರು. ಇದು ಹೀಗೇಕೆ?

ಈ ವೈಫಲ್ಯಕ್ಕೆ ಕಾರಣಗಳು ಜಟಿಲವಾಗಿವೆ. ಸಮಸ್ಯೆಗಳನ್ನು ವಿಶ್ಲೇಷಿಸುವಾಗ ನಾವು ಅತ್ಯಂತ ಸರಳವಾಗಿ ಇಲ್ಲದಿದ್ದರಿಂದ, ಅರ್ಥವನ್ನು ಉಲ್ಲೇಖಿಸದೇ, ಲಿಖಿತ ಭಾಷೆಯನ್ನು ಅಮೂರ್ತ ಸಂಕೇತಗಳ ಒಂದು ಗುಂಪನ್ನಾಗಿ ಪ್ರತಿ ನಿತ್ಯ ಮಕ್ಕಳಿಗೆ ಕಾಪಿ ರೈಟಿಂಗ್ ಎಂದು ಕಂಠಪಾಠ ಮಾಡಲು ನೀಡುವುದರಿಂದ ಈ ಸಂಕೇತಗಳನ್ನು ಕಲಿಯಲು ಮಕ್ಕಳ ಉತ್ಸಾಹ ಸದಾ ಕೆಳ ಮಟ್ಟದಲ್ಲಿಯೇ ಇರುವುದು ಒಂದು ಕಾರಣವಾಗಿ ಕಂಡು ಬಂದಿರಬಹುದು. ಆಂಗ್ಲ ಭಾಷೆಯ ಅಕ್ಷರಮಾಲೆಯಲ್ಲಿನ 26 ಅಕ್ಷರಗಳನ್ನು ಕಲಿಯಲು ವರ್ಷೇ ವರ್ಷೇ ವಿಫಲವಾಗಿರುವ ಅಮೆರಿಕಾದ ಒಳನಾಡಿನಲ್ಲಿರುವ ಬಡತನದಲ್ಲಿ ಬಳಲುತ್ತಿರುವ ಮಕ್ಕಳು, ಇದಕ್ಕಿಂತ ಸಂಕೀರ್ಣವಾದ ಸಂಕೇತಗಳನ್ನು ಹೊಂದಿರುವ ಅಮೇರಿಕಾದ ಅತ್ಯಂತ ಜನಪ್ರಿಯ ಆಟಗಳಲ್ಲಿ ಒಂದಾದ ಪೋಕೆಮಾನ್ ಕಾರ್ಡ್ ಆಟದ ಸಾಮರ್ಥ್ಯವನ್ನು ಗಳಿಸಿಕೊಳ್ಳುವಲ್ಲಿ ಯಾವುದೇ ಸಮಸ್ಯೆಯನ್ನು ಹೊಂದಿಲ್ಲ ಎಂದು ಜಿಮ್ ಜೀ (2003) ಹೇಳುತ್ತಾರೆ. ಕಲಿಯುವುದರಲ್ಲಿ ಯಶಸ್ಸಿಗೆ ಪ್ರೇರಣೆ ಬಹಳ ಮುಖ್ಯ. ಸಿಲ್ವಿಯಾ ಆಶ್‌ಟನ್-ವಾರ್‍ನರ್ (1963/1986) ನ್ಯೂಸಿಲ್ಯಾಂಡ್‌ನ ಮಾವೋರಿ ಬುಡಕಟ್ಟು ಜನಾಂಗದ ಮಕ್ಕಳಿಗೆ ಓದುವಿಕೆಯ ಬೋಧನೆಯನ್ನು ಮಾಡುವಾಗ ತನ್ನ ವಿಭಿನ್ನ ವಿಧಾನದಿಂದ ಈ ನಿಯಮವನ್ನು ಮುರಿದರು. ತಮಗೆ ಅತ್ಯಂತ ಪ್ರಮುಖವಾದ ಪದಗಳನ್ನು ಪಟ್ಟಿ ಮಾಡುವಂತೆ ಇವರು ಮಕ್ಕಳಿಗೆ ಹೇಳಿದರು. ಇದರಲ್ಲಿ ಯಾವುದೇ ಪದಗಳೂ ನಿಷಿದ್ಧವಾದದ್ದಾಗಿರಲಿಲ್ಲ. ಭಯ, ಲಾಲಸೆ, ಹತಾಶೆಯ ಪದಗಳನ್ನೂ ಇವರ ತರಗತಿಯಲ್ಲಿ ಬಳಸುತ್ತಿದ್ದರು. ತಮ್ಮ ಮೊದಲ ಪುಸ್ತಕವಾದ 'ಟೀಚರ್'ನಲ್ಲಿ ಮಕ್ಕಳು ತಮಗೆ ಸಂಬಂಧಿಸಿದ ಪದಗಳನ್ನು ಕ್ಷಣಮಾತ್ರದಲ್ಲಿ ಕಲಿತರು ಎಂಬುದನ್ನು ಅವರು ಬರೆದಿದ್ದಾರೆ.

ಇದನ್ನು ನಮ್ಮ ದೇಶದಲ್ಲಿ ಪ್ರಸ್ತುತವಿರುವ ಸನ್ನಿವೇಶದೊಂದಿಗೆ ಹೋಲಿಸಿದರೆ, ಇಲ್ಲಿ ಅಕ್ಷರವನ್ನು ಒಂದು ತಾರ್ಕಿಕ ಆಧಾರದ ಮೇಲೆ ಜೋಡಿಸಿರುವ ಪ್ರಕಾರ (ಸಾಂಪ್ರದಾಯಿಕ ವರ್ಣಮಾಲೆ) ಅನುಕ್ರಮಣಿಕೆಯಲ್ಲಿ ಅಥವಾ ಇನ್ನೊಂದು ಮಾದರಿಯಲ್ಲಿ (ಒಂದೇ ರೀತಿಯಲ್ಲಿ ಕಾಣುವ ಅಕ್ಷರಗಳನ್ನು ಗುಂಪು ಮಾಡಿ ಕಲಿಸುವ ಪ್ರಯೋಗಾತ್ಮಕ ವಿಧಾನದಲ್ಲಿ) ಕಲಿಸಲಾಗುತ್ತದೆ. ಈ ಪದ್ಧತಿಯಲ್ಲಿ ಅನೇಕ ಪದ್ಧತಿಗಳು ಅಂದರೆ ನಾವು ಯಾದಗಿರಿಯಲ್ಲಿ ಬಹಳ ಹತ್ತಿರದಿಂದ ಗಮನಿಸಿ ದಾಖಲಿಸಿರುವಂತೆ, ಭಾರತೀಯ ಭಾಷೆಗಳಲ್ಲಿ ಅಕ್ಷರ ಕಲಿಕೆಯ ಎರಡನೆಯ ಹಂತವಾದ ಗುಣಿತಾಕ್ಷರಗಳನ್ನು ಒಂದನೆಯ ತರಗತಿಯವರೆಗೂ ಹೇಳಿಕೊಡುವುದೇ ಇಲ್ಲ. ಇದರ ಪರಿಣಾಮವಾಗಿ ಶಾಲೆಗೆ ಬರುವ ಮೊದಲ ತಲೆಮಾರಿನ ವಿದ್ಯಾರ್ಥಿಗಳಿಗೆ ಶಾಲಾ ವಿದ್ಯಾಭ್ಯಾಸದ ಮೊದಲ ನಾಲ್ಕೈದು ತಿಂಗಳುಗಳವರೆಗೆ ಅಕಾರ ಬಿಟ್ಟು ಬೇರೆ ಸ್ವರ ಕೂಡಿಸಿದ ಅಕ್ಷರಗಳ ಪರಿಚಯವೇ ಇಲ್ಲದೆ ಭಾಷೆಕಲಿಯಲು ತೊಡಗಬೇಕಾಗುತ್ತದೆ. ಅಕಾರ ಬಿಟ್ಟು ವ್ಯಂಜನ ಮತ್ತು ಸ್ವರ ಸೇರಿರದ ಅಕ್ಷರ ಜ್ಞಾನವಿಲ್ಲದೆ ಪದಗಳನ್ನಾಗಲೀ ಆಲೋಚನೆಗಳನ್ನಾಗಲೀ ಹೇಗೆ ವ್ಯಕ್ತಪಡಿಸಬಹುದು?

ಆರು ವರ್ಷದ ಒಂದು ಮಗುವಿಗೆ ಸ್ವಾಭಾವಿಕವಾಗಿ ಪ್ರಮುಖವೆನಿಸುವ ನಾನು, ಅಮ್ಮ, ಆಹಾರ, ಮನೆ, ಗೆಳೆಯರು, ಮರ, ಶಾಲೆ, ಸಹೋದರ, ಸಹೋದರಿ, ತಂದೆ, ಹಸು, ನಾಯಿ ಇಂತಹ ಪದಗಳನ್ನು ಇವು ಕಾಗುಣಿತಗಳನ್ನು ಹೊಂದಿವೆ ಅಥವಾ ಜೋಡಕ್ಷರಗಳನ್ನು ಅಥವಾ ಒತ್ತಕ್ಷರಗಳನ್ನು ಹೊಂದಿವೆ ಎಂದು ಪಠ್ಯಕ್ರಮದಿಂದ ತೆಗೆಯಲಾಗಿದೆ. ಈ ಕಾರಣದಿಂದಾಗಿ ಆನೆ ಎನ್ನುವ ಪದ ದೀರ್ಘವನ್ನು ಮತ್ತು ಎತ್ವ ವನ್ನು ಹೊಂದಿರುವುದರಿಂದ ಮಗುವಿಗೆ ಆ ಪದವನ್ನು ಹೇಳದೇ ಸಲಗ ಎನ್ನುವ ಪದದಲ್ಲಿ ಅನುಮತಿಸಿರುವ ಅಕ್ಷರಗಳ ಸಂಯೋಜನೆ ಇರುವುದರಿಂದ ಅದನ್ನೇ ಆಯ್ಕೆ ಮಾಡಿಕೊಂಡು ಬಳಸುವಂತೆ ಒತ್ತಾಯಿಸಲಾಗಿದೆ.

ಭಾಷೆಯನ್ನು ಕಲಿಯುವ ಪುಟಾಣಿ ಮಕ್ಕಳಿಗೆ ಲಿಖಿತ ಭಾಷೆಯನ್ನು ಕಲಿಯಲೇನೋ ಈ ರೀತಿಯ ಕಾಗುಣಿತ ರಹಿತ ಪದಗಳು ನೆರವಾಗುತ್ತವೆ. ಇದೇ ತಪ್ಪುಕಲ್ಪನೆಯನ್ನು ಮೌಖಿಕ ಕಲಿಕೆಗೆ ಅನ್ವಯಿಸಲಾಗದು. ಲಿಖಿತ ಭಾಷೆಯನ್ನು ಪರಿಚಯಿಸುವಾಗ ಮೌಖಿಕ ಕಲಿಕೆಗೆ ಅನ್ವಯಿಸುವ ತತ್ವಗಳ ಮುಂದುವರಿಕೆಯಾಗಿರಬೇಕು. ಮೌಖಿಕ ಮತ್ತು ಬರಹದ ಭಾಷೆಯ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಎಳೆಯ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು – ಉದಾಹರಣೆಗೆ, ನಾವು ಯಾವಾಗಲೂ ತುಂಡುವಾಕ್ಯಗಳನ್ನು ಬಳಸಿ ಮಾತನಾಡುತ್ತೇವೆ. ಆದರೆ ನಾವು ಸಂಪೂರ್ಣ ವಾಕ್ಯಗಳನ್ನು ಬಳಸಿ ಬರೆಯುತ್ತೇವೆ. ಈ ಸಂದರ್ಭದಲ್ಲಿ ನಮ್ಮ ಭಾಷೆಯ ಔಪಚಾರಿಕತೆಯೂ ಬದಲಾಗುತ್ತದೆ. ಮಕ್ಕಳು ಗಟ್ಟಿಯಾಗಿ ಓದುವಂತಹ ಸಂದರ್ಭಗಳಲ್ಲಿ, ಒಟ್ಟಾಗಿ ಬರೆಯುವಂತಹ ಸನ್ನಿವೇಶಗಳಲ್ಲಿ ಇದನ್ನು ಅವರಿಗೆ ಸ್ಪಷ್ಟವಾಗಿ ತಿಳಿಸಬೇಕು ಮತ್ತು ಅದನ್ನು ಅವರೊಂದಿಗೆ ಚರ್ಚಿಸಬೇಕು. 1970ರಲ್ಲಿ ಮೇರಿ ಕ್ಲೇ, ಪುಸ್ತಕವನ್ನು ಹೇಗೆ ಹಿಡಿದುಕೊಳ್ಳಬೇಕು, ಯಾವ ದಿಕ್ಕಿನಲ್ಲಿ ಮುದ್ರಿತ ಲಿಪಿಯನ್ನು ಓದಬೇಕು ಮುದ್ರಣವು ಹೊಂದಿರುವ ಸಂದೇಶ ಏನು (ಪುಟ್ಟ ಮಕ್ಕಳು ಚಿತ್ರಗಳನ್ನು

ನೋಡುವುದೇ ಜಾಸ್ತಿ) ಎಂದು "ಮುದ್ರಣ ಪರಿಕಲ್ಪನೆ"ಯನ್ನು ಭಾಷೆ ಕಲಿಯುತ್ತಿರುವ ಪುಟ್ಟ ವಿದ್ಯಾರ್ಥಿಗಳಿಗೆ ತಿಳಿಸುವ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾರೆ.

ಲಿಪಿಯನ್ನು ವ್ಯವಸ್ಥಿತವಾಗಿ ಪರಿಚಯಿಸಬೇಕು ಮತ್ತು ಅಭ್ಯಸಿಸಬೇಕು. ಆದರೆ, ಭಾಷೆ ಹೇಳಿಕೊಡುವ ತರಗತಿಗಳಲ್ಲಿ ಪಾಠ ಮಾಡುವ ಒಟ್ಟು ಸಮಯದಲ್ಲಿ ಇದಕ್ಕೆ ಒಂದಿಷ್ಟು ಸಮಯವನ್ನು ಮಾತ್ರ ಬಳಸಿ ಅದೇ ಪುಟ್ಟ ಮಕ್ಕಳ ಭಾಷೆ ಮತ್ತು ಅಕ್ಷರ ಕಲಿಕೆಯ ಪಠ್ಯಕ್ರಮದಲ್ಲಿ ಪ್ರಾಮುಖ್ಯತೆಯನ್ನು ಪಡೆಯಬಾರದು. ಒಂದು ಮತ್ತು ಎರಡನೆಯ ತರಗತಿಗಳಲ್ಲಿ ಭಾಷಾ ಬೋಧನೆಯ ಬಹಳಷ್ಟು ಸಮಯದಲ್ಲಿ ಶೇಕಡಾ 73–81ರಷ್ಟು ಕೆಳ ಕ್ರಮಾಂಕದ ಡಿಕೋಡಿಂಗ್ ಮತ್ತು ಕಾಪಿ ರೈಟಿಂಗ್‌ಗೆ ಬಳಸಲಾಗುತ್ತದೆ ಎಂದು ನಮ್ಮ ಸಂಶೋಧನೆಯಲ್ಲಿ ದಾಖಲಿಸಿದ್ದೇವೆ.

## ನಿರ್ಣಯ

ಈ ಲೇಖನದಲ್ಲಿ, ಮಕ್ಕಳು ಮನೆಯ ವಾತಾವರಣದಿಂದ ಶಾಲಾ ವಾತಾವರಣಕ್ಕೆ ವರ್ಗಾವಣೆಯಾಗುವ ಸಮಯದಲ್ಲಿ ಮಾಡಬೇಕಾದ ಮೂರು ಪ್ರಮುಖ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಚಿತ್ರಿಸಲು ಪ್ರಯತ್ನಿಸಿದ್ದೇನೆ ಮತ್ತು ಈ ಕಾರ್ಯಗಳಲ್ಲಿ ಮಕ್ಕಳು ಯಶಸ್ವಿಯಾಗುವಂತೆ ಸಹಾಯ ಮಾಡಲು ಕೆಲವೊಂದು ಬೋಧನಾ ತತ್ವಗಳನ್ನು ಗುರುತಿಸಿದ್ದೇನೆ. ಈ ತತ್ವಗಳು ನಿದರ್ಶನಾತ್ಮಕವೇ ಹೊರತು ಭಾಷೆ ಮತ್ತು ಅಕ್ಷರ ಕಲಿಕೆಯ ಉತ್ತಮ ಬೋಧನೆಗೆ ಇದೇ ಉತ್ತಮ ಮಾರ್ಗಎಂದೇನಿಲ್ಲ. ನಮ್ಮ ಸಂಶೋಧನಾ ಯೋಜನೆಯ ಸಮಯದಲ್ಲಿ ನಾವು ಕ್ಷೇತ್ರದಲ್ಲಿ ಕಂಡುಕೊಂಡ ಸಮಸ್ಯೆಗಳ ಬಗ್ಗೆ ಕೆಲವು ಒಳನೋಟವನ್ನು ವಿವರಿಸಲು ಪ್ರಯತ್ನಿಸಿದ್ದೇನೆ. ಸಮಸ್ಯೆಗಳು ಸಂಕೀರ್ಣವಾಗಿವೆ ಮತ್ತು ಇದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಹೆಚ್ಚಿನ ಸಮಯ, ಚಿಂತನೆ ಮತ್ತು ಸಂಶೋಧನೆಯನ್ನು ಮೀಸಲಿಡಬೇಕಾಗುತ್ತದೆ. ವಿದ್ಯಾರ್ಥಿಗೆ ಸೂಕ್ತವಾಗಿ ಪಠ್ಯಕ್ರಮವನ್ನು ರಚಿಸುವುದು ಮತ್ತು ಪಠ್ಯಕ್ರಮದೊಂದಿಗೆ ವಿದ್ಯಾರ್ಥಿ ಹೊಂದಿಕೊಂಡು ಕಲಿಯುವಂತೆ ಮಾಡುವುದು. ಇದೇ ಎಳೆಯ ವಯಸ್ಸಿನಲ್ಲಿ ಮಕ್ಕಳ ಭಾಷಾ ಕಲಿಕೆಗೆ ಜೀವ ಜೀವಾಳ.




**References**


1. Ashton-Warner, S. (1963/1986). Teacher. NT: Simon and Schuster.
2. Clay, M. M. (2000). Concepts about print: What have children learned about the way we print language? Birkenhead, Auckland, New
3. Zealand: Heinemann.
4. Friere, P. &Macdeo, D. (1987). Literacy: Reading the Word and Reading the World. Santa Barbara, CA: Praeger.
5. Gee, J. P. (2003). What video games have to teach us about learning and literacy.NewYork: Macmillan.
6. Heath, S. B. (1982). What no bedtime story means: Narrative skills at home and school. Language in Society, 11, 49-76.
7. Purcell-Gates, V. (1997).Other People's Words: The Cycle of Low Literacy.NY: Harvard University Press.


**ಶೈಲಜಾ** ಅವರು ಪ್ರಸ್ತುತ ಬೆಂಗಳೂರಿನಲ್ಲಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿರುವ ಶೈಕ್ಷಣಿಕ ಶಾಲೆಯಲ್ಲಿ ಭಾಷೆ ಮತ್ತು ಸಾಕ್ಷರತೆಯ ವಿಷಯದಲ್ಲಿ ಬೋಧಕರಾಗಿದ್ದಾರೆ. ಇವರು ಭಾಷೆ, ಸಾಕ್ಷರತೆ ಮತ್ತು ಸಂಸ್ಕೃತಿಯಲ್ಲಿ ಮಿಚಿಗನ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಮತ್ತು ಮಾನವ ವಿಕಾಸ ಹಾಗು ಮನಃಶಾಸ್ತ್ರದಲ್ಲಿ ಪದವಿಯನ್ನು ಬರೋಡಾದ ಎಂಎಸ್‌ಯು ಮತ್ತು ದೆಹಲಿ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ಶೈಲಜಾರವರು ಯುಎಸ್ ಮತ್ತು ಭಾರತದ ಅನೇಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಾರ್ಯವೆಸಗಿದ್ದಾರೆ. ಇವರಿಗೆ ಭಾಷೆ, ಶಿಕ್ಷಕರು, ಪ್ರಶಿಕ್ಷಕರು ಮತ್ತು ಮಕ್ಕಳ ಸಾಹಿತ್ಯ ಹಾಗೂ ಸಾಕ್ಷರತೆಯ ಬಗ್ಗೆ ವಿಶಿಷ್ಟವಾದ ಒಲವಿದೆ ಮತ್ತು ಇದನ್ನು ಉತ್ತೇಜಿಸುವ ಅನೇಕ ಉಪಕ್ರಮಗಳಲ್ಲಿ ಇವರು ತೊಡಗಿಕೊಂಡಿದ್ದಾರೆ. ಪ್ರಸ್ತುತ ಇವರು ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಲಂಬಾಂತರವಾಗಿ ನಡೆಯುತ್ತಿರುವ ಪೂರ್ವ ಸಾಕ್ಷರತೆಯ ಯೋಜನೆಯಲ್ಲಿ ಮುಖ್ಯ ತನಿಖಾಧಿಕಾರಿಯಾಗಿದ್ದಾರೆ. ಇವರನ್ನು shailaja.menon@apu.edu.in ಇಲ್ಲಿ ಸಂಪರ್ಕಿಸಬಹುದು.



# ಓದುವ ಕೌಶಲ್ಯವನ್ನು ಪುಟ್ಟ ಮಕ್ಕಳಿಗೆ ಹೇಳಿಕೊಡುವುದು

ರಿಯಾ ಬ್ಯಾಜಿಲಿ

**ಪೀಠಿಕೆ**

ಓದುವುದನ್ನು ಕಲಿಯುವ ವಿಧಾನಗಳ ಬಗ್ಗೆ ನಡೆಸಿರುವ ಅನೇಕ ಅಧ್ಯಯನಗಳು ಲಭ್ಯವಿವೆ ಮತ್ತು ಇದಕ್ಕಾಗಿಯೇ ಅನೇಕ ಪುಸ್ತಕಗಳು ಪ್ರಕಟಿಸಲ್ಪಟ್ಟಿವೆ. ಅನೇಕರು ಮಕ್ಕಳನ್ನು ಯಶಸ್ವೀ ಓದುಗರನ್ನಾಗಿ ತಯಾರು ಮಾಡುವುದರಲ್ಲಿ ಅದನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದೋ ತಿಳಿಯದೆಯೋ ತೊಡಗಿಸಿಕೊಂಡಿದ್ದಾರೆ. ಹೀಗಿರುವಾಗ, ಇಂಥ ಪುಸ್ತಕಗಳಲ್ಲಿ ಬಳಸಿರುವ ಭಾಷೆಯು ಕೇವಲ ವಿದ್ಯಾರಂಭದ ಪರಿಣಿತ ವೃತ್ತಿಪರರಿಗೆ ಮಾತ್ರ ಅರ್ಥವಾಗುವಂತಿವೆ.

ನನ್ನ ಶಿಕ್ಷಕ ವೃತ್ತಿಯ ಒಂದು ಹಂತದಲ್ಲಿ ನನ್ನ ಶಾಲೆಯಲ್ಲಿ ಪ್ರಾಥಮಿಕ ಮಟ್ಟದ ಶಿಕ್ಷಣದ ಜವಾಬ್ದಾರಿಯನ್ನು ಹೊಂದಿದ್ದೆ ಮತ್ತು ಒಂದನೇ ತರಗತಿಗೆ ಪಾಠ ಮಾಡುತ್ತಿದ್ದೆ. ಈ ಸಮಯದಲ್ಲಿ ನಾನು ಮುಖ್ಯ ಶಿಕ್ಷಕರ ಅಧೀನ ಮುಖ್ಯಶಿಕ್ಷಕಿ ಆಗಿದ್ದೆ. ಮುಖ್ಯ ಶಿಕ್ಷಕರಿಗೆ ಪುಟ್ಟ ಮಕ್ಕಳಿಗೆ ಪಾಠ ಮಾಡುವ ಅನುಭವವಿರಲಿಲ್ಲ. ಸ್ವಲ್ಪ ಸಮಯದ ಅನಂತರ ನಾವು ಈ ಬಗ್ಗೆ ಜೊತೆಯಾಗಿ ಕೆಲಸ ಮಾಡಲು ಆರಂಭಿಸಿದೆವು. ನನಗೆ ನೆನಪಿರುವಂತೆ ಅವರು "ಅಲ್ಲಾ! ಮಕ್ಕಳು ಓದುವುದನ್ನು ಹೇಗೆ ಕಲಿತುಕೊಳ್ಳುತ್ತಾರೆ?" ಎಂದು ನನ್ನನ್ನು ಕೇಳಿದರು. ನಾನು ಅದನ್ನು ಅವರಿಗೆ ಚೆನ್ನಾಗಿಯೇ ವಿವರಿಸಿದೆ. ಎಲ್ಲಾ ಕೇಳಿಯಾದ ಮೇಲೆ ಅವರು "ನೀವು ಹೇಳಿದ್ದನ್ನು ತಂದೆ ತಾಯಿಗಳು ಕೇಳಿದರೆ ಅವರಿಗೆ ಬಹಳ ಉಪಯುಕ್ತವಾಗುತ್ತದೆ." ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅದರ ಫಲವಾಗಿ ನಾವು, ಆಗ ತಾನೇ ಶಾಲೆಗೆ ಬರಲಾರಂಭಿಸಿದ ಮಕ್ಕಳ ತಂದೆತಾಯಿಯರನ್ನೇ ಗಮನದಲ್ಲಿರಿಸಿಕೊಂಡು ವಾರ್ಷಿಕ 'ಓದುವ ಸಭೆಯನ್ನು' ನಡೆಸಲು ಆರಂಭಿಸಿದೆವು. ವರ್ಷಗಳು ಕಳೆದಂತೆ ಈ ಸಭೆಯಲ್ಲಿ ಹೊಸದಾಗಿ ಶಾಲೆಗೆ ಸೇರಿದ ಪ್ರಾಥಮಿಕ ತರಗತಿಗಳಲ್ಲಿನ ಮಕ್ಕಳ ತಂದೆತಾಯಿಗಳಲ್ಲದೇ ಮೇಲಿನ ತರಗತಿಗಳ ಮಕ್ಕಳ ತಂದೆತಾಯಿಗಳು ಭಾಗವಹಿಸಲು ಇಚ್ಛಿಸಿದ್ದರಿಂದ ಪ್ರಸ್ತುತಪಡಿಸುವ ವಿಷಯವಸ್ತುವನ್ನು ಸ್ವಲ್ಪ ಬದಲಾವಣೆ ಮಾಡಿದೆನು. ನಾವು ಪಡೆದ ಪ್ರತಿಕ್ರಿಯೆ ಅತ್ಯಂತ ಉತ್ತೇಜನಕಾರಿಯಾಗಿತ್ತು. ಪ್ರತಿ ವರ್ಷವೂ ಹೆಚ್ಚಿನ ಸಂಖ್ಯೆಯಲ್ಲಿ ತಂದೆತಾಯಿಗಳು ಸಭೆಗೆ ಬರಲಾರಂಭಿಸಿದರು. ಮಕ್ಕಳು ಓದುವುದನ್ನು ಆರಂಭಿಸಲು ತಾವು ಹೇಗೆ ಸಹಾಯ ಮಾಡಬಹುದು ಮತ್ತು ಅವರು ಸ್ವತಂತ್ರ ಓದುಗರಾಗುವಂತೆ ಹೇಗೆ ಉತ್ತೇಜಿಸಬಹುದು ಎಂಬ ಬಗ್ಗೆ ಅವರಿಗೆ ಸ್ಪಷ್ಟವಾದ ಕಲ್ಪನೆಯನ್ನು ಕೊಡುವುದರಿಂದ ಅವರಿಗೆ ಈ ಸಭೆಯು ಆಸಕ್ತಿಕರವಾಗಿ ಕಂಡಿತು ಮತ್ತು ಅರ್ಥಮಾಡಿಕೊಳ್ಳಲು ಸುಲಭ ಮತ್ತು ಪ್ರೇರಣಾದಾಯಕವೆನಿಸಿತು.

ಹುಟ್ಟಿದಾಗಿನಿಂದ ಸ್ವತಂತ್ರ ಓದುವಿಕೆಯವರೆಗೆ ಓದುವ ಕೌಶಲ್ಯದ ವಿಕಾಸದ ಬಗ್ಗೆ ಈ ಮುಂದಿರುವ ಸಲಹೆಗಳೆಲ್ಲವೂ ಮೇಲೆ ಹೇಳಿದ ಓದುವ ಸಭೆಯ ವಿಷಯವಸ್ತುಗಳ ಸಂಕಲನವಾಗಿದೆ. ಮಕ್ಕಳನ್ನು ಓದಲು ತಯಾರು ಮಾಡುತ್ತಿರುವಂತಹ ಪಾಲಕರು, ಕುಟುಂಬದ ಸದಸ್ಯರು, ಶಿಶುವಿಹಾರದ ಸಿಬ್ಬಂದಿ, ಸಹಾಯಕ ಶಿಕ್ಷಕರು ಮತ್ತು ಶಿಕ್ಷಕರೆಲ್ಲರಿಗೂ ಅರ್ಥಮಾಡಿಕೊಳ್ಳಲು ಸುಲಭವಾಗುವಂತೆ ತಾರ್ಕಿಕವಾಗಿ ಮತ್ತು ಉಪಯುಕ್ತವಾಗುವ ರೀತಿಯಲ್ಲಿ ಬರೆಯಲ್ಪಟ್ಟಿದೆ ಎಂದು ನಂಬುತ್ತೇನೆ.

*ಓದುವ ಕೌಶಲ್ಯದ ಅಗತ್ಯತೆಯನ್ನು ಮನವರಿಕೆ ಮಾಡುವುದು (ಓದುವುದಕ್ಕೆ ಬೇಕಾದ ಕೌಶಲ್ಯಗಳು)*


**ಆರಂಭಿಕ ಭಾಷಾ ಕೌಶಲ್ಯಗಳು**

ಹುಟ್ಟಿದ ಮಗುವಿಗೆ ಪ್ರೀತಿ, ಪೋಷಣೆ, ಪ್ರೀತಿಯಿಂದ ಪಾಲಿಸಲ್ಪಡುವ ಮತ್ತು ಸುರಕ್ಷಿತ ಭಾವನೆಗಳು ಅವಶ್ಯವಾಗಿರುತ್ತವೆ. ಪ್ರಪಂಚದಲ್ಲಿ ಎಲ್ಲಿಯೇ ಇದ್ದರೂ ಎಷ್ಟೇ ಕಷ್ಟದಲ್ಲಿದ್ದರೂ ಶಿಶುಗಳ ಮತ್ತು ಸಣ್ಣ ಮಕ್ಕಳ ಪಾಲನೆಯಲ್ಲಿ ತೊಡಗಿರುವವರು ಈ ಎಲ್ಲವನ್ನೂ ಅವರಿಗೆ ಒದಗಿಸಲು ಪ್ರಯತ್ನಿಸುತ್ತಾರೆ.

ತಮ್ಮ ಮಕ್ಕಳೊಂದಿಗೆ ಮೃದುವಾಗಿ ಕಣ್ಣಿಗೆ ಕಣ್ಣಿಟ್ಟು ಅಕ್ಕರೆಯಿಂದ ಮಾತನಾಡುವ ಕುಟುಂಬಗಳು ಮತ್ತು ಸಂತೋಷದ ಭಾವಗಳು ಶಿಶುವಿಗೆ ಸಂಭಾಷಣೆಯು ಆನಂದದಾಯಕವಾದುದು ಮತ್ತು ತನ್ನ ಸುತ್ತಲಿನ ಪ್ರಪಂಚದೊಂದಿಗೆ ಸಂವಹನ ನಡೆಸಲಿರುವ ಉಪಯುಕ್ತ ಸಾಧನ ಎಂಬುದನ್ನು ಕಲಿಸುತ್ತವೆ.

ಮಗು ತನ್ನ ಪ್ರೀತಿಪಾತ್ರರೊಂದಿಗೆ ಸಂಪರ್ಕ ಸಾಧಿಸಲು, ಸಂಬಂಧ ಹೊಂದಲು ಇವು ಅತ್ಯಂತ ಪ್ರಮುಖವಾದ ವಿಷಯಗಳು. ಸೂಕ್ತವಾದ ಭಾಷೆಯನ್ನು ಬಳಸಿ ಮಾತುಕತೆ ನಡೆಸುವ ಸಾಮರ್ಥ್ಯವಿಲ್ಲದಿದ್ದರೆ ಓದುವುದು ಅಸಾಧ್ಯ ಮತ್ತು ಅರ್ಥರಹಿತ. ಪುಟ್ಟ ಮಕ್ಕಳಿಗೆ ಹಾಡುಗಳು, ಶಿಶುಗೀತೆಗಳು, ಹಾಡು ಹಾಡುವುದು ಅವರಲ್ಲಿ ಓದುವ ಕೌಶಲ್ಯದ ನಿರ್ಮಾಣಕ್ಕೆ ಸಹಾಯಕವಾಗುತ್ತವೆ. ರೂಢಿಯಿಂದ ಬಂದ ಶಿಶುಗೀತೆಗಳ ಸ್ವರೂಪವು ಮಕ್ಕಳಿಗೆ ಸಮಾನ ರೂಪದ ಶಬ್ದಗಳನ್ನು ಕೇಳಲು ಮತ್ತು ಗೀತೆಗಳನ್ನು ನೆನಪಿಟ್ಟುಕೊಳ್ಳಲು ಒಂದು ಉತ್ತಮ ಸಾಧನ ಮತ್ತು ಭವಿಷ್ಯದಲ್ಲಿ ಶಬ್ದಗಳ ಕಲಿಕೆಗೆ ನೆರವಾಗುವ ಶ್ರವಣ ಕೌಶಲ್ಯವನ್ನು ಬೆಳೆಸಲು ಸಹಾಯಕವಾಗುತ್ತದೆ. ನನ್ನ ಅನುಭವದ ಪ್ರಕಾರ, ಶಿಶುಗೀತೆಗಳನ್ನು ಕಲಿತು ಶಾಲೆಗೆ ಬರುವ ಮಕ್ಕಳು ಅದನ್ನು ತಿಳಿಯದ ಮಕ್ಕಳಿಗಿಂತ ಶೀಘ್ರವಾಗಿ ಓದಲು ಕಲಿಯುತ್ತಾರೆ.

ಬಾಲ್ಯದ ಮತ್ತೊಂದು ಮಹತ್ವದ ಅಂಗ ಆಟ. ಮಕ್ಕಳು ಪರಸ್ಪರ ಮಾತನಾಡಲು, ಕಾಲ್ಪನಿಕ ಆಟಗಳಲ್ಲಿ ತೊಡಗಿಕೊಂಡಿರಲು ಮತ್ತು ಪಾತ್ರಾಭಿನಯವನ್ನು ಮಾಡಲು ಆಟವು ಒಂದು ಮಾರ್ಗವಾಗಿದೆ. ಈ ಸಂದರ್ಭಗಳಲ್ಲಿ ಆಗುವ ಭಾಷಾ ಬೆಳವಣಿಗೆಯು ಸಂಭಾಷಣೆಯ ಅನುಭವವನ್ನು ಬೆಳೆಸುತ್ತದೆ.



ಎಲ್ಲಾ ಪುಟ್ಟ ಮಕ್ಕಳು ಬಣ್ಣ-ಬಣ್ಣದ ಚಿತ್ರಗಳನ್ನು ಇಷ್ಟಪಡುತ್ತಾರೆ. ವರ್ಣ ಚಿತ್ರದಿಂದ ಮಂತ್ರಮುಗ್ಧವಾಗಿರುವ ಮಗುವಿನ ಜೊತೆಗಿರುವ ಅವಕಾಶಕ್ಕಿಂತ ದೊಡ್ಡ ಉಡುಗೊರೆ ಹಿರಿಯರಿಗೆ ಮತ್ತೊಂದಿಲ್ಲ. ಮಗುವು ಮಾತನಾಡಲು ಆರಂಭಿಸುವ ಮೊದಲೇ ಚಿತ್ರದ ಭಾಗಗಳನ್ನು ತೋರಿಸುತ್ತಾ ಶಬ್ದಗಳನ್ನು ಪುನರಾವರ್ತಿಸುತ್ತಾ ಹಿರಿಯರು ಚಿತ್ರದ ವಿವರಗಳ ಬಗ್ಗೆ ಮಾತನಾಡಲು ಮತ್ತು ಮಗುವು ಅದನ್ನು ಅನುಸರಿಸಲು ಸಾಧ್ಯವಾಗುತ್ತದೆ. ಚಿತ್ರಗಳ ಅರ್ಥವಿವರಣೆಯು ಆರಂಭಿಕ ಓದಿಗೆ ಸುಳಿವು ನೀಡುವಲ್ಲಿ ಮಹತ್ವದ ಪಾತ್ರವಹಿಸುತ್ತದೆ.

ಮಕ್ಕಳು ಇನ್ನೂ ಸಣ್ಣವರಿದ್ದಾಗ ಕಥೆಗಳು ಓದುವಿಕೆಯ ಪೂರ್ವ ಅನುಭವದ ಅತಿ ಅಗತ್ಯವಾದ ಅಂಗವಾಗಿರುತ್ತದೆ. ತಮ್ಮ ಮನೆಗಳಲ್ಲಿಯೇ ಪುಸ್ತಕಗಳ ಅನುಭವವನ್ನು ಪಡೆಯುವ ಮಕ್ಕಳು ಚಿತ್ರಗಳು ಮತ್ತು ಅಕ್ಷರಗಳು ಒಟ್ಟಾಗಿ ಹೇಗೆ ಕಥೆ ಹೇಳುತ್ತವೆ ಎಂಬುದನ್ನು ಕಲಿಯುತ್ತಾರೆ. ಕಥೆಗಳು ವಿನೋದಪೂರ್ಣವಾಗಿರುವುದರಿಂದ ಅವರು ಏಕಾಗ್ರತೆಯನ್ನು ಬೆಳೆಸಿಕೊಳ್ಳುವುದಲ್ಲದೇ ಆಲಿಸುವುದು ಹೇಗೆ ಎಂಬುದನ್ನು ಕಲಿಯುತ್ತಾರೆ. ಹಾಗೂ ಮಕ್ಕಳು ವಿನೋದವನ್ನು ಇಷ್ಟಪಡುತ್ತಾರೆ. ಅವರು ಮುಂದೇನಾಗುತ್ತದೆ ಎಂದು ಊಹೆ ಮಾಡುವುದನ್ನು ಕಲಿಯುತ್ತಾರೆ ಮತ್ತು ಕ್ರಮಾನುಗತಿ ಹಾಗೂ ಪುನರಾವೃತ್ತಿಯನ್ನು ತಿಳಿಯುತ್ತಾರೆ.

ಅಪರೂಪಕ್ಕೆ ಒಮ್ಮೆ ಸವಾಲನ್ನು ಒಡ್ಡುವಂತಹ ಪ್ರಾಥಮಿಕ ವಿದ್ಯಾರ್ಥಿಗಳ ಗುಂಪನ್ನು ಹೊಂದಿದ್ದೆ. ಈ ಮಕ್ಕಳು ಕಥೆಗಳ ಬಗ್ಗೆ ತಿಳಿಯದೇ ಮತ್ತು ಆಲಿಸುವುದು ಹೇಗೆ ಎಂಬುದನ್ನು ಅರಿಯದೇ ಶಾಲೆಗೆ ಬಂದಿದ್ದರಿಂದ ಇದು ಉಂಟಾಗಿತ್ತು. ಆಗ ಮಕ್ಕಳೊಂದಿಗೆ ದೃಷ್ಟಿ ಸಂಪರ್ಕ ಸಾಧಿಸಲು ಪುಸ್ತಕವಿಲ್ಲದೇ ಅಥವಾ ಕೇವಲ ಚಿತ್ರಗಳನ್ನು ಬಳಸಿ ಕಥೆ ಹೇಳಬೇಕಾಗಿ ಬಂತು. ಹೆಚ್ಚಿನ ಭಾವಾಭಿವ್ಯಕ್ತಿ, ತಮಾಷೆ ಮುಖಭಂಗಿಗಳು ಮತ್ತು ಹಾಡುಗಳು ಅವರ ಆಸಕ್ತಿಯನ್ನು ಹೆಚ್ಚಿಸಿದವು ಮತ್ತು ಏಕಾಗ್ರತೆಯ ಕೌಶಲ್ಯವನ್ನು ಬೆಳೆಸುವಲ್ಲಿ ಸಹಾಯ ಮಾಡಿದವು.

## ವಿನೋದದ ಪ್ರಾಮುಖ್ಯತೆ

ಓದುವಿಕೆಯ ಪೂರ್ವದ ಎಲ್ಲಾ ಚಟುವಟಿಕೆಗಳು ಮಕ್ಕಳಿಗೆ ವಿನೋದಕರವಾಗಿರಬೇಕು. ನಾವು ಮಕ್ಕಳಿಗೆ ಒದಗಿಸುವ ಬಾಯಿಮಾತಿನ ಹಾಗೂ ಪ್ರಾಯೋಗಿಕ ಅನುಭವಗಳಿಗೆ ಸಂಬಂಧಿಸಿದ ಎಲ್ಲಾ ರೀತಿಯ ಆನಂದವು ಮಕ್ಕಳಿಗೆ ಓದುವ ಕೌಶಲ್ಯವನ್ನು ಚೆನ್ನಾಗಿ ಮೈಗೂಡಿಸುತ್ತದೆ. ಮಕ್ಕಳು ಸದಾ ನಗುನಗುತ್ತಾ ಇರುತ್ತಾರೆ. ಅವರು ಓದಿನ ಪೂರ್ವದ ಯಾವುದೇ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾಗ ನಗುತ್ತಿದ್ದರೆ ನಾವು ಸಂತೋಷಪಡಬೇಕು. ನೀವು ವಿನೋದವನ್ನು ಹೆಚ್ಚಾಗಿ ಬಳಸಿದಲ್ಲಿ ಕಲಿಕೆಯು ಅಷ್ಟೇ ಉತ್ತಮವಾಗುತ್ತದೆ ಎಂದು ನಾನು ಹೇಳುತ್ತೇನೆ.

## ಬೆಳವಣಿಗೆ ಸಮಸ್ಯೆಗಳ ಬಗ್ಗೆ ಅರಿತಿರುವುದು

ಎಲ್ಲಾ ತಂದೆತಾಯಿಯರು ಅಥವಾ ಶಿಕ್ಷಕರು ಮಕ್ಕಳು ಭಾವನಾತ್ಮಕವಾಗಿ ಹಾಗೂ ದೈಹಿಕವಾಗಿ ವಿಭಿನ್ನ ಗತಿಯಲ್ಲಿ ಬೆಳೆಯುತ್ತಾರೆ ಎಂಬುದನ್ನು ತಿಳಿದಿರುತ್ತಾರೆ. ನನ್ನ ಅನುಭವದಂತೆ ಒಟ್ಟಾರೆ ಹೇಳಬಹುದಾದ ಮಾತೆಂದರೆ ಬಾಲಕಿಯರು ಬಾಲಕರಿಗಿಂತ ಮೊದಲೇ ಚಿಕ್ಕ ವಯಸ್ಸಿನಲ್ಲಿಯೇ ಓದಲು ತಯಾರಾಗುತ್ತಾರೆ. ಎಲ್ಲದ್ದಕ್ಕೂ ಒಂದು ಅಪವಾದ ಇದ್ದೇ ಇರುತ್ತದೆ. ಭಾವನಾತ್ಮಕ ಮತ್ತು ದೈಹಿಕ ಬೆಳವಣಿಗೆಯ ವ್ಯತ್ಯಾಸವು ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳಲ್ಲಿ ಆರು ತಿಂಗಳು ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಿರಬಹುದು. ಎಚ್ಚರಿಕೆಯ ಮಾತೊಂದನ್ನು ಇಲ್ಲಿ

ಸೇರಿಸಲೇಬೇಕು. ಸಿದ್ಧವಾಗುವ ಮೊದಲೇ ಮಗುವನ್ನು ಸಾಂಪ್ರದಾಯಿಕ ಓದುವಿಕೆಯ ಪರಿಸ್ಥಿತಿಗೆ ತಳ್ಳಿದರೆ ಅದು ಯಶಸ್ಸಿನ ಸಂತೋಷವನ್ನು ಅನುಭವಿಸಲಾರದು. ಅಲ್ಲಿ ಮಗುವು ಈ ಮಹತ್ವದ ಕೌಶಲ್ಯಗಳನ್ನು ಕಲಿಯುವಲ್ಲಿ ವಿಫಲತೆ ಹಾಗೂ ಹತಾಶೆಯನ್ನು ಹೊಂದುವ ಅಪಾಯವಿದೆ. ಓದಿನ ಮೊದಲ ಚಟುವಟಿಕೆಗಳನ್ನು ಕೆಲವು ಮಕ್ಕಳಿಗೆ ಇತರ ಮಕ್ಕಳಿಗಿಂತ ಹೆಚ್ಚು ಕಾಲ ಮುಂದುವರೆಸಬೇಕಾಗುತ್ತದೆ. ಇದರಿಂದ ದೊರಕುವ ಕಲಿಕೆಯ ದೀರ್ಘಕಾಲದ ಪ್ರಯೋಜನಗಳೂ ಹೆಚ್ಚಾಗಿಯೇ ಇರುತ್ತವೆ.

ಇಲ್ಲಿ ನಾನು ನನ್ನ ಒಬ್ಬ ವಿದ್ಯಾರ್ಥಿಯ ಉದಾಹರಣೆಯನ್ನು ಹೇಳಬಯಸುತ್ತೇನೆ. ಅವನು ನನ್ನ ಆರಂಭದ ತರಗತಿಗೆ ಬಂದಾಗ ತುಂಬಾ ಚಿಕ್ಕವನಾಗಿದ್ದ (ಕೇವಲ 4 ವರ್ಷ ವಯಸ್ಸಿನವನು) ಪುಟ್ಟದಾಗಿದ್ದ, ಎಳಸಾಗಿದ್ದ ಮತ್ತು ಮುದ್ದಾದ ಲಕ್ಷಣದ ಚಿಕ್ಕ ಹುಡುಗನಾಗಿದ್ದ. ಅವನಿಗೆ ಜೋಡಿಸುವ ಸಾಮಾಗ್ರಿಗಳ ಜೊತೆ ಆಟವಾಡುವುದು ಮತ್ತು ನಾಟಕ ಮಂದಿರದಲ್ಲಿ ಪೋಷಾಕು ಧರಿಸಿಕೊಂಡು ಪಾತ್ರ ಮಾಡುವುದು ಇಷ್ಟವಾಗಿತ್ತು. ಶಾಲೆಯಲ್ಲಿ ಸಂಪೂರ್ಣ ಮೊದಲ ವರ್ಷದ ಅವನ ಕಲಿಕೆಯು ಓದುವಿಕೆಯ ಪೂರ್ವ ಸಿದ್ಧತೆಯನ್ನು ಆಧರಿಸಿದ್ದಾಗಿತ್ತು. ಮೊದಲ ವರ್ಷದಲ್ಲಿ ಅವನು ಸಂತೋಷವಾಗಿದ್ದ ಮತ್ತು ಆತ್ಮವಿಶ್ವಾಸ ಪಡೆದುಕೊಂಡ. ಮುಂದಿನ ವರ್ಷ ಅವನು ಶಾಲೆಗೆ ಮರಳಿದಾಗ ಓದಲು ತಯಾರಾಗಿದ್ದ ಮತ್ತು ನೇರವಾಗಿ ಬಹಳ ಉತ್ತಮ ಆರಂಭವನ್ನು ಮಾಡಿದ. ಅವನು ಪ್ರಾಥಮಿಕ ಶಿಕ್ಷಣ ಮುಗಿಸುವಷ್ಟರಲ್ಲಿ ಉತ್ತಮ ಮನೋವೃತ್ತಿಯೊಂದಿಗೆ ಕೆಲಸ ಮಾಡಬಲ್ಲ ಒಳ್ಳೆಯ ವ್ಯಕ್ತಿಯಾಗಿ, ಸಾಧಾರಣ ಆತ್ಮವಿಶ್ವಾಸವುಳ್ಳ ವಿದ್ಯಾರ್ಥಿಯಾಗಿದ್ದ. ನಮ್ಮೊಂದಿಗಿನ ಅವನ ವಿದ್ಯಾಭ್ಯಾಸದ ಕೊನೆಯ ವರ್ಷದಲ್ಲಿ ನಮ್ಮದೇ ನಿರ್ಮಾಣದ ದೊಡ್ಡ ನಾಟಕವೊಂದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಪ್ರೌಢಶಾಲೆಯಲ್ಲೂ ಉತ್ತಮವಾದ ನಿರ್ವಹಣೆಯನ್ನು ತೋರಿದ ಮತ್ತು ಅತ್ಯಂತ ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರವೇಶವನ್ನು ಪಡೆದ. ಒಂದು ವೇಳೆ ಒಂದು ವರ್ಷ ಮೊದಲೇ ಅವನು ಸಾಂಪ್ರದಾಯಿಕ ಓದುವಿಕೆಗೆ ತಳ್ಳಲ್ಪಟ್ಟಿದ್ದರೆ ಅವನಿಗೆ ಎಲ್ಲ ವಿಚಾರಗಳೂ ಬೇರೆ ರೀತಿಯಾಗಿ ಪರಿಣಮಿಸುತ್ತಿದ್ದವು ಎಂದು ನಾನು ಅನೇಕ ಬಾರಿ ಆಲೋಚಿಸಿದ್ದೇನೆ.

## ದೈಹಿಕ ಬೆಳವಣಿಗೆ

ದೈಹಿಕ ಬೆಳವಣಿಗೆಯು ಕೈ – ಕಣ್ಣುಗಳ ಸಮನ್ವಯತೆಯೊಂದಿಗೆ ಸೇರಿಕೊಂಡಿದೆ ಮತ್ತು ಅದು ಪುಟ್ಟ ಮಕ್ಕಳ ವಿದ್ಯಾಭ್ಯಾಸದ ಆಂತರಿಕ ಭಾಗವಾಗಿದೆ. ಕೈ-ಕಣ್ಣುಗಳ ಉತ್ತಮವಾದ ಸಮನ್ವಯತೆ ಇಲ್ಲದೆ ಮಗುವು ಯಶಸ್ವಿಯಾಗಿ ಬರೆಯಲು ಸಾಧ್ಯವಾಗುವುದಿಲ್ಲ. ಆರಂಭಿಕ ಬರವಣಿಗೆಯ




ಚಟುವಟಿಕೆಗಳನ್ನು ಶಾಬ್ದಿಕ ಅಥವಾ ಫೋನಿಕ್ ಕಲಿಕೆ, ಕಾಗುಣಿತ ಮತ್ತು ಅಕ್ಷರದ ಉಚ್ಛಾರಣೆಯನ್ನು ಮನದಟ್ಟು ಮಾಡಿಸಲು ಬಳಸಬಹುದು.

ಎಲ್ಲಾ ಸಣ್ಣ ಮಕ್ಕಳು ದೈಹಿಕ ಚಟುವಟಿಕೆಗಳನ್ನು ಇಷ್ಟಪಡುತ್ತಾರೆ ಮತ್ತು ಸದಾ ತಮಗೆ ತಾವೇ ದೈಹಿಕ ಸವಾಲುಗಳನ್ನು ಒಡ್ಡಿಕೊಳ್ಳುತ್ತಿರುತ್ತಾರೆ. ಬಾಲ್ಯದಲ್ಲಿ ಮಕ್ಕಳು ದೈಹಿಕ ಕೌಶಲ್ಯಗಳನ್ನು ಪ್ರಯತ್ನಿಸುತ್ತಾ, ಅವುಗಳನ್ನು ಸರಿಪಡಿಸುತ್ತಾ, ಸ್ವಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದನ್ನು ಗಮನಿಸಬಹುದು. ಉದಾಹರಣೆಗೆ; ಮತ್ತೆ-ಮತ್ತೆ ಉರುಳುವುದು, ವಸ್ತುವು ಎಷ್ಟು ದೂರ ಹೋಗುತ್ತದೆ ಎಂದು ನೋಡಲು ಅವುಗಳನ್ನು ಎಸೆಯುವುದು. ಇಂತಹ ಅನೇಕ ಚಟುವಟಿಕೆಗಳನ್ನು ಸಹಜವಾಗಿ ಮಕ್ಕಳ ಅನಿಯಂತ್ರಿತ ಆಟದಲ್ಲಿ ಕಾಣಬಹುದು.

ಮಕ್ಕಳು ಶಾಲೆಯ ಪರಿಸರವನ್ನು ಪ್ರವೇಶಿಸಿದಾಗ ಅವರ ದೈಹಿಕ ಕೌಶಲ್ಯಗಳ ಬೆಳವಣಿಗೆಗಾಗಿ ಅವರು ದಿನದ ಗಣನೀಯ ಭಾಗದಲ್ಲಿ ಆಟವಾಡಲು ಸಾಧ್ಯವಾಗಬೇಕು. ಅವರು ತಮ್ಮ ಸಹಪಾಠಿಗಳೊಂದಿಗೆ ಗುಂಪಿನಲ್ಲಿ ದೈಹಿಕ ಚಟುವಟಿಕೆಗಳನ್ನು ಆನಂದಿಸತೊಡಗಿದಾಗ ವ್ಯವಸ್ಥಿತವಾದ ದೈಹಿಕ ಕಲಿಕೆಯು ವ್ಯಕ್ತವಾಗುತ್ತದೆ. ಇವುಗಳಲ್ಲಿ ಹೆಚ್ಚಿನವುಗಳು ಆಟದಲ್ಲಿ ಕಂಡುಬರುತ್ತವೆ. ಉದಾಹರಣೆಗೆ ನೇರವಾದ ಗೆರೆಯ ಮೇಲೆ ಅಥವಾ ರೇಖೆಯ ಮೇಲೆ ನಡೆಯಲು ಸಮತೋಲನ ಕಾಯ್ದುಕೊಳ್ಳುವುದು, ಎಲ್ಲಾ ರೀತಿಯ ಚೆಂಡಿನ ಆಟಗಳು, ಚಪ್ಪಾಳೆ ಆಟಗಳು, ಹಗ್ಗದ ಆಟ, ಈಜುವುದು ಮತ್ತು ಸೈಕಲ್ ಅಥವಾ ಸ್ಕೂಟರ್ ಸವಾರಿ ಮಾಡುವುದು ಮುಂತಾದವು.

## ರಚನಾತ್ಮಕ ಚಟುವಟಿಕೆಗಳು

ಮಕ್ಕಳು ಯಶಸ್ವಿಯಾಗಿ ಓದಲು ಕಲಿಯಬೇಕಾದರೆ ನೋಡುವ ಮತ್ತು ಆಕಾರಗಳನ್ನು ಜ್ಞಾಪಕಕ್ಕೆ ತಂದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಂಡಿರುವುದು ಅತ್ಯಗತ್ಯವಾಗಿರುತ್ತದೆ. ಪದಗಳು ನಿಜವಾಗಿಯೂ ಕೇವಲ ಕಾಗದದ ಮೇಲಿನ ವಿನ್ಯಾಸಗಳು. ಅವುಗಳಲ್ಲಿ ಅನೇಕವು ಎಲ್ಲಾ ಘಟಕಗಳ ಶಾಬ್ದಿಕ ಅರ್ಥವನ್ನು ತಿಳಿದುಕೊಳ್ಳುವುದರ

ಮೂಲಕ ಅನುವಾದಕ್ಕೆ ಒಳಪಡಿಸಬಲ್ಲಂತಹವು. ನಾನಾ ರೀತಿಯ ಜೋಡಣೆಯ ತಂತ್ರಗಳನ್ನು ಬಳಸಿ ಆಕಾರ ಮತ್ತು ಮಾದರಿಗಳನ್ನು ಮಾಡಲು ಕೊಡುವ ಅವಕಾಶವು ಸಣ್ಣ ಮಕ್ಕಳಲ್ಲಿ 2 ಮತ್ತು 3 ಆಯಾಮದ ಆಕಾರಗಳನ್ನು ನೋಡುವ ಸಾಮರ್ಥ್ಯವನ್ನು ಬಹಳವಾಗಿ ಹೆಚ್ಚಿಸುತ್ತದೆ. ವುಡನ್ ಬಿಲ್ಡಿಂಗ್ ಬ್ಲಾಕ್ಸ್ ಆಟದ ಸಾಮಗ್ರಿಗಳು ಮಕ್ಕಳಿಗೆ ಅಚ್ಚುಮೆಚ್ಚಿನವು ಮತ್ತು ಅದು ಮಗುವಿನ ಸಹಾಯದಿಂದ ಅದ್ಭುತವಾದ ವಿನ್ಯಾಸವಾಗಿ ರೂಪಾಂತರ ಹೊಂದುವಂತಹವು. ಅವುಗಳಿಂದ ಉಗಿಬಂಡಿ, ಸೇತುವೆ, ಕೋಟೆ, ಅರಮನೆ, ಟ್ರ್ಯಾಕ್ಟರ್, ಕಾರ್, ಮನೆ, ಮಂಚ ... ಹೀಗೆ ಏನನ್ನಾದರೂ ವಿನ್ಯಾಸಗೊಳಿಸಬಹುದಾದ, ಕೊನೆಯಿಲ್ಲದ ಪಟ್ಟಿಯಿದು. ಪ್ರತಿಯೊಂದು ರೂಪಾಂತರದಲ್ಲಿಯೂ ಮಗುವು ಜೋಡಿಸಬೇಕಾದ ಆಕಾರಗಳನ್ನು ನೆನಪಿಟ್ಟುಕೊಳ್ಳುವುದು ಮತ್ತು ಅದು ಸಮಾನ ಆಕಾರವೆಂದು ಪರಿಗಣಿಸುವ ತುಂಡುಗಳನ್ನು ಇಡುವುದು. ಈ ಎಲ್ಲಾ ಪ್ರಯತ್ನಗಳನ್ನು ಬಹುಮುಖ್ಯ ಎಂದು ತಿಳಿಯಬೇಕು ಮತ್ತು ಪ್ರೋತ್ಸಾಹಿಸಬೇಕು.

## ವಿನ್ಯಾಸ ರಚನೆ

ಪ್ರತಿಯೊಂದು ಅಕ್ಷರವೂ ಕಾಗದದ ಮೇಲಿನ ವಿನ್ಯಾಸಗಳು, ಪದಗಳು ಬೇರೆ ಬೇರೆ ವಿನ್ಯಾಸಗಳಿಂದ ಮಾಡಲ್ಪಟ್ಟ ಮಾದರಿಗಳು. ಬರೆದ ಪದದ ಸಂಕೀರ್ಣ ಮಾದರಿಯನ್ನು ತಿಳಿದುಕೊಳ್ಳಲು ಮಕ್ಕಳಿಗೆ ಹೇಳುವ ಮೊದಲು ಅವರಿಗೆ ಮಾದರಿ ತಯಾರಿಕೆಯ ಅನುಭವನ್ನು ದೊರಕಿಸಿರಬೇಕು.

ಪುಟ್ಟ ಮಕ್ಕಳು ಮಾದರಿಗಳ ಕ್ರಮವನ್ನು ಇಷ್ಟಪಡುತ್ತಾರೆ. ಸಣ್ಣ ಮಕ್ಕಳಗುಂಪಿಗೆಮಾದರಿಯಕಲ್ಪನೆಯನ್ನುಪರಿಚಯಿಸಲಿರುವ ಪ್ರಾಯೋಗಿಕ ರೀತಿಯೆಂದರೆ ಅವರನ್ನು ಹುಡುಗ, ಹುಡುಗಿ, ಹುಡುಗ, ಹುಡುಗಿ ಹೀಗೆ ಸರಳವಾಗಿ ಸಾಲಿನಲ್ಲಿ ಕ್ರಮವಾಗಿ ನಿಲ್ಲಿಸುವುದು. ಇದು ಮಕ್ಕಳಿಗೆ ಉತ್ತೇಜನಕಾರಿಯಾಗಿರುತ್ತದೆ ಏಕೆಂದರೆ ಅವರು ಮಾದರಿಗಳನ್ನು ಅರ್ಥಮಾಡಿಕೊಳ್ಳಲು ತೊಡಗಿದಾಗ ಮುಂದೆ ಯಾವುದು ಬರುತ್ತದೆ ಎಂಬುದನ್ನು ಊಹಿಸಬಲ್ಲವರಾಗುತ್ತಾರೆ.

ಮಾದರಿಗಳನ್ನೇ ವಸ್ತುವಾಗಿಟ್ಟುಕೊಂಡು ಮಾಡಬಹುದಾದ ಅನೇಕ ಅದ್ಭುತವಾದ ಚಟುವಟಿಕೆಗಳಿವೆ. ಸಾಮಾನ್ಯವಾಗಿ ಕಡ್ಡಿಗಳು ಮತ್ತು ಎಲೆಗಳಂತಹ 3D (3 ಆಯಾಮದ) ವಸ್ತುಗಳು ಸುಲಭವಾಗಿ ಲಭ್ಯವಿರುತ್ತವೆ ಮತ್ತು ಅವುಗಳನ್ನು ಮಾದರಿಗಳ ತಯಾರಿಯಲ್ಲಿ ಉತ್ತಮವಾಗಿ ಬಳಸಿಕೊಳ್ಳಬಹುದು. ಒಂದು ಸರಳ ಮಾದರಿ (ಒಂದು ಎಲೆ, ಒಂದು ಕಡ್ಡಿ, ಒಂದು ಎಲೆ)ಯನ್ನು 2 ಎಲೆ, 3 ಕಡ್ಡಿಗಳು, 2 ಎಲೆಗಳು, 3 ಕಡ್ಡಿಗಳು ಇಂತಹ ಸಂಕೀರ್ಣ ಮಾದರಿಯನ್ನಾಗಿ ರಚನೆ ಮಾಡಬಹುದು. ಪೋಣಿಸಲು ಮಣಿಗಳು, ರಾಶಿ ಮಾಡಲು ಬ್ಲಾಕ್ಸ್‌ಗಳು ಹೀಗೆ ಮಾದರಿಗಳ ಆಟವನ್ನು ಪರಿಚಯಿಸಲು ಯಾವುದೇ ವಸ್ತುವನ್ನು ಬಳಸಬಹುದು.

3 ಆಯಾಮದ ವಸ್ತುಗಳಿಂದ ನಾನಾ ರೀತಿಯ ಮಾದರಿಗಳನ್ನು ಮಾಡಿ ಆಡಿದ ನಂತರ ಮಕ್ಕಳು ಸಾಮಾನ್ಯವಾಗಿ 2 ಆಯಾಮದ ಮಾದರಿ ಮಾಡಲು ಸಿದ್ಧರಾಗಿರುತ್ತಾರೆ. ತರಕಾರಿಯ ಆಕಾರಗಳಿಂದ ಕಾಗದದ ಮೇಲೆ ರಚನೆ ಮಾಡುವುದು ಪ್ರಸಿದ್ಧ ಮತ್ತು ಸಣ್ಣಮಕ್ಕಳಿಗೆ ಕುತೂಹಲಕಾರಿಯಾದ ಚಟುವಟಿಕೆಯಾಗಿದೆ. ನಾನು ಬೇರೆ–ಬೇರೆ ಬಣ್ಣದ ಕಾಗದಗಳನ್ನು 'ಮರ'ದ ಪ್ರತ್ಯೇಕವಾದ ಆಕಾರಕ್ಕೆ ಕತ್ತರಿಸುತ್ತಿದ್ದೆ. ಪ್ರತಿಯೊಂದು ಮಗುವೂ ಒಂದು ಆಕಾರವನ್ನು ತೆಗೆದುಕೊಂಡು ಅವರ ಮರಕ್ಕೆ ತಕ್ಕ ಮಾದರಿಯನ್ನು ಕಂಡುಹಿಡಿದು ಬೇರೆ ಬೇರೆ ತರಕಾರಿ ಆಕಾರಗಳನ್ನು ಮತ್ತು ಬಣ್ಣಗಳನ್ನು ಬಳಸಿ ರಚನೆ ಮಾಡಬೇಕಿತ್ತು. ಎಲ್ಲರೂ ಮಾಡಿದ ಮೇಲೆ ನಾನು ಅವುಗಳನ್ನು ದೊಡ್ಡ ಗೋಡೆಯ ಮೇಲೆ ಅಂಟಿಸುತ್ತಿದ್ದೆ ಹಾಗಾಗಿ ಅಲ್ಲಿ ಮಾದರಿಗಳ ಒಂದು ಸುಂದರವಾದ ಕಾಡು ತಯಾರಾಗುತ್ತಿತ್ತು. ಇಂತಹಾ ಪ್ರಾಯೋಗಿಕ ಚಟುವಟಿಕೆಗಳಿಂದ ಸಿಗುವ ವಿನೋದವು ಊಹೆ ಮತ್ತು ಕ್ರಮಾನುಗತಿಯ ಕೌಶಲ್ಯವನ್ನು ಬೆಳೆಸುತ್ತದೆ.

## ಚಿತ್ರಗಳ ಬಳಕೆ – ಹೊಂದಿಸುವಿಕೆ ಮತ್ತು ಕ್ರಮಾನುಗತಿ

'ಲೊಟ್ಟೊ'ದಂತಹಾ ಚಿತ್ರಗಳನ್ನು ಹೊಂದಿಸುವ ಆಟಗಳು ವಿನೋದಕರವಾಗಿರುತ್ತವೆ ಮತ್ತು ಸಣ್ಣ ಮಕ್ಕಳಿಗೆ ಉಪಯುಕ್ತವಾದವುಗಳಾಗಿವೆ. ಓದಲು ಅಗತ್ಯವಾದ ಹೋಲಿಕೆಯನ್ನು ಗುರುತಿಸುವ ದೃಷ್ಟಿ ಕೌಶಲ್ಯವನ್ನು ಇದು ಬೆಳೆಸುತ್ತದೆ. ಮಕ್ಕಳು ಸಮಾನ ರೀತಿಯ ಪದಗಳನ್ನು ಗುರುತಿಸುವ ಸಾಮರ್ಥ್ಯ ಹೊಂದಿರಬೇಕು ಏಕೆಂದರೆ ಒಂದು ಪದವನ್ನು ಪ್ರತಿಸಲ ನೋಡಿದಾಗಲೂ ಅನುವಾದ ಮಾಡುವ ಪ್ರಕ್ರಿಯೆಯನ್ನು ನಡೆಸುವಂತಾಗಬಾರದು. ಚಿತ್ರಗಳೊಂದಿಗೆ ಈ ಕೌಶಲ್ಯವನ್ನು ಅಭ್ಯಸಿಸುವುದು ಆನಂದವನ್ನು ಕೊಡುತ್ತದೆ ಮತ್ತು ಸಣ್ಣ ಮಗುವಿಗೆ ಇದು ಮಹತ್ವದ್ದಾಗಿರುತ್ತದೆ.



ಜಿಗ್-ಸಾ ಕೂಡಾ ನೋಡಿ ವಿವೇಚಿಸುವ ಕೌಶಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ್ದಾಗಿದೆ. ಜಿಗ್-ಸಾ ಸರಿಯಾಗಿ ಮಾಡಲು ಕಲಿತ ಮಕ್ಕಳು ದೃಶ್ಯದ ಮೂಲಕ ಕಲಿಯುವ ಕೌಶಲ್ಯಗಳನ್ನು ಯಶಸ್ವಿಯಾಗಿ ಬೆಳೆಸಿಕೊಳ್ಳುತ್ತಾರೆ ಮತ್ತು ಇದರಿಂದ ಓದಲು ಅವಶ್ಯವಾದ ಎಲ್ಲಾ ಶಾಬ್ದಿಕ ಸಂಕೇತಗಳು ಮತ್ತು ಸಂಯೋಜನೆಗಳನ್ನು ವಿವೇಚಿಸಲು ಶಕ್ತರಾಗುತ್ತಾರೆ. ಮುಂದಿನ ಹಂತ ಚಿತ್ರಗಳ ಸರಣಿಯನ್ನು ಪ್ರಸ್ತುತಪಡಿಸುವುದು-ಬಹುತೇಕ 3 ಬೇರೆ-ಬೇರೆ ಚಿತ್ರಗಳಿಂದ ಆರಂಭಿಸುವುದು ಮತ್ತು 5 ಅಥವಾ 6ರವರೆಗೆ ಹೆಚ್ಚಿಸುವುದು ಉತ್ತಮವಾದದ್ದು. ಮಕ್ಕಳು ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಈ ಚಿತ್ರಗಳನ್ನು ಕಥೆ ಹೇಳಲು ಬಳಸಬಹುದು. ಇದು ಘಟನೆಗಳನ್ನು ಕ್ರಮಗೊಳಿಸುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಮಗುವು ಸ್ವತಂತ್ರವಾಗಿ ಓದುವಾಗ ಕಥೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಆನಂದಿಸಲು ಅವಶ್ಯವಾದ ಪ್ರಮುಖ ಕೌಶಲ್ಯ ಇದಾಗಿದೆ.

ಚಿತ್ರಗಳು ಆರಂಭದ ಓದುವಿಕೆಯ ಮಹತ್ವದ ಅಂಗಗಳಾಗಿವೆ. ಮಕ್ಕಳು ಎಲ್ಲಾ ರೀತಿಯ ಚಿತ್ರಗಳನ್ನು ಆನಂದಿಸುತ್ತಾರೆ. ಒಂದು ಚಿತ್ರ ಒಂದು ಸಂಪೂರ್ಣ ಕಥೆಯನ್ನೇ ಹೇಳಬಲ್ಲುದು. ಅಂತಹಾ ಕಥೆಗಳೊಂದಿಗಿರುವ ಭಾಷೆಯು ಪುಸ್ತಕದ ಭಾಷೆಯಾಗಿರುತ್ತದೆ ಮತ್ತು ಮಗುವು ಈ ರೀತಿಯ ಕಥೆ ಹೇಳುವುದರಲ್ಲಿ ಭಾಗವಹಿಸಿದರೆ ಓದಿನ ಪ್ರಪಂಚಕ್ಕೆ ಅವರು ಚೆನ್ನಾಗಿ ತಯಾರಾಗುತ್ತಾರೆ.

ಯಾವಾಗಲೂ ಮಕ್ಕಳು ಸಣ್ಣ ವಯಸ್ಸಿನಿಂದಲೇ ಓದುವಂತೆ ನಟಿಸಲು ತೊಡಗುತ್ತಾರೆ. ಅದು ಅನೇಕ ರೂಪವನ್ನು ಹೊಂದಿರಬಹುದು ಆದರೆ ಸಾಮಾನ್ಯವಾಗಿ – ಮಗುವು ಪುಸ್ತಕ ಹಿಡಿದು ಕುಳಿತಿರುವುದು, ಪುಟಗಳನ್ನು ಮಗುಚುತ್ತಾ ತಾನು ನೋಡಿದ ಹಿರಿಯರನ್ನು ಅನುಕರಿಸಿ ಸರಿಯಾದ ವರ್ಣೋಚ್ಚಾರಣೆ ಮಾಡುತ್ತಾ ಕಥೆ ಹೇಳುವುದು ಇವುಗಳನ್ನು ಒಳಗೊಂಡಿರುತ್ತದೆ. ಕೆಲವೊಮ್ಮೆ, ಮಕ್ಕಳು ಓದಲು ತಯಾರಾದಾಗ ಯಾವಾಗಲೂ ಅವರು ಅವರಿಗೆ ಪರಿಚಿತವಾದ ಶಬ್ದ ಅಥವಾ ಪದಗಳಿಗಾಗಿ ಸಂಪೂರ್ಣ ಪುಸ್ತಕವನ್ನು ಸ್ವತಂತ್ರವಾಗಿ ಪರಿಶೀಲಿಸುತ್ತಾರೆ. ಅವರು ಗುರುತಿಸಬಲ್ಲ ಸಂಕೇತವನ್ನು ಕಂಡಾಗ ಕುತೂಹಲವನ್ನು ತೋರಿಸುತ್ತಾರೆ. ಇದು ಮಗುವು ಔಪಚಾರಿಕ ಓದುವ ಚಟುವಟಿಕೆ ಆರಂಭಿಸಲು ತಯಾರಾಗಿದೆ ಎಂಬುದರ ಸಂಕೇತ.

## ವಿಫಲತೆಯನ್ನು ನಿವಾರಿಸುವುದು

ಈ ಎಲ್ಲಾ ಓದಿನ ಮೊದಲ ಚಟುವಟಿಕೆಗಳು ಮಗುವಿಗೆ ಸಂತೋಷಕರವಾಗಿರುತ್ತದೆ ಎಂಬುದನ್ನು ನಾನು ಒತ್ತಿ ಹೇಳಲಾರೆ. ಕಲಿಕೆಯು ಸಂತೋಷಕರವಾಗಿರುವುದು ಮಕ್ಕಳು ಅದರಿಂದ ಪ್ರೇರಿತರಾಗುವುದು ಅತಿ ಮಹತ್ವದ್ದಾಗಿದೆ. ಹಿರಿಯರು ಮಕ್ಕಳ ಬಗ್ಗೆ ತಮ್ಮ ನಿರೀಕ್ಷೆಯನ್ನು ಹೆಚ್ಚಿಸುತ್ತಾ ಸಹಾಯಕರ ಪಾತ್ರವಹಿಸಬೇಕು. ಅಲ್ಪ ಯಶಸ್ವಿಯಾದ ಪ್ರಯತ್ನವನ್ನೂ ಸೇರಿಸಿ ಎಲ್ಲಾ ಪ್ರಯತ್ನಗಳಿಗೆ ಧಾರಾಳವಾದ ಮೆಚ್ಚುಗೆ ತೋರಿಸುವುದು ಪ್ರತಿ ದಿನದ ಕ್ರಮವಾಗಿರಬೇಕು. ವರ್ಷಾಂತರದಲ್ಲಿ ನಾನು ಕಂಡುಕೊಂಡಂತೆ, ಯಾವಾಗಲೂ ಪ್ರೋತ್ಸಾಹ ನೀಡುವ ರೀತಿಯಲ್ಲಿ ಹುರಿದುಂಬಿಸಲು ಏನಾದರೂ ಇದ್ದೇ ಇರುತ್ತದೆ. ಮನುಷ್ಯರು ಚಿಕ್ಕವರಾಗಲಿ ಅಥವಾ ದೊಡ್ಡವರಾಗಲೀ ಯಾರೇ ಆದರೂ ಹೊಗಳಿಕೆಯಿಂದ ಹಸನಾಗಿ ಬೆಳೆಯುತ್ತಾರೆ!

## ಕ್ರಮಬದ್ಧ ಓದುವ ಚಟುವಟಿಕೆಗಳನ್ನು ಆರಂಭಿಸುವುದು

### *ಶಾಬ್ದಿಕ ಜ್ಞಾನವನ್ನು ಬೆಳೆಸುವುದು*

ವರ್ಣಮಾಲೆಯ ಸಂಕೇತಗಳು ಮತ್ತು ಅವುಗಳ ಶಬ್ದಗಳ ನಡುವಿನ ಸಂಬಂಧವನ್ನು ಮಕ್ಕಳು ತಿಳಿಯಬೇಕು. ಇದನ್ನು ಸ್ವಲ್ಪ ಮೊದಲೇ ಆರಂಭಿಸಬಹುದು. ಆದರೆ, ಅನೌಪಚಾರಿಕ ಬಹು ಇಂದ್ರಿಯಗಳಿಗೆ ಸಂಬಂಧಿಸಿದ ಪ್ರಾಯೋಗಿಕ ಚಟುವಟಿಕೆಗಳಿಂದ ಇದನ್ನು ಸಾಧಿಸಬೇಕು. ಆರಂಭಿಕವಾದ ಶಾಬ್ದಿಕ ಕಲಿಕೆಯಲ್ಲಿ ವಿನೋದವನ್ನು ಸಂಯೋಜಿಸಲು ಅನೇಕ ಮಾರ್ಗಗಳಿವೆ. ಶಿಕ್ಷಕರು ಯಶಸ್ಸನ್ನು ಪಡೆಯಲು ಸಹಾಯ ಮಾಡುವ ಅನೇಕ ಉತ್ತಮ ವ್ಯವಸ್ಥೆಗಳು ಮತ್ತು ಕಾರ್ಯಕ್ರಮಗಳು ಲಭ್ಯವಿವೆ. ಅವುಗಳಲ್ಲಿ ಉತ್ತಮವಾದವು ನೋಡಿಪಡೆಯುವ ಸುಳಿವುಗಳು, ಕೇಳುವ ಘಟಕ ಮತ್ತು ಇವೆಲ್ಲವನ್ನೂ ಒಟ್ಟು ಸೇರಿಸಿದ ಒಂದು ರೀತಿಯ ಚಟುವಟಿಕೆ, ಇವೆಲ್ಲವನ್ನೂ ಇದು ಒಳಗೊಂಡಿರುತ್ತದೆ. ಸಣ್ಣ ಮಕ್ಕಳಿಗೆ ಕೇವಲ ವರ್ಣಮಾಲೆಯ ಅಕ್ಷರಗಳನ್ನು ತೋರಿಸುವುದು, ಸಂಬಂಧಿಸಿದ ಶಬ್ದಗಳನ್ನು ಹೇಳುವುದು ಮತ್ತು ಅವೆಲ್ಲವನ್ನೂ ಅವರು ನೆನಪಿಡಬೇಕೆಂದು ನಿರೀಕ್ಷಿಸುವುದು – ಇವೆಲ್ಲ ಕೆಲವು ಮಕ್ಕಳಲ್ಲಿ ಕೆಲಸ ಮಾಡಬಹುದು ಆದರೆ ಅನೇಕ ಮಕ್ಕಳಿಗೆ ಆರಂಭದ ಓದನ್ನು ಯಶಸ್ವಿಯಾಗಿ ಆರಂಭಿಸಲು ಇದಕ್ಕಿಂತ ಹೆಚ್ಚಿನ ಸುಳಿವುಗಳು ಬೇಕಾಗುತ್ತವೆ.

ನನ್ನ ಶಿಕ್ಷಕ ವೃತ್ತಿಯಲ್ಲಿ ಶಬ್ದಗಳನ್ನು ಆರಂಭದಲ್ಲಿ ಪರಿಚಯಿಸಲು ವಿಭಿನ್ನ ವಿಧಾನಗಳನ್ನು ಬಳಸುವುದನ್ನು ನೋಡಿದ್ದೇನೆ. ಕೆಲವು ವಿಧಾನಗಳು ಇತರ ವಿಧಾನಗಳಿಗಿಂತ ಹೆಚ್ಚು ಯಶಸ್ವಿಯಾಗಿವೆ.

ನಾನು ಸ್ವತಃ ಪ್ರತಿಯೊಂದು ಅಕ್ಷರಕ್ಕೆ ಒಂದು ಚರಣವಿರುವಂತೆ ಒಂದು ಸರಳ ಹಾಡನ್ನು ವಿನೋದಕರವಾದ ನಿದರ್ಶನಗಳೊಂದಿಗೆ ರಚಿಸಿದ್ದೇನೆ. ಇದು ಬಹಳ ಸರಳ

ಮತ್ತು ಪುನರಾವೃತ್ತಿ ಸಹಿತವಾಗಿದೆ. ಈ ಹಾಡನ್ನು ಬಹಳ ವರ್ಷಗಳವರೆಗೆ ನಾನು ಯಶಸ್ವಿಯಾಗಿ ಬಳಸಿದೆ. ಮಕ್ಕಳು ಹಾಡಿನ ಪ್ರತಿ ಚರಣವನ್ನು ಹಾಡಿ ಮುಗಿಸಿದಾಗ ಅಕ್ಷರದ ಸರಿಯಾದ ಆಕಾರವನ್ನು ಗಾಳಿಯಲ್ಲಿ ಬರೆಯಲು ಪ್ರೋತ್ಸಾಹಿತರಾಗುತ್ತಿದ್ದರು. ಇದು ನನ್ನ ಸರಳ ವಿಧಾನವನ್ನು ವಿಭಿನ್ನವಾಗಿಸಿತು. ಇದರಿಂದ ಅನೇಕ ರೀತಿಯಲ್ಲಿ ಸಹಾಯವಾಯಿತು.

- ಇದರಿಂದ ಮಕ್ಕಳು ಅಕ್ಷರವು ಹೇಗೆ ಕಾಣಿಸುತ್ತದೆ ಎಂದು ಕಣ್ಮುಂದೆ ತಂದುಕೊಳ್ಳಲು ಸಹಾಯವಾಯಿತು.
- ಶಬ್ದಗಳ ಸಂಬಂಧದ ಕಲಿಕೆಯಲ್ಲಿ ಮಾಡಿ ಕಲಿಯುವುದನ್ನು (ಸ್ಪರ್ಶಿಸಿ ಕಲಿಯುವುದನ್ನು) ಸೇರಿಸಿತು.
- ಸೀಸದಕಡ್ಡಿಯನ್ನು ಸಮರ್ಥವಾಗಿ ಹಿಡಿದುಕೊಳ್ಳುವ ಸಾಮರ್ಥ್ಯವನ್ನು ಮಗುವು ಬೆಳೆಸಿಕೊಳ್ಳುವ ಮೊದಲು ಕಾಗದದ ಮೇಲೆ ತಪ್ಪಾದ ಗುರುತುಗಳನ್ನು ಮಾಡುವ ಭಯವಿಲ್ಲದೇ, ಅಕ್ಷರಗಳ ರಚನೆಯನ್ನು ಮಕ್ಕಳಿಗೆ ಅಭ್ಯಸಿಸಲು ಸಾಧ್ಯವಾಗಿಸಿತು.
- ನೋಟ, ಶ್ರವಣ ಮತ್ತು ಸ್ಪರ್ಶದ ಚಟುವಟಿಕೆಗಳು ಈ ಕಲಿಕೆಯುದ್ದಕ್ಕೂ ಒಳಗೊಂಡಿದ್ದರಿಂದಾಗಿ ಅಕ್ಷರಗಳ ರಚನೆಯನ್ನು ತಿಳಿಯುತ್ತಾ ಅವು ಉಂಟು ಮಾಡುವ ಶಬ್ದಗಳನ್ನು ಕಲಿತಿದ್ದರಿಂದ ಅವುಗಳ ಕಲಿಕೆಯನ್ನು ಸಮಗ್ರಗೊಳಿಸಿ ಅವುಗಳೊಂದಿಗೆ ಸಂಪರ್ಕ ಕಲ್ಪಿಸಿಕೊಳ್ಳಲು ಮಕ್ಕಳು ಸಮರ್ಥರಾದರು.
- ವರ್ಣಮಾಲೆಯ ಎಲ್ಲಾ ಅಕ್ಷರಗಳ ಸರಿಯಾದ ರಚನಾ ಕ್ರಮವನ್ನು ಆರಂಭದ ಹಂತದಿಂದಲೇ ತಿಳಿಯುವುದರಿಂದ ಕೈ-ಬರಹಕ್ಕಷ್ಟೇ ಅಲ್ಲದೇ ಪದ ರಚನೆಯಲ್ಲಿರುವ ಅಕ್ಷರಗಳ ಮುಂದಿನ ಕಲಿಕೆಗೂ ಇದರಿಂದ ಬಹು ದೊಡ್ಡ ಲಾಭವಿದೆ.

ಈಗ ನಾನು ಅಧ್ಯಾಪನದಿಂದ ನಿವೃತ್ತಿ ಹೊಂದಿದ್ದೇನೆ ಆದರೂ ಓದಲು ಕಲಿಯುವುದರ ಪ್ರಾಮುಖ್ಯತೆಯ ಬಗ್ಗೆ ಆಸಕ್ತಿಯನ್ನು ಹೊಂದಿದ್ದೇನೆ. ನನ್ನ ಮಗಳು ಐರ್ಲೆಂಡಿನ ಬಹು ದೂರದ ಭಾಗವೊಂದರಲ್ಲಿ ವಾಸಿಸುತ್ತಾಳೆ. ಅವಳಿಗೆ 4 ಮಕ್ಕಳಿದ್ದಾರೆ. ಇಬ್ಬರು ಸಣ್ಣ ಮಕ್ಕಳಿಗೆ ಶಾಲೆಗೆ ಹೋಗುವ ವಯಸ್ಸು ಸಮೀಪಿಸಿದಾಗ ಅವಳು ಮತ್ತು ಅವಳ ಪತಿ 4 ಮಕ್ಕಳಿಗೂ ಮನೆಯಲ್ಲೇ ಶಿಕ್ಷಣ ಕೊಡಿಸುವ ನಿರ್ಣಯ ಮಾಡಿದರು. ಅವಳು ನನ್ನ 'ವರ್ಣಮಾಲೆಯ ಹಾಡನ್ನು' ಕೇಳುತ್ತಲೇ ಅದನ್ನು ಸಾಧರಣವೆನ್ನುವಂತೆ ಪರಿಗಣಿಸುತ್ತಾ ಬೆಳೆದವಳು. ಮನೆಯಲ್ಲಿನ ಶಿಕ್ಷಣದಲ್ಲಿ ತನ್ನ ಮಕ್ಕಳಿಗೆ ಅದನ್ನು ಬಳಸಲು ತೊಡಗಿದಾಗ ಅದೆಷ್ಟು ಪರಿಣಾಮಕಾರಿಯಾಗಿದೆ ಎಂದು ಅವಳಿಗೆ ಅರಿವಾಯಿತು ಮತ್ತು ಅದನ್ನು ಪ್ರಕಟಿಸುವಂತೆ ನನ್ನನ್ನು ಪ್ರೋತ್ಸಾಹಿಸಿದಳು. ಅವಳ ಸಲಹೆಯನ್ನು ಪರಿಗಣಿಸಿದೆ ಮತ್ತು ಮಕ್ಕಳಿಗೆ ಮನೆಯಲ್ಲಿ ಸಹಾಯ ಮಾಡಲು ಇಚ್ಛಿಸುವ ಕುಟುಂಬಗಳಿಗೆ ಮತ್ತು ಬೇರೆ – ಬೇರೆ ಪರಿಸರದಲ್ಲಿರುವ ಪುಟ್ಟ ಮಕ್ಕಳ ಶಿಕ್ಷಕರಿಗೆ ಇದು ಉಪಯುಕ್ತವಾಗಬಹುದೆಂದು (www.pre-school-phonics.co.uk) ಆಶಿಸಿದೆ. ಹಾಸ್ಯ ಸ್ವಭಾವವನ್ನು ಹೊಂದಿರುವ ಕಲಾಕಾರನಾದ ನನ್ನ ಪತಿ ಚಿತ್ರಗಳನ್ನು ರಚಿಸಿದರು. ವರ್ಣಮಾಲೆಯ ಎಲ್ಲಾ ಅಕ್ಷರಗಳನ್ನು ಸೇರಿಸಿ ನೇಯಲ್ಪಡುವಂತಹ ಕಥೆಯೊಂದನ್ನು ಬರೆದೆ ಮತ್ತು ಆ ಕಥೆಯು ಚಿತ್ರ ಮತ್ತು ಹಾಡಿನೊಂದಿಗೆ ಸಂಬಂಧ ಹೊಂದಿದೆ. ಇದರಲ್ಲಿ ಸಂಪೂರ್ಣ ಕಥೆ ಮತ್ತು ಹಾಡು ಇರುವ ಧ್ವನಿ ಸಿ.ಡಿ ಕೂಡಾ ಇದೆ.

'ಅವರ್ ಆಲ್ಫಾಬೆಟ್ಟಾ' (Our 'Alphabetta') ವ್ಯವಸ್ಥೆಯನ್ನು, ಚಿತ್ರ ಮತ್ತು ಅದಕ್ಕೆ ಸಂಬಂಧಿಸಿದ ಹಾಡಿನ ಸರಳ ಚರಣಗಳನ್ನು ಆನಂದಿಸುವ ಸಣ್ಣ ಮಕ್ಕಳಿಗಾಗಿ ಬಳಸಬಹುದು. ಕಥೆಯಲ್ಲಿಯ ಧ್ವನಿ ಸರಣಿಯ ಸಂಪರ್ಕವನ್ನು ಕಂಡುಕೊಳ್ಳುವುದನ್ನು ಆನಂದಿಸುವ ದೊಡ್ಡ ಮಕ್ಕಳಿಗಾಗಿಯೂ ಬಳಸಬಹುದು. ನನ್ನ ಮೊಮ್ಮಕ್ಕಳು ತಮ್ಮ ಸ್ವಂತದ ವಿನೋದಕರವಾದ ಹಾಡಿನ ಚರಣಗಳನ್ನು ರಚಿಸುವುದರಲ್ಲಿ ಸಂತಸ ಪಡುತ್ತಾರೆ. ಅದು ಯಾವಾಗಲೂ ವಾಸ್ತವವಾಗಿಯೂ ಮನೋರಂಜಕವಾಗಿರುತ್ತದೆ !




### ಕಲಿಯುವ ಉಪಕರಣವಾಗಿ ಅಕ್ಷರ ರಚನೆ

ಈ ಮೇಲೆ ಹೇಳಿದಂತೆ ಯಾವುದೇ ರೀತಿಯಲ್ಲಿಯೇ ಆದರೂ ಮಗುವಿಗೆ ಅಕ್ಷರದ ಶಬ್ದಗಳನ್ನು ಪರಿಚಯಿಸುವಾಗ ಅಕ್ಷರವು ಉಂಟುಮಾಡುವ ಶಬ್ದದ ಜೊತೆಯಲ್ಲಿಯೇ ಅಕ್ಷರ

ರಚನೆಯನ್ನು ಹೇಳಿಕೊಡುವುದು ಕಲಿತದ್ದನ್ನು ಮನದಟ್ಟು ಮಾಡಿಸಲು ಅತ್ಯಂತ ಉಪಯುಕ್ತ ಕ್ರಮವಾಗಿದೆ. ಆರಂಭದ ಹಂತಗಳಲ್ಲಿ(ಇಂಗ್ಲಿಷ್) ಸಣ್ಣ ಅಕ್ಷರಗಳ ರಚನೆಯತ್ತ ಗಮನಹರಿಸುವುದು ಮುಖ್ಯ. ದೊಡ್ಡ ಅಕ್ಷರಗಳನ್ನು ಸಂಕೇತಗಳಲ್ಲಿ, ಪೊಟ್ಟಣಗಳ ಮೇಲೆ, ಕಂಪ್ಯೂಟರ್ ಕೀಲಿಮಣೆಗಳು ಮುಂತಾದ ಕಡೆ ಬಳಸಿರುವುದರಿಂದ ಅವು ಚಿರಪರಿಚಿತವಾಗಿರುತ್ತವೆ. ದೊಡ್ಡ ಅಕ್ಷರಗಳ ರಚನೆಯಲ್ಲಿ ಅನೇಕ ನೇರ ರೇಖೆಗಳಿರುವುದರಿಂದ ಅವುಗಳನ್ನು ರಚಿಸುವುದು ಸುಲಭ. ಹೀಗಿದ್ದರೂ ಯಾವುದೇ ಪಠ್ಯದ ಬಹುತೇಕ ಭಾಗ ಸಣ್ಣ ಅಕ್ಷರಗಳಿಂದಲೇ ಮಾಡಲ್ಪಟ್ಟಿರುತ್ತದೆ. ಆಧುನಿಕ ಜಗತ್ತಿನಲ್ಲಿ ಸಾಂಪ್ರದಾಯಿಕವಾದ ಕೈ-ಬರವಣಿಗೆಯನ್ನು ಹೆಚ್ಚಾಗಿ ಬಳಸಲಾಗುತ್ತಿಲ್ಲವಾದರೂ ಮಕ್ಕಳು ಸಣ್ಣ ಅಕ್ಷರಗಳ ರಚನೆಯನ್ನು ತಿಳಿದಿರುವುದು ಬಹಳ ಮುಖ್ಯ.

ಪುಟ್ಟ ಮಗುವಿಗೆ ಓದುವ ಕೌಶಲ್ಯವನ್ನು ಕಲಿಯುವುದಕ್ಕಿಂತ ಮೊದಲು ಬರವಣಿಗೆ ಎಂಬುದು ಹೆಚ್ಚು ಕಷ್ಟವೆನಿಸುವ ಪ್ರಕ್ರಿಯೆ ಆಗಿರುತ್ತದೆ. ಓದುವುದು ಎಂದರೆ ಕಾಗದದ ಮೇಲಿನ ಚಿಹ್ನೆಗಳ ಅನುವಾದವನ್ನು ಒಳಗೊಂಡಿರುತ್ತದೆ ಆದರೆ ಬರವಣಿಗೆಯು ಖಾಲಿ ಹಾಳೆಯಿಂದ ಆರಂಭವಾಗುತ್ತದೆ. ಮತ್ತು ಬರೆಯುವ ಚಿಹ್ನೆಗಳನ್ನು ಅವುಗಳ ಗೂಢಾರ್ಥವನ್ನು ಸರಿಯಾಗಿ ಕಂಡುಹಿಡಿಯಬಹುದಾದ ರೀತಿಯಲ್ಲಿ ತಪ್ಪಿಲ್ಲದೆ ಬರೆಯಬೇಕು. ಈ ಕಾರಣದಿಂದಾಗಿ ಮಗುವು ಓದಲು ಆರಂಭಿಸುವಾಗ ಓದುವಿಕೆಯ ಮೇಲೆ ಮತ್ತು ಅದೇ ಸಮಯದಲ್ಲಿ ಬರವಣಿಗೆಯ ಮೇಲೂ ಗಮನ ಕೇಂದ್ರೀಕರಿಸುವುದು ಅತಿಮುಖ್ಯ. ಹೇಗಿದ್ದರೂ ಸರಿಯಾದ ಅಕ್ಷರ ರಚನೆಯನ್ನು ಪ್ರಾಯೋಗಿಕ ರೀತಿಯಿಂದ ಪರಿಚಯಿಸ ಬಹುದಾದ್ದರಿಂದ ಇದು ಪ್ರಾಥಮಿಕ ಓದಿನ ಚಟುವಟಿಕೆಗಳ ಉಪಕರಣವಾಗಿದೆ. ಓದುವ ಸಾಮರ್ಥ್ಯವಿಲ್ಲದೇ ಬರವಣಿಗೆಯ ಕೌಶಲ್ಯವು ಅರ್ಥಹೀನ ಎಂಬುದನ್ನು ನಾವು ಗಮನಲ್ಲಿಟ್ಟುಕೊಳ್ಳಬೇಕು.

## ಪೂರ್ಣ ಪದದ ಗುರುತಿಸುವಿಕೆ

ಯಾವಾಗ ಮಕ್ಕಳಿಗೆ ಎಲ್ಲಾ ಶಬ್ದಗಳನ್ನು ಗುರುತಿಸಿ, ಅದನ್ನು ಸರಳ ಪದಗಳನ್ನಾಗಿ ಅನುವಾದಿಸಲು ಸಾಧ್ಯವಾಗುವುದೋ ಮತ್ತು ಅವರು ಆ ಶಬ್ದಗಳನ್ನು ಸುಲಭವಾಗಿ ಸಂಯೋಜಿಸಲು ಸಮರ್ಥರಾಗುತ್ತಾರೋ ಆಗ ಅವರು ಸಾಮಾನ್ಯವಾಗಿ ಪುಸ್ತಕದಲ್ಲಿನ ಸರಳ ಪಠ್ಯವನ್ನು ಓದಲು ಪ್ರಾರಂಭಿಸುತ್ತಾರೆ.

ಮಕ್ಕಳು ಸುಲಭವಾಗಿ ಸಂಯೋಜಿಸಿ ಅನುವಾದಿಸಲು ಸಾಧ್ಯವಾಗದಂತಹ ಹಲವಾರು ಪೂರ್ಣ ಶಬ್ದಗಳಿವೆ. ಆದ್ದರಿಂದ ಅಂತಹ ಪೂರ್ಣ ಶಬ್ದಗಳನ್ನು ಅವುಗಳ ಆಕೃತಿಗಳ ಮೂಲಕ ಗುರುತಿಸಲು ಸಾಧ್ಯವಾಗುವಂತೆ ಮಾಡುವುದು ಬಹಳ ಮುಖ್ಯ. ಇಂತಹ ಕೌಶಲ್ಯವನ್ನು ಬೆಳೆಸಿಕೊಳ್ಳಲು ನಾನು ಒಂದು ಒಳ್ಳೆಯ ದಾರಿಯನ್ನು ಕಂಡುಹಿಡಿದಿದ್ದೇನೆ. ಬಣ್ಣದಲ್ಲಿ ಮುದ್ರಿಸಿರುವ ಶಬ್ದಗಳಿಂದ ಕೂಡಿದ ಕೆಲವಷ್ಟು ಕಾರ್ಡುಗಳನ್ನು ಮಕ್ಕಳಿಗೆ ಕೊಡುವುದು. (ಉದಾ: ಕೆಂಪು, ನೀಲಿ, ಹಸಿರು, ಹಳದಿ, ಇತ್ಯಾದಿ.) ಮಕ್ಕಳು ವಿಧಿಸಿದ ಕೆಲಸವನ್ನು ಮುಗಿಸಲು ಕಾರ್ಡ್‌ನಲ್ಲಿರುವ ಪದಗಳನ್ನು ಹೊಂದಿಸುವುದು ಅವಶ್ಯವಾಗಿರುವ ಅನೇಕ ಚಟುವಟಿಕೆಗಳನ್ನು ಕಲ್ಪಿಸಬಹುದು. ಮಗುವು ಪ್ರಾರಂಭದಲ್ಲಿ ಶಬ್ದದ ಬಣ್ಣದ ಸುಳಿವನ್ನು ಹೊಂದಿರಬೇಕು. ಅನಂತರ ಬಣ್ಣದ ಶಬ್ದಗಳ ಕಾರ್ಡುಗಳನ್ನು ತೆಗೆದು ಅದರ ಜಾಗಕ್ಕೆ ಕಪ್ಪು ಅಕ್ಷರಗಳಲ್ಲಿರುವ ನಿರ್ದಿಷ್ಟ ಶಬ್ದಗಳ ಕಾರ್ಡನ್ನು ಇಡಬೇಕು. ಇಂತಹ ಚಟುವಟಿಕೆಗಳು ಸ್ವಲ್ಪ ಮೊದಲಿಗೆ ಪ್ರಾರಂಭಿಸಿ ಅನಂತರ ಕ್ರಮೇಣ ಬೇರೆ ಬೇರೆ ತರಹದ ಸರಳವಾದ ಚಟುವಟಿಕೆಗಳನ್ನು ಪುನರಾವರ್ತಿಸುವುದರಿಂದ ಮಕ್ಕಳಿಗೆ ಇದು ವಿನೋದವಾಗಿರುತ್ತದೆ ಮತ್ತು ಪೂರ್ತಿಯಾದ ಶಬ್ದವನ್ನು ಗುರುತಿಸುವ ಕೌಶಲ್ಯವನ್ನು ಸ್ವಾಭಾವಿಕವಾಗಿಯೇ ಬೆಳೆಸಿಕೊಳ್ಳುತ್ತಾರೆ. ಮಕ್ಕಳು ಯಾವಾಗ ಪಠ್ಯದಲ್ಲಿರುವ ಪರಿಚಿತ ಶಬ್ದಗಳನ್ನು ಕಂಡುಹಿಡಿಯಲು ಸಮರ್ಥರಾಗುವರೋ ಆಗ ಅವರು ಬಹುಶಃ ಸರಳವಾದ ಪುಸ್ತಕಗಳನ್ನು ಓದಲು ಶಕ್ತರಾಗುತ್ತಾರೆ.

## ಪ್ರಾಥಮಿಕ ಹಂತದ ಪುಸ್ತಕಗಳು ಮತ್ತು ಕಥೆಗಳ ಆಯ್ಕೆಯ ಹಕ್ಕು

ಈ ಮೊದಲೇ ತಿಳಿಸಿದಂತೆ ಮಕ್ಕಳಿಗೆ ಓದಲು ಸಹಾಯ ಮಾಡುವ ಪ್ರಮುಖ ಅಂಶವೆಂದರೆ ಚಿಕ್ಕ ವಯಸ್ಸಿನಲ್ಲಿಯೇ ಅವರಿಗೆ ಸುರಕ್ಷಿತವೆನಿಸುವ ತೀರ್ಮಾನರಹಿತವಾದ ವಾತಾವರಣದಲ್ಲಿ ಅವರು ಪುಸ್ತಕವನ್ನು ಓದಿ ಆನಂದಿಸುವುದಕ್ಕೆ ನೆರವಾಗುವುದು. ಈ ಪ್ರಕ್ರಿಯೆಯು ಮಕ್ಕಳು ಬೆಳೆದು, ಪ್ರೌಢರಾಗುವವರೆಗೂ ನಡೆಯುತ್ತಿರಬೇಕು.

"ಅವಳಿಗೆ ಪದಗಳನ್ನ ಓದಲು ಬರುತ್ತದೆಯೆ ಎಂದು ತಿಳಿಯಲು ನಾನು ಅವಳು ಓದುವ ಪುಸ್ತಕದಲ್ಲಿಯ ಚಿತ್ರಗಳನ್ನು ಮುಚ್ಚಿದ್ದೆ, ಆದರೆ ಅವಳಿಗೆ ಓದಲು ಸಾಧ್ಯವಾಗುತ್ತಿಲ್ಲ ಆದ್ದರಿಂದ ಅವಳು ಸರಿಯಾಗಿ ಓದುತ್ತಿಲ್ಲ!" ಎಂದು ನಾನು ಆಗಾಗ್ಗೆ ಕೆಲವು ತಂದೆತಾಯಿಯರು ಹೇಳುವುದನ್ನು ಕೇಳಿದ್ದೇನೆ.

ನಾನು ಯಾವಾಗಲೂ ಹೇಳಲು ಪ್ರಯತ್ನಿಸುವುದೇನೆಂದರೆ ಪ್ರಾರಂಭದಲ್ಲಿ ಮಕ್ಕಳಿಗೆ ಅಕ್ಷರಗಳ ಜ್ಞಾನ ಮೂಡಲು ಅವರಿಗೆ ಕೆಲವು ಸುಳಿವುಗಳು ಅವಶ್ಯ. ಮಕ್ಕಳ ಪ್ರಾರಂಭಿಕ ಪುಸ್ತಕಗಳು ಯಾವಾಗಲೂ ಚಿತ್ರಗಳಿಂದ ಕೂಡಿರುತ್ತವೆ ಮತ್ತು ಇವು ಮಕ್ಕಳಿಗೆ ಕಥೆಯ ಸುಳಿವು ನೀಡುವಲ್ಲಿಯೂ, ಕಥೆಯನ್ನು ಆನಂದಿಸುವಲ್ಲಿಯೂ ಸಹಾಯ ಮಾಡುತ್ತವೆ. ಒಂದು ವೇಳೆ ಮಗುವು ಚಿತ್ರಗಳು ಒದಗಿಸುವ ನೋಟದ ಸುಳಿವುಗಳಿಲ್ಲದೇ ಅಕ್ಷರಗಳನ್ನು ಅನುವಾದಿಸುವಲ್ಲಿ ಒತ್ತಡಕ್ಕೀಡಾದರೆ ಪೂರ್ತಿ ಪ್ರಯತ್ನವು ಸಂತೋಷವನ್ನು ನೀಡದು ಮತ್ತು ಅವಶ್ಯವಾಗಿ

ಒತ್ತಡಪೂರ್ವಕವಾಗಿರುವುದು...... ನಾನು ಇನ್ನೂ ಏನಾದರೂ ಹೇಳಬೇಕೇ?

ನಾನು ದೃಢವಾಗಿ ನಂಬುವುದೇನೆಂದರೆ ಅರ್ಥೈಸಿಕೊಳ್ಳುತ್ತಾ ಓದುವುದು ಸಂಕೀರ್ಣ ಪ್ರಕ್ರಿಯೆಯಾಗಿದ್ದು ಇದು ಹಲವಾರು ಕೌಶಲ್ಯಗಳನ್ನು ಒಳಗೊಂಡಿರುತ್ತದೆ. ಆಧುನಿಕ ರೀತಿಯು ಶಾಬ್ದಿಕ ಕಲಿಕೆಗೆ ಎಲ್ಲಕ್ಕಿಂತಾ ಹೆಚ್ಚಿನ ಒತ್ತನ್ನು ನೀಡುತ್ತದೆ. ಶಾಬ್ದಿಕ ಕಲಿಕೆಯು ಅವಶ್ಯವಿರುವ ಒಂದು ಕೌಶಲ್ಯ ಎಂದು ನಾನು ನಂಬುತ್ತೇನೆ. ಪಠ್ಯ ಮತ್ತು ಚಿತ್ರಗಳಿಂದ ಸಿಗುವ ಊಹೆ ಮಾಡುವ ಕೌಶಲ್ಯ ಮತ್ತು ಸುಳಿವುಗಳು ಧಾರಣ ಶಕ್ತಿಯನ್ನು ಹೆಚ್ಚಿಸುವುದಲ್ಲದೆ ಮನರಂಜನೆಯ ಮುಖ್ಯವಾದ ಅಂಶವೂ ಆಗಿದೆ.

ಈಗ ಎಲ್ಲೆಡೆಯೂ ಉತ್ತಮ ರೀತಿಯ ಓದುವಿಕೆಯ ಆರಂಭದ ಸೌಲಭ್ಯಗಳು ಲಭ್ಯವಿವೆ ಮತ್ತು ನಾವು ಈ ವಿಷಯದಲ್ಲಿ ಅದೃಷ್ಟವಂತರು. ಹಲವಾರು ವರ್ಷಗಳ ಹಿಂದೆ ಆರಂಭಿಕ ಹಂತದ ಓದಿಗಾಗಿ ಪುಸ್ತಕಗಳ ಲಭ್ಯತೆ ಅತ್ಯಂತ ಸೀಮಿತವಾಗಿತ್ತು. ಓದುವಿಕೆಯ ಪ್ರತೀ ಹಂತದಲ್ಲಿಯೂ ಪುಸ್ತಕಗಳ ಆಯ್ಕೆಯ ವ್ಯವಸ್ಥೆ ಪ್ರಸ್ತುತ ಲಭ್ಯವಿದೆ. ಇದರ ಅರ್ಥವೇನೆಂದರೆ, ಪ್ರತೀ ಹಂತದಲ್ಲಿಯೂ ಮಕ್ಕಳು ಅನುಕ್ರಮವಾಗಿ ಪುಸ್ತಕವನ್ನು ಓದುವ ಅಗತ್ಯವಿರುವುದಿಲ್ಲ ಆದರೆ ಮಕ್ಕಳು ಯಾವ ಪುಸ್ತಕವನ್ನು ಓದಲಿಚ್ಛಿಸುತ್ತಾರೋ ಅಂಥ ಪುಸ್ತಕಗಳನ್ನು ಅವರು ಸ್ವತಃ ಆಯ್ಕೆ ಮಾಡಿಕೊಳ್ಳಬಹುದು. ಇದು ಆರಂಭದ ಹಂತದಲ್ಲಿಯೇ ಮಕ್ಕಳಿಗೆ ದೊರೆಯಬೇಕಾದ ಉತ್ತಮ ಅವಕಾಶ. ನನ್ನ ಅನುಭವದ ಪ್ರಕಾರ ಮಕ್ಕಳು ತಮ್ಮ ಪುಸ್ತಕಗಳ ಆಯ್ಕೆಯನ್ನು ಸ್ವತಃ ತಾವೇ ಮಾಡಿಕೊಳ್ಳುವುದರಿಂದ ಉತ್ಸಾಹ ಮತ್ತು ಆತ್ಮ ಗೌರವ ಬೆಳೆಯುತ್ತದೆ.

ಈ ಪದ್ಧತಿಯು ಉತ್ತಮವಾಗಿ ಕಾರ್ಯ ನಿರ್ವಹಿಸಲು ಇದರಲ್ಲಿ ತೊಡಗಿಸಿಕೊಂಡಿರುವ ದೊಡ್ಡವರು ಸಿದ್ಧತೆಯು ಅತ್ಯಂತ ಅವಶ್ಯವಾಗಿದೆ. ಈಗಷ್ಟೇ ಪ್ರಾಥಮಿಕ ಹಂತದ ಪುಸ್ತಕಗಳನ್ನು ಓದಲು ಪ್ರಾರಂಭಿಸಿದ ಮಕ್ಕಳಿಗೆ ಮೊದಲ ಹಂತದಲ್ಲಿಯೇ ಎಲ್ಲಾ ಪುಸ್ತಕಗಳನ್ನು ಪರಿಚಯಿಸಿಕೊಳ್ಳುವಂತೆ ಹೇಳುವುದು ಉತ್ತಮ.

**ಈ ಕೆಳಗಿನವುಗಳನ್ನು ಅಳವಡಿಸಿಕೊಳ್ಳುವುದರಿಂದ ಇದನ್ನು ಸಾಧಿಸಬಹುದು.**

- ಶಿಕ್ಷಕರು / ಹಿರಿಯರು ಒಂದು ಪುಸ್ತಕವನ್ನು ತೆಗೆದುಕೊಂಡು ಅದನ್ನು ಮಕ್ಕಳ ಒಂದು ಗುಂಪಿನಲ್ಲಿ ಹಂಚಬೇಕು.
- ಮುಖಪುಟ ಮತ್ತು ಶೀರ್ಷಿಕೆಯನ್ನು ಗಮನಿಸಬೇಕು. ಪುಸ್ತಕದ ಮೊದಲ ಪುಟವನ್ನು ನೋಡಿದ ಮೇಲೆ ಲೇಖಕರು ಮತ್ತು ರೇಖಾಚಿತ್ರಕಾರರ ಕುರಿತಾಗಿ ಏನು ತಿಳಿದುಬಂತು ಎಂಬುದನ್ನು ಚರ್ಚಿಸಬೇಕು.
- ಮುಂದೆ ಏನಿದೆ ಎಂದು ಊಹಿಸುವಂತೆ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಬಹುದು, ಅನಂತರ ಪುಟಗಳನ್ನು ತಿರುಗಿಸಿ ಅವರ ಊಹೆ ಸರಿಯಾಗಿದೆಯೇ ಎಂದು ನೋಡಲು ಹೇಳಿ ಅಥವಾ ಕಥೆಯ ಅಂತ್ಯದಲ್ಲಿ ಆಶ್ಚರ್ಯಕರವಾದುದು ಇದೆಯೇ ಎಂದು ನೋಡಲು ಹೇಳಬಹುದು.
- ಶಿಕ್ಷಕರು / ಹಿರಿಯರು ಕಥೆಯನ್ನು ಗುಂಪಿಗೆ ಓದಿ ಹೇಳಬೇಕು ಮತ್ತು ಕಥೆಯನ್ನು ಹಾವಭಾವದೊಂದಿಗೆ ಸ್ವಾರಸ್ಯಕರವಾಗಿ ಹೇಗೆ ಹೇಳಬಹುದು ಎಂದು ಗುಂಪಿನಲ್ಲಿ ತೋರಿಸಬೇಕು. ಮಕ್ಕಳು ಇದನ್ನು ನೋಡಿ ಹಿರಿಯರು ಓದುತ್ತಿರುವಾಗ ಪಠ್ಯವನ್ನು ನೋಡಿ ಅರ್ಥಮಾಡಿಕೊಳ್ಳಲು ಸಮರ್ಥರಾಗಬೇಕು.
- ವಿರಾಮ ಚಿಹ್ನೆಗಳನ್ನು ಬಳಸುವ ಬಗ್ಗೆ ಚರ್ಚೆಯನ್ನು ಪರಿಚಯಿಸಬಹುದು ಮತ್ತು ಕಥೆಯ ಓದುವಿಕೆಯ ಮೇಲೆ ಇದರ ಪ್ರಭಾವ ಏನು ಎಂಬುದನ್ನು ತಿಳಿಸಬಹುದು.
- ಕಥೆಯಲ್ಲಿ ದೊಡ್ಡ ಅಕ್ಷರಗಳ ಬಳಕೆಯ ಕುರಿತಾಗಿಯೂ ಚರ್ಚಿಸಬಹುದು.

ಮಗುವು ಸ್ವತಂತ್ರವಾಗಿ ಓದಲು ಪ್ರಾರಂಭಿಸುವ ಮೊದಲು, ಪ್ರಾಥಮಿಕ ಹಂತದಲ್ಲಿ ಓದುವ ಪ್ರತಿಯೊಂದು ಪುಸ್ತಕದ ವಿಷಯದಲ್ಲಿ ಈ ತೆರನಾದ ಪರಿಚಯವನ್ನು ನೀಡಿದರೆ ಅವರೇ ತಮ್ಮ ಪುಸ್ತಕಗಳನ್ನು ಆಯ್ದುಕೊಳ್ಳಲು ತಯಾರಾಗುತ್ತಾರೆ. ಕಥೆಯಲ್ಲಿಯ ಪಾತ್ರಗಳು ಮತ್ತು ಘಟನೆಗಳು ಅವರಿಗೆ ಆಪ್ತವಾಗುವುದು ಮತ್ತು ಉಳಿದ ಎಲ್ಲ ತಯಾರಿಗಳ ಪೂರೈಕೆ ನಡೆಸುತ್ತಿದ್ದರೆ ಅವರು ಶಾಬ್ದಿಕ ಅನುವಾದದ ಕೌಶಲ್ಯ, ಪದದ ಪುನಃಸ್ಮರಣೆ, ಊಹೆ ಮತ್ತು ಕ್ರಮಾನುಗತಿಯನ್ನು ಬಳಸಿಕೊಂಡು ಸ್ವತಂತ್ರವಾಗಿ ಓದಲು ಸಮರ್ಥರಾಗುವರು ಮತ್ತು ಅದರಲ್ಲಿ ಸಂತೋಷವನ್ನು ಅನುಭವಿಸುವರು

## ಪುನರಾವರ್ತನೆಯ ಪ್ರಾಮುಖ್ಯತೆ

ಈಗಷ್ಟೇ ಸ್ವತಂತ್ರವಾಗಿ ಓದಲು ಪ್ರಾರಂಭಿಸಿದ ಬಹಳಷ್ಟು ಚಿಕ್ಕ ಮಕ್ಕಳು ಅವರಿಗೆ ಅಚ್ಚುಮೆಚ್ಚಿನ ಪುಸ್ತಕವನ್ನು ಒಂದಕ್ಕಿಂತ ಹೆಚ್ಚು ಸಲ ಆಯ್ಕೆ ಮಾಡಲು ಇಚ್ಛಿಸುತ್ತಾರೆ. ಹಾಗೆ ಮಾಡಲು ನಾವು ಅವಕಾಶ ಕೊಡುವುದು ಮುಖ್ಯವಾಗುತ್ತದೆ, ಏಕೆಂದರೆ ಇದು ಓದುವಿಕೆಯ ಅಭ್ಯಾಸವನ್ನು ಬಲಗೊಳಿಸಲು ಅನುಕೂಲ ಒದಗಿಸುವುದಲ್ಲದೇ ಪ್ರಾಥಮಿಕ ಓದಿನ ಪ್ರಕ್ರಿಯೆಯಲ್ಲಿ ಆನಂದವನ್ನು ಒದಗಿಸುತ್ತದೆ.

## ಪೋಷಕರು, ಶಿಕ್ಷಕರು ಮತ್ತು ಕುಟುಂಬದ ಸದಸ್ಯರ ಚಾಲ್ತಿಯಲ್ಲಿರಬೇಕಾದ ಪಾತ್ರ

ಒಂದು ಮುಖ್ಯವಾದ ವಿಷಯವೇನೆಂದರೆ ಮಕ್ಕಳು ಸ್ವಂತವಾಗಿ ಓದಲು ಪ್ರಾರಂಭಿಸುವ ಮೊದಲು ಮತ್ತು ಅವರು ಓದುಗರಾದ ಅನಂತರದಲ್ಲಿಯೂ ಹಿರಿಯರು ಅವರಿಗೆ ಓದಿ ಹೇಳುವುದನ್ನು ಮುಂದುವರೆಸಬೇಕು.

ಒಬ್ಬರಿಗೊಬ್ಬರು ಓದಿ ಹೇಳುವ ಸನ್ನಿವೇಶಗಳಲ್ಲಿ ಹಿರಿಯರು ಮಕ್ಕಳನ್ನು ಪಕ್ಕದಲ್ಲಿ ಕೂರಿಸಿಕೊಳ್ಳುವುದು ಬಹಳ ಮಹತ್ವದ್ದು. ಇದರಿಂದ ಮಕ್ಕಳಿಗೆ ಹಿರಿಯರು ಓದಿದ್ದನ್ನು ಅರ್ಥಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ. ಕೆಲವು ಮಕ್ಕಳು ಸ್ವಾಭಾವಿಕವಾಗಿಯೇ ಇದನ್ನು ಮಾಡುತ್ತಾರೆ ಮತ್ತು ಲಿಖಿತ ಪದಗಳು ಹಾಗೂ ಸಾಹಿತ್ಯದ ಮೇಲೆ ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. ಶೀಘ್ರವಾಗಿ ಅರ್ಥಮಾಡಿಕೊಳ್ಳಲಾಗದಿರುವ ಇತರ ಮಕ್ಕಳೂ ಇದರಿಂದ ಲಾಭ ಪಡೆಯುತ್ತಾರೆ ಮತ್ತು ಸಾಮಾನ್ಯವಾಗಿ ಇವರಿಗೆ ಪಠ್ಯದಲ್ಲಿನ ಕೆಲವನ್ನು ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯವಾದರೂ ಕಥೆಯಲ್ಲಿ ಮಗ್ನರಾಗಿರುತ್ತಾರೆ. ಆನಂದಿಸಬಹುದಾದ ಕೆಲವು ಅದ್ಭುತ ಸಾಹಿತ್ಯಗಳು ಇವೆ. ಹಿರಿಯರು ಮಕ್ಕಳಿಗೆ ಓದಿ ಹೇಳಿ ಅದನ್ನು ಕಂಡುಕೊಳ್ಳಲು ಸಹಾಯ ಮಾಡಿದರೆ, ಇದರಲ್ಲಿ ತೊಡಗಿಸಿಕೊಂಡಿರುವ ಎಲ್ಲರಿಗೂ ಸಮೃದ್ಧವಾದ ಅನುಭವವಾಗುವುದು. ಸ್ವತಂತ್ರವಾಗಿ ಓದಲು ಸಮರ್ಥರಿರುವ ಮಕ್ಕಳಿಗೆ ಅವರಿಗೆ ಓದಲು ಬೇಕಾದ ಪುಸ್ತಕವನ್ನು ಅವರೇ ಆಯ್ಕೆ ಮಾಡಿಕೊಳ್ಳಲು ಸ್ವಲ್ಪ ಮೊದಲೇ ಬಿಡಬೇಕು. ಇದರ ಅರ್ಥವೇನೆಂದರೆ ಮಕ್ಕಳು ತಮ್ಮ ಓದಿನಲ್ಲಿ ಪ್ರಗತಿಯನ್ನು ಹೊಂದುತ್ತಿದ್ದಂತೆ ಅವರು ಪರಿಚಿತ ವಿಷಯಗಳನ್ನು ಪುನಃ ನೋಡುತ್ತಾರೆ ಮತ್ತು ಅವರ ಓದು ನಿರಂತರವಾಗಿ ವಿಸ್ತರಿಸುತ್ತಾ ಹೋಗುತ್ತದೆ.

## ಮುಕ್ತಾಯ

ಓದುವ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲ ಒದಗಿಸುವುದು ವಾಸ್ತವವಾಗಿಯೂ ಒಂದು ಹೆಮ್ಮೆಯ ಅವಕಾಶ. ಇದು, ಕಥೆಗಳು, ಕಲಿಕೆ ಮತ್ತು ಅರ್ಥೈಸಿಕೊಳ್ಳುವ ಮಾಯಾ ಪ್ರಪಂಚದ ಕೀಲಿಯನ್ನು ಮಕ್ಕಳ ಕೈಗೆ ಕೊಟ್ಟಂತೆ ಇರುತ್ತದೆ. ಪ್ರತಿಯೊಬ್ಬನಿಗೂ ಈ ಕೀಲಿಯನ್ನು ಪಡೆಯುವ ಮತ್ತು ಅದನ್ನು ಬಳಸುವ ಜ್ಞಾನವನ್ನು ಪಡೆಯುವ ಹಕ್ಕು ಇದೆ.



**ರಿಯಾ** 1970ರಲ್ಲಿ ಲಂಡನ್‌ನ ಅವಕಾಶ ವಂಚಿತ ಭಾಗವೊಂದರಲ್ಲಿದ್ದ ಪ್ರೌಢ ಶಾಲಾ ಶಿಕ್ಷಕಿಯಾಗಿ ತನ್ನ ಶಿಕ್ಷಕ ವೃತ್ತಿಯನ್ನು ಆರಂಭಿಸಿದರು. ಇವರು ಆದರ್ಶವಾದಿ ಮತ್ತು ಮಕ್ಕಳ ಜೀವನದಲ್ಲಿ ನಿಜವಾದ ಬದಲಾವಣೆ ತರಬೇಕಾದರೆ ಸಣ್ಣ ವಯಸ್ಸಿನ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಬೇಕೆಂದನ್ನು ಅರಿತಿದ್ದವರು. 1972 ರಲ್ಲಿ ಸಣ್ಣಮಕ್ಕಳ ಶಾಲೆಯನ್ನು ಸೇರಿದರು ಮತ್ತು ಅಲ್ಲಿ ಮಕ್ಕಳಿಗೆ ಓದಲು ಕಲಿಸುವುದರಲ್ಲಿ ತನಗಿದ್ದ ಅನುರಕ್ತಿಯನ್ನು ಕಂಡುಕೊಂಡರು. ಇವರ ವೃತ್ತಿ ಜೀವನದಲ್ಲಿ ಶಿಕ್ಷಣದ ಆರಂಭದ ವರ್ಷಗಳ ವಿದ್ಯಾಭ್ಯಾಸದ ಬಗ್ಗೆ ಇವರಿಗಿದ್ದ ಆಸಕ್ತಿ ಮುಂದುವರೆಯಿತು ಮತ್ತು ಇವರು ಅನುಭವಸ್ಥ ವೃತ್ತಿಪರರಾದರು. 1983ರಲ್ಲಿ ಇವರು ಮುಖ್ಯ ಶಿಕ್ಷಕಿಯಾದಾಗ ಈ ಆಸಕ್ತಿ ಮುಂದುವರೆಸಲು ಸಾಧ್ಯವಾಯಿತು ಮತ್ತು ವೃತ್ತಿ ತರಬೇತಿಗಳಿಂದ ಮತ್ತು ಸಭೆ ಹಾಗೂ ವಿಚಾರ ಸಂಕಿರಣಗಳಲ್ಲಿ ವಿಷಯ ಪ್ರಸ್ತುತಿ ಪಡಿಸುವುದರಿಂದ ಪರಿಣತಿಯನ್ನು ಸಾಧಿಸಿದರು. ಈಗ ನಿವೃತ್ತಿಯ ಅನಂತರ ಗೃಹ ಶಿಕ್ಷಣ ಮತ್ತು ಶೈಕ್ಷಣಿಕ ಪೂರ್ವದ ಗುಂಪುಗಳಿಗೆ, ಹಿರಿಯರ ಸಾಕ್ಷರತಾ ಸಂಘಟನೆಗಳಿಗೆ ಸಹಾಯ ಮಾಡುವುದನ್ನು ಮುಂದುವರೆಸಿದ್ದಾರೆ. ಇದಲ್ಲದೇ ಶೈಕ್ಷಣಿಕ ಪೂರ್ವದ ಶಾಬ್ದಿಕ ಪ್ಯಾಕ್ ಅನ್ನು ಪ್ರಕಟಿಸಿದ್ದಾರೆ (www.pre-school-phonics.co.uk). ಪ್ರಸ್ತುತ ಇವರು ಎಲ್ಲಾ ವಯಸ್ಸಿನವರಿಗಾಗಿ ಶಾಬ್ದಿಕ ವ್ಯವಸ್ಥೆಯ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಕಲಾಕಾರನಾದ ಕ್ರಿಸ್ಟೋಫರ್ ಬ್ಯಾಝಿಲಿ ಎಂಬುವರೊಂದಿಗೆ ಇವರ ವಿವಾಹವಾಯಿತು. (www.chrisbazeley.com) ಇವರಿಗೆ ಇಬ್ಬರು ವಯಸ್ಕ ಮಕ್ಕಳು ಮತ್ತು 6 ಮೊಮ್ಮಕ್ಕಳಿದ್ದಾರೆ. ಇವರನ್ನು rheabazeley@fastmail.fm ಇಲ್ಲಿ ಸಂಪರ್ಕಿಸಬಹುದು.



# ಎಳೆಯ ವಯಸ್ಸಿನಲ್ಲಿ ಓದು–ಬರಹ

**ಪಾರ್ಥಸಾರಥಿ ಮಿಶ್ರಾ**

ಶಾಲಾ ಪೂರ್ವದ ಹಂತದಲ್ಲಿ ಪುಟಾಣಿ ಮಕ್ಕಳಲ್ಲಿ ಓದುವ ಮತ್ತು ಬರವಣಿಗೆಯ ಸಾಮರ್ಥ್ಯಗಳನ್ನು ಬೆಳಸುವುದು ಮತ್ತು ಪೋಷಿಸುವುದರ ಮಹತ್ವವನ್ನು ಕುರಿತು ಚರ್ಚಿಸುವುದು ಮತ್ತು ಅನಕ್ಷರಸ್ಥ ಸಮಾಜದಲ್ಲಿ ಬೆಳೆದ ಎಳೆಯ ಮಕ್ಕಳಲ್ಲಿ ಅಕ್ಷರ ಜ್ಞಾನವನ್ನು ಬೆಳೆಸುವಂತಹ ವಾತಾವರಣ ಉಂಟುಮಾಡಲು ಕಾರ್ಯತಂತ್ರಗಳನ್ನು ಪ್ರಾರಂಭಿಸುವ ಸಾಧ್ಯತೆಗಳನ್ನು ಹುಡುಕಿ ನೋಡುವುದು ಈ ಲೇಖನದ ಉದ್ದೇಶ. ಅಕ್ಷರ ಜ್ಞಾನಕ್ಕೆ, ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಉನ್ನತ ಸ್ಥಾನವಿದೆ. ಇದು ಘನತೆ, ಗೌರವ ಮತ್ತು ಅಧಿಕಾರದ ಸಂಕೇತವೆಂಬುದನ್ನು ಅನೇಕ ಶಿಶುಗೀತೆ, ನಾಣ್ಣುಡಿ ಮತ್ತು ಜನಪದ ಕಥೆಗಳಲ್ಲಿ ಸಾರಿ ಸಾರಿ ಹೇಳಲಾಗಿದೆ. ಉದಾಹರಣೆಗೆ ಒಂದು ಜನಪ್ರಿಯ ಬೆಂಗಾಲಿ ಭಾಷೆಯ ಶಿಶುಗೀತೆ ಮತ್ತು ಹಿಂದಿ ಭಾಷೆಯ ನಾಣ್ಣುಡಿಯನ್ನು ನೋಡೋಣ.

***"ಲಿಕಾಪೊಡಾ ಕೊರೇ ಜೆಯ್***
***ಗಾಡಿ ಗೋಡಾ ಚೋಡೇಸೈ***

(ಓದು ಬರಹ ಯಾರು ತಿಳಿದಿರುತ್ತಾರೋ, ಅವರು ಕುದುರೆ ಸವಾರಿ ಕಾರಿನ ಸವಾರಿ ಮಾಡುತ್ತಾರೆ.)

***"ಲಿಖಾಯಿ ಪಡಾಯಿ ನಹಿ ಸೀಕೋಗಿ***
***ತೋ ಗಧೇ ಕಿ ತರಾಹಿ ರಹೋಗೀ"***

(ಒಂದು ವೇಳೆ ನೀನು ಓದು ಬರಹ ಕಲಿಯದಿದ್ದರೆ, ಕತ್ತೆಯಂತೆ ಜೀವನ ಸಾಗಿಸಬೇಕಾಗುತದೆ.)

ಬೆಂಗಾಲಿ ಶಿಶುಗೀತೆಯನ್ನು ಓದುವ ಮತ್ತು ಬರೆಯುವ ಸಾಮರ್ಥ್ಯ ಇರುವವರು ಕಾರು ಕುದುರೆಯ ಮೇಲೆ ಸವಾರಿ ಮಾಡುವ ಸಾಮರ್ಥ್ಯವನ್ನು ಹೊಂದುತ್ತಾರೆ ಎಂದು ಹೇಳಿದರೆ ಹಿಂದಿ ಭಾಷೆಯ ನಾಣ್ಣುಡಿ ಓದುವ ಮತ್ತು ಬರೆಯುವ ಸಾಮರ್ಥ್ಯವು ಮನುಷ್ಯರನ್ನು ಪ್ರಾಣಿಗಳಿಂದ ಬೇರ್ಪಡಿಸುತ್ತದೆ ಎಂದು ಓದು ಬರಹದ ಮಹತ್ವವನ್ನು ತಿಳಿಸಿದೆ.

ಮಕ್ಕಳು ಓದು ಮತ್ತು ಬರಹವನ್ನು ಹೇಗೆ ಪ್ರಾರಂಭಿಸುತ್ತಾರೆ? ಎಂಬ ಪ್ರಶ್ನೆಯನ್ನು ನಾನೇ ಕೇಳಿಕೊಂಡಾಗ, ನನ್ನ ಬಾಲ್ಯದಲ್ಲಿ, ಕೇಳಿದ ಈಶ್ವರ ಚಂದ್ರ ವಿದ್ಯಾಸಾಗರ ಅವರ ಒಂದು ಕತೆ ನೆನಪಿಗೆ ಬರುತ್ತದೆ. ಅವರು ಒಬ್ಬ ಶ್ರೇಷ್ಠ ಶಿಕ್ಷಣ ತಜ್ಞ ಮತ್ತು ಸಮಾಜ ಸುಧಾರಕರು. ಒಂದು ವರದಿಯ ಪ್ರಕಾರ, ಅವರು ಶಾಲೆ ಸೇರುವ ಮುನ್ನವೇ ಇಂಗ್ಲೀಷ್‌ನಲ್ಲಿ ಅಂಕಿಗಳನ್ನು ಹೇಳುವುದನ್ನು ಕಲಿತಿದ್ದರಂತೆ. ಒಂದು ದಂತಕಥೆಯ ಪ್ರಕಾರ, ಈಶ್ವರಚಂದ್ರ ವಿದ್ಯಾಸಾಗರರವರು, 1828ರ ನವೆಂಬರ್ ನಲ್ಲಿ, ತನ್ನ ತಂದೆಯೊಂದಿಗೆ ತನ್ನ ಹುಟ್ಟೂರಿನಿಂದ ಕಲ್ಕತ್ತಾಗೆ ಕಾಲ್ನಡಿಗೆಯಲ್ಲಿ ಶಾಲೆಗೆ ಸೇರಲೆಂದು ಹೋಗುತ್ತಿರುವಾಗ, ದಾರಿಯುದ್ದಕ್ಕೂ ಇರುವ ಮೈಲುಗಲ್ಲಿನ ಮೇಲೆ ಬರೆದಿರುವ ಸಂಖ್ಯೆಗಳ ರೇಖಾಚಿತ್ರಗಳನ್ನು ಮನದಟ್ಟು ಮಾಡಿಕೊಂಡು, ಕಲ್ಕತ್ತಾ ನಗರವನ್ನು ಸೇರುವ ಮೊದಲೇ ಅವರು ಸಂಖ್ಯೆಗಳನ್ನು ಹೇಳುವುದನ್ನು ಕಲಿತಿದ್ದರಂತೆ. ನಾನು ತಾರುಣ್ಯಕ್ಕೆ ಬಂದ ಮೇಲೆ, ನಾನು ಗಮನಿಸಿದ ಅಂಶವೆಂದರೆ, ನನ್ನ ಮಕ್ಕಳು ತಮ್ಮ ಆಟಿಕೆಗಳ ಮೇಲೆ, ಮನೆಯಲ್ಲಿರುವ ವಸ್ತುಗಳ ಮೇಲೆ ಬರೆದ ವಿವಿಧ ಸಂಕೇತಗಳಿಂದ ಹೇಗೆ ಆಕರ್ಷಿತರಾಗುತ್ತಿದ್ದರು, ಜಾಹೀರಾತು ಫಲಕ, ವಸ್ತುಗಳನ್ನು ಸಂಗ್ರಹಿಸುವ ಪೆಟ್ಟಿಗೆ, ಸಿಹಿತಿಂಡಿಯ ಡಬ್ಬಗಳು, ಔಷಧಿ ಬಾಟಲಿಯ ಮೇಲೆ ಅಚ್ಚಾಗಿರುವ ಲಿಖಿತ ಪದಗಳು ತಿಳಿಸುವ ಮುದ್ರಿತ ಸಂದೇಶಗಳನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದರು ಎಂಬುದನ್ನು ಗಮನಿಸಿದ್ದೆ. ಸಾಂಪ್ರದಾಯಿಕವಾಗಿ ಓದು ಮತ್ತು ಬರಹ ಕಲಿಸುವ ವಿಧ್ಯುಕ್ತ ಸಮಾರಂಭವಾದ "ವಿದ್ಯಾರಂಭಂ" ಎನ್ನುವ ಕಾರ್ಯಕ್ರಮವನ್ನು ಮಾಡುವ ಮೊದಲೇ ನನ್ನ ಮಕ್ಕಳಲ್ಲಿ ನಿಧಾನವಾಗಿ ಮತ್ತು ಯಾರ ಅಡ್ಡಿ ಆತಂಕಗಳಿಲ್ಲದೇ ಓದು ಬರಹದ ಅರಿವು ಉದಯಿಸಿದ್ದನ್ನು ಗಮನಿಸಿದ ನನಗೆ ಅಚ್ಚರಿಯಾಗಿತ್ತು.

'ವಿದ್ಯಾರಂಭಂ', ಎನ್ನುವುದು ಅಕ್ಷರಸ್ಥ ಹಿಂದು ಮನೆತನದಲ್ಲಿ ಮಗುವಿನ ಅಕ್ಷರ ಕಲಿಕೆಯ ಪಯಣದ ಶುಭಾರಂಭವನ್ನು ನಡೆಸುವ ಒಂದು ಸಮಾರಂಭ. ಈ ಸಮಾರಂಭದಲ್ಲಿ ಮಗುವನ್ನು ಮನೆಯ ಹಿರಿಯ ಸದಸ್ಯರು ತಮ್ಮ ತೊಡೆಯ ಮೇಲೆ ಕೂರಿಸಿಕೊಂಡು, ಚಿನ್ನದ ಉಂಗುರದಿಂದ ಮಗುವಿನ ನಾಲಿಗೆಯ ಮೇಲೆ ಗಣಪತಿ ದೇವರ ಹೆಸರನ್ನು ಬರೆಯುವುದರೊಂದಿಗೆ ದೇವರ ಅನುಗ್ರಹವನ್ನು ಕೋರಲಾಗುತ್ತದೆ. ಹಾಗೆಯೇ ಅದೇ ಪದವನ್ನು ಮರಳು ಅಥವಾ ಅಕ್ಕಿಯನ್ನು ಹರಡಿರುವ ತಟ್ಟೆಯ ಮೇಲೆ ಮಗುವಿನ

ತೋರು ಬೆರಳಿನಿಂದ ಬರೆಸಲಾಗುತ್ತದೆ. ಅನೇಕರ ನಂಬಿಕೆಯಂತೆ ಈ ವಿದ್ಯಾರಂಭಂ ಶಾಸ್ತ್ರವನ್ನು ಮಾಡದೆ ಮಕ್ಕಳಿಗೆ ಓದು ಬರಹವನ್ನು ಕಲಿಸಲು ಪ್ರಾರಂಭಿಸಬಾರದು. ಈ ರೀತಿಯ ಸಾಂಪ್ರದಾಯಿಕ ವಿಧಿ ವಿಧಾನಗಳು ಮಗುವಿನಲ್ಲಿ ಹುಟ್ಟಿನಿಂದ ಅಂತರ್ಗತವಾಗಿ ಬೆಳೆದಿರುವ, ರಕ್ತಗತವಾಗಿ ಬಂದಂತಹ ಅರ್ಥಗ್ರಹಿಕಾ ಸಾಮರ್ಥ್ಯವನ್ನು ಮತ್ತು ನೋಡಿದ ಅಂಶವನ್ನು ಬೇಗನೇ ಗ್ರಹಿಸುವಂತಹ ಸಾಮರ್ಥ್ಯವನ್ನು ಕಡೆಗಣಿಸುತ್ತದೆ.

ಮಗು ತಾನು ಬೆಳೆದು ಬಂದ ಪರಿಸರದಿಂದಲೇ ಚಿತ್ರ ರೂಪದಲ್ಲಿ ತಿಳಿಸಿದ ವಿಷಯವನ್ನು ಗ್ರಹಿಸುವ ಮತ್ತು ಅವುಗಳನ್ನು ಅರ್ಥೈಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಮಗುವು ಎಂದು ಮುದ್ರಿತ ಚಿತ್ರಗಳನ್ನು ಗಮನಿಸುತ್ತದೆಯೋ ಮತ್ತು ಅವುಗಳ ಆಕಾರ ಮತ್ತು ಬಣ್ಣದಿಂದ ಆಕರ್ಷಿತವಾಗುತ್ತದೊ ಆ ದಿನದಂದು ಅದು ವಿನ್ಯಾಸಗಳನ್ನು ಗಮನಿಸುತ್ತದೆ. ಒಂದು ಪದಕ್ಕೂ ಒಂದು ಚಿತ್ರಕ್ಕೂ ಸಂಬಂಧವಿದೆ ಎಂಬುದನ್ನು ಗಮನಿಸುತ್ತವೆ ಹಾಗೆಯೇ ಎರಡು ಪದಗಳು ಒಂದೇ ಆಗಿವೆ ಎಂಬುದನ್ನು ಕಂಡುಹಿಡಿಯುತ್ತವೆ. "ಮಗು, ಓದುವ ಮತ್ತು ಬರಹದ ಬಗ್ಗೆ ಯಾರ ಸಹಾಯ-ಸಹಕಾರವಿಲ್ಲದೇ, ಅವರಿಗಾಗಿ ಪೂರ್ವತರಬೇತಿ ರೂಪಿಸದೇ ಇದ್ದರೂ ಹಾಗೂ ಅದಿನ್ನೂ ಸಾಂಪ್ರದಾಯಿಕವಾಗಿ ಕಲಿತಿರದಿದ್ದರೂ ಅವುಗಳ ಬಗ್ಗೆ ತನ್ನದೇ ಆದ ಆಲೋಚನೆಯನ್ನು ರಚಿಸಿಕೊಳ್ಳುತ್ತದೆ. (Teale and Sulzby.1991:52).

ಮಗುವಿನ ಅನುಭವವನ್ನು ಸಮೃದ್ಧಗೊಳಿಸುವುದೇ ಎಳೆಯ ಮಕ್ಕಳ ಶಿಕ್ಷಣದ ಅಂತಿಮ ಗುರಿಯಾಗಿದ್ದಲ್ಲಿ, ತಂದೆತಾಯಿಯರು ಕಲಿಯುವ ಕುತೂಹಲವಿರುವ ತಮ್ಮ ಮಕ್ಕಳಿಗೆ ಬಹಳ ಎಳೆಯ ವಯಸ್ಸಿನಲ್ಲಿಯೇ ಓದುವ ಮತ್ತು ಬರೆಯುವ ವಿಧಾನವನ್ನು ಪರಿಚಯಿಸಲು ಹಿಂಜರಿಯಬಾರದು. ತಂದೆತಾಯಿಯರು ಪದಗಳು ಮತ್ತು ಮುದ್ರಿತ ಅಕ್ಷರದಬಗ್ಗೆ ತಮ್ಮ ಮಕ್ಕಳಲ್ಲಿ ಕುತೂಹಲ ಮತ್ತು ಆಸಕ್ತಿಯ ಕಿಡಿಹೊತ್ತಿಸಬಲ್ಲರಾದರೆ ಮಕ್ಕಳು ತೋರಿಸುವ, ಆ ಆಸಕ್ತಿಗೆ ಪ್ರತಿಸ್ಪಂದಿಸಲೇ ಬೇಕು (ಕ್ಲೇ, 1991 : 29).

ಅಕ್ಷರಸ್ಥ ಸಮಾಜದ ಮನೆಗಳಲ್ಲಿ ತಂದೆತಾಯಿಯರು ತಮ್ಮ ಮಕ್ಕಳಿಗಾಗಿ ಕತೆಗಳನ್ನು ಓದಿಹೇಳುವುದರಿಂದ ಅದನ್ನು ನಿರಂತರ ಆಲಿಸುವ ಮಕ್ಕಳು ಓದುವ ಮತ್ತು ಮುದ್ರಿತ ಪದಗಳನ್ನು ಅರ್ಥಮಾಡಿಕೊಳ್ಳುವ ಈ ಆಸಕ್ತಿಯನ್ನು ಹೊಂದಿರುತ್ತಾರೆ. ಹೀಗೆ, ಆಲಿಸುವಿಕೆ ಓದುವ ಕೌಶಲ್ಯಕ್ಕೆ ಉತ್ತೇಜನ ನೀಡುತ್ತದೆ ಹಾಗೂ ಮುದ್ರಿತ ಪರಿಸರದ ಅನುಭವವನ್ನು ಪಡೆಯುವಾಗ ಮಕ್ಕಳು ನೋಡಿ ಗ್ರಹಿಸುವ ಶಕ್ತಿಯ ಬೆಳವಣಿಗೆಗೆ ಒಂದು ಭದ್ರವಾದ ಅಡಿಪಾಯವನ್ನು ಸಿದ್ಧ ಗೊಳಿಸುತ್ತದೆ.

ಮಕ್ಕಳ ಭಾಷಾ ಅಭಿವೃದ್ಧಿ ಮತ್ತು ಅರಿವಿನ ಬೆಳವಣಿಗೆಯ ನಡುವೆ ಒಂದು ಅನ್ಯೋನ್ಯ ಸಂಬಂಧವಿದೆ ಎಂಬುದು ಸ್ಥಾಪಿತ ಸತ್ಯ ಮತ್ತು ಮಕ್ಕಳು ತಮ್ಮ ಅರಿವಿನ ಅಭಿವೃದ್ಧಿಯ ಜೊತೆಜೊತೆಯಲ್ಲೇ ಹಲವಾರು ಭಾಷೆಗಳ ಸಂಶೋಧನೆ ಮಾಡುವ ಸಹಜ ಪ್ರವೃತ್ತಿಯನ್ನು ಹೊಂದಿರುತ್ತಾರೆ.

ಮಗು ಬೇರೆ ಮಕ್ಕಳೊಂದಿಗೆ ಆಟವಾಡುವಾಗ ಅಥವಾ ಹಿರಿಯರೊಂದಿಗೆ ಮಾತನಾಡುವಾಗ, ಅದು ಸಮಾಜದ ಭಾಷಾ ನೀತಿ-ನಿಯಮಗಳಿಗೆ ಅನುಗುಣವಾಗಿ ತಮ್ಮನ್ನು ತಾವು ಸಾಮಾಜಿಕರಣಗೊಳಿಸುವಲ್ಲಿ ಸಹಾಯಕವಾಗುವ ಭಾಷಾ ಕೌಶಲ್ಯಗಳಲ್ಲಿಯ ಅಸಂಖ್ಯಾತ ಅನುಭವಗಳನ್ನು ಪಡೆದುಕೊಳ್ಳುತ್ತದೆ. ಒಂದು ಪರಿಕಲ್ಪನೆಯನ್ನು ಅಭಿವ್ಯಕ್ತಿಪಡಿಸುವಾಗ ಕಾಲಕ್ಕೆ ತಕ್ಕಂತೆ, ವರ್ತಮಾನಕಾಲ, ಭೂತಕಾಲ, ಭವಿಷ್ಯತ್ಕಾಲ ಮತ್ತು ಹತ್ತಿರ-ದೂರ, ಮೇಲೆ-ಕೆಳಗೆ, ಇಂತಹ ಸನ್ನಿವೇಶದಲ್ಲಿ ಪದಗಳನ್ನು ಯಾವ ರೀತಿ ಬಳಸಬೇಕೆಂಬುದನ್ನು ಕಲಿಯುತ್ತದೆ. ಒಂದು ವೇಳೆ ಮಗುವು ಪೆನ್ ಮತ್ತು ಪೆನ್ಸಿಲ್ ಗಳನ್ನು ಹಿಡಿದುಕೊಳ್ಳುವಂತವರಾಗಿದ್ದರೆ, ಗೋಡೆಯ ಮೇಲೆ, ನೆಲದ ಮೇಲೆ ಅಥವಾ ತಮ್ಮ ಸುತ್ತಮುತ್ತಲಿನ ಯಾವುದೇ ವಸ್ತುಗಳ ಮೇಲೆ ಲೆಕ್ಕವಿಲ್ಲದಷ್ಟು ಚುಕ್ಕೆಗಳನ್ನು, ರೇಖೆಗಳನ್ನು ಬರೆಯುವ ಪ್ರವೃತ್ತಿಯನ್ನು ಹೊಂದಿರುತ್ತದೆ. ಮಗು ಯಾವುದೇ ಸ್ಥಳದಲ್ಲಿ ಗೀಚುವ ರೇಖೆಗಳು, ಬರೆಯುವ ಬರವಣಿಗೆ ಅಥವಾ ರೇಖಾಚಿತ್ರಗಳು, ಈ ಹಿಂದೆ ಯಾವುದೇ ವಸ್ತುಗಳ ಮೇಲೆ ಅದೇ ತರಹದ ಗುರುತನ್ನು ಮಗು ನೋಡಿದೆ ಎಂದು ಅರ್ಥ. 'ಅವರು ಅರ್ಥ ಮತ್ತು ರೂಪ, ಸೂಚಿತ ಮತ್ತು ಸೂಚಿಸುವವರ ನಡುವೆ ಪ್ರೇರಿತ ಸಂಬಂಧದ ಮೇಲೆ ಆಧಾರಿತ ಗುರುತುಗಳನ್ನು ಮಾಡುತ್ತಾರೆ' (Kress, 1997: 73)

ಒಂದು ವೇಳೆ ಮಗುವಿನ ಕೈಯಲ್ಲಿ ಪುಸ್ತಕ ಸಿಕ್ಕರೆ ಅದು ಏನು ಮಾಡಬಹುದು? ಪುಸ್ತಕವನ್ನು ಬಾಚಿ ತೆಗೆದುಕೊಂಡು ಪುಟಗಳನ್ನು ತೆರೆದು, ಪುಟವೊಂದನ್ನು ಗಟ್ಟಿಯಾಗಿ ಹಿಡಿದುಕೊಳ್ಳಬಹುದು ಮತ್ತು ಪುಟವನ್ನು ಹರಿಯಲು ಪ್ರಯತ್ನಿಸಬಹುದು. ಕೆಲವು ಸಲ ಮಕ್ಕಳು, ಪುಸ್ತಕವನ್ನು ತಾನೊಂದೇ ಗಮನಿಸುತ್ತಾ; ಅದರಲ್ಲಿರುವ ಚಿತ್ರಗಳನ್ನು ನೋಡುತ್ತಾ; ಅವುಗಳೊಂದಿಗೆ ಮಾತನಾಡುತ್ತಾ, ಓದುವಂತೆ ನಟಿಸುತ್ತಾರೆ. ಯಾವ ಮಗುವಿಗೆ ಅಕ್ಷರದ ಜ್ಞಾನವಿರುವುದಿಲ್ಲವೋ ಆ ಮಗುವಿಗೆ ಅಕ್ಷರ ಮತ್ತು ಚಿತ್ರಗಳ ನಡುವೆ ಯಾವ ವ್ಯತ್ಯಾಸವಿದೆಯೆಂಬುದು ಸಹ ತಿಳಿಯುವುದಿಲ್ಲ. ಎರಡೂ ಒಂದೊಂದು ರೀತಿಯ ರೇಖಾ ಚಿತ್ರಗಳು ಮತ್ತು ಅವು ಏನನ್ನೋ ಹೇಳುತ್ತಿವೆ

ಎನಿಸುತ್ತದೆ. ಚಿತ್ರಗಳನ್ನು ತೋರಿಸುತ್ತಾ ಮಗು ತನ್ನ ತಂದೆತಾಯಿಯರಿಗೆ ನಿರಂತರ ಕೇಳುವುದೇನೆಂದರೆ "ಈ ಚಿತ್ರ ಏನನ್ನು ಹೇಳುತ್ತದೆ?" ಎಂದು. ಯಾವ ದಿನದಂದು ಮಗು ಚಿತ್ರಗಳನ್ನು ಮತ್ತು ಅಕ್ಷರಗಳನ್ನು ನೋಡಿ, ಇವುಗಳು, ಏನೋ ಸ್ವಾರಸ್ಯವಾದುದನ್ನು ಹೇಳುತ್ತವೆ ಎಂಬುದನ್ನು ತಿಳಿಯುತ್ತದೆಯೋ, ಆ ದಿನದಿಂದಲೇ ಅದು ತನ್ನ ಸಾಕ್ಷರತೆಯತ್ತ ಪಯಣವನ್ನು ಬೆಳೆಸುತ್ತದೆ. ಕಲಿಕೆಯ ಮೂಲ ಪರಿಕಲ್ಪನೆಗಳಾದ, ಅಕ್ಷರಗಳು ವಿಷಯವನ್ನು ತಿಳಿಸುತ್ತಾ ಒಂದು ಕ್ರಮಬದ್ಧವಾದ ವ್ಯವಸ್ಥೆಯಲ್ಲಿ ಬರೆಯಲ್ಪಟ್ಟಿವೆ, ಪದಗಳು ಅರ್ಥಗರ್ಭಿತವಾಗಿವೆ, ಓದುವ ಕ್ರಿಯೆ ಎಡದಿಂದ ಬಲಭಾಗದ ಕಡೆಗೆ ನಡೆಯುವಂತದ್ದು ಅಥವಾ ಪುಸ್ತಕ ಮುಂಭಾಗದಿಂದ ಹಿಂಭಾಗದವರೆಗೆ ಹೋಗಿ ಕೊನೆಯಾಗುತ್ತದೆ ಇವೆಲ್ಲಾ, ಮಗುವಿಗೆ ತಾನೆ ಕೈಯಲ್ಲಿ ಪುಸ್ತಕವನ್ನು ಹಿಡಿದುಕೊಳ್ಳಲು, ಅದರೊಂದಿಗೆ ಆಟವಾಡಲು ಹಾಗೂ ತಂದೆತಾಯಿಗಳ ಮತ್ತು ಪೋಷಕರ ಮಧ್ಯಪ್ರವೇಶವಿಲ್ಲದೇ ಅದರೊಂದಿಗೆ ಮಾತನಾಡಲು ಅವಕಾಶ ನೀಡಿದಾಗಲೇ ಪ್ರಾರಂಭವಾಗುವುದು.

"ಸಾಮಾನ್ಯವಾಗಿ ಲಿಖಿತ ಭಾಷೆ ಅರ್ಥಗರ್ಭಿತ ಎಂಬ ಅರಿವು ತಮಗೆ ಮೂಡಿದಾಗ ವ್ಯಕ್ತಿಗಳು ಓದುವುದನ್ನು ಮತ್ತು ಬರೆಯುವುದನ್ನು ಕಲಿಯಲು ಆರಂಭಿಸುತ್ತಾರೆ." Goodman (1992:6)

ಮಕ್ಕಳಲ್ಲಿ ಸಾಕ್ಷರತೆ ಉದಯಿಸಬೇಕಾದರೆ ಈ ರೀತಿಯ ಶ್ರೀಮಂತವಾದ ಪರಿಸರದ ಅವಕಾಶ ಕಲ್ಪಿಸಿ ಅಗತ್ಯವಾದ ಅರಿವನ್ನು ಕೊಡಬೇಕಾಗುತ್ತದೆ. ಭಾರತ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು, ರಚಿಸಿರುವ, "ಆರಂಭಿಕ ಬಾಲ್ಯದ ಶಿಕ್ಷಣ ಪಠ್ಯಕ್ರಮದ ಚೌಕಟ್ಟು" (2012), ಸಹ ಮಕ್ಕಳು ಪುಟ್ಟವರಿದ್ದಾಗಲೇ ಓದುಬರಹದ ಸಾಮರ್ಥ್ಯವನ್ನು ಬೆಳಸುವುದರ ಕಡೆಗೆ ಗಮನ ನೀಡಬೇಕು ಎಂದು ಒತ್ತಿ ಹೇಳುತ್ತಿದೆ.

ಓದು-ಬರಹ ಕುರಿತಂತೆ ಇರುವ ಚರ್ಚೆಗಳು, ಅಕ್ಷರಸ್ಥ ಸಮಾಜ ಮತ್ತು ಸಾಕ್ಷರ ಪರಿಸರದ ಬಗ್ಗೆ ನಮ್ಮ ಪೂರ್ವಕಲ್ಪನೆಯ ಹಿಡಿತಕ್ಕೊಳ್ಳಪಟ್ಟಿರುತ್ತವೆ. ಅಕ್ಷರಸ್ಥ ಸಮಾಜದಲ್ಲಿ ಬೆಳೆದ ಮಗು ಸಾಕ್ಷರತೆಯನ್ನೇ ಉಸಿರಾಡುತ್ತದೆ ತನ್ನ ಸುತ್ತಲ್ಲಿರುವ ಓದು-ಬರಹ ಬಲ್ಲ ವಾತಾವರಣದಲ್ಲಿಯೇ ಮುಳುಗಿ ಏಳುತ್ತದೆ, ಮತ್ತು ತನ್ನ ಸರ್ವತೋಮುಖ ಬೆಳವಣಿಗೆಯಲ್ಲಿ ಸಾಕ್ಷರತೆ ಒಂದು ಅವಿಭಾಜ್ಯ ಅಂಗ ಎಂದು ಅರಿತು ಬೆಳೆಯುತ್ತದೆ. ಆದರೆ, ಅನಕ್ಷರಸ್ಥ ಸಮಾಜದಲ್ಲಿ ಬೆಳೆದ ಮಗುವಿನ ಸ್ಥಿತಿ ಏನು? ಈ ಮಗು ಸಹ ಅಕ್ಷರಸ್ಥ ಸಮಾಜದಲ್ಲಿ ಬೆಳೆದ ಮಗುವಿನಷ್ಟೇ ಸೌಲಭ್ಯಗಳನ್ನು ಓದು-ಬರಹದ ಜ್ಞಾನ ಗಳಿಕೆ ಪಡೆಯುವ ಅವಕಾಶವಿದೆಯೇ? ಬಹುತೇಕ ಭಾರತದ ಕುಟುಂಬಗಳಲ್ಲಿ, ತಂದೆತಾಯಿಯರು ತಮ್ಮ ಮಕ್ಕಳಿಗೆ ಮುದ್ರಿತ ಓದುಬರಹದ ಸಾಮಗ್ರಿಗಳನ್ನು ಒದಗಿಸುವ ಶ್ರೀಮಂತಿಕೆಯ ಕನಸನ್ನೂ ಕಾಣಲಾರರು. ದೆಹಲಿಯಲ್ಲಿ 25-28 ಎಪ್ರಿಲ್ 2011 ರಲ್ಲಿ ನಡೆಸಲಾದ Consultancy on Early Literacy ಒಂದು ಸಮೀಕ್ಷೆಯಾದ ಪ್ರಕಾರ, "ಅನೇಕ ಮಕ್ಕಳ ಪಾಲಿಗೆ ಲಿಖಿತ ಭಾಷೆಯ ಕಲಿಕೆ ಪ್ರಾರಂಭವಾಗುವುದು ಅವರು ಶಾಲೆಗೆ ಹೋದ ಮೇಲೆಯೇ. ಅಂತಹ ಮಕ್ಕಳನ್ನು ಕ್ರಮೇಣ ಅನೌಪಚಾರಿಕವಾಗಿ, ಅರ್ಥಗರ್ಭಿತವಾಗಿ ಮತ್ತು ಬೆದರಿಕೆಯಿಲ್ಲದ ಮುಕ್ತವಾದ ವಾತಾವರಣದಲ್ಲಿ ಓದುಬರಹದ ಜಗತ್ತಿಗೆ ಕರೆತರಬೇಕಾದ ಅಗತ್ಯತೆಯಿದೆ. ಹೊಸದಾಗಿ ಶಾಲೆಗಳಿಗೆ ಸೇರಿದವರಾಗಿ, ಅವರು ತರಗತಿಯಲ್ಲಿ ನಡೆಯುವ ಔಪಚಾರಿಕವಾದ, ಮುಕ್ತವಾದ ಚಟುವಟಿಕೆಗಳಲ್ಲಿ ಭಾಗವಹಿಸಿ ಉದ್ದೇಶಪೂರ್ವಕವಾಗಿ ಚಿತ್ರ ಬಿಡಿಸುವ, ಗೀಚುವ, ಓದುವ, ಬರೆಯುವ ಚಟುವಟಿಕೆಯಲ್ಲಿ ತೊಡಗುತ್ತಾರೆ ತನ್ಮೂಲಕ ಲಿಖಿತ ರೂಪದ ಭಾಷೆ ಎಂದರೇನು ಎಂದು ಅರ್ಥಮಾಡಿಕೊಂಡು ಅದರ ಬಗ್ಗೆ ಪರಿಕಲ್ಪನೆ ಮತ್ತು ಜ್ಞಾನವನ್ನು ಗಳಿಸಲು ಪ್ರಾರಂಭಿಸುತ್ತಾರೆ."

ಭಾರತದ ಸನ್ನಿವೇಶದಲ್ಲಿ, ಅಂಗನವಾಡಿ ಸಂಸ್ಥೆಗಳು 0-6 ವರ್ಷದ ಒಳಗಿನ ಅನಕ್ಷರಸ್ಥ ಸಮಾಜದಿಂದ ಬರುವ ಮಕ್ಕಳಿಗೆ ಓದುವ ಮತ್ತು ಬರೆಯುವ ಕ್ರಿಯೆಯನ್ನು ಪರಿಚಯಿಸುವ ಮತ್ತು ಅವರು ತಾವೇ ಕುಳಿತು ಓದುವಂತೆ ಮಾಡುವ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ದುರದೃಷ್ಟದ ಸಂಗತಿಯೇನೆಂದರೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಮಕ್ಕಳ ಉದಯೋನ್ಮುಖ ಓದುಬರಹ ಕಲಿಕೆಯ ಸಿದ್ಧಾಂತ ಮತ್ತು ಪ್ರಾಯೋಗಿಕ ವಿಚಾರಗಳ ಬಗ್ಗೆ ಸಮರ್ಪಕ ತರಬೇತಿಯನ್ನು ಕೊಟ್ಟಿರುವುದಿಲ್ಲ. ಈ ಸಂಗತಿಗಳಿಂದ ಅವರು ಮಕ್ಕಳ ಓದು ಬರಹ ಕಲಿಕಾ ಅನುಭವಕ್ಕೆ ಹೆಚ್ಚಿನ ಪುಷ್ಟಿ ನೀಡಲಾರರು. ಅಂಗನವಾಡಿ ಸಂಸ್ಥೆಗಳಲ್ಲಿ ನಡೆಸಲಾಗುವ ಶಾಲಾ ಪೂರ್ವ ಕಲಿಕಾ ಚಟುವಟಿಕೆಗಳು ಸಾಮಾನ್ಯವಾಗಿ ಪದ್ಧತಿ ಶಿಕ್ಷಣದ ಶಾಲಾ ವಾತಾವರಣದಲ್ಲಿ ನಡೆಯುವ ಕಲಿಕಾ ಚಟುವಟಿಕೆಗಳನ್ನು ಸರಳ ಗೊಳಿಸಿದ ಚಟುವಟಿಕೆಗಳಾಗಿರುತ್ತವೆ. ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ತಂದೆತಾಯಿಯರಿಗೆ ಮಕ್ಕಳ ವಿಕಾಸ ಮತ್ತು ಬೆಳವಣಿಗೆ ಬಗ್ಗೆ ತಿಳುವಳಿಕೆ ನೀಡಿ, ತಮ್ಮ ಸುತ್ತಮುತ್ತ ದೊರೆಯುವಂತಹ ಕಲಿಕಾ ಸಂಪನ್ಮೂಲಗಳಿಂದಲೇ ತಂದೆತಾಯಿಯರು ಮುದ್ರಣ ಸಮೃದ್ಧ ವಾತಾವರಣವನ್ನು ಮಕ್ಕಳಿಗೆ ನೀಡಲು ಪ್ರೇರಣೆ ನೀಡಬೇಕು. ಆದರೆ ಬುಡಕಟ್ಟು ಜನಾಂಗದ ಮಕ್ಕಳು ಅಂಗನವಾಡಿಯಲ್ಲಿ ಕೇಂದ್ರದಲ್ಲಿ ತಾವು ಗಮನಿಸಿದ ಬೇರೆ ಬೇರೆ ಅಕ್ಷರಗಳ ಆಕೃತಿಯನ್ನು ಮಣಿಗಳಿಂದ ಮಾಡುವಂತಹ ಆಟಗಳನ್ನು ತಮ್ಮ ಅಂಗಳದಲ್ಲಿ ಆಡುವ ದೃಶ್ಯ ನೀವು ನೋಡಿರಬಹುದು. ಅಂಗನವಾಡಿ

ಸಂಸ್ಥೆಗೆ ಬರುವ ಮಕ್ಕಳಿಗೆ ಚಿತ್ರವನ್ನು ಬಿಡಿಸುವ, ಗೀಚು ಬರೆಯುವುದಕ್ಕೆ ಪ್ರೇರಣೆ ನೀಡುವುದರೊಂದಿಗೆ ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳಿಗೆ ಕತೆಗಳನ್ನು ಓದಿ ಹೇಳಬೇಕು. ಆದರೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ವೆ ಕೆಲಸ ಮತ್ತು ಪೌಷ್ಟಿಕಾಹಾರಕ್ಕೆ ಸಂಬಂಧಿಸಿದಂತಹ ಚಟುವಟಿಕೆಗಳ ಹೊರೆಯೇ ಜಾಸ್ತಿಯಾಗಿ ಅವರಿಗೆ ಮಕ್ಕಳಿಗೆ ಕತೆಗಳನ್ನು ಓದಿ ಹೇಳಲು ಸ್ವಲ್ಪ ಸಮಯವೂ ಸಿಗುವುದಿಲ್ಲ. ಮಕ್ಕಳು ಯಾವುದೇ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದಿರಲಿ ಎಲ್ಲಾ ಮಕ್ಕಳಲ್ಲಿರುವ ಸಾಮಾನ್ಯವಾದ ಪ್ರವೃತ್ತಿಯೆನೆಂದರೆ, ತಮ್ಮ ಅನುಭವ ಹಾಗೂ ಈ ಹಿಂದೆ ಪಡೆದ ಜ್ಞಾನದ ಆಧಾರವಾಗಿ ತಮಗೆ ತಿಳಿದ ರೀತಿಯಲ್ಲಿ ಆಕೃತಿ ಮತ್ತು ವರ್ಣಚಿತ್ರಗಳಿಗೆ ಸ್ಪಂದಿಸುತ್ತಾರೆ. ಓದು ಬರಹ ಕಲಿಸುವ ತರಬೇತುದಾರರು ಬಳಸುವ ಬೆದರಿಕೆಯ ವಿಧಾನಗಳ ಕಾರಣದಿಂದ ನಮ್ಮ ಸಮಾಜದ ಅನುಕೂಲವಂಚಿತರ ಮಕ್ಕಳಲ್ಲಿ ಹಿಂಜರಿಕೆ ಬೆಳೆದು, ಅಕ್ಷರವನ್ನು ಕಲಿಯುವುದರಲ್ಲಿ ಹಿಂದಿರುತ್ತಾರೆ. ಒಂದು ವೇಳೆ ನಾವು ಆ ಎಳೆಯ ಮಕ್ಕಳಿಗೆ ಓದುಬರಹವನ್ನು ಒಂದು ಪ್ರದರ್ಶನ ಕಲೆಯೆಂದು, ಅವರ ಸೃಜನಶೀಲತೆಯನ್ನು ಹೊರಹಾಕುವ ವಿಧಾನಗಳ ಮೂಲಕ ಪರಿಚಯಿಸಿದರೆ, ಮಕ್ಕಳು ಸೃಜನಶೀಲರಾಗಿ, ಉಲ್ಲಾಸಭರಿತರಾಗಿ ಹಾಗೂ ಸ್ಫೂರ್ತಿಯಿಂದ ಓದುವ ಬರಹದ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಕ್ಕೆ ಯಾವ ಕಾರಣವೂ ತೊಡಕಾಗಲಾರದು.




**References:**

1. Clay, Marie M. (1991). Becoming Literate.Portsmouth,NK:Heinemann.
2. Goodman,Yetta M.,1986. “Children Coming to Know Literacy” in Teale, W.H. and Sulzbt, E. (ed). Emergent Literacy: Writing and Reading, New Jersey,Ablex Publishing Corporation.
3. Kress,G. (1997). Before Writing: Rethinking the Pathway to Literacy. London: Routledge.
4. Report of the Consultation on Early Literacy with some partners of Sir Ratan Tata Trust and NavajbaiRatan Tata Trust, retrieved from **www.srtt.org/institutional_grants/...**
5. Teale, William H and Sulzby, Elizabeth. (1986). Emergent Literacy: Writing and Reading,New Jersey,Ablex Publishing Corporation.
6. The Early Childhood Education Curriculum Framework(Draft) 2012, The Ministry of Women and Child Developme, retrived from **http://wcd.nic.in/schemes/ECCE/Quality_Standards_for_ECCE3%20(7).pdf**



**ಪಾರ್ಥಸಾರಥಿ ಮಿಶ್ರಾ** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿಶ್ವವಿದ್ಯಾಲಯ ಸಂಪನ್ಮೂಲ ಕೇಂದ್ರದಲ್ಲಿ ಶೈಕ್ಷಣಿಕ ಮತ್ತು ಶಿಕ್ಷಣಶಾಸ್ತ್ರ ತಜ್ಞರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಜುಲೈ 2011 ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.ಇವರ ಕ್ಷೇತ್ರಗಳೆಂದರೆ ಭಾಷಾ ಶಿಕ್ಷಣ ಶಾಸ್ತ್ರ, ಶೈಲಿಶಾಸ್ತ್ರ, ಇಂಗ್ಲಿಷ್ ಭಾಷೆ ಬೋಧನಾ ಮತ್ತು ಶಿಕ್ಷಕರ ತರಬೇತಿ. ಇವರನ್ನು partha.mishra@azimpremjifoundation.org ಯಲ್ಲಿ ಸಂಪರ್ಕಿಸಬಹುದು.



# ಭಾಷಾ ಬೋಧನೆಯ ಬುನಾದಿಯಾಗಿ ಮಾತೃಭಾಷೆ

**ರಣದೀಪ್ ಕೌರ್**

ಮನೆಯಲ್ಲಿ ಮಕ್ಕಳು ಹೇಗೆ ಭಾಷೆಯನ್ನು ಕಲಿಯುತ್ತವೆ ಮತ್ತು ಅವು ಹೇಗೆ ಅಷ್ಟೊಂದು ಜಟಿಲವಾದ ವಾಕ್ಯಗಳನ್ನು ಮಾತೃಭಾಷೆಯಲ್ಲಿ ಹೇಳಲು ಶಕ್ತರಾಗುತ್ತಾರೆ ಎಂಬುದನ್ನು ಕುರಿತು ಜನರು ಗಮನಿಸಿರುವ ಅಂಶಗಳನ್ನು ಅನುಸರಿಸಿ ಸಾಕಷ್ಟು ಸಿದ್ಧಾಂತಗಳಾಗಿವೆ. ಮಕ್ಕಳು ತಮ್ಮ ಮನೆಯಲ್ಲಿ ಮಾತನಾಡುವ ಭಾಷೆಯಲ್ಲಿ ತೀರಾ ಚಿಕ್ಕವಯಸ್ಸಿನಲ್ಲಿಯೇ ಯಾವುದೇ ಅಡೆತಡೆಯಿಲ್ಲದೆ ಮಾತನಾಡುತ್ತಾರೆ. ಯಾವುದೇ ಪರಿಶ್ರಮವಿಲ್ಲದೆ ಅವರಿಗೆ ಏನನಿಸುತ್ತಿದೆ ಎಂಬುದನ್ನು ಹೇಳಲು ಹಾಗೂ ತಮ್ಮ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದನ್ನು ವಿವರಿಸುತ್ತಾರೆ ಹಾಗೂ ಯಾವುದೇ ಪೂರ್ವ ಶಿಕ್ಷಣವಿಲ್ಲದೆ ಹಾಗೂ ಕಷ್ಟವಿಲ್ಲದೆಯೇ ಯಾವುದೇ ಘಟನೆಯನ್ನು ಕುರಿತು ವಿವೇಚನೆ ತೋರಿಸುತ್ತಾರೆ ಮತ್ತು ವಿಶ್ಲೇಷಣೆ ಮಾಡುತ್ತಾರೆ. ಭಾಷೆಯು ಕೇವಲ ಮಾತುಕತೆಯ ಸಾಧನ ಮಾತ್ರವಲ್ಲ ಇದು ಮಗುವಿನಲ್ಲಿ ಇತರ ವಿಷಯಗ್ರಹಣೆ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಕೂಡಾ ಸಹಾಯಕವಾಗುತ್ತದೆ. ಆದ್ದರಿಂದ, ಮಗುವಿನಲ್ಲಿ ಭಾಷೆಯು ಯಾವ ರೀತಿಯಲ್ಲಿ ವಿಕಾಸವಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದುದು ಮುಖ್ಯವಾಗುತ್ತದೆ.

ಮನುಷ್ಯನ ಮೆದುಳನ್ನು ಹೊಂದಿರುವ ನಾವು ಸ್ವಾಭಾವಿಕವಾಗಿಯೇ ಯೋಚನೆಗಳನ್ನು ಹೊರಹಾಕುವ ಇಚ್ಛೆಯನ್ನು ಹೊಂದಿರುತ್ತೇವೆ. ಮನುಷ್ಯನ ಮೊದಲ ಉಸಿರಿನಲ್ಲಿಯೇ ಈ ಸ್ಪಂದನವು ಉಂಟಾಗುತ್ತದೆ. ಮಗು ಹುಟ್ಟಿದಾಕ್ಷಣ ಅಳುತ್ತದೆ ಮತ್ತು ಭಾಷೆಯ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ. ಆ ಅಳುವೇ ಮಗುವು ತನ್ನ ಮನಸ್ಸಿನಲ್ಲಿರುವುದನ್ನು ಹೇಳಬೇಕೆಂಬ ಒತ್ತಂಬವನ್ನು ಸೂಚಿಸುತ್ತದೆ !

ಒಂದು ಹಂತದವರೆಗೆ ಮಕ್ಕಳು ಕೇವಲ ಅಳುವ ಮೂಲಕ ತಮ್ಮ ಅಗತ್ಯವನ್ನು ಹಾಗೂ ತಮಗನಿಸಿದ್ದನ್ನು ವ್ಯಕ್ತಪಡಿಸುತ್ತಾರೆ. ಹಸಿವಾದಾಗ ಅಳುವ ಮೂಲಕ ಅದನ್ನು ವ್ಯಕ್ತಪಡಿಸುತ್ತಾರೆ. ಅವರು ವಿವಿಧ ಸಂದರ್ಭದಲ್ಲಿ ವ್ಯಕ್ತಪಡಿಸುವ ಅಳುವು ಭಿನ್ನವಾಗಿರುತ್ತದೆ. ಅಂದರೆ ಹಸಿವಾದಾಗ ಅಳುವ ಅಳು ಅಥವಾ ಅನಾರೋಗ್ಯ ಇರುವಾಗ ಅಥವಾ ತಮಗೆ ಕಿರಿಕಿರಿಯಾದಾಗ ವ್ಯಕ್ತಪಡಿಸುವ ಅಳುವು ವಿಭಿನ್ನವಾಗಿರುತ್ತದೆ. ನೋವಾದಾಗ ಅಳುವ ಅಳುವು ಅವರು ಆಟವಾಡುವಾಗ ಅಳುವ ಅಳುವಿಗಿಂತ ಭಿನ್ನವಾಗಿರುತ್ತದೆ.

ಮಕ್ಕಳು ಬೆಳೆದಂತೆ, ಬೇರೆ ಬೇರೆ ರೀತಿಯಲ್ಲಿ ಸಂಭಾಷಣೆ ನಡೆಸುತ್ತಾರೆ. ಉದಾಹರಣೆಗೆ ಅವರು ನಸುನಗುತ್ತಾರೆ ಅಥವಾ ಜೋರಾಗಿ ನಗುತ್ತಾರೆ, ಈ ರೀತಿಯಲ್ಲಿ ಸಂವಹನವು ಮುಂದಿನ ಹಂತಕ್ಕೆ ಹೋಗುತ್ತದೆ. ನಿಧಾನವಾಗಿ ಅವರು ತಮ್ಮ ಸುತ್ತಮುತ್ತಲಿನ ಪರಿಸರದಿಂದ ಶಬ್ದಗಳನ್ನು ಗ್ರಹಿಸಿ ಹೇಳಲು ಪ್ರಾರಂಭಿಸುತ್ತವೆ. ಪ್ರಾರಂಭದಲ್ಲಿ ಇವು ಕೇವಲ ಮಮ್ಮ, ಬಾಬಾ, ಹೂಂ... ಮುಂತಾದ ಶಬ್ದಗಳನ್ನು ಮಾತ್ರ ಗ್ರಹಿಸಿ ಹೇಳಲು ಪ್ರಾರಂಭಿಸುತ್ತವೆ. ಅಲ್ಲದೆ ಈ ಶಬ್ದಗಳನ್ನು ವಿವಿಧ ರೀತಿ ಹಾಗೂ ಧ್ವನಿಯಲ್ಲಿ ಹೇಳಲು ಪ್ರಾರಂಭಿಸುತ್ತವೆ.

ಭಾಷಾಶಾಸ್ತ್ರಜ್ಞರಾಗಿರುವ, ನೋವಾಮ್ ಚೊಮ್‌ಸ್ಕಿ ಹೇಳುತ್ತಾರೆ, "ಮಕ್ಕಳು ಭಾಷಾ ಕಲಿಕೆಯ ಸಹಜ ಸಾಮರ್ಥ್ಯವನ್ನು ಹೊಂದಿರುತ್ತವೆ. ಏಕೆಂದರೆ ಅವರ ಮೆದುಳಿನಲ್ಲಿ ಭಾಷೆಯನ್ನು ಕಲಿತುಕೊಳ್ಳುವ ಅಂಶವು ಜಾಗೃತವಾಗಿರುತ್ತದೆ ಮತ್ತು ಇದು ಸುತ್ತಮುತ್ತಲಿನ ಪರಿಸರದಿಂದ ಭಾಷೆ ಹಾಗೂ ಇತರೆ ಸಂಜ್ಞೆಗಳನ್ನು ಅಂದರೆ ಸ್ಪರ್ಷ ಮತ್ತು ಭಾವನೆಗಳ ಅಂಶಗಳನ್ನು ಪಡೆದುಕೊಳ್ಳುತ್ತಿರುತ್ತದೆ. ಈ ಎಲ್ಲ ಸಂಜ್ಞೆಗಳನ್ನು ಗಮನಿಸಲಾಗುತ್ತದೆ ಹಾಗೂ ಅವು ಮೆದುಳಿನಲ್ಲಿ ದಾಖಲಾಗುತ್ತವೆ. ಹೀಗೆ ಒಳಬಂದ ಅಂಶಗಳು ಮೆದುಳಿನಾಳದಲ್ಲಿ ನೆಲೆಗೊಳ್ಳಲು ಸಮಯ ತೆಗೆದುಕೊಳ್ಳುತ್ತವೆ. ಇದು ಹಂತಹಂತವಾಗಿ ಹಾಗೂ ನೈಸರ್ಗಿಕವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಈ ಅಂಶಗಳು ಮುಂದೆ ಭಾವನೆಗಳ ಪ್ರತಿಕ್ರಿಯೆಗಳಾಗಿ ಬದಲಾಗುತ್ತವೆ: ಅಂದರೆ ಮನೆ ಭಾಷೆಯನ್ನು ಮಕ್ಕಳು ಸ್ವಾಭಾವಿಕವಾಗಿ ಮಾತನಾಡಲು ಪ್ರಾರಂಭಿಸುತ್ತಾರೆ ಮತ್ತು ಅವರ ಯೋಚನೆಗಳನ್ನು ಹೇಳಲು ಇದನ್ನು ಬಳಸುತ್ತಾರೆ."

ಮಗು ಹುಟ್ಟಿದ ಸಮಯದಿಂದ ಈ ಸಂಪೂರ್ಣ ಪ್ರಕ್ರಿಯೆಯಲ್ಲಿ ಸುತ್ತಮುತ್ತಲಿನ ಪರಿಸರದಿಂದ ಅಂಶಗಳನ್ನು ಪಡೆದುಕೊಂಡು ಬೆಳೆಯಲು ಕನಿಷ್ಠ ಎರಡು ವರ್ಷಗಳ ಸಮಯ ಬೇಕಾಗುತ್ತದೆ. ಅದೇ ರೀತಿ, ಮಗುವು ತಾನು ಕಲಿಯ ಬೇಕಾದ

ಇತರೆ ಭಾಷೆಗಳ ವಿಷಯಕ್ಕೆ ಬಂದರೆ, ಅದಕ್ಕೆ ಮನೆಯ ರೀತಿಯಲ್ಲಿಯೇ ಅತ್ಯುತ್ತಮ ರೀತಿಯ ಪರಿಸರ ಇರಬೇಕು. ಶಾಲೆಯಲ್ಲಿ ಕೂಡಾ ಮಗುವು ನಿರ್ದಿಷ್ಟ ಭಾಷೆಯನ್ನು ಕೇಳುವುದು, ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಮನನಮಾಡಿಕೊಂಡು ಅದಕ್ಕೆ ತಕ್ಕಂತೆ ಮಾತನಾಡುವುದನ್ನು ರೂಢಿಸಿಕೊಳ್ಳುವ ವಾತಾವರಣ ಇರಬೇಕಾಗುತ್ತದೆ. ಸಾಮಾನ್ಯವಾಗಿ ಈಗಿರುವ ಪದ್ಧತಿ ವ್ಯವಸ್ಥೆಯಲ್ಲಿ ನಾವು ಮಗು ತಕ್ಷಣ ಶಾಲೆಯ ಭಾಷೆಯನ್ನು ಕಲಿಯಬೇಕು ಎಂದು ಬಯಸುತ್ತೇವೆ. ಆದರೆ ಮಗುವಿಗೆ ಆ ಭಾಷೆಯ ಸಂಪರ್ಕ ಇರುವುದಿಲ್ಲ ಎಂಬುದನ್ನು ಮರೆತಿರುತ್ತೇವೆ.

ಮಕ್ಕಳು ಭಾಷೆಯನ್ನು ಮೊದಲು ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳಲು ಬಳಸುತ್ತಾರೆ. ಮಗು ಪದೇ ಪದೇ ಕೇಳದ ಶಬ್ದವನ್ನು ತಂತಾನೆ ಮಾತನಾಡಿಕೊಳ್ಳುವುದನ್ನು ನೀವು ಗಮನಿಸಿರಬಹುದು. ತಮ್ಮಷ್ಟಕ್ಕೆ ಮಾತನಾಡಿಕೊಳ್ಳುವುದು ಎಂದರೆ ಇದೊಂದು ಪ್ರಕ್ರಿಯೆಯಾಗಿದ್ದು ಇಲ್ಲಿ ಶಬ್ದವು ನಿರ್ದಿಷ್ಟ ರೀತಿಯಲ್ಲಿ ಮಗುವಿನ ಮೆದುಳಿನಲ್ಲಿ ಶೇಖರವಾಗುತ್ತದೆ ಮತ್ತು ಮಗುವು ಮುಂದೆ ಅಗತ್ಯವಿರುವ ಸಂದರ್ಭದಲ್ಲಿ ಇದನ್ನು ಬಳಸಿಕೊಳ್ಳುತ್ತದೆ.

ಮಕ್ಕಳು ಸಮಾಜದ ಜೊತೆ ಬೆರೆಯಲು ಭಾಷೆಯನ್ನು ಬಳಸುತ್ತಾರೆ. ಆದ್ದರಿಂದ ಮಕ್ಕಳು ಇದನ್ನು ಇತರರು ಹೇಗೆ ಬಳಸುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ ಎಂಬುದನ್ನು ಗಮನಿಸುವುದು ಮುಖ್ಯವಾಗುತ್ತದೆ. ಅದಕ್ಕಾಗಿ ಕೆಲವು ವಿನ್ಯಾಸಗಳನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದನ್ನು ಅವರು ತಮ್ಮ ಭಾಷಾ ಗ್ರಹಿಕೆಯ ಪ್ರಕ್ರಿಯೆಯಲ್ಲಿ ಮಾಡಿಕೊಳ್ಳುತ್ತಾರೆ. ಆ ರೀತಿಯ ವಾತಾವರಣದಲ್ಲಿ ಇದ್ದಾಗ ಇದು ಸ್ವಾಭಾವಿಕವಾಗಿ ಅಪ್ರಯತ್ನಪೂರ್ವಕವಾಗಿ ಉಂಟಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಅವರು ವ್ಯಾಕರಣದಲ್ಲಿ ತಪ್ಪನ್ನು ಮಾಡುತ್ತಾರೆ, ಅದನ್ನು ನಿರ್ಲಕ್ಷಿಸಬೇಕಾಗುತ್ತದೆ. ಉದಾಹರಣೆಗೆ: ಆಟವಾಡುವಾಗ ಅವರು ಬಳಸುವ ಪದ್ಯಗಳು ಮತ್ತು ಶಬ್ದಗಳು ತಪ್ಪಾಗಿರುತ್ತವೆ ಅಥವಾ ವ್ಯಾಕರಣ ತಪ್ಪಾಗಿರುತ್ತದೆ. ಇದೊಂದು ಪ್ರಕ್ರಿಯೆಯಾದಕಾರಣ ಅವರನ್ನು ಹೀಯಾಳಿಸಬಾರದು ಅಥವಾ ಇದನ್ನು ಸರಿಗೊಳಿಸಬಾರದು.

ಅಮೂರ್ತ ಅನುಭವಗಳ ಮೂಲಕ ಹಾಗೂ ಭಾಷೆಯಿಂದ ಸಮೃದ್ಧವಾದ ಅಂಶಗಳನ್ನು ನೀಡುವ ಮೂಲಕ ಮನೆಭಾಷೆಯ ಅನುಭವವು ವೃದ್ಧಿಯಾಗುತ್ತದೆ. ಆದ್ದರಿಂದ, ಮಕ್ಕಳು ಪ್ರಾಥಮಿಕ ಶಾಲೆಗೆ ಬರುವ ಸಮಯದಿಂದ ಅವರು ಶಾಲೆಯಲ್ಲಿ ಬಳಸುವ ಭಾಷೆಯ ಮೇಲೆ ಹಿಡಿತ ಹೊಂದುವವರೆಗೆ ಮನೆ ಭಾಷೆಯನ್ನು ಪರಿಣಾಮಕಾರಿ ಸಂಪನ್ಮೂಲವಾಗಿ ಬಳಸಬೇಕು. ಆದರೆ ಮಗುವಿನ ಈ ಹಿಂದಿನ ಜ್ಞಾನವನ್ನು (ಭಾಷೆ) ಮತ್ತು ಗೊತ್ತಿರುವ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ನೈಜ ಕ್ಲಾಸ್‌ರೂಮ್‌ನ ಸ್ಥಿತಿಯಲ್ಲಿ ನಿರ್ಲಕ್ಷಿಸಲಾಗುತ್ತದೆ. ಆದ್ದರಿಂದ, ಕಲಿಕೆಯ ಪ್ರಕ್ರಿಯೆಯಲ್ಲಿ ಪೂರಕವಾಗಿರುವ ಅಂಶಗಳು ಇದ್ದರೂ ಕೂಡಾ ಮನೆ ಪರಿಸರದ ಭಾಷೆಯನ್ನು ಭಾಷೆ ಕಲಿಕೆಯ ಮುಖ್ಯ ಆಧಾರವಾಗಿರಿಸಿಕೊಂಡಿರಬೇಕು.

ಮನೆಭಾಷೆಯು ದ್ವಿತೀಯ ಮತ್ತು ತೃತಿಯ ಭಾಷೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಕ್ಕಳು 'ಸ್ಪೂನ್' ಅನ್ನು 'ಚಮಚ' ಎಂದು ಕರೆಯುತ್ತಾರೆ ಮತ್ತು ಅದರ ಉದ್ದೇಶ ಹಾಗೂ ಇದರಿಂದ ಏನು ಮಾಡಬಹುದು, ಹೇಗೆ ಕಾಣಿಸುತ್ತದೆ ಎಂಬುದರ ಅರಿವು ಅವರಿಗಿರುತ್ತದೆ. 'ಚಮಚ' ಎಂಬ ಶಬ್ಧವನ್ನು ಉಚ್ಚರಿಸಿದ ತಕ್ಷಣ ಮೆದುಳು ಅದರ ಅಂಶಗಳ ಜೊತೆಗೆ ಸಂಪರ್ಕ ಏರ್ಪಡಿಸಿಕೊಳ್ಳುತ್ತದೆ ಮತ್ತು ಈ ಅರ್ಥ ಮಾಡಿಕೊಳ್ಳುವಿಕೆಯನ್ನು ದ್ವಿತೀಯ ಮತ್ತು ತೃತೀಯ ಭಾಷೆಗೆ ಅನುಸರಿಸಿ ಅನ್ವಯಿಸಿಕೊಳ್ಳುತ್ತಾರೆ. ಶಾಲೆಯಲ್ಲಿ ಮಗುವಿನ ಭಾಷೆಯನ್ನು ನಿರ್ಲಕ್ಷಿಸುವುದು ಅವರಲ್ಲಿ ಪ್ರೇರೇಪಣೆಯನ್ನು ಕಡೆಗಣಿಸುವುದು ಮತ್ತು ಶಾಲೆಗೆ ಬರಲು ಅವರಿಗಿರುವ ಪ್ರೇರಣೆಯನ್ನು ಕಡೆಗಣಿಸಿದಂತೆ ಆಗುತ್ತದೆ.

ಪ್ರತಿಯೊಂದು ಶಬ್ದವನ್ನು ಕೂಡಾ ಕ್ರಿಯೆಯ ಮೂಲಕ ಮತ್ತು ಮಗುವಿಗೆ ಅರ್ಥವಾಗುವ ಭಾಷೆಯಲ್ಲಿ ಹಾಗೂ ಕಲಿಯಬೇಕಾದ ಭಾಷೆಯಲ್ಲಿ ಹೇಳಬೇಕು. ಕ್ರಿಯೆ ಹಾಗೂ ಸಂಬಂಧ ಇರದ ಶಬ್ಧಗಳು ಮಗುವಿಗೆ ಯಾವುದೇ ಅರ್ಥವನ್ನು ನೀಡಲಾರವು ಆದ್ದರಿಂದ ಮಗುವಿಗೆ ಪ್ರತಿಯೊಂದಕ್ಕೂ ಸಂಬಂಧ ಕಲ್ಪಿಸುವಂತಹ ವಾತಾವರಣವನ್ನು ನಿರ್ಮಿಸಿ ಕೊಡಬೇಕು ಹಾಗೂ ಮಗುವಿಗೆ ಅದು ತನ್ನ ದಿನನಿತ್ಯದ ಜೀವನ ಹಾಗು ವಸ್ತುಗಳೊಂದಿಗೆ ಶಬ್ಧಗಳನ್ನು ಸಂಬಂಧವನ್ನು ಕಲ್ಪಿಸಿಕೊಳ್ಳಲು ಸಹಾಯಕವಾಗುವಂತೆ ಅವಕಾಶ ನೀಡಬೇಕು.

ಪ್ರಾಯೋಗಿಕ ಕಲಿಕೆಯ ವಿಧಾನವು ಅದ್ಭುತ ಕಾರ್ಯನಿರ್ವಹಿಸುತ್ತದೆ ಏಕೆಂದರೆ ಇಲ್ಲಿ ಮಕ್ಕಳು ನಿರ್ದಿಷ್ಟವಾದ ವಸ್ತುವಿನ ಜೊತೆಗೆ ಇರುತ್ತಾರೆ. ಶಾಲೆಯ ಸುತ್ತುಮುತ್ತು ಇರುವ ವಸ್ತುಗಳನ್ನು ಮಕ್ಕಳ ಕಲಿಕೆಗೆ ಉಪಯುಕ್ತ ಸಂಪನ್ಮೂಲಗಳಾಗಿ ಬಳಕೆ ಮಾಡಿಕೊಳ್ಳಬೇಕು. ನಿರ್ದಿಷ್ಟವಾದ ವಸ್ತುವಿನ ಜೊತೆಗೆ ಮಕ್ಕಳು ಸಂಪರ್ಕ ಹೊಂದುವುದು ಉತ್ತಮವಾದ ರೀತಿಯಲ್ಲಿ ನೆನಪಿಟ್ಟುಕೊಳ್ಳಲು ಸಹಾಯಕವಾಗುತ್ತದೆ. ಇದರಿಂದ ಅವರು ಅದನ್ನು ಅನುಭವಿಸಬಹುದು ಮತ್ತು ಅಗತ್ಯವಿದ್ದಾಗ ಅದನ್ನು ಕುರಿತು ಮಾತನಾಡಲು ಕೂಡಾ ಅವರಿಗೆ ಸಾಧ್ಯವಾಗುತ್ತದೆ.

ಚಿಕ್ಕ ಮಕ್ಕಳಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಮಕ್ಕಳು ಯಾವುದಾದರೂ ಚಟುವಟಿಕೆಯಲ್ಲಿ ತೊಡಗಿರುವಾಗ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುವುದನ್ನು ಗಮನಿಸಬಹುದು: ಅವರು ಒಬ್ಬರೇ ಇದ್ದಾರೆ ಎಂಬುದು ಕೂಡಾ ಇಲ್ಲಿ ನಗಣ್ಯವಾಗಿರುತ್ತದೆ. ಅವರುಗಳ ಈ ನಡತೆಯು ತಮ್ಮಲ್ಲಿ ಇದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ತೋರ್ಪಡಿಸುತ್ತದೆ ಹಾಗೂ ತಮ್ಮೊಂದಿಗೆ ತಾವು ಗೊಣಗಿಕೊಳ್ಳುವ ಮೂಲಕ ಅದರಲ್ಲಿ ಆಸಕ್ತಿಯನ್ನು ಉಳಿಸಿಕೊಳ್ಳಲು ಸಹಕಾರಿಯಾಗುತ್ತದೆ. ಇದು ಅವರಿಗೆ ಅದನ್ನು ಕುರಿತು ವ್ಯಾಖ್ಯಾನವಾಗಿರುತ್ತದೆ. ಆದ್ದರಿಂದ, ಮಕ್ಕಳು ತರಗತಿಯಲ್ಲಿ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುತ್ತಿರುವಾಗ ಅಥವಾ ಏನಾದರೂ ಮಾಡುತ್ತಿದ್ದರೆ, ಶಿಕ್ಷಕರಾಗಿರುವ ನಾವು ಅವರನ್ನು ಅವರಷ್ಟಕ್ಕೆ ಬಿಡಬೇಕು ಮತ್ತು ಇದನ್ನು ಗಲಾಟೆ ಎಂಬ ರೀತಿಯಲ್ಲಿ ಪರಿಗಣಿಸಬಾರದು.

ಮಕ್ಕಳ ಏಕಾಗ್ರತೆಯ ಅವಧಿಯು ತುಂಬಾ ಕಡಿಮೆ ಇರುವುದರಿಂದ, ಶಿಕ್ಷಕರಾದವರು ಆಟಗಳ ಮೂಲಕ ಕಲಿಕೆಯನ್ನು ಅನುಸರಿಸುವುದು ತುಂಬಾ ಉಪಯುಕ್ತವಾಗಿರುತ್ತದೆ. ಉದಾಹರಣೆಗೆ, ಅಭಿನಯ ಗೀತೆಯನ್ನು ಹೇಳುವಾಗ, ಶಿಕ್ಷಕರ ಜೊತೆಗೆ ಮಕ್ಕಳು ಅಭಿನಯ ಗೀತೆಯಲ್ಲಿರುವ ಅಂಶವನ್ನು ನಟಿಸಿ ತೋರಿಸಲು ಹೇಳುವುದು.

ಎಲ್ಲವನ್ನೂ ಕ್ರಿಯೆಯಲ್ಲಿ ತಿಳಿಸುವುದು ಮಕ್ಕಳಿಗೆ ಹೆಚ್ಚು ಉಪಯುಕ್ತವಾಗಿರುತ್ತದೆ. ಏಕೆಂದರೆ ಮಕ್ಕಳು ಹೆಚ್ಚು ಚಟುವಟಿಕೆಯಿಂದ ಇರುತ್ತಾರೆ ಮತ್ತು ಅದರಿಂದ ಅವರಿಗೆ ಖುಷಿ ಇರುತ್ತದೆ. ಅವರ ಈ ಖುಷಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರೆ ಅವರು ಸಪ್ಪಗಾಗುತ್ತಾರೆ ಮತ್ತು ನಿರ್ದಿಷ್ಟ ಕ್ರಿಯೆಯಲ್ಲಿ ಖುಷಿಯನ್ನು ಕಳೆದುಕೊಳ್ಳುತ್ತಾರೆ.

ಪ್ರಾರಂಭದ ವಯಸ್ಸಿನಲ್ಲಿ ಕಥೆ ಹೇಳುವ ಮೂಲಕ ಹಲವಾರು ಅಂಶಗಳನ್ನು ಕಲಿಸಬಹುದಾಗಿದೆ. ಈ ಪ್ರಕ್ರಿಯೆಯನ್ನು ಯಾವ ರೀತಿ ವಿನ್ಯಾಸ ಮಾಡಿರಬೇಕೆಂದರೆ ಇಲ್ಲಿ ಮಕ್ಕಳಿಗೆ ಕಥೆಯ ಪಾತ್ರವಾಗಲು ಹೇಳಬೇಕು ಹಾಗೂ ಆ ಪಾತ್ರವನ್ನು ನಿರ್ವಹಿಸಲು ಹೇಳಬೇಕು. ಇನ್ನೂ ಹೆಚ್ಚಾಗಿ, ಕಥೆಯನ್ನು ಬಿಡಿಸಲು ಹೇಳಬೇಕು ಹಾಗೂ ಆ ಚಿತ್ರಗಳನ್ನು ತರಗತಿಯ ಗೋಡೆಯ ಮೇಲೆ ಅಂಟಿಸಬೇಕು. ಹಾಗೆಯೇ ಕೆಲವು ಶಬ್ದಗಳನ್ನು ಮಗುವಿನ ಮನೆ ಭಾಷೆ ಮತ್ತು ನಿರ್ದಿಷ್ಟ ಭಾಷೆ ಎರಡರಲ್ಲಿಯೂ ಹೇಳಬೇಕು. ಆದ್ದರಿಂದ ಮಗುವು ತಾನು ಕಲಿತ ವಿಷಯವನ್ನು ಸಂಪೂರ್ಣವಾಗಿ ನೆನಪಿಟ್ಟುಕೊಳ್ಳಲು ಸಹಾಯಕವಾಗುತ್ತದೆ.

ಶಿಕ್ಷಕರು ಮಕ್ಕಳಿಗೆ ತಪ್ಪಿಲ್ಲದಂತೆ ಬರೆಯಬೇಕು ಎಂದು ಒತ್ತಡ ಹಾಕಬಾರದು. ಆರಂಭಿಕ ವರ್ಷಗಳಲ್ಲಿ ಮಕ್ಕಳು ಬರೆಯುವುದಕ್ಕಿಂತ ಹೆಚ್ಚಾಗಿ ಮಾತನಾಡುವಿಕೆಯ ಮತ್ತು ಕೇಳುವಿಕೆಯ ಅಂಶದ ಮೇಲೆ ಹೆಚ್ಚು ಗಮನವನ್ನು ಕೇಂದ್ರೀಕರಿಸಬೇಕು. ಬರವಣಿಗೆಯನ್ನು ಅವರಿಗೆ ಸೂಕ್ತ ಎನಿಸಿದ ಸಮಯದಲ್ಲಿ ಮಾಡಬಹುದಾಗಿದೆ. ಮಕ್ಕಳು ಒಂದು ವಿನ್ಯಾಸದಲ್ಲಿ ಗೀಚುವಿಕೆಯನ್ನು ಮಾಡುತ್ತಾರೆ. ಈ ವಿಷಯದಲ್ಲಿ ಕೂಡಾ ಅವರಿಗೆ ಅವಕಾಶ ನೀಡುವುದರಿಂದ ಮಕ್ಕಳಿಗೆ ಉಪಯುಕ್ತವಾಗುತ್ತದೆ.

ಪ್ರೀತಿ, ವೈಯಕ್ತಿಕ ಕಾಳಜಿ ಮತ್ತು ಹೆದರಿಕೆ ಇಲ್ಲದ ವಾತಾವರಣವು ಮಕ್ಕಳಿಗೆ ಅಗತ್ಯವಾಗಿರುವ ಸೃಜನಶೀಲತೆ ಮತ್ತು ಕಲ್ಪನೆಯ ವಾತಾವರಣದಲ್ಲಿ ಬೆಳೆಯಲು ಸಹಾಯ ಮಾಡುತ್ತದೆ.

ಮಕ್ಕಳು ಹೆಚ್ಚು ಕುತೂಹಲ ಹೊಂದಿರುತ್ತಾರೆ ಮತ್ತು ತಮ್ಮಷ್ಟಕ್ಕೆ ತಾವು ಪ್ರಶ್ನೆ ಕೇಳುವ ಹಾಗೂ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಆದ್ದರಿಂದ ಅವರು ಶಾಲೆಗೆ ಸೇರ್ಪಡೆಯಾದ ತಕ್ಷಣದಿಂದ ಅವರಿಗೆ ಪ್ರಶ್ನೆಗಳನ್ನು ಕೇಳಿಕೊಳ್ಳಲು ಅನುಕೂಲವಾಗುವಂತಹ ವಾತಾವರಣವನ್ನು ರೂಪಿಸಿಕೊಡಬೇಕು. ಇದೇ ರೀತಿ ಭಾಷೆಯನ್ನು ಅರಿತುಕೊಳ್ಳುವ ಸಾಮರ್ಥ್ಯವು ಸ್ವಾಭಾವಿಕವಾಗಿಯೇ ಅವರಿಗೆ ಇರುತ್ತದೆ. ಅವರಿಗೆ ಭಾಷಾ ಕಲಿಕೆಗೆ ಸಹಾಯಕವಾಗುವಂತಹ ನಿರ್ದಿಷ್ಟ ಭಾಷೆಯ ಬಳಕೆ ಹೆಚ್ಚಾಗಿರುವಂತಹ ವಾತಾವರಣವನ್ನು ರೂಪಿಸಬೇಕು. ಭಾಷಾ ಕಲಿಕೆಯ ಪ್ರಕ್ರಿಯೆಯನ್ನು ತರಗತಿಗಳಲ್ಲಿ ರೂಪಿಸುವಾಗ ಔಪಚಾರಿಕ ರೀತಿಗಿಂತ ಅನೌಪಚಾರಿಕ ರೀತಿಯ ವಾತಾವರಣವನ್ನು ರೂಪಿಸಿಕೊಡಬೇಕು.

ಆದ್ದರಿಂದ, ಮನೆ ಭಾಷೆಯು ಕಲಿಯಬೇಕಾದ ಇತರ ಭಾಷೆಯನ್ನು ಅರಿತುಕೊಳ್ಳಲು ಸಹಾಯಕವಾಗುವುದರ ಜೊತೆಗೆ ಮಗುವಿನ ಅಭಿವ್ಯಕ್ತಿಯನ್ನು ಹೆಚ್ಚಿಸಲು ಸಹಾಯಕವಾಗಿರುತ್ತದೆ.





**References:**


1. Linguist, Mind & Language by Noam Chomsky
2. The Child's Language & the Teacher by Krishna Kumar
3. National Curriculum Framework 2005



**ರಣ್‌ದೀಪ್** ಅವರು ವಾಣಿಜ್ಯ ವಿಷಯದಲ್ಲಿ ಪದವಿ ಪಡೆದುಕೊಂಡಿದ್ದಾರೆ. ಅಜೀಂ ಪ್ರೇಮ್‌ಜಿ ಫೌಂಡೇಷನ್ ಜೊತೆಗೆ ಇವರು 2011ರಿಂದ ಗುರುತಿಸಿಕೊಂಡಿದ್ದು ಉತ್ತರಾಖಂಡ್‌ನ ಡೆಹ್ರಾಡೂನ್‌ನಲ್ಲಿಯ ರಾಜ್ಯ ಸಂಸ್ಥೆಯ ಸಂವಹನ ಮತ್ತು ತೊಡಗಿಸಿಕೊಳ್ಳುವಿಕೆಯ ತಂಡದ ಸದಸ್ಯೆಯಾಗಿದ್ದಾರೆ. ಮೆದುಳಿನಲ್ಲಿ ಭಾಷೆಯ ಕಲಿಕೆಯ ಪ್ರಕ್ರಿಯೆಯು ಹೇಗೆ ನಡೆಯುತ್ತದೆ ಎಂಬುದನ್ನು ಅರಿತುಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರತರಾಗಿದ್ದಾರೆ. ಅವರಿಗೆ ಬರವಣಿಗೆ ಮತ್ತು ಕವಿತೆ ರಚಿಸುವುದು ಹವ್ಯಾಸ. ಮಕ್ಕಳನ್ನು ಗಮನಿಸುವುದನ್ನು ಅವರು ಇಷ್ಟಪಡುತ್ತಾರೆ ಮತ್ತು ಅವರ ಹೆಚ್ಚಿನ ಬರವಣಿಗೆಗಳು ಇದನ್ನು ಒಳಗೊಂಡಿರುತ್ತವೆ. ಅವರು ನಿರಂತರವಾಗಿ ಕಲಿಕೆಯನ್ನು ಇಷ್ಟಪಡುತ್ತಾರೆ. ಪ್ರಯಾಣ, ಬೇರೆ ಬೇರೆ ಪ್ರದೇಶಗಳಿಗೆ ಭೇಟಿ ಕೊಡುವುದು ಮತ್ತು ಛಾಯಾಗ್ರಹಣ ಅವರ ಇಷ್ಟದ ಹವ್ಯಾಸ. ಅವರನ್ನು randeep.verma@azimpremjifoundation.org ರಲ್ಲಿ ಸಂಪರ್ಕಿಸಬಹುದು.



# ಶಾಲಾ ಸಿದ್ಧತೆ

ವೃಂದಾ ದತ್ತಾ

ಮಕ್ಕಳ ಶೈಕ್ಷಣಿಕ ಹಕ್ಕು ಕಾನೂನಿನ ಅಡಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳ ದಾಖಲಾತಿಯ ಪ್ರಮಾಣ ಶೇ 96 ರಷ್ಟು (ಅಸರ್ 2013) ಹೆಚ್ಚಿದೆ. ಆದಾಗ್ಯೂ, ಭಾರತದಲ್ಲಿನ ಶಿಕ್ಷಣ ಕ್ಷೇತ್ರಗಳಲ್ಲಿ ಹೇಳಿಕೊಟ್ಟಿದ್ದನ್ನು ಮನಸ್ಸಲ್ಲಿ ಇಟ್ಟುಕೊಳ್ಳುವಶಕ್ತಿ, ಹೇಳಿಕೊಟ್ಟದ್ದನ್ನು ಮತ್ತೆ ಹೇಳುವುದು, ಮಧ್ಯದಲ್ಲೇ ಶಾಲೆ ಬಿಡುವುದು ಮತ್ತು ಕಲಿಕೆಯ ಮಟ್ಟಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳು ಇನ್ನೂ ದೊಡ್ಡ ಸವಾಲುಗಳಾಗಿಯೇ ಉಳಿದಿವೆ. ಆದ್ದರಿಂದ, ಶಾಲೆಗಳಲ್ಲಿ ಮಗುವಿನ ದಾಖಲಾತಿ, ಮಗು ಶಾಲೆಗೆ ಒಗ್ಗಿಕೊಳ್ಳುವುದು ಮತ್ತು ಯಶಸ್ವಿಯಾಗುವಿಕೆಯನ್ನು ಅರ್ಥ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮನೆಯಿಂದ ಶಾಲೆಗೆ ಮಗು ಹೊಂದಿಕೊಳ್ಳುವುದು ಬಹಳ ಪ್ರಮುಖ ಘಟನೆಯಾಗಿದೆ. ಮಗುವಿನ ಸ್ಥಿತ್ಯಂತರ ಎಂದರೆ, ಮನೆ ಅಥವಾ ಆರಂಭಿಕ ಬಾಲ್ಯದ ಶಿಕ್ಷಣದ ಶಾಲೆಯಿಂದ (ಯುನಿಸೆಫ್, 2012) ಮಗುವು ಪದ್ಧತಿ ಶಾಲೆಗೆ ಹೋಗುವ ಮೊದಲು ಮತ್ತು ನಂತರದ ಅವಧಿಯಾಗಿದೆ. ವಿದ್ವಾಂಸರ ಕೃತಿಗಳಲ್ಲಿ ಒಪ್ಪಿಕೊಂಡಿರುವ ಪ್ರಕಾರ, ಮಕ್ಕಳಲ್ಲಿ ಸ್ಥಿತ್ಯಂತರವು ಸರಾಗವಾಗಿ ಆಗಬೇಕಾದರೆ, ಮಕ್ಕಳು ಶಾಲೆಗೆ ತಯಾರಾಗಿರಬೇಕು ಹಾಗೂ ಶಾಲೆಗಳು ಕೂಡ ಮಕ್ಕಳಿಗಾಗಿ ತಯಾರಾಗಿರಬೇಕು (ಯುನಿಸೆಫ್, 2012). ಆದ್ದರಿಂದ ಸ್ಥಿತ್ಯಂತರ ಮತ್ತು ಶಾಲಾ ಸಿದ್ಧತೆ ಇವೆರಡೂ ಪರಸ್ಪರ ಸಂಬಂಧವನ್ನು ಹೊಂದಿರುವ ಪರಿಕಲ್ಪನೆಗಳಾಗಿವೆ. ಮೊದ ಮೊದಲ ಕೃತಿಗಳು ಶಾಲಾ ಸಿದ್ಧತೆಯಲ್ಲಿ, ಗ್ರಹಣಶಕ್ತಿ ಮತ್ತು ಶೈಕ್ಷಣಿಕ ಕೌಶಲ್ಯದ ಮೇಲೆ ಹೆಚ್ಚು ಒತ್ತು ನೀಡಿವೆ. ಆದರೆ ಇತ್ತೀಚಿನ ದಿನಗಳಲ್ಲಿ, ಶಾಲಾ ಸಿದ್ಧತೆ ಒಂದು ಸಮಗ್ರ ಪರಿಕಲ್ಪನೆಯಾಗಿದೆ. ಇದು ಒಮ್ಮಿಂದೊಮ್ಮಲೇ ನಡೆಯುವ ಘಟನೆಯಲ್ಲ, ಬದಲಾಗಿ ಶಾಲೆಗೆ ಸಿದ್ಧಗೊಳ್ಳುವುದು ಎಂದರೆ ಮಗುವಿನ ಅಲ್ಲಿಯ ವರೆಗಿನ ಜೀವನದ ಒಟ್ಟು ಫಲ. (ಜೇನಸ್, ಹ್ಯೂಗ್ ಡ್ಯೂಕ್, 2010). ಇದರೊಂದಿಗೆ ಶಾಲೆಗೆ ಹೋಗಲು ತಯಾರಾದ ಮಗುವಿಗೆ, ಅದರ ಕಲಿಕೆ ಮತ್ತು ಬೆಳವಣಿಗೆಗೆ ಪೂರಕವಾದಂತಹ ಶಾಲೆಗಳು ಬೇಕು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಯುನಿಸೆಫ್, ಶಾಲಾ ಸಿದ್ಧತೆಯ ಮಾದರಿಯನ್ನು ತಯಾರಿಸಿದೆ. ಈ ಮಾದರಿಯಲ್ಲಿ ತಯಾರಾದ ಕುಟುಂಬಗಳು, ತಯಾರಾದ ಶಾಲೆಗಳು ಮತ್ತು ತಯಾರಾದ ಮಕ್ಕಳು ಈ ಮೂರು ಪ್ರಮುಖ ಆಯಾಮಗಳು ಶಾಲಾ ಸಿದ್ಧತೆಯಲ್ಲಿ ಪರಸ್ಪರ ಕಾರ್ಯನಿರ್ವಹಿಸುತ್ತವೆ. ಅಲ್ಲದೆ, ಅದು ಶಾಲೆಗಳು, ಕುಟುಂಬಗಳು ಮತ್ತು ಸಮುದಾಯಗಳು ಪ್ರಮುಖ ಪಾತ್ರವನ್ನು ವಹಿಸುವ. ಪರಿವರ್ತನಾ ಅವಧಿಯನ್ನು ಕುರಿತು ಮಾಹಿತಿಯನ್ನು ನೀಡಿದೆ.

## ತಯಾರಾದ ತಂದೆತಾಯಿಯರು

ಪುಟ್ಟ ಮಕ್ಕಳಿಗೆ, ಹೆತ್ತವರು ಮತ್ತು ಪೋಷಕರು ಆರೈಕೆ ಮತ್ತು ವಾತ್ಸಲ್ಯವನ್ನು ನೀಡುತ್ತಾರೆ. ಹೆತ್ತವರು ಲಾಲನೆ ಪಾಲನೆಯಲ್ಲಿ ನಿರತರಾಗಿ ಮಗುವಿನ ವಿವಿಧ ಆವಶ್ಯಕತೆ ಮತ್ತು ಅದರ ಬೆಳವಣಿಗೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡರೆ ಅವರು ಮಕ್ಕಳಿಗೆ ಸರಿಯಾದ ಪೋಷಣೆ, ಉತ್ತೇಜನ, ಆರೋಗ್ಯ ರಕ್ಷಣೆ ಮತ್ತು ಅಕ್ಕರೆಯ ಮನೆಯ ವಾತಾವರಣವನ್ನು ಒದಗಿಸುತ್ತಾರೆ. ಅಂತಹ ತಂದೆತಾಯಿಯರು ತಮ್ಮ ಲಾಲನೆ ಪಾಲನೆಗೆ ಪೂರಕವಾಗುವಂತಹ, ಮಗುವಿನ ಆರೈಕೆ ಕುರಿತ ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳಲಾರಂಭಿಸುತ್ತಾರೆ. ವಿವಿಧ ಸಾಮಾಜಿಕ ಆರ್ಥಿಕ ಸ್ತರದಲ್ಲಿರುವ ಕುಟುಂಬಗಳು ಮಕ್ಕಳ ಬೆಳವಣಿಗೆಗೆ ವಿಭಿನ್ನ ಅವಕಾಶವನ್ನು ಕಲ್ಪಿಸುತ್ತವೆ. ಆದರೆ ತಂದೆತಾಯಿಯರಿಗೆ ಈ ಬಗ್ಗೆ ವಿಷಯ ಚೆನ್ನಾಗಿ ತಿಳಿದಿದ್ದರೆ ಮತ್ತು ಮಕ್ಕಳೊಂದಿಗೆ ಚೆನ್ನಾಗಿ ಬೆರೆತು ಲಾಲನೆ ನೀಡುತ್ತಿದ್ದರೆ ಮನೆಯಲ್ಲಿಯೇ ಇರುವ ಸಂಪನ್ಮೂಲಗಳನ್ನು ಗರಿಷ್ಠ ಮಟ್ಟಕ್ಕೆ ಬಳಸುವಲ್ಲಿ ಯಶಸ್ವಿಯಾಗುತ್ತಾರೆ. ಅಲ್ಲದೆ, ಇವರು ಪುಟ್ಟ ಮಕ್ಕಳನ್ನು ಕುರಿತು ಇರುವ ವಿವಿಧ ಕಾರ್ಯಕ್ರಮಗಳನ್ನು ಮತ್ತು ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಅಂತಹ ತಂದೆತಾಯಿಯರು ಶಾಲೆಗಳಿಗೆ ತಮ್ಮ ಮಕ್ಕಳು ಚೆನ್ನಾಗಿ ಒಗ್ಗಿಕೊಳ್ಳುವಂತೆ ಮಾಡಲು ಮತ್ತು ಅವರ ಬೆಳವಣಿಗೆ ಚೆನ್ನಾಗಿ ಆಗುವಂತೆ ಮಾಡಲು ಸೂಕ್ಷ್ಮ ಆಸಕ್ತಿಯನ್ನು ಹೊಂದಿರುತ್ತಾರೆ. ಇವೆಲ್ಲವೂ ನಡೆಯಬೇಕಾದಲ್ಲಿ ಪುಟ್ಟ ಮಕ್ಕಳನ್ನು ಕುರಿತ ಕಾರ್ಯಕ್ರಮಗಳು ಅತಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ತಂದೆತಾಯಿಯರ ಸಹಭಾಗಿತ್ವ, ಅವರ ಒಳಗೊಳ್ಳುವಿಕೆ ಮತ್ತು ತಂದೆತಾಯಿಯರಿಗೆ ಶಿಕ್ಷಣ, ಮಕ್ಕಳ ಶೈಕ್ಷಣಿಕ ಜೀವನದಲ್ಲಿ ಮತ್ತು ಅವರ ಬೆಳವಣಿಗೆಯಲ್ಲಿ ಸಹಭಾಗಿಗಳಂತೆ ಇರಲು ಸಹಾಯಕವಾಗಿರುತ್ತದೆ.

### ಶಾಲೆಗೆ ಮಕ್ಕಳು ತಯಾರಾಗುವಿಕೆ

ಮಕ್ಕಳ ಮೊದಲ ಐದು ವರ್ಷಗಳು, ಅವರು ತಮ್ಮ ಪರ್ಯಾಪ್ತ ಸಾಮರ್ಥ್ಯಕ್ಕೆ ಬೆಳೆಯಲು ಸದವಕಾಶದ ದ್ವಾರವೆಂದು ಸಾಬೀತಾಗಿದೆ. ಆದ್ದರಿಂದ, ಪುಟ್ಟ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು ಮಕ್ಕಳ ಬೆಳವಣಿಗೆಗೆ ಅತ್ಯವಶ್ಯಕ, ಎನ್ನುವುದನ್ನು ಸರ್ವಸಮ್ಮತ ಅಭಿಪ್ರಾಯವಾಗಿದೆ. ಅಲ್ಲದೆ ಈ ಸರ್ವಾಂಗೀಣ ಬೆಳವಣಿಗೆಯ ವಿಧಾನವು ಅವರ ಆರೋಗ್ಯ, ಪೋಷಣೆ ಮತ್ತು ಬೆಳವಣಿಗೆಗೆ ಕಡ್ಡಾಯವಾಗಿ ಸಮಾನ ಒತ್ತನ್ನು ನೀಡುವಂತೆ ಮಾಡಿದೆ. ಏಕೆಂದರೆ ಇವೆಲ್ಲದರ ಕೂಡು ಫಲವಾಗಿಯೇ ಮಕ್ಕಳು ಪರ್ಯಾಪ್ತ ಮಟ್ಟಕ್ಕೆ ಬೆಳೆಯುತ್ತಾರೆ. ಮಕ್ಕಳ ಅಭಿವೃದ್ಧಿಗೆ ಅವಕಾಶವನ್ನು ಕಲ್ಪಿಸುವ, ಈ ಸಮಗ್ರ ಬೆಳವಣಿಗೆಯ ವಿಧಾನವು ಮಗುವನ್ನು ಕೇವಲ ದೈಹಿಕವಾಗಿ ಪುಷ್ಟಿಗೊಳಿಸುವುದೇ ಅಲ್ಲದೆ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸಮರ್ಥನನ್ನಾಗಿಸುವ ಕಡೆಗೆ ಗಮನ ಹರಿಸುತ್ತದೆ. ಮಗುವು ಶಾಲೆಗೆ ಸೇರಿದ ಆರಂಭಿಕ ವರ್ಷಗಳಲ್ಲಿ ಅರಿವಿನ ಮತ್ತು ಭಾಷಾ ಕೌಶಲ್ಯಕ್ಕೆ ಸಂಬಂಧಪಟ್ಟ ವಿಚಾರಗಳು, ಅವರ ಶಾಲೆಗೆ ತಯಾರಾಗುವಿಕೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಕಲಿಕೆ ಮತ್ತು ಪರಸ್ಪರ ಬೆರೆಯುವಿಕೆಯಿಂದ ಕಲಿತ ಅನೇಕ ಸ್ವಭಾವಗಳು ಮತ್ತು ಕೌಶಲ್ಯಗಳನ್ನು ಮಗುವು ತೋರಿಸುತ್ತದೆ. ಆದ್ದರಿಂದ ಪುಟ್ಟಮಕ್ಕಳ ಬಗ್ಗೆ ಇರುವ ಉಪಕ್ರಮಗಳು ಮತ್ತು ಕಾರ್ಯಕ್ರಮಗಳು ಮಗುವು ಶಾಲೆಗೆ ತಯಾರಾಗುವಿಕೆಯಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಆದರೆ, ಅವು ಪರಿಣಾಮಕಾರಿಯಾಗಿರಲು ಉತ್ತಮ ಗುಣಮಟ್ಟವನ್ನು ಹೊಂದಿದ್ದು, ಸಂದರ್ಭಕ್ಕೆ ಸೂಕ್ತವಾಗಿರಬೇಕು. ಮಕ್ಕಳ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶವನ್ನು ಅರ್ಥಮಾಡಿಕೊಂಡು ಅವರ ವಯಸ್ಸು ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ವಸ್ತುಗಳನ್ನು ಒದಗಿಸುವುದರಿಂದ ಈ ಕಾರ್ಯಕ್ರಮವನ್ನು ಎಲ್ಲಾ ಮಕ್ಕಳಿಗೂ ತಲುಪುವಂತೆ ಮಾಡಬಹುದು. ಭಾರತದಲ್ಲಿ ಈ ಕಾರ್ಯಕ್ರಮಗಳನ್ನು ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ನಡೆಸಲಾಗುತ್ತಿದೆ. ಇಲ್ಲಿ ಯಾವುದೇ ನಿಗದಿತವಾದ ನಿಯಮಗಳಿಲ್ಲದೆ ಪ್ರತಿಯೊಬ್ಬರೂ ತಮಗೆ ತಿಳಿದ ಹಾಗೂ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಈ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಇಂತಹ ಭಿನ್ನ ಗುಣಮಟ್ಟದ ಕಾರ್ಯಕ್ರಮಗಳಿಂದಾಗಿ ಮಕ್ಕಳಿಗೆ ದೊರೆಯುವ ಪ್ರಯೋಜನವೂ ಬೇರೆ ಬೇರೆಯಾಗಿರುತ್ತದೆ. ಇದರ ಪರಿಣಾಮವೇನೆಂದರೆ, ಮಕ್ಕಳು ಶಾಲಾ ಶಿಕ್ಷಣಕ್ಕೆ ವಿಭಿನ್ನ ರೀತಿಗಳಲ್ಲಿ ತಯಾರಾಗಿ ಬಂದಿರುತ್ತಾರೆ, ಅದನ್ನು ಶಾಲೆಗಳು ಒಪ್ಪಿಕೊಂಡು ಅದಕ್ಕೆ ಸರಿಯಾಗಿ ತಾವೂ ತಯಾರಾಗಬೇಕಾಗುತ್ತದೆ.

### ಸಿದ್ಧ ಶಾಲೆಗಳು

ಸಿದ್ಧ ಶಾಲೆಗಳ ಪ್ರಮುಖ ಅಂಶವೆಂದರೆ, ಎಲ್ಲಾ ಮಕ್ಕಳೂ ಕಲಿಯುವಂತಹ ವಾತಾವರಣವನ್ನು ಸೃಷ್ಟಿಸುವುದು. ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಹಕ್ಕು ಕಾನೂನಿನ ಅಡಿಯಲ್ಲಿ ಹೆಚ್ಚಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಸುಲಭವಾಗಿ ದೊರಕುವುದು ಸಾಧ್ಯವಾಗಿದೆ. ಆದರೆ ಮಕ್ಕಳು ಪ್ರಾಥಮಿಕ ಶಿಕ್ಷಣಕ್ಕೆ ಸುಲಭವಾಗಿ ಪರಿವರ್ತನೆಯನ್ನು ಹೊಂದುವಲ್ಲಿ ಯಶಸ್ವಿಯಾಗುವಂತೆ, ಶಾಲೆಗಳು ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಸಂದರ್ಭಕ್ಕೆ ತಕ್ಕ ಪುಸ್ತಕಗಳನ್ನು, ವಸ್ತುಗಳನ್ನು ಮತ್ತು ಪಠ್ಯಕ್ರಮಗಳನ್ನು ಒದಗಿಸಬೇಕಾಗುತ್ತದೆ. ಸಿದ್ಧ ಶಾಲೆಗಳು ಪ್ರಮುಖವಾಗಿ ಮೂರು ಮುಖ್ಯ ಹಂತಗಳ ಮೇಲೆ ಗಮನಹರಿಸಬೇಕಾಗುತ್ತದೆ 1) ಸ್ಥಿತ್ಯಂತರದ ಪೂರ್ವ ಹಂತ 2) ಸ್ಥಿತ್ಯಂತರದ ಹಂತ ಮತ್ತು 3) ಶಾಲಾ ವಾತಾವರಣಕ್ಕೆ ಒಗ್ಗಿಕೊಳ್ಳುವಂತೆ ಮಾಡುವುದು. ಸ್ಥಿತ್ಯಂತರದ ಪೂರ್ವ ಹಂತದಲ್ಲಿ ಪುಟ್ಟ ಮಕ್ಕಳನ್ನು ಕುರಿತ ಕಾರ್ಯಕ್ರಮಗಳೊಂದಿಗೆ ಸಂಪರ್ಕವನ್ನು ಹೊಂದುವುದು ಅತ್ಯಾವಶ್ಯಕವಾಗಿರುತ್ತದೆ. ಶಾಲೆಗಳು, ಸಮುದಾಯದಲ್ಲಿರುವ ಮಕ್ಕಳು ಯಾವ ಬಗೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ, ಎಂತಹ ಅನುಭವದೊಂದಿಗೆ ಮತ್ತು ಕಲಿಕೆಯೊಂದಿಗೆ ಅಲ್ಲದೇ ಯಾವ ಸಾಮಾಜಿಕ ಸಾಂಸ್ಕೃತಿಕ ಹಿನ್ನಲೆಯೊಂದಿಗೆ ಶಾಲೆಗೆ ಪ್ರವೇಶಿಸುತ್ತಾರೆ ಎಂಬುವುದನ್ನು ಕುರಿತು ಗಮನ ಹರಿಸಬೇಕಾಗುತ್ತದೆ. ಈ ಎಲ್ಲಾ ಮಾಹಿತಿಗಳಿಂದಾಗಿ ಆ ಪುಟ್ಟ ಮಕ್ಕಳ ಅನುಭವದ ಆಧಾರದ ಮೇರೆಗೆ ಶಿಕ್ಷಕರು ಮಕ್ಕಳನ್ನು ಹೇಗೆ ಗುಂಪುಗಳನ್ನಾಗಿ ವಿಭಾಗಿಸಬಹುದು, ಅಲ್ಲದೇ ಯಾವ ಬೋಧನಾ ವಿಧಾನವನ್ನು ಬಳಸಿ ವಿವಿಧ ಬಗೆಯ ತಯಾರಿಯೊಂದಿಗೆ ಮಕ್ಕಳನ್ನು ತಲುಪಬಹುದು ಎಂದು ತಿಳಿಯಲು ಸಹಾಯವಾಗುತ್ತದೆ. ಆದ್ದರಿಂದ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳು ಶಾಲೆಯನ್ನು ಒಪ್ಪಿ, ಉತ್ಸಾಹದಿಂದ ಭಾಗವಹಿಸುವಲ್ಲಿ ಪುಟಾಣಿ ಮಕ್ಕಳನ್ನು ಕುರಿತ ಕಾರ್ಯಕ್ರಮದ ಕಾರ್ಯಕರ್ತರು, ಶಾಲೆಯ ಶಿಕ್ಷಕರು ಮತ್ತು ಪೋಷಕರ ನಡುವಿನ ಸಂಪರ್ಕ ಅತಿ ಮುಖ್ಯವಾಗಿರುತ್ತದೆ. ಸ್ಥಿತ್ಯಂತರದ ಹಂತದಲ್ಲಿ ಎಂದರೆ, ಮಗುವು ಶಾಲೆಯನ್ನು ಸೇರಿದ ಕೆಲವು ದಿನಗಳಲ್ಲಿ ಅದು ಸಾಕಷ್ಟು ಹೊಂದಾಣಿಕೆ ಮತ್ತು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಸಿದ್ಧ ಶಾಲೆಗಳು ಇವೆಲ್ಲವುಗಳ ಕುರಿತು ಎಚ್ಚರಿಕೆಯನ್ನು ವಹಿಸಿ, ವಿಭಿನ್ನ ರೀತಿಯ ಮತ್ತು ಪರಸ್ಪರ ಬೆರೆಯುವಂತಹ ಚಟುವಟಿಕೆಗಳು ಮತ್ತು ಯೋಜನೆಗಳನ್ನು ಹಮ್ಮಿಕೊಳ್ಳುವುದರಿಂದ ಮಕ್ಕಳು ಶಾಲಾ ವಾತಾವರಣಕ್ಕೆ, ನಿತ್ಯಕ್ರಮಗಳಿಗೆ ಮತ್ತು ನಿರೀಕ್ಷೆಗಳಿಗೆ ಹೆಚ್ಚು ಸುಗಮವಾಗಿ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಸಿದ್ಧ ಶಾಲೆಗಳು, ಈ ಸ್ಥಿತ್ಯಂತರ ಅವಧಿಯನ್ನು ಕುರಿತು ಸೂಕ್ಷ್ಮ ಮಾಹಿತಿಯನ್ನು ಹೊಂದಿರುವ ಮತ್ತು

ಸೂಕ್ತವಾದ ಪಠ್ಯಕ್ರಮಗಳನ್ನು ರೂಪಿಸುವಂತಹ ಶಿಕ್ಷಕರನ್ನು ಹೊಂದಿರಬೇಕಾಗುತ್ತದೆ. ಈ ಶಿಕ್ಷಕರು, ಮಕ್ಕಳು ಯಾವಾಗ ತಾವು ಹೊಂದಿಕೊಳ್ಳುತ್ತಾರೆ ಮತ್ತು ಹೇಗೆ ಎಂದು ತಿಳಿದು ಮಕ್ಕಳ ನಿರೀಕ್ಷೆಗೆ ಅನುಗುಣವಾಗಿ ಉಳಿದ ಪಠ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಇಂತಹ ಪ್ರಕ್ರಿಯೆಗಳು ಮಗುವಿನ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಮತ್ತು ಯಾವುದೇ ಭಯವಿಲ್ಲದೇ ಹೊಸ ಕಲಿಕೆಯ ವಿಧಾನವನ್ನು ಸ್ವೀಕರಿಸುವಂತೆ ಮಾಡುವಲ್ಲಿ ಸಹಕಾರಿಯಾಗಿವೆ. ಆದ್ದರಿಂದ, ಶಾಲೆಗಳಲ್ಲಿ ಸ್ಥಿತ್ಯಂತರ ಪೂರ್ವ ಹಂತ, ಸ್ಥಿತ್ಯಂತರದ ಹಂತ, ಶಾಲೆಗೆ ಮಗುವು ಒಗ್ಗಿಕೊಳ್ಳುವ ಹಂತ ಇವೆಲ್ಲವೂ ಸಿದ್ಧ ಶಾಲೆಗಳ ಪ್ರಮುಖ ಭಾಗಗಳಾಗಿವೆ.

## ತೀರ್ಮಾನ

ಶಾಲಾ ಸಿದ್ಧತೆ ನಡೆಯುವುದು, ಪೋಷಕರು, ಮಕ್ಕಳು ಮತ್ತು ಶಾಲೆಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದಾಗ ಮಾತ್ರ ಸಾಧ್ಯ. ಇದರಲ್ಲಿ ಪ್ರತಿಯೊಬ್ಬರ ಪಾತ್ರವು ಮುಖ್ಯವಾಗಿರುತ್ತದೆ. ಶಾಲೆಗಳಲ್ಲಿ ಅನುಕೂಲಕರ ವಾತಾವರಣವನ್ನು ರೂಪಿಸುವಲ್ಲಿ ಕಾರ್ಯಕ್ರಮಗಳು ಮತ್ತು ನೀತಿ-ನಿಯಮಗಳು ಪೂರಕವಾಗಿರಬೇಕಾಗುತ್ತದೆ. ಮಕ್ಕಳು ಶಾಲೆಗೆ ತಯಾರಾಗಲು, ಉತ್ತಮ ಗುಣಮಟ್ಟದ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮಕ್ಕೆ ಸೇರಿಕೊಳ್ಳುವುದು ಅಗತ್ಯವಾಗುತ್ತದೆ. ಶಾಲಾ ಸಿದ್ಧತೆ, ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮ ಮತ್ತು ಪ್ರಾಥಮಿಕ ಶಾಲೆಗಳ ನಡುವಿನ ಉತ್ತಮ ಸಂಪರ್ಕದಿಂದ ಸಾಧ್ಯವಾಗುತ್ತದೆ. ಅಂತಿಮವಾಗಿ ನಾವು ಶಾಲಾ ಸಿದ್ಧತೆಯನ್ನು, ಮಕ್ಕಳು ಶಾಲಾ ವಾತಾವರಣಕ್ಕೆ ಒಗ್ಗಿಕೊಳ್ಳುವುದು ಮತ್ತು ಶಿಕ್ಷಣಕ್ಕಾಗಿ ಮುಖ್ಯವಾದ ಪ್ರಕ್ರಿಯೆ ಎಂದು ಮನಗಂಡಲ್ಲಿ, ಮಕ್ಕಳ ಭಾವನೆಗಳನ್ನು ಸೂಕ್ಷ್ಮವಾಗಿ ಅರಿಯುವ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವಂತಹ ಶಿಕ್ಷಕರು ಮತ್ತು ಶಿಶು ಆಧಾರಿತ ಶಿಕ್ಷಕರನ್ನು ಹೆಚ್ಚು ಪ್ರೋತ್ಸಾಹಿಸಬೇಕಾಗುತ್ತದೆ.




**References**

1. ASER 2013, 9th Annual Status of Education Report.
2. Janus,M; Hughes,D; Duku,E 2010 Patterns of School Readiness among selected subgroups of Canadian Children: Children with special needs and children with diverse language background. Oxford center for Child Studies, McMaster University, Canada
3. UNICEF 2012 School Readiness and Transition. A companion to child friendly school manual. NY; UNICEF



**ವೃಂದಾರವರು** ಹ್ಯೂಮನ್ ಎಕೋಲಜಿ ಸೆಂಟರ್, ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್, ಮುಂಬೈನಲ್ಲಿ ಪ್ರೊಫೆಸರ್ ಆಗಿದ್ದಾರೆ ಮತ್ತು ಆರಂಭಿಕ ಬಾಲ್ಯ ಶಿಕ್ಷಣ ಮತ್ತು ಅಭಿವೃದ್ಧಿ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ(ಎಇಸಿಇಡಿ), ಇದು ರಾಷ್ಟ್ರಿಯ ಸಂಸ್ಥೆಗಳ ಜಾಲವಾಗಿದೆ ಮತ್ತು ಇಲ್ಲಿ ಪ್ರತಿಯೊಬ್ಬರೂ ಪುಟ್ಟ ಮಕ್ಕಳ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಾರೆ. ಪ್ರೊ॥ ದತ್ತಾರವರು ಮಾನವನ ಅಭಿವೃದ್ಧಿ (ಹ್ಯೂಮನ್ ಡೆವಲಪ್ ಮೆಂಟ್)ಯಲ್ಲಿ ಪಿಹೆಚ್. ಡಿ.ಯನ್ನು ಪಡೆದಿದ್ದಾರೆ. ಅಲ್ಲದೇ ಶಿಶು ಶಿಕ್ಷಣ ವಿಷಯವನ್ನು ಕುರಿತು ಸೂಕ್ಷ್ಮ ಸಂಶೋಧಕರಾಗಿದ್ದಾರೆ. ಅವರು ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮ, ಶಿಕ್ಷಕರ ತರಬೇತಿ ಮತ್ತು ಮಕ್ಕಳ ಅಭಿವೃದ್ಧಿಯ ಮೇಲೆ ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮದ ಪರಿಣಾಮ, ಇವುಗಳ ಗುಣಮಟ್ಟಕ್ಕೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ಕೆಲಸ ಮಾಡಿದ್ದಾರೆ. ಅವರು ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. 2005 ರಲ್ಲಿ ಪ್ರೊ॥ ದತ್ತಾರವರು ವರ್ಲ್ಡ್ ಫೋರಂ ಫೌಂಡೇಷನ್ ರವರಿಂದ ಭಾರತದ ಪರವಾಗಿ ಜಾಗತಿಕ ಮುಖಂಡರಾಗಿ ಆಯ್ಕೆಯಾಗಿದ್ದರು. ಅಲ್ಲದೇ ಅವರು 2005 ರಲ್ಲಿ ಅಮೇರಿಕಾದ ಸೀನಿಯರ್ ಫುಲ್ ಬ್ರೈಟ್ ರಿಸರ್ಚ್ ಫೆಲೋಷಿಪ್ ನ ವಿಜೇತರಾಗಿದ್ದಾರೆ. ಅವರನ್ನು vrinda@tiss.edu ಅಥವಾ vdatta05@hotmail.com ನಲ್ಲಿ ಸಂಪರ್ಕಿಸಬಹುದು.

ವಿಭಾಗ ಸಿ

# ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಸಂಶೋಧನೆ





# ಸಂಶೋಧನಾ ಕಾರ್ಯದಲ್ಲಿ ಭಾಗವಹಿಸುವವನಾಗಿ ಮತ್ತು ಸಂಶೋಧಕನಂತೆ ಶಿಕ್ಷಕನ ಪಾತ್ರ

ಟಿ.ಎಸ್. ಸರಸ್ವತಿ

ಪ್ರಸ್ತುತ ಲೇಖನವು ಶಿಕ್ಷಕರು ತಮ್ಮದೇ ಸಾಮರ್ಥ್ಯದ ಆಧಾರದ ಮೇಲೆ ಸಂಶೋಧಕರಾಗಿಯೂ, ಸಂಶೋಧನಾ ಮಾಹಿತಿಯನ್ನು ಪಡೆಯುವ ಗ್ರಾಹಕರಾಗಿಯೂ ಮತ್ತು ಸಂಶೋಧನಾ ಕಾರ್ಯಗಾರಗಳಲ್ಲಿ ಸಂಶೋಧನಾ ಲೇಖನವನ್ನು ಮಂಡಿಸುವ ಅಭ್ಯರ್ಥಿಯಾಗಿಯೂ ಭಾಗವಹಿಸುವುದನ್ನು ಕುರಿತು ಇರುವ ಗಮನಾರ್ಹತೆಯನ್ನು ತಿಳಸುತ್ತದೆ. ಈ ಒಂದು ಕಾರಣದ ಆಧಾರದ ಮೇಲೆ, ಜನರು ಏಕೆ ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (National Early Childhood Care And Education (ECCE)) ಎಂಬ ವಿಷಯದ ಮೇಲೆ ಸಂಶೋಧನೆಯನ್ನು ಮಾಡುತ್ತಾರೆ? ಈ ಸಂಸ್ಥೆಯ ಅಡಿಯಲ್ಲಿ ವಿಶಾಲವಾದ ಅಥವಾ ಮಿತ ಪ್ರಮಾಣದಲ್ಲಿ ಹಲವಾರು ಉದ್ದೇಶಗಳಿಗಾಗಿ ಸೇವೆಗಳನ್ನು ನಡೆಸಲಾಗುತ್ತಿದೆ ಎಂಬ ಕಾರಣಗಳನ್ನು ತಿಳಿಯುವುದರೊಂದಿಗೆ ಮುಂದಿನ ವಿಚಾರವನ್ನು ಚರ್ಚಿಸೋಣ.

1. ಇದು, ಮಕ್ಕಳು ಹೇಗೆ ಕಲಿಯುತ್ತಾರೆ? ಅವರು ಹೇಗೆ ಬೆಳೆಯುತ್ತಾರೆ? ಮಗುವಿನ ಬಾಲ್ಯದಲ್ಲಿನ ಮನೆಯ ಮತ್ತು ಶಾಲೆಯ ಅನುಭವಗಳು ಅದರ ದೈಹಿಕ, ಸಾಮಾಜಿಕ, ಭಾವನಾತ್ಮಕ ಮಾತು ಬೌದ್ಧಿಕ ವಿಕಾಸ ಮತ್ತು ಬೆಳವಣಿಗೆಗೆ ಹೇಗೆ ಸಹಕರಿಸುತ್ತದೆ ಮತ್ತು ಕುಂಠಿತಗೊಳಿಸುತ್ತಿದೆ? ಎಂಬುದರ ಅರಿವನ್ನು ನಮಗೆ ಅರ್ಥಮಾಡಿಸುತ್ತದೆ.

2. ಸಂಶೋಧನೆಯಿಂದ ಪಡೆದ ಜ್ಞಾನ, ಸಂಸ್ಕೃತಿಗೆ ಸಂಬಂಧಿಸಿದ ಜ್ಞಾನವನ್ನು ವೃದ್ಧಿಸಲು ಸಹಕರಿಸುತ್ತದೆ. ಈ ಗ್ರಹಿಕೆಯ ಆಧಾರವಾಗಿ ಪಡೆದ ಜ್ಞಾನವನ್ನು ಇತರರು ತಮ್ಮ ಕಾರ್ಯಗಳಿಗೆ ಅನ್ವಯಿಸಿಕೊಳ್ಳಬಹುದು, ತಮ್ಮ ಪರಿಶೋಧನೆಯನ್ನು ಸಮರ್ಥಿಸಿಕೊಳ್ಳಬಹುದು ಮತ್ತು ಸಂಬಂಧಿತ ಅಗತ್ಯವಾದ ನಿಯಮಾವಳಿಗಳನ್ನು ಸೃಷ್ಟಿಸಿಕೊಳ್ಳಬಹುದು.

3. ಸಂಶೋಧನೆಗಳು, ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಅಗತ್ಯವಿರುವ ಒಳ್ಳೆಯ ಅಭ್ಯಾಸಗಳನ್ನು ಅಥವಾ ಮಕ್ಕಳ ಬದುಕಿನ ಗುರಿಗಳನ್ನು ಉತ್ತಮ ಪಡಿಸಿಕೊಳ್ಳಲು ಇರುವ ಕಾರ್ಯಕ್ರಮಗಳ ಯಶಸ್ಸು ಮತ್ತು ವೈಫಲ್ಯತೆಗಳ ಕುರಿತ ಜ್ಞಾನಗಳ ದಾಖಲೆಗಳ ಸಹಿತ ಆಧಾರಗಳನ್ನು ಒದಗಿಸುತ್ತವೆ.

4. ಸಂಶೋಧನೆಗಳು, ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಸಂಬಂಧಿತ ನಿಯಮಾವಳಿಗಳ ಬೆಳವಣಿಗೆಗೆ ಅಗತ್ಯವಿರುವ ಪುರಾವೆಗಳನ್ನು ಒದಗಿಸುತ್ತವೆ.

ECCE ಯ ಅಡಿಯಲ್ಲಿ ನಡೆಯುವ ಸಂಶೋಧನೆಗಳು ಮೂರು ಹಂತಗಳಲ್ಲಿ ನಡೆಯುತ್ತವೆ.

1. ವಿಶಾಲವಾದ ಹಂತದಲ್ಲಿ, 2. ಮಧ್ಯಮ ಹಂತದಲ್ಲಿ ಮತ್ತು 3. ನಿರ್ದಿಷ್ಟ ಹಂತದಲ್ಲಿ ಹೀಗೆ ಮೂರು ಹಂತಗಳಲ್ಲಿ ನಡೆಯುತ್ತವೆ.


ವಿಶಾಲ ಹಂತದಲ್ಲಿ ನಡೆಯುವ ಸಂಶೋಧನೆಗಳು ವ್ಯಾಪಕ ಪ್ರಮಾಣದಲ್ಲಿ ಮಾಹಿತಿಯನ್ನು ಒದಗಿಸುತ್ತವೆ. ಅನೇಕ ಸಂದರ್ಭಗಳಲ್ಲಿ ನಡೆಯುವಂತಹ, ಉದಾಹರಣೆಗೆ: ಆರು ವರ್ಷಕ್ಕಿಂತ ಕೆಳಗಿನ ಎಲ್ಲಾ ಮಕ್ಕಳು ಆರಂಭಿಕ ಬಾಲ್ಯ ಶಿಕ್ಷಣ ಕೇಂದ್ರದ ಹಾಜರಾತಿಯನ್ನು ಪಡೆದಿರುತ್ತಾರೆ ಎಂಬ ವಿಷಯ ಕುರಿತ ಸಮಗ್ರ ಜನಸಂಖ್ಯೆಯನ್ನು ಒಳಗೊಳ್ಳುವಂತಹ ಗಣತಿಗಳು ಈ ಗುಂಪಿಗೆ ಸೇರುತ್ತವೆ. ಹೀಗೆ, ವಿಶಾಲ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಮತ್ತು ಪ್ರಾಂತೀಯ ಹಂತಗಳಲ್ಲಿ ಆರಂಭಿಕ ಬಾಲ್ಯ ಶಿಕ್ಷಣ ಕಂದ್ರಗಳಲ್ಲಿ ಶಿಕ್ಷಕರ ಲಭ್ಯತೆಯ, ಶಿಕ್ಷಕರ ವಿದ್ಯಾರ್ಹತೆಯ ಮತ್ತು ಶಾಲೆಗಳಲ್ಲಿ ಅಗತ್ಯವಿರುವ ಮೂಲ ಸೌಕರ್ಯ ಕುರಿತಂತೆ ನಡೆಯುವ ಸಮೀಕ್ಷೆಗಳು ಈ ಗುಂಪಿಗೆ ಸೇರುತ್ತವೆ. NSSO, ASER ಪ್ರಥಮ್, ಶೈಕಣಿಕ ಸಂಸ್ಥೆಗಳಿಂದ ನಡೆಯುವ ಎಲ್ಲಾ ರೀತಿಯ ಸಮೀಕ್ಷೆಗಳು ವಿಶಾಲ ವ್ಯಾಪ್ತಿಯಡಿಯಲ್ಲಿ ನಡೆಯುವ ಸಂಶೋಧನೆಗಳಾಗಿವೆ. ಇವುಗಳು ಪುರಾವೆಗಳಾಗಿ, ಆಧಾರಗಳಾಗಿ ಮತ್ತು ಸಂಬಂಧಿತ ಕೊರತೆಗಳನ್ನು ನೀಗಿಸುವುದಕ್ಕೆ ತುಂಬಾ ಸಹಾಯಕವಾಗಿವೆ.

ಮಧ್ಯಮ ವ್ಯಾಪ್ತಿಯ ಸಂಶೋಧನೆಗಳು, ವಿಶಾಲ ವ್ಯಾಪ್ತಿಯ ಮತ್ತು ಪ್ರತಿನಿಧಿಯಾಗಿ ಆಯ್ಕೆಯಾಗಿರುವ ನಮೂನೆಗಳ ಆಧಾರವಾಗಿ ಹೊರ ಬಂದ ಫಲಿತಾಂಶಗಳನ್ನು

ಸಾರ್ವತ್ರೀಕರಣಗೊಳಿಸುವಲ್ಲಿ ಸಹಾಯಕವಾಗುತ್ತವೆ. ಶೈಕ್ಷಣಿಕ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳು ಬೇರೆ ಬೇರೆ ರಂಗಗಳಲ್ಲಿ ನಡೆಸುವ ಅಧ್ಯಯನಗಳು ಮಧ್ಯಮ ವ್ಯಾಪ್ತಿಯ ಸಂಶೋಧನೆಗಳ ಗುಂಪಿಗೆ ಸೇರುತ್ತವೆ. ಸಾಮಾನ್ಯವಾಗಿ ಮಧ್ಯಮ ವ್ಯಾಪ್ತಿಯ ಸಂಶೋಧನೆಗಳಲ್ಲಿ ವಿಶಾಲ ವ್ಯಾಪ್ತಿಯ ನಮೂನೆಯ ಸಾಧನೆಯನ್ನು ಅಳೆಯಲು ಬಳಸಲು ಅಗತ್ಯವಿರುವ ಪ್ರಮಾಣಿಕೃತ ಸಾಧನಗಳನ್ನು ಸಿದ್ಧಪಡಿಸುವಂತಹ ಅಧ್ಯಯನಗಳು ಸಹ ಈ ಹಂತದಲ್ಲಿ ಬರುವ ಅಧ್ಯಯನಗಳಾಗಿರುತ್ತವೆ.

ನಿರ್ದಿಷ್ಟ ಹಂತದಲ್ಲಿ ನಡೆಯುವ ಸಂಶೋಧನೆಗಳು, ಮಿತ ಪ್ರಮಾಣದಲ್ಲಿ ಅಧ್ಯಯನದ ಆಳ ಜ್ಞಾನವನ್ನು ತಲುಪುವ ಗುರಿಯನ್ನು ಹೊಂದಿರುತ್ತವೆ. ಇದರಿಂದ ಹೊಸ ಕಲ್ಪನೆ ಪಡೆಯಲು, ನಿರ್ದಿಷ್ಟ ನಮೂನೆಯ ಗುಣಲಕ್ಷಣಗಳನ್ನು ವಿವರಿಸಲು, ಕೊಟ್ಟಿರುವಂತಹ ಪ್ರಾಕಲ್ಪನೆಗಳನ್ನು ಆಧಾರವಾಗಿಟ್ಟುಕೊಂಡು ಪ್ರಯೋಗಾತ್ಮಕ ಅಧ್ಯಯನವನ್ನು ನಡೆಸಲು ಆಧಾರವಾಗಿರುತ್ತವೆ.

ಆಕೃತಿ 1. ರಲ್ಲಿ ಈ ಮೂರು ಹಂತಗಳು ಒಂದು ಇನ್ನೊಂದನ್ನು ಹೇಗೆ ಅವಲಂಬಿಸಿರುತ್ತವೆ ಮತ್ತು ಒಂದು ಇನ್ನೊಂದಕ್ಕೆ ಮಾಹಿತಿಯನ್ನು ಒದಗಿಸುವುದರಲ್ಲಿ ಹೇಗೆ ಪೂರಕವಾಗಿದೆ




ಎಂಬುದನ್ನು ತೋರಿಸಲಾಗಿದೆ.

**ಆಕೃತಿ 1: ಬಹು ದೃಷ್ಟಿಕೋನದ ಕಾರ್ಯಸೂಚಿಗಳು – ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಕುರಿತ ಸಂಶೋಧನೆ**

## ವಿಶಾಲ ಮತ್ತು ಮಧ್ಯಮ ಹಂತದ ಸಂಶೋಧನಾ ಕಾರ್ಯಗಳಲ್ಲಿ ಉತ್ತರದಾಯಿಯಾಗಿ ಶಿಕ್ಷಕರ ಪಾತ್ರ

ಮೊದಲ ಎರಡು ಹಂತಗಳಾದ ವಿಶಾಲ ಮತ್ತು ಮಧ್ಯಮ ಹಂತದ ಸಮೀಕ್ಷೆಗಳಲ್ಲಿ ಉತ್ತರ ನೀಡುವವರಾಗಿ ಶಿಕ್ಷಕರ ಪಾತ್ರಯೆನ್ನುವ ವಿಷಯವನ್ನು ಕುರಿತು ಸ್ವಲ್ಪ ಹೇಳಿ, ಈ ಲೇಖನದ ಮೂಲ ಉದ್ದೇಶವಾದ ಸಂಶೋಧನಾ ಕಾರ್ಯಗಳಲ್ಲಿ ಶಿಕ್ಷಕರ ಪಾತ್ರದ ಬಗ್ಗೆ ಹೇಳುತ್ತೇವೆ. ECCE ಯ ಅಡಿಯಲ್ಲಿ ನಡೆಯುವ ಎಲ್ಲಾ ರೀತಿಯ ಸಂಶೋಧನೆಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಶಿಕ್ಷಕರ ಭಾಗವಹಿಸುವಿಕೆ ತುಂಬಾ ಅಗತ್ಯ. ಇದರಲ್ಲಿ ಶಿಕ್ಷಕರ ಪ್ರತಿಕ್ರಿಯೆ, ಅವರು ತರಗತಿಯ ಪಡೆದ ಅನುಭವದ ಪರ್ಯಾಲೋಚನೆಯಾಗಿರುತ್ತದೆ. ಶಿಕ್ಷಕರ ಈ ಪರ್ಯಾಲೋಚನೆಗಳು ಚೈತನ್ಯಯುತ ತರಗತಿ ಅಭ್ಯಾಸಗಳನ್ನು, ಶಾಲಾ ಕಾರ್ಯಕ್ರಮಗಳ ಅನ್ವಯಿಕೆಯಲ್ಲಿನ ತೊಡಕುಗಳು ಮತ್ತು ನಿಯಮಾವಳಿಗಳನ್ನು ಸೃಷ್ಟಿಸಲು ಅಗತ್ಯವಿರುವ ಪಾಠಗಳನ್ನು ಅರಿಯಲು ಅಮೂಲ್ಯ ವಿಚಾರಗಳಾಗಿರುತ್ತವೆ. ಸಂಶೋಧನೆಯಲ್ಲಿ ದತ್ತಾಂಶವನ್ನು ಸಂಗ್ರಹಿಸುವವನು ಸನ್ನಿವೇಶ ಮತ್ತು ಪ್ರತಿನಿಧಿಗಾರರ ನಡುವಣ ಮಧ್ಯಸ್ಥಿಕೆ ವಹಿಸುವವರಾಗಿರುತ್ತಾರೆ. ಸಂಶೋಧಕರಿಗೆ ದತ್ತಾಂಶವನ್ನು ಸಂಗ್ರಹಿಸುವುದರಲ್ಲಿ ಅಗತ್ಯವಿರುವ ಮಾಹಿತಿಯನ್ನು ಹಾಗೂ ಸುಳಿವನ್ನು ನೀಡುವುದರಲ್ಲಿ ಶಿಕ್ಷಕರು ಗಮನಾರ್ಹವಾದ ಕೊಡುಗೆಯನ್ನು ನೀಡುತ್ತಾರೆ.

### ಸಂಶೋಧಕರಾಗಿ ಶಿಕ್ಷಕರು

ಈ ವಿಭಾಗದಲ್ಲಿ ನಾವು ಸಕ್ರಿಯ ಸಂಶೋಧನೆಯಲ್ಲಿ ಶಿಕ್ಷಕರ ಗಮನಾರ್ಹವಾದ ಪಾತ್ರದ ಬಗ್ಗೆ ಚರ್ಚಿಸೋಣ ಹಾಗೂ ತಮ್ಮ ತರಗತಿಯಲ್ಲಿ ಸಂಶೋಧಕರಾಗಿ, ಪ್ರಶ್ನೆಗಳನ್ನು ಕೇಳುತ್ತಾರೆ, ಸಂಬಂಧಿತ ದತ್ತಾಂಶವನ್ನು ಸಂಗ್ರಹಿಸುತ್ತಾರೆ ಮತ್ತು ಅವುಗಳಿಂದ ಪಡೆದ ಫಲಿತಾಂಶವನ್ನು ತರಗತಿಗಳಲ್ಲಿ ಮತ್ತು ಮಕ್ಕಳೊಂದಿಗೆ ಅಥವಾ ಅವರ ತಂದೆತಾಯಿಯರೊಂದಿಗೆ ಮಾತನಾಡುವಾಗ ಅವರು ಅನ್ವಯಿಸುತ್ತಾರೆ.

ಈ ಮೊದಲೇ ತಿಳಿಸಿರುವಂತೆ, ಸಂಶೋಧನೆಯು, ಒಂದು ಪ್ರಶ್ನೆಗೆ ವ್ಯವಸ್ಥಿತ ರೀತಿಯಲ್ಲಿ ಉತ್ತರವನ್ನು ಕಂಡುಹಿಡಿಯುವ ಪ್ರಕ್ರಿಯೆಯಾಗಿದೆ, ಆಯ್ಕೆ ಮಾಡಿಕೊಂಡ ಕ್ಷೇತ್ರಕ್ಕೆ ಸಂಬಂಧಿಸಿದ ಜ್ಞಾನದ ಅಭಿವೃದ್ಧಿಯನ್ನು ಬೆಳೆಸುವುದಾಗಿದೆ. ಈ ಜ್ಞಾನಗಳು ಇಷ್ಟೊಂದು ಮಾಹಿತಿಯನ್ನು ಪಡೆದವನಿಗೆ ಉಪಯುಕ್ತವಾಗಿರುತ್ತವೆಯೆಂಬ ದೃಷ್ಟಿಯಿಂದ ಶಿಕ್ಷಕ ಒಬ್ಬ ಅನುಕೂಲವಾದ ಮತ್ತು ಮಿಗಿಲಾದ ಸ್ಥಾನದಲ್ಲಿದ್ದಾನೆ. ಮಗು ಹೇಗೆ ಕಲಿಯುತ್ತದೆ? ಯಾವುದರಿಂದ ಅವರನ್ನು ಕಲಿಕೆಯತ್ತ ಆಕರ್ಷಿಸಬಹುದು? ಕೆಲವು ಮಕ್ಕಳು ಕಲಿಕೆಯನ್ನು ಆನಂದಿಸಿದರೆ ಮತ್ತೆ ಕೆಲವು ಮಕ್ಕಳು ಕಲಿಕೆಯನ್ನು ಏಕೆ ದ್ವೇಷಿಸುತ್ತಾರೆ? ಹೀಗೆ ಹತ್ತು ಹಲವು ಪ್ರಶ್ನೆಗಳು ಅವರ ಸಂಶೋಧನಾ ಪ್ರಶ್ನೆಗಳಾಗಿದ್ದು, ಅವರು ತನ್ನ ದಿನಂಪ್ರತಿಯ ತರಗತಿಯಲ್ಲಿ ಸಂಭವಿಸುವಂತಹ ಸಮಸ್ಯೆಗಳಿಗೆ

ಕಂಡುಕೊಳ್ಳುವ ಪರಿಹಾರ ತನ್ನ ಆರೈಕೆಯಲ್ಲಿರುವ ಮಕ್ಕಳಿಗೆ ಸಹಾಯದಾಯಕವಾದವು. ಇದೇ ಸಮಯದಲ್ಲಿ, ಶಿಕ್ಷಕಿಯಾಗಿ ತನ್ನ ಸಮಸ್ಯೆಗೆ ಸಾಕ್ಷಿ, ಆಧಾರದೊಂದಿಗೆ ಕಂಡುಕೊಂಡ ಪರಿಹಾರದಿಂದ ಅವಳ ಆತ್ಮಸಂತೃಪ್ತಿ ಮತ್ತು ಸಾಮರ್ಥ್ಯ ವರ್ಧನೆ ಅವಳಲ್ಲಿ ತಾನು ಒಬ್ಬಳು ಸಂಶೋಧಕಿ ಹಾಗೂ ಸಕ್ರಿಯ ಸಂಶೋಧನೆಯನ್ನು ನಡೆಸುವುದರಲ್ಲಿ ಸಮರ್ಥಳು ಎಂಬ ಭಾವನೆಯನ್ನು ಹೆಚ್ಚಿಸುತ್ತದೆ.

ಪುಟ್ಟಮಕ್ಕಳ ಶಿಕ್ಷಣದಲ್ಲಿ ನಡೆದ ಕೆಲವು ಸಕ್ರಿಯ ಸಂಶೋಧನೆಯ ಉದಾಹರಣೆಗಳು ಈ ಕೆಳಗಿನಂತಿವೆ.

**ಉದಾಹರಣೆ 1:** ಶಿಕ್ಷಕಿಯೊಬ್ಬಳು ಸಂಗೀತ ಅಭ್ಯಾಸದ ಸಮಯದಲ್ಲಿ ಮೂರರಿಂದ ನಾಲ್ಕು ಮಕ್ಕಳು ಗುಂಪಿನಲ್ಲಿ ಸುಮ್ಮನೇ ಕೂತು ಬೇರೆಯವರು ಹಾಡುವುದನ್ನು ಕೇಳಸಿಕೊಳ್ಳುತ್ತಿದ್ದದ್ದನ್ನು ಗುರುತಿಸುತ್ತಾಳೆ. ಕೆಲವು ದಿನಗಳ ಕ್ರಮಬದ್ಧ ವೀಕ್ಷಣೆ ನಂತರ (ಸಂಶೋಧನಾ ಕಾರ್ಯತಂತ್ರ) ಶಿಕ್ಷಕಿ ಹಾಡುವ ಸಂದರ್ಭದಲ್ಲಿ ಆ ಮಕ್ಕಳನ್ನು ತನ್ನ ಬಳಿ ಕೂರಿಸಿಕೊಳ್ಳಲು ನಿರ್ಧರಿಸುತ್ತಾಳೆ ಮತ್ತು ಅಗತ್ಯ ಬಿದ್ದಾಗ ಅವರಿಗೆ ಪದಗಳನ್ನು (ಯೋಜಿತ ನೆರವು) ಹೇಳಿಕೊಡುತ್ತಾ ಅವರಿಗೆ ಹಾಡಲು ಪ್ರೋತ್ಸಾಹಿಸುತ್ತಾಳೆ. ಅದೇ ಮಕ್ಕಳು ಅವರನ್ನು ಬೇರೆಡೆ ಕೂರಿಸಿದಾಗಲೂ ಬಾಯಿ ಬಿಟ್ಟು ತಾವೂ ಹಾಡಿದರೆ (ಗಮನಿಸುವುದು) ತನ್ನ ನೆರವು (ಪ್ರಯೋಗ) ಯಶಸ್ಸು ಆದ ಬಗ್ಗೆ ಪುರಾವೆ ದೊರಕುತ್ತದೆ

**ಉದಾಹರಣೆ 2** : ಗಣಿತ ವಿಷಯಾಧಾರಿತವಾಗಿ ಮಕ್ಕಳು ಗುಂಪು ಚಟುವಟಿಕೆ ಮಾಡುತ್ತಿರುವಾಗ, ಕೆಲವು ಮಕ್ಕಳು ನಿಯೋಜಿಸಿದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಮೊದಲಿಗರಾದರೆ ಮತ್ತೆ ಕೆಲವರು ಸುಮ್ಮನೇ ಕೂತು ವೀಕ್ಷಿಸುತ್ತಿದ್ದರು. ಶಿಕ್ಷಕರು ಮಕ್ಕಳಲ್ಲಿ ಸಮಸ್ಯೆ ಪರಿಹಾರಕ್ಕಾಗಿ ಮಕ್ಕಳ ಸಹಕಾರ ಅಗತ್ಯವೆಂದು ಗುಂಪುಗಳನ್ನು ಬದಲಿಸಿ ಪುನಃ ಜೋಡಿಗಳಲ್ಲಿ ಗುಂಪನ್ನು ರಚಿಸುತ್ತಾರೆ. ಒಂದು ವೇಳೆ ಶಿಕ್ಷಕರು ಕೆಲವು ದಿನಗಳ ನಂತರ ಜೋಡಿಯಾಗಿ ರಚಿಸಿದ ಮಕ್ಕಳು ಗಣಿತ ಚಟುವಟಿಕೆಗಳಲ್ಲಿ ಉತ್ತಮ ಫಲಿತಾಂಶವನ್ನು ತಂದಿದ್ದರೆ, ಅದಕ್ಕೆ ಕಾರಣ ಗುಂಪು ಕಲಿಕೆಯಿಂದ ಮಾತ್ರ ಸಾಧ್ಯ ಎಂಬುದನ್ನು ಶಿಕ್ಷಕರು ಅರಿತರು. ಇದರಲ್ಲಿಯೂ ಶಿಕ್ಷಕರು ಸಂಶೋಧಕರಾಗಿ ಇನ್ನೊಮ್ಮೆ ತಮ್ಮ ಪ್ರಶ್ನೆಯಾದ "ಲೆಕ್ಕವನ್ನು ಕಲಿಯಲು ಮಕ್ಕಳಿಗೆ ನಾನು ಯಾವ ರೀತಿ ಸಹಾಯ ಮಾಡಬಲ್ಲೆ?" ಎಂಬುದಕ್ಕೆ ಸಮರ್ಪಕ ಪರಿಹಾರ ಕಂಡು ಕೊಳ್ಳುವಲ್ಲಿ ಯಶಸ್ವಿಯಾದರು.

**ಉದಾಹರಣೆ 3** : ಶಿಕ್ಷಕರು, ಶಾಲಾ ತಿಂಗಳ ಸಭೆಯಲ್ಲಿ ಪಾಲಕರ ಪಾಲ್ಗೊಳ್ಳುವಿಕೆಯ ಪ್ರಮಾಣ ತುಂಬಾ ಕಡಿಮೆಯೆಂಬುದನ್ನು ಕಂಡುಕೊಂಡರು. ಶಿಕ್ಷಕಿಯ ಪ್ರಾಕಲ್ಪನೆಯ ಪ್ರಕಾರ ಪಾಲಕರಿಗೆ ಮೌಖಿಕವಾಗಿ ಅಥವಾ ಲಿಖಿತವಾಗಿ ಮಕ್ಕಳೊಂದಿಗೆ ಕಳುಹಿಸಿದ ಸಂದೇಶ ಸಮರ್ಪಕವಾಗಿರಲಿಲ್ಲ. ಶಿಕ್ಷಕಿಯು ತಾನೇ ಖುದ್ದಾಗಿ ಪಾಲಕರ ಮನೆ ಮನೆಗಳಿಗೆ ಹೋಗಿ ಸಂದೇಶ ರವಾನಿಸುವ ಮತ್ತು ಸಭೆಯಲ್ಲಿ ಅಗತ್ಯವಿರುವ ಕೆಲವು ಜವಬ್ದಾರಿಗಳನ್ನು ಪಾಲಕರೇ ನೆರವೇರಿಸುವಂತೆ ಮುಂದಾಳತ್ವವನ್ನು ವಹಿಸಿದಳು. ಶಿಕ್ಷಕಿಯು ಮನೆಮನೆಗಳಿಗೆ ಹೋಗುವ ಅವಕಾಶಗಳನ್ನು ಉಪಯೋಗಿಸಿಕೊಂಡದ್ದಲ್ಲದೇ ಮಕ್ಕಳ ಪ್ರಗತಿಯ ಮಾಹಿತಿಯನ್ನು ಸಂಗ್ರಹಿಸಿದಳು. ಅಗತ್ಯ ವಿದ್ದಾಗ ಸಭೆಯ ಹಿಂದಿನ ದಿನ ಪಾಲಕರಿಗೆ ಮೊಬೈಲ್ ಫೋನ್‌ಗಳ ಕರೆಯನ್ನು ನೀಡಲಾಯಿತು. ಮುಂದೆ ಪಾಲಕರ ಸಭೆ ನಡೆದಾಗ ಶಿಕ್ಷಕರಲ್ಲಿ ಉತ್ತೇಜನ ವೃದ್ಧಿಸಿದನ್ನು ಕಂಡು ಸಮಸ್ಯೆಗೆ ಪರಿಹಾರವನ್ನು ಹೇಗೆ ಕಂಡುಕೊಳ್ಳಬೇಕು ಮತ್ತು ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ಅರಿಯುವ ಜ್ಞಾನ ದೊರೆತಂತಾಯಿತು. ಇದು ಶಿಕ್ಷಕಿಯಲ್ಲಿ ಮತ್ತೊಮ್ಮೆ ಉಪಯುಕ್ತವಾದ ಜ್ಞಾನವನ್ನು ಕಂಡುಕೊಳ್ಳುವುದರಲ್ಲಿ ನೆರವಾಯಿತು. ಮಗದೊಮ್ಮೆ, ನಿಜ ಜೀವನದಲ್ಲಿ ಉದಯಿಸುವ ಪ್ರಶ್ನೆಗಳಿಗೆ ವ್ಯವಸ್ಥಿತವಾಗಿ ನಡೆಸುವ ಪರಿಶೋಧನೆಯಿಂದ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯ ವ್ಯವಸ್ಥೆಯಲ್ಲಿ ಸಮಸ್ಯೆಗೆ ಪರಿಹಾರ ದೊರೆತು ಹೊಸ ಜ್ಞಾನ ಗ್ರಹಿಸಿದಂತಾಗಿದೆ.

ಇಂಥ ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು. ಶಿಕ್ಷಕರು ಒಬ್ಬ ಗುರುವಾಗಿ, ಸಂಶೋಧಕರಾಗುವುದರೊಂದಿಗೆ, ಹಿರಿಯ ಶಿಕ್ಷಕರಲ್ಲಿ ವಿದ್ಯಾರ್ಥಿಯಾಗಿ, ವೀಕ್ಷಕನಾಗಿ, ಮಧ್ಯಪ್ರವೇಶಿಸುವವನಾಗಿ, ಪರಿಶೋಧಕನಾಗಿ, ಸಂಶೋಧನಾ ಪ್ರಶ್ನೆಗಳನ್ನು ಪರೀಕ್ಷಿಸುವವನಾಗಿ ಹಾಗೂ ಎಲ್ಲಕ್ಕೂ ಮಿಗಿಲಾಗಿ ತಾನು ಕಂಡುಕೊಂಡ ಪರಿಹಾರದ ಮೂಲಕ ಸ್ವಂತ ಜ್ಞಾನ ಬಂಢಾರ ಬೆಳೆಸಿಕೊಳ್ಳುತ್ತಾರೆ. ನಿಜವಾಗಿಯೂ, ಈ ಎಲ್ಲಾ ಅಮೂಲ್ಯವಾದ ಸಂಶೋಧನಾತ್ಮಕ ಅನುಭವಗಳನ್ನು ಒಂದು ವ್ಯವಸ್ಥಿತವಾದ ದಾಖಲೆಯೊಂದಿಗಿಡಲು ಪ್ರಯತ್ನಿಸಿದರೆ, ಅದು ಮುಂದಿನ ಶಿಕ್ಷಕರಿಗೆ ಉಪಯುಕ್ತ ಸಾಧನವಾಗಬಹುದು. ಅಲ್ಲದೇ, ಒಂದೇ ಮನೋಭಾವನೆಯನ್ನು ಹೊಂದಿರುವ ಶಿಕ್ಷಕರ ತಂಡವನ್ನು ರಚಿಸಿ; ಅವರವರ ತರಗತಿ ಅಭ್ಯಾಸಗಳನ್ನು, ಮಕ್ಕಳ, ತಂದೆತಾಯಿಯರ ಮತ್ತು ಸಮುದಾಯದ ಅನುಭವಗಳನ್ನು ಹಂಚಿಕೊಳ್ಳಲು ಇದು ಸಹಾಯಕವಾಗಬಹುದು. ಇಂತಹ ತಂಡದೊಂದಿಗೆ ಮಾಡುವ ಕೆಲಸ ಕಾರ್ಯಗಳು ತಾವು ಮತ್ತು ಇತರರು ಅನುಭವಿಸುವ ಸಮಾನ ರೀತಿಯ ತೊಂದರೆಗಳು ಮತ್ತು ಸವಾಲುಗಳಿಗೆ ಪರಿಹಾರವನ್ನು ಹುಡುಕುತ್ತವೆ ಹಾಗೂ ಪರಸ್ಪರ ಹುರಿದುಂಬಿಸುವುದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತವೆ. ಇನ್ನೂ ಹೆಚ್ಚಿನ ಉಪಯುಕ್ತವಾದ ಅಂಶವೆಂದರೆ, ತಮ್ಮ ಅನುಭವಗಳಿಂದ ಕಂಡುಕೊಂಡ ಜ್ಞಾನವನ್ನು ತಮ್ಮ ಶಿಕ್ಷಕ ಗುಂಪು ಸಭೆಗಳಲ್ಲಿ ಹಂಚಿಕೊಂಡು ಚರ್ಚಿಸುವುದರಿಂದ

ತನ್ನನ್ನು ಮತ್ತು ತಮ್ಮವರನ್ನು ಸಶಕ್ತರನ್ನಾಗಿ ಮಾಡಿಕೊಂಡಂತಾಗುತ್ತದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರಿಗೆ ಶೈಕ್ಷಣಿಕವಾಗಿ ಪಾಂಡಿತ್ಯವನ್ನು ಪಡೆಯುವಲ್ಲಿ ಅಗತ್ಯವಾದ ಸಂಶೋಧನೆಗಳನ್ನು ನಡೆಸಲು ಸೌಕರ್ಯಗಳಿರುವುದಿಲ್ಲ. ನಾವು ಈಗಾಗಲೇ ಚರ್ಚಿಸಿದಂತೆ ಎಲ್ಲಾ ಮಗುವಿನಲ್ಲಿ ಒಬ್ಬ ಕುತೂಹಲ ತುಂಬಿದ ಸಂಶೋಧಕನಿರುತ್ತಾನೆ. ಹಾಗಾದರೆ ಶಿಕ್ಷಕನು ಮಗುವಿನಲ್ಲಿರುವ ಚೈತನ್ಯಯುತ ವಿಚಾರಣಾತ್ಮಕ ಗುಣವನ್ನು ಪ್ರಚೋಧಿಸುವ, ಮಗುವಿನ ಕಲಿಕೆ ಹೇಗೆ ನಡೆಯುತ್ತದೆ ಮತ್ತು ಅವನಲ್ಲಿ ವಿಕಾಸ ಹೇಗೆ ಆಗುತ್ತದೆ? ಎಂಬುದನ್ನು ತಿಳಿಯುವ ಅನುಕೂಲಕರ ಸ್ಥಾನದಲ್ಲಿ ಇದ್ದಾನೆ ತಾನೆ? ಸಂಶೋಧನೆಯ ಅನುಭವ, ಎಲ್ಲಾ ತರಗತಿಗಳಲ್ಲಿ ಸಂಭವಿಸುವಂತಹ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವಂತಹ ಅನುಭವಗಳನ್ನು ಪಡೆದ ಮತ್ತು ತನ್ನ ಸಾಧನೆಯ ಮೇಲೆ ತಾನು ಗೌರವದಿಂದ ಹೆಮ್ಮೆ ಪಟ್ಟುಕೊಳ್ಳುವಂತಹ, ಸಮಸ್ಯೆಯನ್ನು ಸಮಸ್ಯೆಯಂತೆ ನೋಡದೇ ಅದನ್ನು ಒಂದು ಸವಾಲಿನಂತೆ ಕಂಡು ಅದಕ್ಕೆ ಒಂದು ದೃಢ ನಿರ್ಧಾರ ಕಂಡುಕೊಳ್ಳುವ ಸಾಮರ್ಥ್ಯವನ್ನು ಶಿಕ್ಷಕನಿಗೆ ತಂದುಕೊಡುತ್ತದೆ. ಇದಕ್ಕಿಂತ ಮಿಗಿಲಾಗಿ, ಶಿಕ್ಷಕ ತಾನೆ ಸಂಶೋಧನೆಯ ವಸ್ತುವಾಗುವ ಬದಲು ಸಂಶೋಧಕನಾಗಿ ಹೆಚ್ಚು ಸಶಕ್ತನಾಗುತ್ತಾನೆ.



**ಟಿ.ಎಸ್ ಸರಸ್ವತಿ** ಪ್ರಸ್ತುತ ಸ್ವತಂತ್ರ ಮಕ್ಕಳ ಅಭಿವೃದ್ಧಿ ಸಲಹೆಗಾರರಾಗಿ ಕೆಲಸಮಾಡುತ್ತಿದ್ದಾರೆ. ಅವರು ಹಿಂದೆ ಎಂ ಎಸ್ ವಿಶ್ವವಿದ್ಯಾಲಯ, ಬರೋಡದಲ್ಲಿ ಮಾನವ ಅಭಿವೃದ್ಧಿ ಮತ್ತು ಕುಟುಂಬ ಅಧ್ಯಯನ ವಿಭಾಗದಲ್ಲಿ ಪ್ರೊಫೆಸರ್ ಮತ್ತು ಇಲಾಖೆ ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ.ಅವರನ್ನು saraswathi.1939@gmail.com ನಲ್ಲಿ ಸಂಪರ್ಕಿಸಬಹುದು

# ಐಸಿಡಿಎಸ್ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ಮೇದಕ್ ಜಿಲ್ಲೆಯಲ್ಲಿನ ಆರಂಭಿಕ ಬಾಲ್ಯ ಶಿಕ್ಷಣದ ಪರ್ಯಾಲೋಚನೆ – ಒಂದು ಸಾರಾಂಶ

'ಮೇದಕ್ ಆರಂಭಿಕ ಬಾಲ್ಯ ಶಿಕ್ಷಣ ಉಪಕ್ರಮ' ತಂಡ, ಅಜೀಂ ಪ್ರೇಮ್‌ಜಿ ಫೌಂಡೇಷನ್

ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವು ಮಕ್ಕಳಲ್ಲಿ ಮೂಲಭೂತ ಸಾಮಾಜಿಕ ಮೌಲ್ಯಗಳನ್ನು ನೆಲೆಗೊಳಿಸಿ ಜೀವನಪರ್ಯಂತ ಕಲಿಕೆಗೆ ಭದ್ರವಾದ ಬುನಾದಿಯನ್ನು ಒದಗಿಸುವುದಲ್ಲದೇ ಪ್ರಾಥಮಿಕ ಹಂತದ ಶಿಕ್ಷಣದ ಯಶಸ್ಸಿಗೆ ನಾಂದಿಯಾಗುತ್ತದೆ. ವೈಜ್ಞಾನಿಕ ಪುರಾವೆಗಳು ತಿಳಿಸುವಂತೆ ಎಳೆಯ ವಯಸ್ಸಿನಲ್ಲಿ ಆಗುವ ಮೆದುಳಿನ ಬೆಳವಣಿಗೆಯು ಜೀವನದ ಉದ್ದಕ್ಕೂ ಅವರ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ, ಕಲಿಕೆ ಮತ್ತು ವರ್ತನೆಯ ಮೇಲೆ ಪರಿಣಾಮವನ್ನು ಬೀರುತ್ತದೆ. ಎಳೆಯ ವಯಸ್ಸಿನ ಶಿಕ್ಷಣದಲ್ಲಿನ ಕೊರತೆಗಳು ಜಾಸ್ತಿಯಾಗಿದ್ದಷ್ಟು ನಂತರದ ಶಾಲಾ ದಿನಗಳಲ್ಲಿ ಆ ಕೊರತೆಗಳನ್ನು ಪರಿಹರಿಸಲು ಮಾಡುವ ಪ್ರಯತ್ನಗಳು ಜಾಸ್ತಿಯಾಗುತ್ತವೆ ಎಂದು ವೈಜ್ಞಾನಿಕವಾಗಿ ಪದೆ ಪದೆ ಸಾಬೀತಾಗಿದೆ.

ಶಿಕ್ಷಣದ ಗುಣಮಟ್ಟವು ಮಗುವಿನ ಸರ್ವಾಂಗೀಣ ಬೆಳವಣಿಗೆಯ ಉದ್ದೇಶವನ್ನು ಹೊಂದಿದ್ದು ಅದರತ್ತ ತನ್ನ ಗಮನವನ್ನು ಕೇಂದ್ರೀಕರಿಸುವುದು ಅವಶ್ಯಕ. ಆದರೆ ಜ್ಞಾನಗ್ರಹಣ ಕೌಶಲ್ಯವನ್ನು ಬೆಳಸುವತ್ತ ಅತಿಯಾದ ಒತ್ತನ್ನು ನೀಡುವುದರಿಂದ, ಜೀವನಕ್ಕೆ ಅವಶ್ಯಕವಾದ ಜ್ಞಾನಗ್ರಹಣವನ್ನು ಹೊರತುಪಡಿಸಿದ ಅನೇಕ ಇನ್ನಿತರ ಕೌಶಲ್ಯದ ಬೆಳವಣಿಗೆಗೆ ಅಡ್ಡಿಯುಂಟಾಗುತ್ತದೆ. 0–8 ವರ್ಷವು ಮೆದುಳಿನ ವಿಕಾಸಕ್ಕೆ ಅತ್ಯಂತ ಪ್ರಮುಖವಾದ ಸಮಯವೆಂದು ಸಂಶೋಧನೆಗಳು ಹೇಳುತ್ತವೆ. ಈ ಸಮಯದಲ್ಲಿ ಮೆದುಳಿನ ಬೆಳವಣಿಗೆಯು ಸೂಕ್ತವಾಗಿ ಆಗಲು ಮಗುವಿನ ಜೀವಾವರಣದಲ್ಲಿ ತೊಡಗಿಕೊಂಡಿರುವ ಪ್ರತಿಯೊಬ್ಬರೂ ಪ್ರಚೋದನೆ, ಅವಕಾಶ ಮತ್ತು ಬೆಂಬಲವನ್ನು ಒದಗಿಸಬೇಕು.

ಮಕ್ಕಳ ಆರಂಭಿಕ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಎತ್ತಿ ಹಿಡಿದಿರುವ ಭಾರತದ ಸಂವಿಧಾನ, ರಾಷ್ಟ್ರೀಯ ಶಾಸನಗಳು, ಮತ್ತು ಅಂತಾರಾಷ್ಟ್ರೀಯ ಘೋಷಣೆಗಳು ಒದಗಿಸಿರುವ ನಿಬಂಧನೆಗಳಿಗೆ ಪ್ರತಿಕ್ರಿಯೆಯಾಗಿ ಎಳೆಯ ಮಕ್ಕಳಿಗೆ ಆರೋಗ್ಯ, ಪೌಷ್ಟಿಕಾಂಶ ಮತ್ತು ಮಾನಸಿಕ–ಸಾಮಾಜಿಕ ಪ್ರಚೋದನೆಗಳನ್ನು ಒದಗಿಸುವುದನ್ನು ಗುರಿಯಾಗಿರಿಸಿಕೊಂಡಿರುವ, ಬಹುಶಃ ವಿಶ್ವದಲ್ಲೇ ಅತೀ ದೊಡ್ಡ ಕಾರ್ಯಕ್ರಮವಾದ ಐಸಿಡಿಎಸ್ (ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು) ಯೋಜನೆಯು 1975ನೇ ಇಸವಿಯಲ್ಲಿ ಅಕ್ಟೋಬರ್ 2ರಂದು ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಆರಂಭಿಕ ಪ್ರಯೋಗಾತ್ಮಕ ಹಂತದಲ್ಲಿ 33 ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಯಿತು. ಪ್ರಸ್ತುತ ನಮ್ಮ ದೇಶದಲ್ಲಿ ಸುಮಾರು 7000 ಐಸಿಡಿಎಸ್ ಯೋಜನೆಗಳು ಚಾಲ್ತಿಯಲ್ಲಿವೆ. ಈ ಕಾರ್ಯಕ್ರಮವು ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಸುಮಾರು ಮೂರು ದಶಕಗಳಿಂದ ಕಾರ್ಯವೆಸಗುತ್ತಿದೆ. ಅಂಗನವಾಡಿ ಕೇಂದ್ರಗಳು ಐಸಿಡಿಎಸ್ ಯೋಜನೆಯಲ್ಲಿ ಜಾರಿಗೆ ತರಲಾದ ಪ್ರಾಥಮಿಕ ಕಾರ್ಯಕ್ರಮವಾಗಿದೆ.

ದೇಶದಾದ್ಯಂತ ಇರುವ ಸುಮಾರು 14 ದಶಲಕ್ಷ ಅಂಗನವಾಡಿ ಕೇಂದ್ರಗಳಲ್ಲಿ ಗ್ರಾಮೀಣ ಭಾರತದ ಸುಮಾರು 73% ಮಕ್ಕಳು ದಾಖಲಾಗಿದ್ದಾರೆ. ಇದಲ್ಲದೇ ಸಿರಿವಂತ ಕುಟುಂಬದಿಂದ ಬಂದಿರುವ ಮಕ್ಕಳು ಒಂದಲ್ಲಾ ಒಂದು ವಿಧದಲ್ಲಿ, ನಿರ್ದಿಷ್ಟವಾಗಿ ಹೇಳುವುದಾದರೆ, ಖಾಸಗೀ ಶಾಲೆಗಳು ಅದರಲ್ಲೂ ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವುದರಿಂದ ಮಗುವಿನ ಎರಡನೇ ವರ್ಷದಲ್ಲಿಯೇ ಇಸಿಸಿಇ ಅನುಕೂಲಗಳನ್ನು ಪಡೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲೂ ಖಾಸಗಿ ಶಿಶುವಿಹಾರಗಳು ಸಕ್ರಿಯವಾಗಿ ಹೆಚ್ಚುತ್ತಿವೆ.

ಅಜೀಂ ಪ್ರೇಮ್‌ಜಿ ಫೌಂಡೇಷನ್ ತನ್ನ ಪ್ರಸ್ತುತ ಕಾರ್ಯವಾದ ಶಾಲಾ ಶಿಕ್ಷಣದ ಸ್ವಾಭಾವಿಕ ವಿಸ್ತರಣೆಯಾಗಿ ಆರಂಭಿಕ ಬಾಲ್ಯದ ಶಿಕ್ಷಣ ವಲಯದಲ್ಲಿ ಉಪಯುಕ್ತವಾದ ಯೋಜನೆಗಳು ಮತ್ತು ಉಪಕ್ರಮಗಳನ್ನು ಶೋಧಿಸುವುದರಲ್ಲಿ ಆಸಕ್ತಿಯನ್ನು ಹೊಂದಿದೆ. ಯಾವುದೇ ಕಾರ್ಯದಲ್ಲಿ ಮತ್ತು ಉಪಕ್ರಮಗಳಲ್ಲಿ ತಾನು ತೊಡಗಿಕೊಳ್ಳುವ ಮೊದಲು ಆ ಕ್ಷೇತ್ರವನ್ನು ಸಂಶೋಧನಾ ಆಧಾರದಿಂದ ಸರಿಯಾಗಿ ಅರ್ಥಮಾಡಿಕೊಳ್ಳುವ ಫೌಂಡೇಷನ್‌ನ ಪರಿಪಾಠಕ್ಕೆ ತಕ್ಕಂತೆ, ಆಂಧ್ರ ಪ್ರದೇಶದಲ್ಲಿರುವ ಮೇದಕ್‌ನ ಆರಂಭಿಕ ಬಾಲ್ಯದ ಶಿಕ್ಷಣ ಉಪಕ್ರಮದ ಅಡಿಯಲ್ಲಿ ಒಂದು ಪರಿಶೋಧನಾತ್ಮಕ ಅಧ್ಯಯನವನ್ನು

ನಡೆಸಿತು. ಈ ಅಧ್ಯಯನವು ಆರಂಭಿಕ ಬಾಲ್ಯದ ಶಿಕ್ಷಣ ವಲಯದಲ್ಲಿ ಅಂಗನವಾಡಿ ಕೇಂದ್ರಗಳ ಪಾತ್ರವನ್ನು ಅರ್ಥಮಾಡಿಕೊಳ್ಳುವುದರಲ್ಲಿ ತೊಡಗಿಸಿಕೊಂಡಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ಯೋಜನೆಯಾದ ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಅಡಿಯಲ್ಲಿ ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಸರ್ಕಾರಿ ಪ್ರಾಥಮಿಕ ವಾಹಿನಿಯ ಉಪಕ್ರಮವಾಗಿ ಅಂಗನವಾಡಿ ಕೇಂದ್ರಗಳು ಸ್ಥಾಪಿತವಾದವು. ಅಂಗನವಾಡಿ ಕೇಂದ್ರಗಳ ಕಾರ್ಯವನ್ನು ಅಧ್ಯಯನ ಮಾಡುವ ಮುಖಾಂತರ, ಆರಂಭಿಕ ಬಾಲ್ಯದ ಶಿಕ್ಷಣ ಕ್ಷೇತ್ರದಲ್ಲಿರುವ ಕೆಲವೊಂದು ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನವು ಪ್ರಯತ್ನಿಸಿತು. ಆಂಧ್ರ ಪ್ರದೇಶವು ಎಂಭತ್ತಾರು ಸಾವಿರ ಅಂಗನವಾಡಿಗಳಲ್ಲಿ 387 ಯೋಜನೆಗಳನ್ನು ಹೊಂದಿದೆ. ಮೇದಕ್ ಜಿಲ್ಲೆಯು ತನ್ನ 3041 ಅಂಗನವಾಡಿ ಕೇಂದ್ರಗಳಲ್ಲಿ 11 ಯೋಜನೆಗಳನ್ನು ಹೊಂದಿದೆ. ಆಂಧ್ರ ಪ್ರದೇಶದ ಮೇದಕ್ ಜಿಲ್ಲೆಯ 14 ಮಂಡಲಗಳಲ್ಲಿರುವ 270 ಅಂಗನವಾಡಿ ಕೇಂದ್ರಗಳಲ್ಲಿ ಫೌಂಡೇಷನ್ ಅಧ್ಯಯನವನ್ನು ನಡೆಸಲಾಯಿತು.

ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳು ಅಂಗನವಾಡಿಯ ಕಾರ್ಯದ ಬಗ್ಗೆ ಸಂಗ್ರಹಿಸಲಾದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಮಾಹಿತಿಯನ್ನು ಆಧಾರವನ್ನಾಗಿ ಹೊಂದಿತ್ತು. ಈ ಅಧ್ಯಯನದಲ್ಲಿ ಒಳಗೊಂಡಿದ್ದ 270 ಅಂಗನವಾಡಿ ಕೇಂದ್ರಗಳಿಂದ ಗುಣಾತ್ಮಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ಇದರ ಜೊತೆಗೆ, ಆ ದೊಡ್ಡ ಗುಂಪಿನಿಂದ 78 ಅಂಗನವಾಡಿ ಕೇಂದ್ರಗಳನ್ನು ಇಸಿಇ ಚಟುವಟಿಕೆಗಳು ಮತ್ತು ಅಂಗನವಾಡಿ ಕೇಂದ್ರಗಳ ಕಾರ್ಯವನ್ನು ವಿವರವಾಗಿ ಗಮನಿಸಲು ಆಯ್ಕೆ ಮಾಡಿಕೊಳ್ಳಲಾಯಿತು. ಸಂಗ್ರಹಿಸಲಾದ ಒಟ್ಟಾರೆ ಮಾಹಿತಿಯನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಬಹುದು:

1. ಅಂಗನವಾಡಿ ಕೇಂದ್ರಗಳ ಮತ್ತು ಕಾರ್ಯಕರ್ತೆಯರ ಗುಣಲಕ್ಷಣಗಳು;
2. ಅಂಗನವಾಡಿ ಕೇಂದ್ರಗಳ ಫಲಾನುಭವಿಗಳು;
3. ಅಂಗನವಾಡಿ ಕೇಂದ್ರಗಳ ದಕ್ಷತೆಯ ಮೌಲ್ಯಾಂಕನ.

### 1. ಅಂಗನವಾಡಿ ಕೇಂದ್ರಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಗುಣಲಕ್ಷಣಗಳು

ಬಹುತೇಕ ಅಂಗನವಾಡಿ ಕೇಂದ್ರಗಳಲ್ಲಿ ಭೌತಿಕ ಮೂಲಸೌಕರ್ಯಗಳ ಕೊರತೆ ಇದೆ. ಅಧ್ಯಯನ ನಡೆಸಿದ ಅಂಗನವಾಡಿ ಕೇಂದ್ರಗಳಲ್ಲಿ ಕೇವಲ ಶೇ.22 ಕೇಂದ್ರಗಳು ತಮ್ಮ ಸ್ವಂತ ಸ್ಥಳಗಳಲ್ಲಿ ನಡೆಯುತ್ತಿವೆ. ಅನೇಕ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳಾದ ಶೌಚಾಲಯಗಳು, ನೀರಿನ ಸೌಲಭ್ಯಗಳೂ ಲಭ್ಯವಿಲ್ಲ. ಬಹುತೇಕ ಎಲ್ಲಾ ಕೇಂದ್ರಗಳಲ್ಲಿರುವ ಜಾಗವನ್ನು ಆಹಾರ ಸಾಮಾಗ್ರಿಗಳು ಮತ್ತು ಇನ್ನಿತರ ವಸ್ತುಗಳನ್ನು ಸಂಗ್ರಹಿಸಿಡಲು ಬಳಸಲಾಗುತ್ತಿದೆ. ಸಾಮಾನ್ಯವಾಗಿ ಶಿಶುವಿಹಾರಗಳ ಚಟುವಟಿಕೆಗಳಿಗಾಗಿ ಪ್ರತ್ಯೇಕವಾಗಿ ಮೀಸಲಟ್ಟ ಸ್ಥಳಗಳು ಲಭ್ಯವಿಲ್ಲ. ಕೋಷ್ಟಕ 1ನ್ನು ನೋಡಿ.

**ಕೋಷ್ಟಕ 1**

ಸೌಕರ್ಯ ಸೂಚಕದಲ್ಲಿರುವ ಹೆಚ್ಚಿನ ಅಂಕದ ಅರ್ಥ ಹೆಚ್ಚು ಸೌಕರ್ಯಗಳಿವೆ ಎಂದು. ನೀಡಲು ಸಾಧ್ಯವಾದ ಗರಿಷ್ಠ ಅಂಕ 11

| ಅಂವಾ ಸೌಕರ್ಯ ಸೂಚಕ | % ಪ್ರಮುಖ ಅಂವಾಕೇಂ | % ಸಣ್ಣ ಅಂವಾಕೇಂ |
|---|---|---|
| 0 | 2 | 36.36 |
| 1 | 12.8 | 22.73 |
| 2 | 14 | 22.73 |
| 3 | 25.2 | 9.09 |
| 4 | 25.6 | 0 |
| 5 | 13.6 | 9.09 |
| 6 | 4 | 0 |
| 7 | 2 | 0 |
| 8 | 0.8 | 0 |
| ಒಟ್ಟು | 100 | 100 |

ಸುಮಾರು ಶೇ.12 ಅಂಗನವಾಡಿ ಕಾರ್ಯಕರ್ತೆಯರು ಕನಿಷ್ಠ ವಿದ್ಯಾರ್ಹತೆಯಾದ ಮೆಟ್ರಿಕ್ಯುಲೇಷನ್ ಶಿಕ್ಷಣವನ್ನೂ ಹೊಂದಿರುವುದಿಲ್ಲ. ಶೇ.55.81ರಷ್ಟು ಮಂದಿ ಮಾತ್ರ ಮೆಟ್ರಿಕ್ಯುಲೇಷನ್ ತೇರ್ಗಡೆಯಾಗಿದ್ದಾರೆ ಮತ್ತು 2.33% ಕಾರ್ಯಕರ್ತೆಯರಲ್ಲಿ ಕೆಲವರಿಗೆ ತಮ್ಮ ಹೆಸರನ್ನು ಮಾತ್ರ ಬರೆಯಲು ಬರುತ್ತದೆ ಆದರೆ ಅನೇಕರಿಗೆ ಓದುವ ಮತ್ತು ಬರೆಯುವ ಸಾಮರ್ಥ್ಯವಿಲ್ಲ. ಕೋಷ್ಟಕ 2ನ್ನು ನೋಡಿ.

**ಕೋಷ್ಟಕ 2**


| ಸಾಮಾನ್ಯ ಶಿಕ್ಷಣ | ಶೇಕಡಾವಾರು |
|---|---|
| 5ನೇ ತರಗತಿಯವರೆಗೆ | 0.39 |
| 7ನೇ ತರಗತಿಯವರೆಗೆ | 1.55 |
| ಮೆಟ್ರಿಕ್ಯುಲೇಷನ್ ನಪಾಸಾದವರು | 10.08 |
| ಮೆಟ್ರಿಕ್ಯುಲೇಷನ್ ಪಾಸಾದವರು | 55.81 |
| ಇಂಟರ್‌ಮೀಡಿಯೇಟ್ ಪಾಸಾದವರು | 19.38 |
| ಪದವಿಪಡೆದವರು | 10.47 |
| ಅನಕ್ಷರಸ್ಥರು | 2.33 |
| **ಒಟ್ಟು** | **100** |

ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಕಾರ್ಯಕ್ರಮವು 26 ದಿನಗಳ ಪ್ರಾವೇಶಿಕ ತರಬೇತಿ ಮತ್ತು ಒಂದು ವಾರದ ಚೈತನ್ಯದಾಯಿ/ನವೀಕರಣ ಪಠ್ಯವನ್ನು ಹೊಂದಿರುತ್ತದೆ. 26 ದಿನಗಳಲ್ಲಿ, 4 ದಿನಗಳನ್ನು ಇಸಿಸಿಇ ಘಟಕಗಳ ತರಬೇತಿಗಾಗಿ ನಿಗದಿ ಮಾಡಲಾಗಿರುತ್ತದೆ. ಒಟ್ಟಾರೆಯಾಗಿ ತರಬೇತಿ ಕಾರ್ಯಕ್ರಮ ವಿಪರೀತ ಅಸಮರ್ಪಕವಾಗಿದ್ದು ನವೀಕರಣ/ಚೈತನ್ಯದಾಯಿ ತರಗತಿಗಳನ್ನು ನಡೆಸುವುದು ಅಪರೂಪ.

## 2. ಅಂಗನವಾಡಿ ಕೇಂದ್ರಗಳ ಫಲಾನುಭವಿಗಳು


ಅಂಗನವಾಡಿ ಕೇಂದ್ರಗಳಲ್ಲಿರುವ ನೋಂದಣಿಯು ಅದು ಇರುವ ಸ್ಥಳಕ್ಕೆ ಅನುಗುಣವಾಗಿ ಗಮನಾರ್ಹವಾದ ವ್ಯತ್ಯಾಸಗಳನ್ನು ಹೊಂದಿರುತ್ತದೆ. ಈ ಕೆಳಗಿನ ರೇಖಾ ನಕ್ಷೆಯು ವಿಭಿನ್ನ ಮಂಡಲಗಳಲ್ಲಿನ ನೋಂದಣಿಯನ್ನು ತೋರಿಸುತ್ತದೆ. ಹೀಗಿದ್ದರೂ ಮಂಡಲದ ಒಳಗಡೆಯಲ್ಲೂ ಅನೇಕ ವ್ಯತ್ಯಾಸಗಳು ಕಂಡುಬಂದಿದ್ದು, ಕೆಲವು ಅತಿ ದೂರದ ಏಕಾಂಗಿ ಹಳ್ಳಿಗಳಾಗಿದ್ದರೆ, ಮಂಡಲದ ಮುಖ್ಯ ಕಛೇರಿಯ ಅಥವಾ ನಗರಕ್ಕೆ ಹತ್ತಿರವಿರುವ ಪ್ರದೇಶಗಳು ಹೆಚ್ಚು ನಗರೀಕರಣವನ್ನು ಹೊಂದಿರುವವಾಗಿರುತ್ತವೆ. ಸಾಮಾಜಿಕ-ಆರ್ಥಿಕ ವಿಷಯದಲ್ಲಿ ದುರ್ಬಲವಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ ನೋಂದಣಿಯ ಪ್ರಮಾಣ ಹೆಚ್ಚಿನದಾಗಿರುತ್ತದೆ. ಪಟ 1ನ್ನು ನೋಡಿ.

**ಪಟ–1**



ಶಿಶುವಿಹಾರಗಳಲ್ಲಿರುವ ಮಕ್ಕಳಲ್ಲಿ, ಅಂಗನವಾಡಿಗೆ ದಾಖಲಾದವರ ಸಂಖ್ಯೆಯು ಹೆಚ್ಚಾಗಿ ಅನಕ್ಷರಸ್ಥ ಪೋಷಕರನ್ನು ಹೊಂದಿರುವ ಕುಟುಂಬದಿಂದ ಬಂದಿರುವ ಮಕ್ಕಳದ್ದಾಗಿರುತ್ತದೆ. ಸಾಮಾಜಿಕ-ಆರ್ಥಿಕ ಪರಿಸ್ಥಿತಿಯು ಉತ್ತಮವಿರುವ ಕುಟುಂಬಗಳು ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುವುದು ಅಪರೂಪ. ಸಾಕ್ಷರತೆಯಿರುವ ಪೋಷಕರನ್ನು ಹೊಂದಿರುವ ಮಕ್ಕಳ ದಾಖಲಾತಿಯು ಅಂಗನವಾಡಿಗಳಗಿಂತ ಹೆಚ್ಚಾಗಿ ಖಾಸಗೀ ಶಾಲೆಗಳಲ್ಲಿ ಇರುತ್ತದೆ. ಅಕುಶಲ ಕೆಲಸಗಾರರ ಮಕ್ಕಳ ದಾಖಲಾತಿಯು ಯಾವುದೇ ರೀತಿಯ ಶಿಶುವಿಹಾರಗಳಲ್ಲೂ (ಅಂಗನವಾಡಿ ಅಥವಾ ಖಾಸಗಿ) ಅಷ್ಟಾಗಿ ಕಂಡುಬರುವುದಿಲ್ಲ. ಅದರಂತೆ, ೩-೬ ವರ್ಷದ ಒಳಗಿರುವ ಶೇ. ೩೦ ಮಕ್ಕಳು ಪ್ರಸ್ತುತ ಯಾವುದೇ ಶಿಶುವಿಹಾರಗಳಗೂ ದಾಖಲಾಗಿಲ್ಲ (ಸರ್ಕಾರಿ, ಖಾಸಗೀ ಅಥವಾ ಅಂಗನವಾಡಿಗಳು).


**ಪಟ-೨**




## ೩. ಅಂಗನವಾಡಿ ಕೇಂದ್ರಗಳ ದಕ್ಷತೆ

ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೂ ತಮ್ಮ ಕೆಲಸದಿಂದ ತೃಪ್ತಿಯಿಲ್ಲ ಎನ್ನುವುದು ಎದ್ದು ಕಾಣುತ್ತದೆ. ಹೀಗಿದ್ದರೂ, ಹೆಚ್ಚಿನ ಅತೃಪ್ತಿಯು ಅವರಿಗೆ ತಮ್ಮ ಸಂಬಳ ಮತ್ತು ವೃತ್ತಿಪರ ಬೆಳವಣಿಗೆಯ ಬಗ್ಗೆ ಇರುವುದಾಗಿದೆ. ಸಹಜವಾಗಿ, ಅವರು ತಮ್ಮ ಕೆಲಸದಲ್ಲಿ ಪ್ರಾವೀಣ್ಯತೆಯನ್ನು ತೋರಲು ಅವರಿಗೆ ಇನ್ನೂ ಹೆಚ್ಚಿನ ನೆರವು ಬೇಕಾಗಿದೆ. ಕೆಳಗೆ ನೀಡಿರುವ ಕೋಷ್ಟಕ ೩ನ್ನು ನೋಡಿ.

**ಪಟ-೩**




ಮೇದಕ್ ಜಿಲ್ಲೆಯ ಅಂಗನವಾಡಿಗಳಲ್ಲಿ ನಿಯಮಿತವಾದ ಹಾಜರಾತಿ ಇಲ್ಲದಿರುವುದೇ ಒಂದು ಪ್ರಮುಖ ಸಮಸ್ಯೆ. ದಾಖಲಾದ ಕೇವಲ ಶೇ43 ವಿದ್ಯಾರ್ಥಿಗಳು (3 – 6 ವರ್ಷದವರು) ನಿಯಮಿತವಾಗಿ ಅಂಗನವಾಡಿ ಕೇಂದ್ರಕ್ಕೆ ಹಾಜರಾಗುತ್ತಾರೆ.

ಕಾರ್ಯಕರ್ತೆಯರ ಗೈರುಹಾಜರಿಯ ಸಮಸ್ಯೆಯೂ ಒಂದು ಕಾಳಜಿಯ ವಿಷಯವಾಗಿದೆ. ಈ ಅಧ್ಯಯನಕ್ಕಾಗಿ, ನಾವು ಮೊದಲೇ ತಿಳಿಸಿ ಭೇಟಿ ನೀಡಿದ ಸಂದರ್ಭಗಳಲ್ಲೂ ಶೇಕಡಾ 22 ಕಾರ್ಯಕರ್ತೆಯರು ಗೈರುಹಾಜರಾಗಿದ್ದರು. ಎಲ್ಲಾ ಮಂಡಲಗಳಲ್ಲೂ ಗೈರುಹಾಜರಿಯಲ್ಲಿ ಅತಿ ದೊಡ್ಡ ಏರು–ಪೇರಿರುವುದು ಕಂಡುಬರುತ್ತದೆ. ಕೆಳಗೆ ನೀಡಿರುವ ಪಟ 4ರಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಅಂಗನವಾಡಿ ಸಹಾಯಕಿಯರು ಹಾಜರಾತಿಯಲ್ಲಿರುವ ಈ ವ್ಯತ್ಯಾಸಗಳನ್ನು ನೋಡಬಹುದು.

**ಪಟ–4**

**ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರ ಹಾಜರಾತಿ**




| | DUBBAK | HATHNOORA | KOHIR | KOWDIPALLY | MEDAK | MUNIPALLI | NANGANOOR | NARAYANAKHED | PATANCHERU | REGODE | SANGAREDDY | SHANKARAMPET | TOOPRAN | WARGAL |
|---|---|---|---|---|---|---|---|---|---|---|---|---|---|---|
| ಕಾಕ ಗೈಹಾ | 12.50 | 20.00 | 23.53 | 28.57 | 16.67 | 15.38 | 13.33 | 40.00 | 21.74 | 16.67 | 50.00 | 17.65 | 18.18 | 6.67 |
| ಸಹಾ ಗೈಹಾ | 22.73 | 6.67 | 13.33 | 6.25 | 9.52 | 8.33 | 7.14 | 15.38 | 8.70 | 0.00 | 5.88 | 7.14 | 20.00 | 14.29 |

ಕಾಕ ಗೈಹಾ ಸಹಾ ಗೈಹಾ

ಅನೇಕ ಕಾರ್ಯಕರ್ತೆಯರು ವೇಳಾಪಟ್ಟಿಯನ್ನು ಅನುಸರಿಸುವುದಿಲ್ಲ ಅಥವಾ ವೇಳಾಪಟ್ಟಿಯಲ್ಲಿರುವ ಇಸಿಇ ಚಟುವಟಿಕೆಗಳನ್ನು ಮಾಡುವುದಿಲ್ಲ. ಆಯ್ಕೆಮಾಡಿದ ಅಂಗನವಾಡಿ ಕೇಂದ್ರಗಳಲ್ಲಿ ನಡೆಸಿದ ಗುಣಾತ್ಮಕ ವೀಕ್ಷಣೆಯು, ಅಂಗನವಾಡಿ ಕಾರ್ಯಕರ್ತೆಯರ ಗೈರುಹಾಜರಾತಿಯು ಬೇರೆಲ್ಲಾ ಸೇವೆಗಳಗಿಂತ ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಹೆಚ್ಚಾಗಿ ಬಾಧಿಸುತ್ತದೆ ಎಂದು ಸೂಚಿಸುತ್ತದೆ.

ಅಂಗನವಾಡಿ ಕಾರ್ಯಕರ್ತೆಯರು ತಾವು ಗರಿಷ್ಠ ಮಟ್ಟದ ಆರಂಭಿಕ ಬಾಲ್ಯದ ಶಿಕ್ಷಣದ ಚಟುವಟಿಕೆಗಳನ್ನು ಮಾಡುತ್ತಿದ್ದೇವೆ ಎಂದು ಸ್ವ–ವರದಿ ಮಾಡಿದ್ದರೂ, ನಮ್ಮ ಅಧ್ಯಯನದ ಒಂದು ಭಾಗವಾಗಿ ನಾವು ನಡೆಸಿದ ಗುಣಾತ್ಮಕ ವೀಕ್ಷಣೆಯಲ್ಲಿ ಇದನ್ನು ಬೆಂಬಲಿಸುವ ಯಾವ ಅಂಶಗಳೂ ಕಂಡುಬರಲಿಲ್ಲ. ಚಟುವಟಿಕೆಗಳು ಸಾಮಾನ್ಯವಾಗಿ ಸಂಭಾಷಣೆಗಳು, ಅಭಿನಯ ಗೀತೆಗಳು, ಹಾಡುಗಳು, ಆಟಗಳು ಮತ್ತು ಉತ್ತಮ ಅಭ್ಯಾಸಗಳನ್ನು ಹೇಳುವುದನ್ನೇ ಪುನಾರಾವರ್ತಿಸುತ್ತವೆ. ಈ ಚಟುವಟಿಕೆಗಳನ್ನು ಮಾಡಲು ಯಾವುದೇ ತೊಂದರೆ ಇಲ್ಲವೆಂದು ಅಂಗನವಾಡಿ ಕಾರ್ಯಕರ್ತೆಯರು ವರದಿ ಮಾಡಿದ್ದಾರೆ. ಸೃಜನಾತ್ಮಕ ಚಟುವಟಿಕೆಗಳಾದ ಕಲೆ ಮತ್ತು ಕರಕುಶಲತೆಗಳು ನಿಯಮಿತವಾಗಿ ನಡೆಯುವುದು ಕಡಿಮೆ. ಸುಮಾರು ಶೇ. 70 ರಷ್ಟು ಅಂಗನವಾಡಿಗಳಲ್ಲಿ ವಾರಕ್ಕೆ ಒಮ್ಮೆ ಮಾತ್ರ ನಡೆಯಬಹುದು. ಸುಮಾರು ಶೇ. 50 ಕಾರ್ಯಕರ್ತೆಯರು ವೈಜ್ಞಾನಿಕ ಅರಿವಿಗೆ ಸಂಬಂಧಿಸಿದ ಮತ್ತು ಸಂಸ್ಕೃತಿಯ ಅರಿವನ್ನು ಮೂಡಿಸುವ ಚಟುವಟಿಕೆಗಳನ್ನು ನಡೆಸುವುದು ಸಾಧ್ಯವಿಲ್ಲ ಎಂದು ವರದಿ ಮಾಡಿದರೆ, ಸುಮಾರು ಶೇ.50ರಷ್ಟು ಕಾರ್ಯಕರ್ತರು ತಾವು ಪ್ರತಿ–ನಿತ್ಯ ಮಾಡ್ಯೂಲ್‌ಗಳನ್ನು ಮತ್ತು ಬೋಧನಾ ಕೈಪಿಡಿಗಳನ್ನು ಅನುಸರಿಸುವುದಾಗಿ ವರದಿ ಮಾಡುತ್ತಾರೆ, ಹಾಗೂ ಶೇ. 38 ರಷ್ಟು ಕಾರ್ಯಕರ್ತೆಯರು ತಾವು ವಾರಕ್ಕೆ ಒಮ್ಮೆ ಇವನ್ನು ಮಾಡುವುದಾಗಿ ವರದಿ ಮಾಡುತ್ತಾರೆ.

ಶೇಕಡಾ 41ರಷ್ಟು ಪೋಷಕರು ತಾವು ಅಂಗನವಾಡಿ ಕೇಂದ್ರಗಳಲ್ಲಿ ಉತ್ತಮವಾದ ಬೋಧನೆಯನ್ನು

ನಿರೀಕ್ಷಿಸುತ್ತಿರುವುದಾಗಿ ಹೇಳುತ್ತಾರೆ. ಶೇ 5ರಷ್ಟು ಪೋಷಕರು ಮಾತ್ರ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಮಾಹಿತಿಯನ್ನು ಕೇಳುತ್ತಾರೆ, ಅಂದರೆ ಇದರರ್ಥ ಅತಿ ಕಡಿಮೆ ಪ್ರಮಾಣದಲ್ಲಿ ಪೋಷಕರನ್ನು ತೊಡಗಿಸಿಕೊಳ್ಳಲಾಗಿದೆ ಎಂದಾಗುತ್ತದೆ.

### ತೀರ್ಮಾನಗಳು

ಈ ಅಧ್ಯಯನದ ಫಲಿತಾಂಶಗಳು ಆರಂಭಿಕ ಬಾಲ್ಯದ ಶಿಕ್ಷಣಕ್ಕಿರುವ ಬೇಡಿಕೆ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಹಾಗೂ ಪೋಷಕರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ನಡುವೆ ಇರುವ ಸಂಬಂಧವನ್ನು ಸೂಚಿಸುತ್ತದೆ. ಈ ಸಂಬಂಧದ ನಿಖರವಾದ ಸ್ವಭಾವವನ್ನು ಇನ್ನೂ ಹೆಚ್ಚಾಗಿ ಶೋಧಿಸಬೇಕಾಗಿದೆ. ಸಮಾಜದಲ್ಲಿ ಸಾಮಾಜಿಕ-ಆರ್ಥಿಕ ವಿಷಯಗಳಲ್ಲಿ ದುರ್ಬಲರಾದ ವರ್ಗದವರಿಂದ ಅಂಗನವಾಡಿ ಕೇಂದ್ರಗಳಿಗೆ ಹೆಚ್ಚಿನ ಬೇಡಿಕೆ ಇದೆ. ಇದು ಅಂಗನವಾಡಿ ಕೇಂದ್ರಗಳನ್ನು ಒದಗಿಸುವಿಕೆ, ಉಳಿಸಿಕೊಳ್ಳುವಿಕೆ ಮತ್ತು ಅದರ ಬೆಳವಣಿಗೆಯ ಮೇಲೆ ಪರಿಣಾಮವನ್ನು ಬೀರುತ್ತದೆ. ನಾವು ಯಾವುದೇ ಉಪಕ್ರಮಗಳನ್ನು ಯೋಜನೆ ಮಾಡುವಾಗ ಈ ತೀರ್ಮಾನವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಕಾರ್ಯಕರ್ತೆಯರು ಗರಿಷ್ಠ ಮಟ್ಟದ ಗೈರುಹಾಜರಿಯು ದೇಶಾದ್ಯಂತವಿರುವ ಶಾಲಾ ಶಿಕ್ಷಕರ ಗೈರುಹಾಜರಿಯ ಮಟ್ಟಕ್ಕೆ ಸಮಾನವಾಗಿದೆ. ಇದರ ರಚನೆಯಲ್ಲಿಯೇ ಕೆಲವು ಸಮಸ್ಯೆಗಳನ್ನು ಹೊಂದಿರಬಹುದೆಂದು ಇದು ಸೂಚಿಸುತ್ತದೆ, ಮತ್ತು ಇದನ್ನು ವಿಭಿನ್ನವಾಗಿ ಬಗೆಹರಿಸಬೇಕಾದ ಅವಶ್ಯಕತೆ ಇದೆ ಎಂದು ಹೇಳುತ್ತದೆ. ಅಂಗನವಾಡಿ ಕಾರ್ಯಕರ್ತೆಯರು ಇಸಿಇ ವಿಷಯಗಳಲ್ಲಿ ಅತ್ಯಂತ ಕನಿಷ್ಠ ತರಬೇತಿಯನ್ನು ಪಡೆಯುತ್ತಿದ್ದಾರೆ. ಕಳಪೆ ಆರಂಭ (ನೇಮಕಾತಿ ಸಮಯದಲ್ಲಿ ಒಟ್ಟಾರೆ ನಾಲ್ಕು ದಿನಗಳ ಆರಂಭಿಕ ತರಬೇತಿಯನ್ನು ನೀಡಲಾಗುತ್ತದೆ) ಮತ್ತು ತದನಂತರದ ಕಳಪೆ ನೆರವಿನ ವ್ಯವಸ್ಥೆಯು ಇಸಿಇ ಚಟುವಟಿಕೆಗಳ ಪೋಷಣೆಗೆ ಅತ್ಯಂತ ಸೀಮಿತವಾದ ಅವಕಾಶವನ್ನು ಒದಗಿಸುತ್ತದೆ. ಯಾವುದೇ ನವೀನ ತರಬೇತಿ ಉಪಕ್ರಮಗಳು ಅಂಗನವಾಡಿ ಕಾರ್ಯಕರ್ತೆಯರಿಗೆ ನೆರವನ್ನು ಸಮರ್ಪಕವಾಗಿ ಒದಗಿಸುವಲ್ಲಿ ಮೇಲ್ವಿಚಾರಕರು ಮತ್ತು ಸಿಡಿಪಿಓಗಳಿಗೆ ಇರುವ ಅಗತ್ಯತೆಗಳು ಮತ್ತು ನಿರ್ಬಂಧಗಳನ್ನು ಪರಿಹರಿಸುವತ್ತ ಗಮನ ನೀಡಬೇಕು.

**References**


1. ICDS-IV Project A handbook (2007) Ministry of Women and Child Development, Government of India.
2. Quality Standards of ECEE (Draft) Women and Child development, Government of India.
3. NCF Position paper (NCERT) on Early Childhood Education
4. National Early Childhood Care and Education Policy (Draft), Ministry of Women and Child Development GOI.
5. Jonanthan Crane and Mallory Barg (2003). Do Early Childhood Intervention Programmes Really Work?;Coalition for Evidence-Based Policy.
6. http://childdevelopmentinfo.com/child-development/piaget


**Abbrevations**

**AWC : Anganwadi Center**
**AWH : Anganwadi Helper**
**AWW : Anganwadi Worker**
**ECE : Early Childhood Education**
**ICDS : Integrated Child Development Service**
**CDPO : Child Development Project Officer**



# ಅಂಗನವಾಡಿಗಳಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ ಗುಣಮಟ್ಟವನ್ನು ಕುರಿತು ಪ್ರಾಥಮಿಕ ಶಾಲಾ ಶಿಕ್ಷಕರ ದೃಷ್ಟಿಕೋನ

**ಸುಮಿತ್ ಅರೋರ**

ಒಂದೆರಡು ತಿಂಗಳುಗಳ ಹಿಂದೆ ನಾನು ಭಾರತದಲ್ಲಿ ‘ಆರಂಭಿಕ ಬಾಲ್ಯದ ಆರೈಕೆ ಹಾಗೂ ಶಿಕ್ಷಣ’ (ಇಸಿಸಿಇ) ಕುರಿತು ಓದುತ್ತಿದ್ದೆ. ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಶಾಲಾಪೂರ್ವ ಶಿಕ್ಷಣದ ಸಲುವಾಗಿ ಅಳವಡಿಸಿಕೊಳ್ಳಲು ಉದ್ದೇಶಿಸಿದ್ದ ಹೊಸ ಕರಡು ನೀತಿ ಚೌಕಟ್ಟುಗಳು, ಮಾನಕ ಗುಣಮಟ್ಟಗಳು ಹಾಗೂ ಪಠ್ಯಕ್ರಮದ ಕಡೆಗೆ ನನ್ನ ಗಮನ ಹರಿಯಿತು. ಓದು ಬರಹ ಕಲಿಕೆಯತ್ತ ಆಸಕ್ತಿ ಹಾಗೂ ಗಣಿತ ಕೌಶಲ ಕಲಿಸಿ ಮಗುವನ್ನು ಶಾಲೆಗೆ ಹೋಗಲು ಸಿದ್ಧವಾಗುವಂತೆ ಮಾಡುವುದು ಇಸಿಸಿಇಯ ಮುಖ್ಯ ಗುರಿಗಳಲ್ಲಿ ಒಂದು. ಆದರೆ ಶಾಲೆಗೆ ಹೋಗಲು ಆ ಮಗು ನಿಜವಾಗಿಯೂ ತಯಾರಾಗಿದೆಯೇ ಇಲ್ಲವೇ ಎಂಬುದನ್ನು ಹೇಗೆ ಅರಿಯಬಹುದು ಎಂಬ ಅಚ್ಚರಿ ನನಗಾಯಿತು. ಹೀಗಾಗಿ ನಾನು ಕೆಲವು ಪ್ರಾಥಮಿಕ ಶಾಲಾ ಶಿಕ್ಷಕರನ್ನು ಭೇಟಿ ಮಾಡಲು ನಿರ್ಧರಿಸಿದೆ. ಅವರ ಪ್ರಕಾರ ಅಂಗನವಾಡಿಯಿಂದ ಕಲಿತು ಬರುವ ಮಕ್ಕಳು ಶಾಲೆಗೆ ಬರಲು ನಿಜವಾಗಿಯೂ ಸಿದ್ಧರಾಗಿರುತ್ತಾರೆಯೇ? ಒಂದು ವೇಳೆ ಇಲ್ಲದಿದ್ದರೆ ಅಂಗನವಾಡಿಯಲ್ಲಿ ಓದಿ ಬರುವ ಮಕ್ಕಳಿಂದ ಏನನ್ನು ನಿರೀಕ್ಷಿಸುತ್ತಾರೆ? ಹಾಗೂ ಅಂಗನವಾಡಿಯಲ್ಲಿ ಕೊಡಲಾಗುವ ಶಾಲಾಪೂರ್ವ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಯಾವ ಸಲಹೆಯನ್ನು ಅವರು ಕೊಡುತ್ತಾರೆ ಎಂಬುದನ್ನು ತಿಳಿಯುವುದು ನನ್ನ ಭೇಟಿಯ ಉದ್ದೇಶವಾಗಿತ್ತು.

ಆ ಸಂದರ್ಶನದ ವಿವರಗಳನ್ನು ಕೊಡುವುದಕ್ಕೂ ಮುನ್ನ ಒಂದಷ್ಟು ಹಿನ್ನೆಲೆ ನೋಡೋಣ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿ ಭಾರತ ಸರ್ಕಾರವು 1975ರಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು (ಐಸಿಡಿಎಸ್) ಜಾರಿ ಮಾಡಿತು. ಮಕ್ಕಳ ಸರ್ವಾಂಗೀಣ ಪಾಲನೆ ಮತ್ತು ಮಕ್ಕಳ ಪಾಲಕರಿಗೆ ತರಬೇತಿ ನೀಡುವುದು ಇದರ ಮುಖ್ಯ ಗುರಿಯಾಗಿತ್ತು. ಸರ್ಕಾರಗಳು ನಡೆಸುತ್ತಿರುವ ಅಂಗನವಾಡಿಗಳ ಮೂಲಕ ಅಲ್ಲಿರುವ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಮೂಲಕ ಶಾಲಾ ಪೂರ್ವ ಶಿಕ್ಷಣದ ಸೇವೆಗಳನ್ನು ಐಸಿಡಿಎಸ್ ನಿರ್ವಹಣೆ ಮಾಡುತ್ತಿದೆ. ಅದರಲ್ಲಿ ಆರೋಗ್ಯ, ಪೌಷ್ಟಿಕಾಹಾರ ಹಾಗೂ ಶಾಲಾಪೂರ್ವ ಶಿಕ್ಷಣ ಇತ್ಯಾದಿ ಸೇವೆಗಳನ್ನು ಮಕ್ಕಳಿಗೆ ಜನನಪೂರ್ವದಿಂದ ಹಿಡಿದು ಆರನೇವರ್ಷದ ವರೆಗೆ ಮತ್ತು ಗರ್ಭಿಣಿಯರು ಬಾಣಂತಿಯರಿಗೆ ನೀಡಲಾಗುತ್ತದೆ. ಪೂರಕ ಪೌಷ್ಟಿಕ ಆಹಾರ, ಲಸಿಕೆ ಹಾಕುವುದು, ಆರೋಗ್ಯ ತಪಾಸಣೆ, ಆರೋಗ್ಯ ಶಿಬಿರಗಳೂ ಅಂಗನವಾಡಿಗಳಿಂದ ಸಿಗುತ್ತವೆ.

ನನ್ನ ಸಂಶೋಧನಾ ಶಿಕ್ಷಕರ ಜತೆ ಮಾತಾಡಿದ ಬಳಿಕ ನಾನು ಆಂಧ್ರಪ್ರದೇಶದ ಮೇದಕ್ ಜಿಲ್ಲೆಯಲ್ಲಿರುವ ಶಿಕ್ಷಕರನ್ನು ಸಂದರ್ಶನ ಮಾಡಲು ನಿರ್ಧರಿಸಿದೆ. ಮೇದಕ್ ಜಿಲ್ಲೆಯನ್ನೇ ಆಯ್ಕೆ ಮಾಡಲು ಕಾರಣವೇನೆಂದರೆ, ಅಜೀಂ ಪ್ರೇಮ್‌ಜಿ ಪ್ರತಿಷ್ಠಾನವು ಈಗಾಗಲೇ ಅಲ್ಲಿನ ಅಂಗನವಾಡಿಗಳ ಜತೆ ಕೆಲಸ ಮಾಡುತ್ತಿದ್ದು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಾನಾಗಿರುವುದರಿಂದ ಒಂದಷ್ಟು ನೆರವು ನನಗೆ ಸಿಗಬಹುದು ಎಂಬ ವಿಶ್ವಾಸ. ಅಜೀಂ ಪ್ರೇಮ್‌ಜಿ ಫೌಂಡೇಷನ್ ತಂಡದ ಜತೆ ಮಾತುಕತೆ ನಡೆಸಿದ ನಂತರ, ನನ್ನ ಸಾಧನಗಳನ್ನು ಅಂತಿಮ ಗೊಳಿಸಿ ಐವರು ಶಿಕ್ಷಕರ ಸಂದರ್ಶನ ನಡೆಸಲು ತೀರ್ಮಾನಿಸಿದೆ. ನನಗೆ ತೆಲುಗು ಭಾಷೆ ಬರುತ್ತಿರಲಿಲ್ಲವಾದ್ದರಿಂದ ಅದೊಂದು ಅಡ್ಡಿಯಾಗಿತ್ತು. ಆ ಶಿಕ್ಷಕರಿಗೆ ಇಂಗ್ಲಿಷ್ ಅಥವಾ ಹಿಂದಿ ಅಷ್ಟಾಗಿ ಪರಿಚಿತ ಭಾಷೆಯಾಗಿರಲಿಲ್ಲ. ಆದರೆ ಫೌಂಡೇಷನ್‌ನ ಒಬ್ಬ ಸದಸ್ಯರು ನನಗೆ ಸಹಾಯ ನೀಡಿ, ನಮ್ಮ ನಡುವಿನ ಮಾತುಕತೆ ಸುಲಭವಾಗುವಂತೆ ನೋಡಿಕೊಂಡರು. ನಿರ್ದಿಷ್ಟ ವಸ್ತು ವಿಷಯದ ಅನುಸಾರ ನಾನು ಕಂಡುಕೊಂಡ ಮಾಹಿತಿಗಳನ್ನು ವಿಂಗಡಿಸಿದೆ ಹಾಗೂ ಇಂತಹವೇ ವಿಷಯಗಳ ಕುರಿತಾಗಿದ್ದ ಅಧ್ಯಯನಗಳನ್ನೂ ಪರಾಮರ್ಶಿಸಿದ್ದೇನೆ.

## ಮಕ್ಕಳ ವಿದ್ಯಾಪ್ರಗತಿ

ಓದು ಬರಹ ಹಾಗೂ ಗಣಿತಜ್ಞಾನ ಕುಶಲತೆಯನ್ನು ಪರಿಗಣಿಸುವುದಾದರೆ, ಅಂಗನವಾಡಿಗೆ ಹೋದ ಹಾಗೂ ಹೋಗದೇ ಇರುವ ಮಕ್ಕಳಲ್ಲಿ ಅಂತಹ ವ್ಯತ್ಯಾಸವೇನೂ ಇಲ್ಲ ಎಂದು ಶಿಕ್ಷಕರು ಸರ್ವಾನುಮತದಿಂದ ಹೇಳಿದರು. ‘ಇಸಿಸಿಇ’ಯು ರೂಪಿಸಿದ ಪಠ್ಯಕ್ರಮದ ಕರಡಿನ ಪ್ರಕಾರ, ಮಕ್ಕಳು ಶಾಲೆಗೆ ಹೋಗಲು ತಯಾರಾಗುವಷ್ಟು ಓದು ಬರಹ ಹಾಗೂ ಗಣಿತದ ಕೌಶಲ್ಯಗಳನ್ನು ಕಲಿಸಿರಬೇಕು (ಎಂಡಬ್ಲ್ಯೂಡಿ, 2012). ಕೆಲವು ಶಿಕ್ಷಕರಂತೂ ಇನ್ನೂ

ಮುಂದೆ ಹೋಗಿ, ಅಂಗನವಾಡಿಗಳು ಶಾಲಾಪೂರ್ವ ಮಕ್ಕಳ ವಿಷಯದಲ್ಲಿ ನಿರುಪಯೋಗಿ ಎಂದರು. ಆಂಧ್ರಪ್ರದೇಶದ ಎರಡು ಅಂಗನವಾಡಿಗಳನ್ನು ಅಧ್ಯಯನ ನಡೆಸಿದ ರಾವ್ ಎಂಬುವವರ ಅಧ್ಯಯನದ ಪ್ರಕಾರ (2010), ಶಾಲಾಪೂರ್ವ ಶಿಕ್ಷಣದ ಗುಣಮಟ್ಟವು ಪಶ್ಚಿಮದ ದೇಶಗಳಿಗೆ ಹೋಲಿಸಿದಾಗ ನಮ್ಮಲ್ಲಿ ತೀರಾ ಕಳಪೆಯಾಗಿದೆ ಎಂದು ಹೇಳಿದ್ದಾರೆ.

ಹೀಗಿದ್ದರೂ ಅಂಗನವಾಡಿಗೆ ಹೋಗದ ಮಕ್ಕಳಿಗಿಂತಲೂ ಅಲ್ಲಿಗೆ ಹೋದ ಮಕ್ಕಳ ಕೌಶಲ್ಯ ಹೆಚ್ಚು ಎಂಬುದನ್ನು ಕೆಲವು ಶಿಕ್ಷಕರು ಒಪ್ಪುತ್ತಾರೆ. ಅಂಗನವಾಡಿಗೆ ಹೋದ ಮಕ್ಕಳಿಗೆ ಕಲಿಸುವುದು ಸುಲಭ ಎನ್ನುವ ಅವರು, ಇದಕ್ಕೆ ಮನೆಯಿಂದ ಹೊರಗೆ ಬಂದು ಶಾಲೆಯಲ್ಲಿ ಕಲಿಯುವ ಪರಿಪಾಠ ರೂಢಿಯಾಗಿರುವುದೇ ಕಾರಣ ಎನ್ನುತ್ತಾರೆ. ಈ ಮಕ್ಕಳು ಹಾಡಲು ಅಥವಾ ನೃತ್ಯ ಮಾಡಲು ಯಾವತ್ತೂ ಹಿಂಜರಿಯುವುದಿಲ್ಲ; ಯಾಕೆಂದರೆ ಅಂಗನವಾಡಿಗಳಲ್ಲಿ ಈ ಬಗೆಯ ಚಟುವಟಿಕೆಗಳಲ್ಲಿ ಅವರು ಪಾಲ್ಗೊಂಡಿರುತ್ತಾರೆ. ಇದರಿಂದ ಕ್ರಿಯಾಶೀಲ ಚಟುವಟಿಕೆಗಳನ್ನು ಇನ್ನಷ್ಟು ಕಲಿಸಲು ಶಿಕ್ಷಕರಿಗೆ ಸುಲಭವಾಗುತ್ತದೆ. 'ಅಂಗನವಾಡಿಗಳಲ್ಲಿ ಕಲಿತು ಬರುವ ಮಕ್ಕಳು ಹ್ಯಾಲೋಜಿನ್ ಬಲ್ಬ್‌ಗಳಂತೆ. ಉಳಿದ ಮಕ್ಕಳು ಟ್ಯೂಬ್‌ಲೈಟ್' ಎಂದು ಶಿಕ್ಷಕರೊಬ್ಬರು ಹೇಳುತ್ತಾರೆ.

ಖಾಸಗಿಯಾಗಿ ಶಾಲಾಪೂರ್ವ ಶಿಕ್ಷಣ ಪಡೆಯುವ ಮಕ್ಕಳು, ಆ ಬಳಿಕ ಖಾಸಗಿ ಶಾಲೆಗೆ ಹೋಗುತ್ತಿದ್ದು ಅಂಥ ಮಕ್ಕಳ ಬಗ್ಗೆ ಯಾವುದೇ ಶಿಕ್ಷಕರು ಪ್ರತಿಕ್ರಿಯೆ ನೀಡುವುದಿಲ್ಲ. ಸಂದರ್ಶನ ಮಾಡಲಾದ ಎಲ್ಲ ಶಿಕ್ಷಕರೂ ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವವರೇ ಆಗಿದ್ದರು. ಖಾಸಗಿ ಶಾಲೆಗಳಲ್ಲಿ ಶಾಲಾಪೂರ್ವ ಶಿಕ್ಷಣ ಪಡೆಯುವ ಮಕ್ಕಳು, ಅಂಗನವಾಡಿಯಲ್ಲಿ ಕಲಿಯುವ ಮಕ್ಕಳಿಗಿಂತ ಬುದ್ಧಿವಂತರಾಗಿರುತ್ತಾರೆ. ಯಾಕೆಂದರೆ, ಆ ಶಾಲೆಗಳಲ್ಲಿ ಪ್ರವೇಶ ಪಡೆಯಲು ಮಕ್ಕಳ ಪಾಲಕರು ಹೆಚ್ಚು ಶುಲ್ಕ ನೀಡಿರುವುದರಿಂದ, ಅದಕ್ಕೆ ತಕ್ಕಂತೆ ಕಾರ್ಯವೈಖರಿಯನ್ನು ಅವರು ಪರಾಮರ್ಶೆ ಮಾಡುತ್ತಲೇ ಇರುತ್ತಾರೆ.

## ಶಿಕ್ಷಕರ ನಿರೀಕ್ಷೆ

ಅಂಗನವಾಡಿಯಿಂದ ಪ್ರಾಥಮಿಕ ಶಾಲೆಗೆ ಬರುವ ಮಕ್ಕಳಿಂದ ಶಿಕ್ಷಕರು ನಿರೀಕ್ಷೆ ಮಾಡುವುದನ್ನು ಗಮನಿಸಿದರೆ, ಅದು ಇಸಿಸಿಇ ರಚಿಸಿರುವ ಪಠ್ಯಕ್ರಮ ಕರಡುಪ್ರತಿಗೆ ತುಂಬಾ ವಿಭಿನ್ನವಾಗಿಲ್ಲ. ಮಾತೃಭಾಷೆಯಲ್ಲಿ ಅಕ್ಷರದ ಜ್ಞಾನ, ಇಂಗ್ಲಿಷ್ ಹಾಗೂ ಸಂಖ್ಯೆಗಳ ಬಗ್ಗೆ ಅರಿವು ಹೊಂದಿರುವುದು ಅದರಲ್ಲಿ ಸೇರಿದೆ. ಕಲಿಕಾ ಕೌಶಲ್ಯವನ್ನು ಮಕ್ಕಳು ಹೊಂದಿರಬೇಕು ಎಂದು ಕೆಲವು ಶಿಕ್ಷಕರು ಹೇಳುತ್ತಾರೆ. ಮಕ್ಕಳಲ್ಲಿ ಶುಚಿತ್ವದ ಬಗ್ಗೆ ತಿಳುವಳಿಕೆ ಮೂಡಿಸುವುದು ಹಾಗೂ ಅವರ ಪಾಲಕರು ಸಹ ಈ ಮನೋಭಾವ ಬೆಳೆಸಿಕೊಳ್ಳುವಂತೆ ಮಾಡಲು ಅಂಗನವಾಡಿಗಳು ಪ್ರಯತ್ನಿಸಬೇಕು. ದುರದೃಷ್ಟಕರ ಸಂಗತಿ ಎಂದರೆ, ಪ್ರಾಥಮಿಕ ಶಾಲಾ ಶಿಕ್ಷಕರು ಅಂಗನವಾಡಿಯಿಂದ ನಿರೀಕ್ಷೆ ಮಾಡುವುದೇನು ಎಂಬ ಬಗ್ಗೆ ಸರಿಯಾದ ದಾಖಲಾತಿಯೇ ಆಗಿಲ್ಲ. ಹಾಗಿದ್ದರೂ ಅವರ ನಿರೀಕ್ಷೆಗಳನ್ನು ಪರಿಗಣಿಸುವುದು, ಇಸಿಸಿಇಯ ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸುವ ಮುಖ್ಯ ಗುರಿಗಳಲ್ಲಿ ಒಂದಾಗಿದೆ. ಒಂದು ವೇಳೆ ಈ ಮಕ್ಕಳು ಶಾಲೆಗೆ ಸಿದ್ಧರಾಗಿಲ್ಲ ಎಂದು ಯೋಚಿಸಿದರೆ, ಆಗ ಶಾಲಾಪೂರ್ವ ಯೋಜನೆಗಳಲ್ಲಿನ ಗುಣಮಟ್ಟ ಸುಧಾರಣೆಗೆ ಗಮನ ಕೊಡಬೇಕಾಗುತ್ತದೆ.

## ಶಾಲಾಪೂರ್ವ ಶಿಕ್ಷಣದ ಕಳಪೆ ಗುಣಮಟ್ಟಕ್ಕೆ ಕಾರಣಗಳು

ಪ್ರಾಥಮಿಕ ಶಾಲೆ ಶಿಕ್ಷಕರ ನಿರೀಕ್ಷೆಗಳನ್ನು ತಲುಪಲು ಅಂಗನವಾಡಿಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ, ಪ್ರತಿಯೊಬ್ಬರೂ ಹೇಳಿದ್ದು ಏನೆಂದರೆ, ಅಂಗನವಾಡಿ ಕಾರ್ಯಕರ್ತೆಯರ ಕೆಲಸದ ಹೊರೆ ದೊಡ್ಡದು. ಹೀಗಾಗಿ ಶಾಲಾ ಪೂರ್ವ ಶಿಕ್ಷಣದ ಅಂಶದತ್ತ ಗಮನ ಕೊಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅಂಗನವಾಡಿಗೆ ನಿಗದಿ ಮಾಡಿರುವ ಐದು ಸೇವೆಗಳಲ್ಲಿ ಶಾಲಾಪೂರ್ವ ಶಿಕ್ಷಣಕ್ಕೆ ಅತ್ಯಂತ ಹೆಚ್ಚು ಸಮಯ ಅಗತ್ಯವಿರುತ್ತದೆ. ಹೀಗಾಗಿ ಅದನ್ನು ಅನೇಕ ಬಾರಿ ನಿರ್ಲಕ್ಷ್ಯ ಮಾಡಲಾಗುತ್ತದೆ (ಶರ್ಮಾ, ಸೇನ್ ಹಾಗೂ ಗುಲಾಟಿ, 2008). ರಾವ್ (2010) ಅವರು ಗುರುತಿಸಿರುವಂತೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಎಷ್ಟೊಂದು ಒತ್ತಡದ ಕೆಲಸಗಳನ್ನು ನಿರ್ವಹಿಸಲು ಸೂಚಿಸಲಾಗಿದೆಯೆಂದರೆ, ಐಸಿಡಿಎಸ್‌ನ ಮುಖ್ಯ ಭಾಗಗಳತ್ತ ಗಮನಹರಿಸಲು ಅವರಿಗೆ ಸಮಯವೇ ಇಲ್ಲದಂತಾಗಿದೆ. ಐಸಿಡಿಎಸ್‌ನ ಅಂಗನವಾಡಿಗಳಲ್ಲಿ ಶಿಕ್ಷಣ ವಿಭಾಗವು ನಿರ್ಲಕ್ಷ್ಯಕ್ಕೆ ಒಳಗಾಗಿದೆ ಅಲ್ಲದೆ, ಸಂಶೋಧಕ ಹಾಗೂ ಲೇಖಕರು ಬರೀ ಆಹಾರದ ಮೇಲೆ ತಮ್ಮ ಗಮನ ಕೇಂದ್ರೀಕರಿಸಿದ್ದಾರೆ ಎಂದು ಡ್ರೀಜ್ ಹೇಳುತ್ತಾರೆ (2006). ಅಂಗನವಾಡಿ ಕಾರ್ಯಕರ್ತರು ಸಾಕಷ್ಟು ದಾಖಲೆ-ಪತ್ರದ ಕೆಲಸಗಳನ್ನು ಮಾಡಬೇಕಾಗುತ್ತದೆ. ಏಕೆಂದರೆ, ಅವರ ಮೇಲಧಿಕಾರಿಗಳು ಬಂದಾಗಲೆಲ್ಲಾ ಆ ದಾಖಲೆಗಳನ್ನೇ ನಿಯಮಿತವಾಗಿ ತಪಾಸಣೆ ಮಾಡುತ್ತಾರೆ. ಇದು ಅವರ ಮಹತ್ವದ ಸಮಯವನ್ನು ತೆಗೆದುಕೊಳ್ಳುತ್ತದೆ. ರಾವ್ (2010) ಅವರು ನಡೆಸಿದ ಒಂದು ಸಣ್ಣ ಅಧ್ಯಯನದಿಂದ ತಿಳಿದುಬಂದ ಸಂಗತಿ ಎಂದರೆ, ಪ್ರತಿಯೊಬ್ಬ ಅಂಗನವಾಡಿ ಕಾರ್ಯಕರ್ತೆ ಪ್ರತಿ ದಿನದಲ್ಲಿ ಕೇವಲ 45 ನಿಮಿಷಗಳನ್ನು ಮಾತ್ರ ಮಕ್ಕಳ ಜತೆ ಮಾತಾಡಲು ತೆಗೆದುಕೊಳ್ಳುತ್ತಾಳೆ. ಆದರೆ ಕರಡು ಪಠ್ಯಕ್ರಮದ ಪ್ರಕಾರ ಆಕೆ ಪ್ರತಿ ದಿನ ನಾಲ್ಕು ಗಂಟೆಗಳ ಕಾಲ

ಅದಕ್ಕಾಗಿ ಕಳೆಯಬೇಕು. ಉಳಿದ ಸಮಯವನ್ನು ದಾಖಲೆ ಬರೆಯುವುದು ಹಾಗು ಆಡಳಿತ ಕೆಲಸಕ್ಕೆ ವಿನಿಯೋಗಿಸಬೇಕು.

ಅಂಗನವಾಡಿಗಳಲ್ಲಿನ ಶಾಲಾಪೂರ್ವ ಶಿಕ್ಷಣದ ಕಳಪೆ ಕಾರ್ಯಕ್ಷಮತೆಗೆ ಕೊಡಲಾದ ಇನ್ನೊಂದು ಕಾರಣವೆಂದರೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಆರಂಭಿಕ ಬಾಲ್ಯದ ಶಿಕ್ಷಣದ ಬಗ್ಗೆ ಯಾವುದೇ ತರಬೇತಿ ನೀಡದಿರುವುದು. ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ಕಾರವು 26 ದಿನಗಳ ಕಾಲ ಸೇವಾಪೂರ್ವ ತರಬೇತಿಯನ್ನು ಕೊಡುತ್ತಾರೆ, ಆ ಪೈಕಿ ನಾಲ್ಕು ದಿನಗಳ ಕಾಲ ಮಾತ್ರ ಶಾಲಾಪೂರ್ವ ಶಿಕ್ಷಣದ ತರಬೇತಿಗೆ ವಿನಿಯೋಗವಾಗುತ್ತದೆ (ಶರ್ಮಾ, ಸೇನ್ ಹಾಗೂ ಗುಲಾಟಿ, 2008). ಈಗ ಒದಗಿಸಲಾಗುವ ತರಬೇತಿಯು ಕೇಂದ್ರ ಸರ್ಕಾರವು ನಿಗದಿ ಪಡಿಸಿದ್ದು, ಕ್ಷೇತ್ರದಲ್ಲಿನ ವಾಸ್ತವಿಕ ಅಂಶಗಳಿಂದ ದೂರವಿದೆ ಎಂದು ಕಾರ್ಯತಂಡವೊಂದು ಹೇಳಿತ್ತು (2008).

ಅಂಗನವಾಡಿ ಕಾರ್ಯಕರ್ತೆಯರು ನಿರ್ವಹಿಸುವ ಕೆಲಸಕ್ಕೆ ಹೋಲಿಸಿದರೆ, ಅವರಿಗೆ ಕೊಡುವ ಗೌರವಧನವು ತೀರಾ ಕಡಿಮೆಯಾಗಿದ್ದು ಇದೂ ಒಂದು ಕೊರತೆ ಎಂದು ಕೆಲವು ಶಿಕ್ಷಕರು ಅಭಿಪ್ರಾಯಪಡುತ್ತಾರೆ.

### ಶಿಫಾರಸುಗಳು

ಉತ್ತಮ ಗುಣಮಟ್ಟದ ಶಾಲಾಪೂರ್ವ ಶಿಕ್ಷಣ ಕೊಡುವಲ್ಲಿ ಅಂಗನವಾಡಿಗಳು ವಿಫಲವಾಗಿರುವುದಕ್ಕೆ ಅವು ನಿರ್ವಹಿಸುವ ಅತಿ ಒತ್ತಡದ ಕೆಲಸಗಳೇ ಕಾರಣ. ಹೀಗಾಗಿ ಕಾರ್ಯದೊತ್ತಡವನ್ನು ಕಡಿಮೆ ಮಾಡಬೇಕು ಎಂದು ಶಿಫಾರಸು ಮಾಡಲಾಗಿದೆ. ಚರ್ಚೆಯಲ್ಲಿ ಕಂಡುಬಂದ ಅಂಶಗಳನ್ನು ಪರಿಗಣಿಸಿ, ಈ ಕೆಳಗಿನ ಸಲಹೆಗಳನ್ನು ನೀಡಲಾಗಿದೆ:

1. ಶಾಲಾಪೂರ್ವ ಶಿಕ್ಷಣದ ಕೆಲಸಗಳಿಗೆ ನಿಗದಿಯಾದ ಇನ್ನೊಬ್ಬ ಅಂಗನವಾಡಿ ಕಾರ್ಯಕರ್ತೆಯನ್ನು ನಿಯೋಜಿಸುವುದು. ಇದರಿಂದ, ಒಬ್ಬರೇ ಕಾರ್ಯಕರ್ತೆ ಇರುವ ಅಂಗನವಾಡಿಗೆ ಆಗುವ ಸಮಸ್ಯೆ ತಪ್ಪುತ್ತದೆ ಹಾಗೂ ಶಾಲಾಪೂರ್ವ ತರಬೇತಿದಾರರ ಕಾರ್ಯಕ್ಷಮತೆಯೂ ಹೆಚ್ಚುತ್ತದೆ. ಇದರಿಂದ ಆಗುವ ಇನ್ನೊಂದು ಪ್ರಯೋಜನವೆಂದರೆ, ಒಬ್ಬ ಅಂಗನವಾಡಿ ತರಬೇತುದಾರರ ಗೈರುಹಾಜರಿಯಲ್ಲಿ ಇನ್ನೊಬ್ಬರು ಅದರ ಉಸ್ತುವಾರಿ ವಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಕಾರ್ಯತಂಡವೊಂದರ ಅಧ್ಯಯನದ ಪ್ರಕಾರ (2008), ಪ್ರತಿಯೊಂದು ಅಂಗನವಾಡಿಗೂ ಇಬ್ಬರು ಕಾರ್ಯಕರ್ತೆಯರು ಇರಬೇಕು. ಒಬ್ಬರು ಮೂರು ವರ್ಷದೊಳಗಿನ ಮಕ್ಕಳನ್ನು ನೋಡಿಕೊಂಡರೆ ಇನ್ನೊಬ್ಬರು 3ರಿಂದ 6 ವರ್ಷದ ಮಕ್ಕಳ ಶಾಲಾಪೂರ್ವ ಶಿಕ್ಷಣದ ವಿಭಾಗವನ್ನು ನೋಡಿಕೊಳ್ಳಬಹುದು.
2. ಮೇಲ್ವಿಚಾರಣೆ ಮಾಡುವಾಗ ಕಾಗದ ಪತ್ರ, ದಾಖಲೆಗಳ ನಿರ್ವಹಣೆಯನ್ನೇ ಗಮನದಲ್ಲಿ ಇಟ್ಟುಕೊಳ್ಳುವುದರ ಬದಲಿಗೆ ಎಂಥ ಗುಣಮಟ್ಟದ ಶಿಕ್ಷಣ ಕೊಡಲಾಗುತ್ತಿದೆ ಎಂಬುದರ ಬಗ್ಗೆ ಪರಿವೀಕ್ಷಣೆ ಹಾಗೂ ಮೇಲುಸ್ತುವಾರಿ ಹೆಚ್ಚಿಸಬೇಕು. ಕ್ರಮಬದ್ಧವಾಗಿ ನಿಗದಿತ ಅವಧಿಯಲ್ಲಿ ಮಗುವಿನ ಸಮಗ್ರ ಬೆಳವಣಿಗೆಗೆ ಕಾರಣವಾಗುವ ವ್ಯವಸ್ಥೆಯನ್ನು ರೂಪಿಸಬೇಕು.
3. ಸಮುದಾಯದ ಸ್ಥಳದಲ್ಲಿ ಇರುವದರ ಬದಲಿಗೆ ಶಾಲೆಯ ಸಮೀಪದಲ್ಲೇ ಅಂಗನವಾಡಿಗಳು ಇರುವಂತೆ ನೋಡಿಕೊಳ್ಳಬೇಕು ಹಾಗೂ ಅವುಗಳ ನಿಯಂತ್ರಣವನ್ನು ಶಾಲೆಗಳೇ ಮಾಡಬೇಕು. ಇದರಿಂದಾಗಿ, ಅಂಗನವಾಡಿಗೆ ಬರುವ ಮಕ್ಕಳು ತಮಗಿಂತ ದೊಡ್ಡ ಮಕ್ಕಳು ಶಾಲೆಗೆ ಹೋಗುವುದನ್ನು ನೋಡಿ ಪ್ರೇರಣೆಗೊಳ್ಳುತ್ತವೆ. ಶಾಲೆಯ ಒಂದು ಭಾಗವಾಗಿ ಅಂಗನವಾಡಿ ರೂಪುಗೊಳ್ಳುವುದರಿಂದ, ಅದರ ಕಾರ್ಯಕರ್ತೆ ಕೂಡ ಸಹಜವಾಗಿಯೇ ಪ್ರೇರೇಪಣೆ ಪಡೆಯುತ್ತಾಳೆ ಎಂದು ದೀಪಾ ಸಿನ್ಹಾ ಹೇಳುತ್ತಾರೆ (2006).

ಈ ವರದಿಯನ್ನು ತಯಾರಿಸಲು ತೆಗೆದುಕೊಂಡ ಮಾದರಿ ವಾಸ್ತವಿಕ ರೂಪದಲ್ಲಿ ಸಣ್ಣದಾಗಿದ್ದರೂ, ಐಸಿಡಿಎಸ್‌ನ ಮುಖ್ಯ ಅಂಗವಾದ ಶಾಲಾಪೂರ್ವ ಶಿಕ್ಷಣದ ಗುಣಮಟ್ಟ ಹೇಗಿದೆ ಎಂಬ ಪರಿಕಲ್ಪನೆಗಳನ್ನು ಕೊಡುತ್ತದೆ. ಈ ವರದಿಯಲ್ಲಿ ನೀಡಲಾದ ಕೆಲವೊಂದು ಶಿಫಾರಸುಗಳನ್ನು ತಕ್ಷಣವೇ ಪರಿಗಣಿಸಬೇಕು. ಗುಣಮಟ್ಟದ ಕಡೆ ಗಮನ ಹರಿಸದೇ, ಕೇವಲ ಐಸಿಡಿಎಸ್‌ನ ಸಾರ್ವತ್ರೀಕರಣ ಮಾಡಿದರೆ ಉಪಯೋಗ ನೀಡುವುದಿಲ್ಲ ಹಾಗೂ ದೇಶದಲ್ಲಿ 6 ವರ್ಷದೊಳಗಿರುವ 158 ದಶಲಕ್ಷ ಮಕ್ಕಳ ಅಭಿವೃದ್ಧಿ ಮೇಲೆ ಭಾರತ ಸರ್ಕಾರ ನಿಜಕ್ಕೂ ಕಳಕಳ ಹೊಂದಿದ್ದರೆ ಈ ವಿಷಯದ ಬಗ್ಗೆ ಕೂಡಲೇ ಗಮನಹರಿಸಬೇಕು. ಅದಕ್ಕಾಗಿ ಕೆಲವು ತುರ್ತು ಶಿಫಾರಸುಗಳನ್ನಾದರೂ ಅನುಷ್ಠಾನ ಮಾಡಬೇಕು.




**References**

1. Sharma, A., Sharma Sen, R. and Gulati, R (2008): Early childhood development policy and programming in India: Critical issues and directions for paradigm change, Washington D.C, USA: International Journal of Early Childhood pp. 65-83
2. Rao, N. (2010): Pre-school Quality and the Development of Children From Economically Disadvantaged Families in India, Hong Kong: Taylor & Francis Group
3. Sinha, D. (2006): Rethinking ICDS: A Rights Based Perspective, India: Economic and Political Weekly (Vol. 41, No. 34) pp 3689-3694
4. Working Group on Children under Six (2007): Strategies for Children under Six, India: Economic and Political Weekly (Vol. 42, No. 52) pp 87-101
5. Dreze, J. (2006): Universalisation with Quality: ICDS in a Rights Perspective, India: Economic and Political Weekly (Vol. 41, No. 34) pp 3706-3715




**ಸುಮಿತ್** ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಎಂ.ಎ (ಶಿಕ್ಷಣ) ಓದುತ್ತಿದ್ದಾರೆ. ಇದಕ್ಕೂ ಮೊದಲು ಅವರು ಪ್ರಥಮ್ ಎಜುಕೇಶನ್ ಫೌಂಡೇಶನ್'ದಲ್ಲಿ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದರು. ನವದೆಹಲಿಯ ಶ್ರೀರಾಮ್ ವಾಣಿಜ್ಯ ಕಾಲೇಜಿನಿಂದ ಪದವಿ ಪಡೆದಿದ್ದಾರೆ. ಮುಂಬೈನ ಸರ್ಕಾರಿ ಶಾಲೆಯೊಂದರಲ್ಲಿ ಕೆಲವು ಕಾಲ ಶಿಕ್ಷಕರಾಗಿ ಕೆಲಸ ಮಾಡಿರುವ ಇವರು, ಬ್ಯಾಂಕ್ ಒಂದರಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಶಿಕ್ಷಕರ ಶಿಕ್ಷಣ ಹಾಗೂ ಶಾಲಾ ನಾಯಕತ್ವ – ಇವರ ಆಸಕ್ತಿಯ ವಿಷಯಗಳು. ಅವರ ಇಮೇಲ್: sumit.arora13@apu.edu.in



ವಿಭಾಗ ಡಿ

# ಕ್ಷೇತ್ರಾನುಭವ



# ಧ್ವನಿ ಎತ್ತದ ಮಕ್ಕಳ ಹಕ್ಕುಗಳಿಗೆ ಮಾನ್ಯತೆ

**ಅಪೂರ್ವಾ ಪಟೇಲ್**

ಗಾಬ್ರಿಯೆಲ ಮಿಸ್ಟ್ರಲ್ (1948) ಹೇಳಿರುವ ಈ ಮಾತು ಬಲು ಸತ್ಯ: "ನಾವು ದಿನನಿತ್ಯ ನೂರೆಂಟು ತಪ್ಪುಗಳು ಮತ್ತು ದೋಷಗಳನ್ನು ಮಾಡುತ್ತಲೇ ಇರುತ್ತೇವೆ. ಆದರೆ ನಮ್ಮ ಅಕ್ಷಮ್ಯ ಅಪರಾಧವೆಂದರೆ ಮಕ್ಕಳನ್ನು ಅವರಷ್ಟಕ್ಕೆ ಅವರು ಬೆಳೆಯಲು ಬಿಡುವುದು ಮತ್ತು ಜೀವನದ ಅಡಿಪಾಯ ಹಾಕುವ ಈ ಹಂತಕ್ಕೆ ನಿರ್ಲಕ್ಷ್ಯ ತೋರುವುದು. ಬಹಳ ಅತ್ಯಗತ್ಯವೆಂಬ ಇತರ ಅನೇಕ ಕೆಲಸಗಳನ್ನು ಮಾಡಲು ಬೇಕಾದರೆ ನಾಳೆವರೆಗೆ ಕಾಯಬಹುದು. ಆದರೆ ಮಗುವಿನ ವಿಷಯದಲ್ಲಿ ಇದು ಸಾಧ್ಯವಿಲ್ಲ. ಕ್ಷಣ ಕ್ಷಣಕ್ಕೂ ಅವನು ಬೆಳೆಯುತ್ತಿರುತ್ತಾನೆ, ಅವನ ಮೂಳೆ ಬಲಿಯುತ್ತಿರುತ್ತದೆ, ರಕ್ತವು ವರ್ಧಿಸುತ್ತಿರುತ್ತದೆ ಮತ್ತು ಅವನ ಇಂದ್ರಿಯಗಳು ಸಂವೇದನೆ ಪ್ರಾರಂಭಿಸುತ್ತಿರುತ್ತವೆ. ಆದ್ದರಿಂದ ಇಂದೇ ಸುಸಮಯ. ಅವನ ಪಾಲಿಗೆ ನಾಳೆ ಎಂದು ಹೇಳಲಾಗದು ಇಂದೇ ಬಲು ಪ್ರಶಸ್ತ ದಿನ."

ಆರಂಭಿಕ ಬಾಲ್ಯದ ಶಿಕ್ಷಣ (ECE), ಎಂದರೆ ಶಿಶುವಿನ ಬೆಳವಣಿಗೆಯ ವಿವಿಧಕ್ಷೇತ್ರಗಳನ್ನು ಒಳಗೊಂಡಂಥ ಸಮಗ್ರ ಪಠ್ಯಕ್ರಮವನ್ನು ಒದಗಿಸುವ ಶಾಲಾ ಪೂರ್ವ ಅವಧಿ. ಮಗುವಿಗೆ ಗ್ರಹಣಶಕ್ತಿ, ಸಾಮಾಜಿಕ ತಿಳವಳಿಕೆ, ಭಾಷೆ ಮತ್ತು ಭಾವನಾತ್ಮಕ ಅಗತ್ಯತೆಗಳನ್ನು ಒದಗಿಸುವುದು ಇಲ್ಲಿನ ಉದ್ದೇಶ. ಹೀಗೆ ಮಗುವಿನ ಎಲ್ಲಾ ಪ್ರಮುಖ ಅಂಶಗಳ ಬೆಳವಣಿಗೆಗೂ ಸಮಾನ ಮಹತ್ವವನ್ನು ನೀಡಬೇಕಾದ ಅಗತ್ಯವಿದೆ. ಈ ಒಂದು ಹಂತದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣವು ಮಗುವಿನ ಮಾತುಕತೆ, ಅಕ್ಕರೆ ತೋರುವುದು, ಪ್ರೇರಣೆ ಮತ್ತು ಹುಡುಕಿ ನೋಡಿ ಕಲಿಯುವ ಕಡೆಗೆ ಗಮನ ಹರಿಸುತ್ತದೆ. ಈ ಪ್ರಕ್ರಿಯೆಯು ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಸಹಕರಿಸುವುದಲ್ಲದೇ ಆಟದೊಂದಿಗೆ ಚಟುವಟಿಕೆ ಮತ್ತು ಕಲಿಕಾ ಸಾಮಗ್ರಿಗಳಿಂದ ಶಾಲಾ ಸಿದ್ಧತೆಗೆ ಅನುವು ಮಾಡಿಕೊಡುತ್ತದೆ.

ವಿಶ್ವದಾದ್ಯಂತ ಎಲ್ಲರೂ ಒಪ್ಪುವ ಅಂಶವೇನೆಂದರೆ, ಮಗುವಿನ ಮೊದಲ 8 ವರ್ಷಗಳು ಬಹಳ ನಿರ್ಣಾಯಕವಾದ ಕ್ಷಣಗಳು. ಈ ಅವಧಿಯಲ್ಲಾದ ರಚನಾತ್ಮಕ ಬೆಳವಣಿಗೆಗಳು ಅವರ ಜೀವನದುದ್ದಕ್ಕೂ ಅಗತ್ಯವಾಗಿರುವಂತವುಗಳು. ಈ ಕ್ಷೇತ್ರದಲ್ಲಿ ನಡೆದಂತಹ ಅಸಂಖ್ಯಾತ ಸಂಶೋಧನೆಗಳು "ಬಾಲ್ಯದಲ್ಲಿನ ಹುಡುಕಿ ನೋಡಿ ಕಲಿಯುವ ಚಟುವಟಿಕೆಗಳಿಂದ ಬೆಳವಣಿಗೆಗೊಂಡ ಮಗುವಿನ ಮೆದುಳು, ನರ ಮತ್ತು ಜೈವಿಕ ವಿಕಾಸಗಳು ಮಗುವಿನ ಜೀವನದುದ್ದಕ್ಕೂ ಉತ್ತಮ ಆರೋಗ್ಯ, ಕಲಿಕೆಗೆ ಮತ್ತು ವರ್ತನೆಗೆ ಅನುವು ಮಾಡಿಕೊಡುತ್ತದೆ. (ಉದಾಹರಣೆಗೆ: ಚಟರ್ಜಿ ಪಿ 2007 ಭಾರತದ ಮಕ್ಕಳ ಅಪೌಷ್ಟಿಕತೆಯ ಪ್ರಮಾಣ ಆರ್ಥಿಕ ಉತ್ಕರ್ಷದ ಹೊರತಾಗಿಯೂ ಹೆಚ್ಚಿದೆ – ಲಾನ್ಸೆಟ್) ಎಂಬುದನ್ನು ದೃಢವಾದ ಸಾಕ್ಷ್ಯಾಧಾರಗಳೊಂದಿಗೆ ತೋರಿಸಿ ಕೊಟ್ಟಿವೆ.

ಗ್ರಾಮ ಮಟ್ಟದಲ್ಲಿ ಗಮನಿಸಿದ ಕೆಲವೊಂದು ಅಂಶಗಳನ್ನು ನೋಡಿದಾಗ, ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) ಕಾರ್ಯಕ್ರಮದ ಕೆಲವೊಂದು ಅಂಶಗಳನ್ನು ಕ್ಷೇತ್ರದಲ್ಲಿ ಅನ್ವಯಿಸಲು ಹೋದಾಗ ಅನೇಕ ಸಮಸ್ಯೆಗಳು ಮತ್ತು ಆತಂಕಗಳನ್ನು ಒಡ್ಡಿವೆ. ಏಕೆಂದರೆ,

- ಸರ್ಕಾರದ ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಆರಂಭಿಕ ಬಾಲ್ಯದ ಸೇವೆಗಳು ಅಂದರೆ, ಕಲಿಕಾ ಪೂರ್ವ ಚಟುವಟಿಕೆಗಳು ಮತ್ತು ಪೌಷ್ಟಿಕಾಂಶ ಸೇವೆ – ಇಂತಹ ಸೇವೆಗಳು ಬಹಳಷ್ಟು ಮಕ್ಕಳಿಗೆ ಮತ್ತು ಕುಟುಂಬಗಳಿಗೆ ತಲಪುತ್ತಿಲ್ಲ. ದೊರೆತಂತಹ ಸೇವೆಗಳಲ್ಲಿನ ಗುಣಮಟ್ಟದಲ್ಲಿ ಅನೇಕ ಕೊರತೆಗಳು ಇರುವುದರಿಂದ ಅವರು ಪಡೆಯಲು ಸಾಧ್ಯವಾಗುತ್ತಿಲ್ಲ ಅಥವಾ ಕೆಲವರನ್ನು ಈ ಸೇವೆಗಳಿಂದ ಹೊರಗಿಡಲಾಗುತ್ತಿದೆ.
- ಮಕ್ಕಳಿಗೆ ಪೌಷ್ಟಿಕಾಹಾರ, ಆರೋಗ್ಯ, ಮಕ್ಕಳ ಆರಂಭಿಕದ ಬಾಲ್ಯದ ಶಿಕ್ಷಣ ಮತ್ತು ಬೆಳವಣಿಗೆಗೆ ಜವಾಬ್ದಾರರಾದಂತಹ ಹಲವಾರು ಇಲಾಖೆ ಮತ್ತು ಮಂತ್ರಾಲಯಗಳ ನಡುವೆ ಸಂಬಂಧ ಮತ್ತು ಸಮನ್ವಯ ಕಲ್ಪಿಸಲು ಎಷ್ಟೇ ಪ್ರಯತ್ನಿಸಿದರೂ, ಅಲ್ಲಿನ ಕಾರ್ಯಕರ್ತರುಗಳಲ್ಲಿ ಮತ್ತು ಕುಟುಂಬಗಳಲ್ಲಿ ಸಮನ್ವಯ ಮತ್ತು ಕೂಡು ಪ್ರಯತ್ನ ಇಲ್ಲವಾಗಿದೆ ಹಾಗು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಬಗ್ಗೆ ಅಲ್ಪಜ್ಞಾನವಿರುವುದು ಮತ್ತು ಸ್ಪಷ್ಟತೆ ಇಲ್ಲದಿರುವುದು ಸಹ ಕಂಡುಬಂದಿರುತ್ತದೆ.

- ಯೋಜನೆಯ ನೀತಿ ನಿಯಮ ಮತ್ತು ಕಾರ್ಯ ಚೌಕಟ್ಟು ಮತ್ತು ಎಲ್ಲಾ ಹಂತಗಳಲ್ಲಿಯೂ ಮೇಲ್ವಿಚಾರಣೆ ಮತ್ತು ನಿರೀಕ್ಷಣೆಯ ಅಭಾವವಿರುವುದು ಇನ್ನೊಂದು ರೀತಿಯ ಗಮನ ಹರಿಸಬೇಕಾದ ಅಂಶವಾಗಿದೆ.

ಈ ಕೆಳಗಿನ ಅಂಶಗಳು ಪ್ರತ್ಯಕ್ಷವಾಗಿ ವೀಕ್ಷಣೆಯಿಂದ ತಿಳಿದುಬಂದಿರುವಂತದ್ದು, (ಮುಖ್ಯವಾಗಿ ವಿಶಾಲ ಪರಿಧಿಯಲ್ಲಿ ಎರಡು ಅಂಶಗಳ ಮೇಲೆ ಗಮನವಿರಿಸುತ್ತದೆ) ಇದು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿದೆ. ಅವೆಂದರೆ, ಸಮಾನತೆ ಮತ್ತು ಸಮಾವೇಶೀಯತೆ.

ಇವುಗಳು ಆರಂಭಿಕ ಬಾಲ್ಯದ ಶಿಕ್ಷಣ ಯೋಜನೆಯನ್ನು ಇನ್ನೊಂದು ದೃಷ್ಟಿಕೋನದಿಂದ ನೋಡಲಾರಂಭಿಸಿದವು. ಉತ್ತರ ಕಾಶಿ ಜಿಲ್ಲೆಯ ಕೆಲವೊಂದು ವಲಯಗಳಲ್ಲಿರುವ ಅಂಗನವಾಡಿ ಸಂಸ್ಥೆಗಳಿಗೆ ಭೇಟಿ ನೀಡಿದಾಗ ಸಮಾನತೆ ಮತ್ತು ಸಮಾವೇಶೀಯತೆಗೆ ಸಮರ್ಪಕವಾದ ಉದಾಹರಣೆಗಳನ್ನು ವೀಕ್ಷಿಸಲಾಯಿತು. ಅದರಿಂದ ಒಂದು ವಿಶಿಷ್ಟವಾದ ನಂಬಿಕೆ ಮೂಡಿತು. ಆ ನಂಬಿಕೆಯ ಹಿಂದಿರುವ ತತ್ವಶಾಸ್ತ್ರೀಯ ಅಂಶವೇನೆಂದರೆ "ನಮ್ಮ ಉದ್ದೇಶಿತ ಕೆಲಸ ಪ್ರೀತಿಯನ್ನು ಅರಸುವುದಲ್ಲ ಬದಲಿಗೆ ಪ್ರೀತಿಯ ವಿರುದ್ಧ ನಮ್ಮೊಳಗೇ ನಾವು ನಿರ್ಮಿಸಿಕೊಂಡಿರುವ ಎಲ್ಲಾ ಅಡೆತಡೆಗಳನ್ನು ಹುಡುಕಿ ಕಂಡುಹಿಡಿಯುವುದು."

'ಸಮಾನತೆ ಮತ್ತು ಸಮಾವೇಶೀಯತೆ' ಎಂಬ ಕ್ಷೇತ್ರದಲ್ಲಿ ಅಂಗನವಾಡಿಯಂತಹ ಅನೇಕ ಆರಂಭಿಕ ಬಾಲ್ಯದ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಗಳು ಶ್ಲಾಘನೀಯ. ಆ ಕುರಿತು ಸಂಶಯವೇ ಇಲ್ಲ. ಆದರೂ, ಅವುಗಳಲ್ಲಿ ಸಾಧಕಗಳ ಜೊತೆಗೆ ಕೆಲವೊಂದು ಬಾಧಕಗಳು ಕಾಣಸಿಗುತ್ತವೆ. ನಿಯಂತ್ರಣಕ್ಕೆ ಮೀರಿದ ಅನೇಕ ಅಂಶಗಳಿಂದ ವ್ಯವಸ್ಥಿತ ತಾರತಮ್ಯದ ಕಾರಣದಿಂದಾಗಿ ಅಸಮಾನತೆ ಮತ್ತು ಬಹಿಷ್ಕಾರ ನಡೆಯುತ್ತಿವೆ. ಅವುಗಳಿಗೆ ಒಂದು ಮುಖ್ಯವಾದ ಕಾರಣವೇನೆಂದರೆ, 'ವಿಶೇಷ ಅಗತ್ಯತೆಗಳು ಮತ್ತು ಆರೈಕೆ ಬೇಕಾದ ವಿಶೇಷ ಮಕ್ಕಳು'. ಇದಕ್ಕೆ ಸಂಬಂಧಿಸಿದಂತೆ ಅನೇಕ ಕಾರಣಗಳು ಇರಬಹುದು ಆದರೆ, ಸಾಮಾಜಿಕ-ಸಾಂಸ್ಕೃತಿಕ ಪದ್ಧತಿಯಲ್ಲಿ ಆಳವಾಗಿ ಬೇರೂರಿದ ಸಾಮಾಜಿಕ ಅಂಶಗಳು- (ಕಣ್ಣಿಗೆ ಕಾಣುವ – ಕಾಣದ) ಬಹಿಷ್ಕಾರಕ್ಕೆ ಕಾರಣವಾಗಿವೆ.

ವಿಶೇಷ ಮಕ್ಕಳು: ಆರಂಭಿಕ ಬಾಲ್ಯದ ಶಿಕ್ಷಣಗಳಂತಹ ಸಂಸ್ಥೆಗಳಲ್ಲಿ ವಿಶೇಷ ಮಕ್ಕಳನ್ನು ಸಾಮಾನ್ಯ ಮಕ್ಕಳಿಂದ ದೂರವಿಡುತ್ತಾರೆ ಅಥವಾ ಸಾಮಾನ್ಯ ಮಕ್ಕಳು ಮತ್ತು ಇತರರು ಬಂದಾಗ ಅವರಿಗೆ ಗೋಚರಿಸುವಂತೆ ಈ ಮಕ್ಕಳನ್ನು ವಿಶೇಷ ಮಕ್ಕಳೆಂದು ಪರಿಗಣಿಸುವುದು, ಅವರನ್ನು ವಿಶೇಷ ರೀತಿಯಲ್ಲಿ ನೋಡುವುದು ಹಾಗೂ ಪರಿಚಯಿಸುವುದು. ವಿಶೇಷ ಮಕ್ಕಳಲ್ಲಿ ಕೆಲವೊಂದು ಶಾರೀರಿಕ ದೌರ್ಬಲ್ಯ ಇರುವುದರಿಂದ ಅವರಿಗೆ ಶಾರೀರಿಕ ಕಾರ್ಯವನ್ನು ಸಮರ್ಪಕವಾಗಿ ಮಾಡಲಾಗುತ್ತಿಲ್ಲ ಎಂಬುದನ್ನು ಅಲ್ಲಿಯ ಕಾರ್ಯಕರ್ತೆಯರು ಮತ್ತು ಸಹಾಯಕರು ಪದೇ ಪದೇ ಹೇಳುತ್ತಿರುತ್ತಾರೆ. ಅಂಗನವಾಡಿಯಂತಹ ಆರಂಭಿಕ ಬಾಲ್ಯದ ಶಿಕ್ಷಣ ಕೇಂದ್ರಗಳಿಗೆ ಭೇಟಿ ನೀಡಿದಾಗ ಮತ್ತು ಕಾರ್ಯಕರ್ತೆಯರು ಮತ್ತು ಸಹಾಯಕರ ಜೊತೆ ಮಾತನಾಡಿದಾಗ ಇದು ಸ್ಪಷ್ಟವಾಗಿ ಕಾಣಬರುತ್ತದೆ. ಇಂತಹ ಕೆಟ್ಟ ಮಾತುಗಳು ಅನಾವಶ್ಯಕವಾಗಿ ಮಕ್ಕಳ ಆತ್ಮವಿಶ್ವಾಸ, ಪ್ರತಿಕ್ರಿಯೆ ನೀಡುವಿಕೆ, ಅಭಿವ್ಯಕ್ತಿ, ಭಾವನೆ, ಭಾಗವಹಿಸುವಿಕೆ ಇಂತಹ ಸಾಮರ್ಥ್ಯಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತವೆ. ಮತ್ತು ಆ ಮಗುವು ತನ್ನ ಸಾಮರ್ಥ್ಯದ ಬಗ್ಗೆ ಅನವಶ್ಯಕವಾಗಿ ಆತಂಕಕ್ಕೊಳಗಾಗಬೇಕಾಗುತ್ತದೆ.

ಸಮಾನತೆಯ ವಿಷಯಕ್ಕೆ ಬಂದಾಗ ಇದು ಮಗುವಿನ ವಿವಿಧ ಅಗತ್ಯಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ ಮತ್ತು ನಿರ್ದಿಷ್ಟ ಅಗತ್ಯಗಳಿಗೆ ಪ್ರತಿಕ್ರಿಯಿಸಬಲ್ಲ ಹೊಂದಾಣಿಕೆಗಳತ್ತ ಗಮನ ನೀಡುತ್ತದೆ. ಆರಂಭಿಕ ಬಾಲ್ಯದ ಶಿಕ್ಷಣದ ಮಟ್ಟದಲ್ಲಿ, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವಿಶೇಷ ಆರೈಕೆ ಅಷ್ಟೇ ಅಲ್ಲದೆ, ಇದು ತರಗತಿಯಲ್ಲಿ, ಮನೆಯೊಳಗೆ ಅಥವಾ ಸಮಾಜದಲ್ಲಿ ಸೇವೆಗಳನ್ನು ಪಡೆಯುವ ಬಗ್ಗೆ ಅಥವಾ ಬಳಸಿಕೊಳ್ಳುವ ಬಗ್ಗೆ ಅವರು ಇತರರಿಗೆ ಹೋಲಿಸಿದಾಗ ಅನುಭವಿಸುವ ತಾರತಮ್ಯ ಅಥವಾ ದುಷ್ಪರಿಣಾಮಗಳ (ಈ ಸಂದರ್ಭದಲ್ಲಿ, ಮಾನಸಿಕ ಅಥವಾ ಭಾವನಾತ್ಮಕ, ದೈಹಿಕ, ಇತ್ಯಾದಿ) ಬಗ್ಗೆ ಸಹ ಕಾಳಜಿಯ ವಹಿಸಬೇಕಾಗುತ್ತದೆ. ವಿಶಾಲ ಪರಿಧಿಯಲ್ಲಿ ನೋಡಿದಾಗ, ಇದು ಯಾವುದೇ ಗಮನಾರ್ಹ ಪ್ರಾತಿನಿಧ್ಯವಿಲ್ಲದ ಅಥವಾ ತಮಗೇನು ಬೇಕು ಎಂಬುದನ್ನು ಹೇಳಲಾಗದವರಿಗೆ ಸೇವೆಗಳನ್ನು ಒದಗಿಸಿಕೊಡುವುದಕ್ಕೆ ಸಂಬಂಧ ಪಡುತ್ತದೆ.

ಸಮಾವೇಶಣ ಪ್ರಕ್ರಿಯೆಯೆಂದರೆ ಬರಿಯ ಸೇವೆಯನ್ನು ಒದಗಿಸುವುದಷ್ಟೇ ಅಲ್ಲ (ಅಂಗನವಾಡಿ ಕೇಂದ್ರ [Anganawadi center (AWC)) ಸೇವೆಯ ಒಂದು ಮುಖ್ಯ ಭಾಗ.) ಅವರ ಹಕ್ಕು ದೊರೆಯುವಂತೆ ಮಾಡುವಲ್ಲಿ ಹಾಗು ಅವರ ಅಗತ್ಯಗಳನ್ನು ಗುರುತಿಸುವಲ್ಲಿ ಸಮುದಾಯವನ್ನು ತನ್ನ ಕಾರ್ಯ ಪ್ರಕ್ರಿಯೆಯಲ್ಲಿ ಸಹಭಾಗಿಯನ್ನಾಗಿ ಮಾಡಿಕೊಳ್ಳುವುದು. ಈ ಮಕ್ಕಳ ಅಗತ್ಯಗಳನ್ನು ಗುರುತಿಸುವುದಲ್ಲದೇ, ಸೇವೆಯ ಸಂಪೂರ್ಣ ಯೋಜನೆಯಲ್ಲಿ ಆಡಳಿತ ನಿರ್ವಹಣೆಯಲ್ಲಿ, ಸೇವೆ ಒದಗಿಸುವಲ್ಲಿ, ಸಮುದಾಯದ ವಿಶೇಷ ಪಾತ್ರವನ್ನು ಸಮುದಾಯಕ್ಕೆ ಮನವರಿಕೆ ಮಾಡಿಸಿ ಉತ್ತೇಜಿಸುವುದು. ಈ ಕ್ರಿಯೆ ಸುಸ್ಥಿರವಾಗುವಂತೆ ಮಾಡಲು ತರಬೇತಿ/ಮಾಹಿತಿಯ ಜಾಗೃತಿ/ಶಿಕ್ಷಣ ನೀಡುವುದು ಸೇರುತ್ತವೆ.

ಪ್ರತಿಯೊಂದು ಮಗುವು ವಿಶೇಷವಾಗಿರುವುದರಿಂದ ಪ್ರತಿಯೊಬ್ಬರ ವಿಭಿನ್ನ ಅಗತ್ಯತೆಗಳನ್ನು ಅರ್ಥಮಾಡಿಕೊಂಡು ಗುರುತಿಸುವುದು ಮತ್ತು ಸೂಕ್ತವಾದ ಪರಿಹಾರಕ್ಕೆ ನೆರವು ನೀಡಿ ಜಾರಿಗೊಳಿಸುವುದು ಅಗತ್ಯ.

ಆರಂಭಿಕ ಬಾಲ್ಯದ ಶಿಕ್ಷಣ ಕೇಂದ್ರದಲ್ಲಿ ಬಹಳ ಸಲ ಉಪೇಕ್ಷೆಮಾಡುವಂತಹ ಗಮನಾರ್ಹ ಸಮಸ್ಯೆಯೆಂದರೆ ನೈರ್ಮಲ್ಯ ಸೌಲಭ್ಯಗಳು ಮತ್ತು ಶುಚಿತ್ವದ ಅಭ್ಯಾಸಗಳು. ನಿಜ, ನಮ್ಮಂತಹ ದೇಶಗಳಲ್ಲಿ ಎಲ್ಲಾ ಸಾರ್ವಜನಿಕ ಸಂಸ್ಥೆಗಳು ಮತ್ತು ಅಂಗನವಾಡಿಗಳಂತಹ ಸಂಸ್ಥೆಗಳಿಗೂ ಎಲ್ಲೆಡೆ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವುದು ಒಂದು ಸವಾಲೇ ಸರಿ ಆದರೂ ಈ ಸಮಸ್ಯೆಗೆ ಸೂಕ್ತ ಗಮನ ಅಗತ್ಯ. ನಾಚಿಕೆಗೇಡಿನ ವಿಷಯವೆಂದರೆ ಇಂದಿಗೂ ಅಂತಹ ಶಿಶು ಶಿಕ್ಷಣ ಕೇಂದ್ರಗಳಲ್ಲಿ ಮಕ್ಕಳು ಬಯಲಿನಲ್ಲಿ ಮಲಬಾಧೆ ತೀರಿಸಿಕೊಳ್ಳುತ್ತಾರೆ. ಇದೇ ಈ ಮಕ್ಕಳಲ್ಲಿ ಅನಾರೋಗ್ಯಕ್ಕೆ ಮತ್ತು ಶುಚಿತ್ವಹೀನತೆಗೆ ಕಾರಣವಾಗುತ್ತಿದೆ. ಇಲ್ಲಿ ಉದ್ಭವಿಸುವ ಪ್ರಶ್ನೆಯೇನೆಂದರೆ, ಈ ಮಕ್ಕಳು ಯಾರು? ಅವರು ಯಾರಿಗೆ ಸಂಬಂಧಿಸಿದವರು? ಅವರ ಜವಾಬ್ದಾರಿ ಯಾರದ್ದು? ಅವರು ಸೌಲಭ್ಯಗಳಿಂದ ಏಕೆ ಹೊರಗಿಡಲ್ಪಟ್ಟಿದ್ದಾರೆ? ಏಕೆ ಅವರು ತಮ್ಮ ಆರೋಗ್ಯ ಮತ್ತು ಸ್ವಚ್ಛತೆಗೆ ಅನುಕೂಲವಾಗಿರುವ ವರ್ತನೆಗಳನ್ನು ಅನುಸರಿಸುತ್ತಿಲ್ಲ ಮತ್ತು ಸೌಲಭ್ಯಗಳನ್ನು ಏಕೆ ಸರಿಯಾಗಿ ಬಳಸುತ್ತಿಲ್ಲ?

ಈ ಸಮಸ್ಯೆ ಕುರಿತು ಮಾಡಿದ ಅವಲೋಕನ ಮತ್ತು ವಿಶ್ಲೇಷಣೆಗಳು ಒತ್ತಿ ಹೇಳುವುದೇನೆಂದರೆ, ಸಮಾನತೆ ಮತ್ತು ಸಮಾವೇಶಗೊಳಿಸುವುದು ಎಂದರೆ ಜಾತಿ, ಧರ್ಮ, ಪ್ರಾಂತ್ಯ, ಲಿಂಗ ಮತ್ತು ಆರ್ಥಿಕ ಸ್ಥಾನಮಾನಗಳ ಆಧಾರದ ಮೇಲೆ ತಾರತಮ್ಯ ಇಲ್ಲದಂತೆ ಮಾಡುವುದಷ್ಟೇ ಅಲ್ಲ. ಅದರ ಜೊತೆಗೆ ಈ ಸೌಕರ್ಯಗಳಿಂದ ಯಾರೂ ವಂಚಿತರಾಗದೇ ಅವು ಎಲ್ಲರಿಗೂ ಸಮಾನವಾಗಿ ದೊರಕುವಂತಾಗಬೇಕು.

ಆರಂಭಿಕ ಬಾಲ್ಯದ ಶಿಕ್ಷಣ ಕೇಂದ್ರದಲ್ಲಿ ಬರುವ ಮಕ್ಕಳು 2.5–6 ವರ್ಷದ ಒಳಗಿನವರಾದ್ದರಿಂದ ನೈರ್ಮಲ್ಯ ಮತ್ತು ಸ್ವಚ್ಛತೆ ನಿರ್ವಹಿಸಲು ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕರಿಗೆ ಹೆಚ್ಚಿನ ಕೆಲಸ ಮತ್ತು ಶ್ರಮ ಬೇಕಾಗಿರುತ್ತದೆ. ಆದಕಾರಣ ಈ ಅಂಶವನ್ನು ನಿರ್ಲಕ್ಷಿಸಿರುವುದು ತಿಳಿದು ಬರುತ್ತದೆ. ಏಕೆಂದರೆ ಮಕ್ಕಳನ್ನು ನೋಡಿಕೊಳ್ಳಲು ಅದರೊಂದಿಗೆ ಸ್ವಚ್ಛತೆ ಮತ್ತು ಆರೋಗ್ಯದ ಕಡೆಗೆ ಕಾಳಜಿ ವಹಿಸುವುದು ಹೆಚ್ಚಿನ ಶ್ರಮದ ಕೆಲಸವಾಗಿರುತ್ತದೆ. ಅದಲ್ಲ ಎಂದುಕೊಂಡರೂ ಬರಿಯ ಬದ್ಧತೆಯಷ್ಟೇ ಸಾಕಾಗುವುದಿಲ್ಲ. ಯೋಜನೆಗಳು, ಹೂಡಿಕೆಗಳು ಮತ್ತು ಕಾರ್ಯಕ್ರಮಗಳು, ಸಮಾನತೆಯ ತತ್ವಕ್ಕೆ ಆಧಾರವಾಗಿ ಅಂದರೆ ನ್ಯಾಯಯುತವಾದ ದೃಷ್ಟಿಯಲ್ಲಿ ಕಾರ್ಯರೂಪಕ್ಕೆ ಬರಬೇಕು. 'ಸಮಾನತೆ ಮತ್ತು ಸಮಾವೇಶಣ' ಎಂದರೆ ಈ ಎರಡು ಅಂಶಗಳು ತಿಳಿಸುವುದೇನೆಂದರೆ, ಪ್ರತಿಯೊಂದು ಮಗುವೂ ವ್ಯಕ್ತಿಗತವಾಗಿ ಭಿನ್ನವಾದುದು ಪ್ರತಿಯೊಬ್ಬರಿಗೂ ಭಿನ್ನವಾದ ನೆರವು ಮತ್ತು ಕಾಳಜಿಗಳು ಅಗತ್ಯವಾಗಿರುತ್ತವೆ. ಅಲ್ಲದೇ ಸೇವೆಗಳನ್ನು ಎಡೆಬಿಡದೆ ಪಡೆದುಕೊಳ್ಳಲು ಮತ್ತು ಬಳಸಲು ಎದುರಾಗುವ ನಿರ್ದಿಷ್ಟ ವಿಘ್ನಗಳನ್ನು ತಿಳಿದು ಸಮರ್ಪಕವಾದ ಕ್ರಮಕೈಗೊಳ್ಳಬೇಕು ಎಂಬುದನ್ನು ಮನಗಾಣಬೇಕು.

ಈ ಕ್ಷೇತ್ರದಲ್ಲಿನ ಪ್ರಯಾಣ ನಾನು ಯಾವಾಗಲೂ ಅನ್ವೇಷಿಸಲು ಮತ್ತು ಕೆಲಸ ಮಾಡಬೇಕೆಂದು ಹಂಬಲಿಸುತ್ತಿದ್ದ ಹೃದಯ ಮತ್ತು ಮನಸ್ಸಿನ ಸ್ಥಳಗಳನ್ನು, ತಲುಪುವ ಮತ್ತು ಅದನ್ನೂ ಮೀರಿ ಸಾಗುವ ಒಂದು ವೈಯಕ್ತಿಕ ಸಾಹಸ. ಇದು ಅಂಥನೀತಿಗಳು ಮತ್ತು ಕಾರ್ಯಕ್ರಮಗಳ ಹಿಂದಿನ ಮುಗ್ಧ, ಅನಿರೀಕ್ಷಿತ ಜೀವನದ ಮಕ್ಕಳ ಹೋರಾಟಗಳು, ಕನಸುಗಳು, ವಿಜಯದ ಅದ್ಭುತಗಾಥೆಯನ್ನು ಸಂದರ್ಭಗಳು ಮತ್ತು ಮನಕಲುಕುವ ಭೇಟಿಗಳನ್ನು ಒದಗಿಸುತ್ತದೆ.

ಪ್ರಸ್ತುತ ಕೆಳಗಿನ ಕೆಲವು ಶಿಫಾರಸ್ಸುಗಳು ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮದ ಯೋಜನೆಯನ್ನು ಹೊಸತನದೊಂದಿಗೆ ಪರಿಣಾಮಕಾರಿ ಮತ್ತು ಉತ್ತಮ ವಿನ್ಯಾಸಗೊಳಿಸುವಲ್ಲಿ ಸಹಾಯಕವಾಗಬಹುದೆನಿಸುತ್ತದೆ. ಅವೆಂದರೆ,

- ಸಮುದಾಯದೊಂದಿಗಿನ ಕಾರ್ಯಕ್ರಮಗಳು (ಪ್ರಸ್ತುತ ಚತ್ತೀಸಗರ್ ರಾಜ್ಯದಿಂದ ಆಯೋಜಿಸಲ್ಪಟ್ಟಿರುವ 'ಉಡಾನ ಯಾತ್ರಾ') ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಸಮುದಾಯವನ್ನು ICDS ಅದರ ಒಂದು ಭಾಗವಾದ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮದ ಕಡೆಗೆ ಕರೆತಂದು ಅದರ ಸೂಕ್ಷ್ಮತೆಯನ್ನು ಮತ್ತು ಪೋಷಕರಾಗಿ ಸಮುದಾಯದ ಮಹತ್ವದ ಅರಿವನ್ನು ಮೂಡಿಸುವುದು.
- ಸ್ಥಳಿಯ ವಾಸ್ತವಗಳನ್ನು ಒಟ್ಟಾಗಿ ಪರಿಶೀಲಿಸಿ ನೋಡಿ ICDS ಕಾರ್ಯಕ್ರಮವನ್ನು ಬಲವರ್ಧಿಸಲು ಸೂಕ್ತವಾದ ನೀತಿ–ನಿಯಮಗಳನ್ನು ರಚಿಸಿ ಅವುಗಳನ್ನು ಯೋಜನೆಯಲ್ಲಿ ಜಾರಿಗೆ ತರುವುದಕ್ಕಾಗಿ. ಸಮರ್ಪಕವಾದ ಕಾರ್ಯತಂತ್ರದ ಸಲಹೆ ನೀಡುವುದು.
- ಆರಂಭಿಕ ಬಾಲ್ಯದ ಶಿಕ್ಷಣದ ಪರಿಣಾಮಕಾರಿಯಾದ ಕಾರ್ಯಕ್ರಮದ ಸಾಧನೆಗೆ ಯೋಜನೆಯ ಮೂಲ ಹಂತದಲ್ಲಿಯೇ ಅವುಗಳ ಪರಿಕಲ್ಪನೆಗಳು, ಯೋಜನೆ, ಸಂಪನ್ಮೂಲಗಳ ಹಂಚಿಕೆಯಿಂದ ಹಿಡಿದು ಇಲಾಖೆಗಳ ಪರಸ್ಪರ ಸಮನ್ವಯ ಸರ್ಕಾರದೊಳಗಿನ ಪ್ರಸ್ತುತ

ಸಾಮರ್ಥ್ಯ, ಸಾಮಾಗ್ರಿ ತಯಾರಿಕೆಯ ಪ್ರಕ್ರಿಯೆ ತರಬೇತಿ, ಸಾಮರ್ಥ್ಯವರ್ಧನೆ ಕಾರ್ಯತಂತ್ರಗಳು, ಮತ್ತು ಬೋಧನಾ ವಿಧಾನ ಇವುಗಳ ಮೌಲ್ಯಮಾಪನ.

- ಮೇಲೆ ತಿಳಿಸಿರುವ ಪ್ರಕ್ರಿಯೆಗಳ ಪರಿಶೀಲನೆಯೊಂದಿಗೆ, ECE/ICDS ಕಾರ್ಯಕ್ರಮಗಳನ್ನು ಜಾರಿಗೊಳಿಸಲು ECE/ICDS ಕಾರ್ಯಕರ್ತೆಯರ ಸಾಮರ್ಥ್ಯವನ್ನು ಹೆಚ್ಚಿಸುವುದರಲ್ಲಿ ಆಗುವ ತೊಡಕುಗಳು ಮತ್ತು ಅದರ ಪರಿಣಾಮಗಳ ಅಂಶಗಳನ್ನು ಪರಿಶೀಲಿಸುವುದು.
- ಹಿತಾಸಕ್ತಿದಾರರು ಕೂಡಿ ಕೆಲಸ ಮಾಡುವಂತೆ ಮಾಡಲು ಸಾಮರ್ಥ್ಯವನ್ನು ವೃದ್ಧಿಸಲು ತರಬೇತಿ, ಮೇಲ್ವಿಚಾರಣಾ ವ್ಯವಸ್ಥೆಯಂತಹ ಕಾರ್ಯತಂತ್ರಗಳನ್ನು ನಿರ್ಧರಿಸಿ ಸಲಹೆ ನೀಡುವುದು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆಗೆ (ಅಂದರೆ ಸರ್ವಶಿಕ್ಷಣ ಅಭಿಯಾನ) ವರ್ಗಾಯಿಸುವುದು ಮತ್ತು ಅದಕ್ಕೆ ಅನುಪಾಲನಾ ನೆರವು ನೀಡುವುದು.
- ಆರಂಭಿಕ ಬಾಲ್ಯದ ಶಿಕ್ಷಣವನ್ನು ಸ್ಥಾಪಿಸಿ ಕಾರ್ಯಗತಗೊಳಿಸುವ ಸಂದರ್ಭದಲ್ಲಿ ವಸ್ತು ವಿಷಯ ಅಭಿವೃದ್ಧಿ, ಸಂಪನ್ಮೂಲ ಹಂಚಿಕೆ, ತರಬೇತಿ, ಅನುಸರಣಾ ಕೆಲಸಗಳು ಮತ್ತು ಮೇಲ್ವಿಚಾರಣೆ ಮತ್ತು ಪ್ರಕ್ರಿಯೆಯಲ್ಲಿ ಬರುವ ಸವಾಲುಗಳು ಹಾಗು ನಿರ್ಬಂಧಗಳನ್ನು ಹಾಗೆಯೇ ಅನುಸರಣಾಕಾರ್ಯದಲ್ಲಿ ನಿರತರಾದ ಇಲಾಖೆಗಳು ಸಹಕಾರ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ಮತ್ತು ಪ್ರತಿ ಹಿತಾಸಕ್ತಿದಾರನ ಪಾತ್ರಗಳನ್ನು ಅರ್ಥಮಾಡಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆರಂಭಿಕ ಬಾಲ್ಯದ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಸಲುವಾಗಿ ಕಾರ್ಯತಂತ್ರಗಳನ್ನು ಗುರುತಿಸುವುದು.
- ಅನುಭವಗಳನ್ನು ಭರವಸೆದಾಯಕ ಕಾರ್ಯಾಚರಣೆಗಳನ್ನು ಮತ್ತು ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ಚೆನ್ನಾಗಿ ಪ್ರಗತಿ ತೋರಿರುವ ರಾಜ್ಯಗಳಲ್ಲಿ ಕಲಿತ ಪಾಠಗಳನ್ನು ದಾಖಲಿಸುವುದು ಮತ್ತು ಪ್ರಚಾರ, ಮಾಡುವುದು ಮತ್ತು ಐಸಿಡಿಎಸ್ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಬಹುದಾದ ಪುನರಾವರ್ತನೀಯ ಮಾದರಿಗಳನ್ನು ಸೂಚಿಸುವುದು ಪ್ರೇರಣೆ ಮತ್ತು ಬದಲಾವಣೆಗೆ ಗಮನಾರ್ಹ ಸಾಧನವಾಗಿ ಕೆಲಸ ಮಾಡುತ್ತವೆ.



**ಅಪೂರ್ವ** ಮಧ್ಯಪ್ರದೇಶದ ಉಜ್ಜಯಿನಿ ಜಿಲ್ಲೆಯವರು. ಟಾಟಾ ಸಮಾಜ ವಿಜ್ಞಾನ ಸಂಸ್ಥೆ, ಮುಂಬೈನಿಂದ ಅವರು ಕ್ಷೇತ್ರ ಅಧ್ಯಯನ ವಿಷಯವಾಗಿ 'ಆರೋಗ್ಯ ಮತ್ತು ಅಭಿವೃದ್ಧಿ' ಆರಿಸಿಕೊಂಡಿದ್ದಾರೆ. ಸೋಷಿಯಲ್ ವರ್ಕ್ ವಿಷಯದ ಬಗ್ಗೆ ಮಾಸ್ಟರ್ಸ್ ಆಫ್ ಆರ್ಟ್ಸ್ ಪದವಿ ಪಡೆದಿದ್ದಾರೆ. ಅವರು 'ಮಧ್ಯಪ್ರದೇಶದ ರೇವಾ ಜಿಲ್ಲಾ ಬುಡಕಟ್ಟು ಮಕ್ಕಳ ಪೌಷ್ಟಿಕ ಆರೋಗ್ಯ ಸ್ಥಿತಿ' ಬಗ್ಗೆ ಶೈಕ್ಷಣಿಕ ಸಂಶೋಧನೆ, ಮಾಡಿದ್ದಾರೆ. ಅವರು APNALAYA (ರಫೀಕ್ ನಗರ ಕೊಳೆಗೇರಿ), ಮತ್ತು NAVCHETNA (ರಾಯ್ಗರ್), ಮುಂಬೈನಂತಹ ಸಂಸ್ಥೆಗಳ ಜೊತೆ, ಆರಂಭಿಕ ಬಾಲ್ಯದ ಮಕ್ಕಳ 'ಆರೋಗ್ಯ ಮತ್ತು ಪೋಷಣೆ' ರಂಗದಲ್ಲಿ ಕ್ಷೇತ್ರ ಅನುಭವ ಪಡೆದಿದ್ದಾರೆ. ಅವರನ್ನು apoorva03.patel@gmail.com ವಿಳಾಸದಲ್ಲಿ ಸಂಪರ್ಕಿಸಬಹುದು.



# ಐಸಿಡಿಎಸ್ (ICDS) ವ್ಯವಸ್ಥೆಯೊಂದಿಗೆ ಪರಿಣಾಮಕಾರಿ ಕಾರ್ಯ ಸಾಧನೆಗೆ ಒಂದು ಅನುಕೂಲಕರ ಪರಿಸರ ವ್ಯವಸ್ಥೆಯ ರಚನೆ ಅಕ್ಷರ ಫೌಂಡೇಷನ್–ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮ

ವೈಜಯಂತಿ ಕೆ.

## ಹಿನ್ನೆಲೆ

'ಆರಂಭಿಕ ಬಾಲ್ಯ ಶಿಕ್ಷಣ' ಎಂಬ ಈ ಕ್ಷೇತ್ರದ ಮೇಲೆ ವಿಶ್ವದಾದ್ಯಂತಹ ನಡೆದಂತಹ ಸಂಶೋಧನೆಗಳ ಸಲಹೆಯ ಪ್ರಕಾರ, ಮಗು ತಾನು ಬಾಲ್ಯದಲ್ಲಿ ಬೆಳೆದ ಪರಿಸರ ಮತ್ತು ಆ ಸಮಯದಲ್ಲಿ ಅದು ಮಾಡಿದ ಪರಿಶೋಧನೆಗಳು ಅದರ ಬೆಳವಣಿಗೆಯಲ್ಲಿ ಗಮನಾರ್ಹ ಕೊಡುಗೆಯನ್ನು ನೀಡುತ್ತವೆ. ಒಂದು ಸಂಪದ್ಭರಿತ ಮತ್ತು ಬೆಂಬಲಯುತ ಪರಿಸರದಲ್ಲಿ ಮಕ್ಕಳಿಗೆ ಕಲಿಯಲು, ಬಹಳ ಅವಕಾಶಗಳಿರುತ್ತವೆ ಮತ್ತು ಗ್ರಹಣಶಕ್ತಿ ಸಾಮರ್ಥ್ಯದ ಬೆಳವಣಿಗೆ ಪ್ರಮುಖವಾದ ಮುಖ್ಯ ಪಾತ್ರವನ್ನು ವಹಿಸುತ್ತದೆ. ರಾಷ್ಟ್ರೀಯ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (National Early Childhood Care and Education (ECCE)) ಕಾರ್ಯನೀತಿಯು, ಭಾರತದಲ್ಲಿ ಜನನ ಪೂರ್ವದಿಂದ ಆರನೇ ವರ್ಷದ ಒಳಗಿನ ಎಲ್ಲಾ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಮಗ್ರ ಸೇವೆಯನ್ನು ನೀಡುವಲ್ಲಿ ಭಾರತ ಸರಕಾರದ ಬದ್ಧತೆಯನ್ನು ಮತ್ತೆ ಒತ್ತಿ ಹೇಳುತ್ತದೆ.

ಕಳೆದ ದಶಕಗಳಲ್ಲಿ, ಭಾರತವು ಇತರ ವಿಷಯಗಳೊಂದಿಗೆ ಸಾರ್ವಜನಿಕ ಶಿಕ್ಷಣದಲ್ಲಿ ಹಣ ಹೂಡಿಕೆ, ಶಾಲೆಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳು, ವಿದ್ಯಾರ್ಥಿಗಳ ಪ್ರವೇಶಾವಕಾಶದಲ್ಲಿ ಹೆಚ್ಚಳ, ಶಿಕ್ಷಕರ ಸಂಬಳ, ವಿದ್ಯಾರ್ಥಿ ಹಾಗು ಶಿಕ್ಷಕರ ಅನುಪಾತ ಹಾಗೂ ಇವುಗಳಿಗೆ ಸಂಬಂಧಿಸಿದ ಇತರ ಸೌಲಭ್ಯಗಳನ್ನು ನೀಡಿ ಗಮನಾರ್ಹ ಸುಧಾರಣೆಗಳನ್ನು ಮಾಡಿದೆ. ಆದರೂ, ನಿರಂತರ ವೀಕ್ಷಣೆಯಿಂದ ತಿಳಿದ ಅಂಶವೆಂದರೆ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಮಟ್ಟ ಕಡಿಮೆಯಾಗಿರುವುದು.[1] ಈಗ 'ಶಾಲಾ ಅಭಿವೃದ್ಧಿ' ಗಿಂತ 'ಶಾಲಾ ಗುಣಮಟ್ಟ'ದ ಕಡೆಗೆ ಹೆಚ್ಚು ಗಮನ ಕೇಂದ್ರೀಕೃತವಾಗುತ್ತಿರುವುದರಿಂದ "ಕಲಿಕಾ ಸಾಧನೆ" ಎಂಬ ಪರಿಕಲ್ಪನೆ ಶೈಕ್ಷಣಿಕ ಯೋಜಕರ ಶಬ್ದಕೋಶದಲ್ಲಿ ನಿಧಾನವಾಗಿ ಸ್ಥಾನ ಪಡೆದುಕೊಳ್ಳುತ್ತಿದೆ.ಯಾವುದೇ ಸದೃಢ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲಾ ಪೂರ್ವ ಶಿಕ್ಷಣ, ಅಂದರೆ ಮಕ್ಕಳು ಶಾಲೆಗೆ ಹೋಗಲು ಸಿದ್ಧವಾಗುವಂತೆ ಮಾಡಲು ೦–೬ ವರ್ಷದೊಳಗಿನ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ ಬಹು ಮುಖ್ಯ ಅಂಶವಾಗಿದೆ.

ನೋಬೆಲ್ ಪ್ರಶಸ್ತಿ ಪಡೆದಂತಹ ಜಿಮ್ ಹೆಕ್ಮ್ಯಾನ್ ರವರ ಅಧ್ಯಯನದ ಪ್ರಕಾರ "ಆರಂಭಿಕ ಬಾಲ್ಯದ ಶಿಕ್ಷಣವು, ಮಕ್ಕಳ ಬೌದ್ಧಿಕ/ಗ್ರಹಣಶಕ್ತಿ ಬೆಳವಣಿಗೆ ಮತ್ತು ಇತರ ಸಾಮರ್ಥ್ಯಗಳನ್ನು ಚೆನ್ನಾಗಿ ಬೆಳಸುವುದೇ ಅಲ್ಲದೆ ಅವರ ಸಾಮಾಜಿಕ ಆರ್ಥಿಕ ಬೆಳವಣಿಗೆಗೂ ಉತ್ತಮ ಪರಿಣಾಮವನ್ನು ಬೀರುತ್ತದೆ." ಅಲ್ಲದೇ ಜಿಮ್ ಹೆಕ್ಮ್ಯಾನ್‌ರವರ ಸಂಶೋಧನಾ ಅಧ್ಯಯನವು ತಿಳಿಸುವುದೇನೆಂದರೆ, ಎಳೆಯ ವಯಸ್ಸಿನಲ್ಲಿ ಮಕ್ಕಳ ಬವಣೆ ಮತ್ತು ಅನುಭವಗಳು ದೊಡ್ಡವರಾದ ಮೇಲೆ ಅವರು ಯಶಸ್ಸು ಪಡೆಯುತ್ತಾರೋ ಅಥವಾ ವಿಫಲರಾಗುತ್ತಾರೊ ಎಂಬ ಬಗ್ಗೆ ಪ್ರಬಲವಾದ ಮುನ್ಸೂಚನೆಯನ್ನು ನೀಡುತ್ತವೆ ಮತ್ತು ಪುಟ್ಟವರಾಗಿದ್ದಾಗ ಒಳ್ಳೆಯ ಶಿಕ್ಷಣ ದೊರೆತರೆ ಅದು ಹೇಗೆ ಚಿಕ್ಕ ವಯಸ್ಸಿನ ಅನುಕೂಲ ರಹಿತ ಸನ್ನಿವೇಶದ ಅನಾನುಕೂಲತೆಯನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡುತ್ತದೆ ಎಂಬುದನ್ನು ತೋರಿಸುತ್ತದೆ.

'ಹೈಯ್ ಸ್ಕೋಪ್ ಪೆರಿ' ಎಂಬ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮ ಮತ್ತು 'ಎಬೆಸೆಡೇರಿಯನ್' ಕಾರ್ಯಕ್ರಮಗಳು ನಡೆಸಿದ ನಿರಂತರ ವೀಕ್ಷಣಾತ್ಮಕ ಅಧ್ಯಯನಗಳು "ಮಕ್ಕಳ ಬಾಲ್ಯದ ಪರಿಸರವನ್ನು ಗಮನಾರ್ಹವಾಗಿ ಸಮೃದ್ಧವಾಗಿಸಿದರೆ ಮಕ್ಕಳ ಬೌದ್ಧಿಕ/ಗ್ರಹಣಶಕ್ತಿ ಮತ್ತು ಇತರ ಸಾಮರ್ಥ್ಯಗಳ ಬೆಳವಣಿಗೆ ಗಣನೀಯವಾಗಿ ಹೆಚ್ಚುತ್ತದೆ" ಎಂಬುದನ್ನು ತಿಳಿಸುತ್ತವೆ. ಅಬೋಡ್ (೨೦೦೬) ಅವರ ಅಧ್ಯಯನದಿಂದ ತಿಳಿದ ಅಂಶವೆಂದರೆ, ಶಾಲಾ ಪೂರ್ವ ಶಿಕ್ಷಣವನ್ನು ಪಡೆದ ಮಗು ಶಾಲಾ ಪೂರ್ವ ಶಿಕ್ಷಣ ಪಡೆಯದ ಮಗುವಿಗಿಂತ "ಪದಸಂಪತ್ತು, ಆಡುಮಾತಿನಲ್ಲಿ ವಿವೇಚನೆ, ಮಾತಾಡದೇ ಮಾಡುವ ವಿವೇಚನೆ ಮತ್ತು ಶಾಲಾ ಸಿದ್ಧತೆಯಂತಹ ಅಂಶಗಳಲ್ಲಿ ಉತ್ತಮ ಸಾಧನೆಯನ್ನು ತೋರ್ಪಡಿಸುತ್ತಾನೆ." ಇದೇ ರೀತಿಯ ಫಲಿತಾಂಶವನ್ನು ಸಂಶೋಧಕರಾದ ಮೆಗ್ನುಸನ್, ಮೆಯರ್ಸ್, ರುಮ್, ವಲ್ಡ್ ಫೋಜೆಲ್ (೨೦೦೪) ಅವರ

[1] ಅಸರ್ ವರದಿ (೨೦೦೭-೨೦೧೨), PISA ವರದಿ (೨೦೧೨)

ಅಧ್ಯಯನಗಳು ತಿಳಿಸುತ್ತವೆ, ಇವರುಗಳು ಕಂಡುಕೊಂಡ ಅಂಶವೆಂದರೆ, "ಯಾವ ಮಗು ಶಾಲೆಗೆ ಸೇರುವ ಒಂದು ವರ್ಷಕ್ಕೆ ಮುನ್ನ ಶಾಲಾಪೂರ್ವ ಕಲಿಕಾ ಶಾಲೆಗಳಲ್ಲಿ ಅಥವಾ ಕೇಂದ್ರಗಳಲ್ಲಿ ಕಲಿಯುತ್ತದೆಯೋ ಅಂತಹ ಮಗು ಕಿಂಡರ್ ಗಾರ್ಟನ್ ಅಥವಾ ಅಂಗನವಾಡಿಗಳಂತಹ ಶಾಲೆಗಳಲ್ಲಿ ಓದುವ ಮತ್ತು ಗಣಿತದ ಸಾಮರ್ಥ್ಯಗಳಲ್ಲಿ ಅವುಗಳಿಗೆ ಸಂಬಂಧಿಸಿದ ಹಲವಾರು ಅಂಶಗಳನ್ನು ನಿಯಂತ್ರಿಸಿದರೂ ಉತ್ತಮ ಸಾಧನೆಯನ್ನು ಮಾಡುತ್ತದೆ. ಅಲ್ಲದೇ ಶೈಕ್ಷಣಿಕ ಕೌಶಲ್ಯಗಳಲ್ಲಿಯೂ ಹೆಚ್ಚಿನ ಸಾಧನೆಯನ್ನು ಮಾಡಿರುವುದು ಕಂಡುಬಂದಿದೆ. ಈ ಅನುಕೂಲಗಳು ಮಗು ಕಿಂಡರ್ ಗಾರ್ಟನ್ ಅಥವಾ 1 ನೇ ತರಗತಿಗೆ ಹೋದಾಗ ಅವರ ಕೌಶಲ್ಯಗಳನ್ನು ಪರಿಗಣನೆ ಮಾಡುವಾಗಲೂ ಮಗುವಿಗೆ ಪ್ರಬುದ್ಧವಾದ ನೆರವನ್ನು ನೀಡುತ್ತದೆ. ಯಾವ ಮಗು ಶಾಲಾ ಪೂರ್ವ ಶಿಕ್ಷಣ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತದೆಯೋ ಅದು ಕಿಂಡರ್ ಗಾರ್ಟನ್‌ಗಳಂತಹ ಶಾಲೆಗಳಿಗೆ ಹೋದರೂ ತಾನು ಈ ಹಿಂದೆ ಗಳಿಸಿದ ಕೌಶಲ್ಯಗಳನ್ನು ಹಾಗೇ ಮುಂದುವರಿಸಿಕೊಂಡು ಹೋಗುತ್ತದೆ. ಆದರೆ, ಹಿಂದುಳಿದ ಗುಂಪಿನ ಮಕ್ಕಳಲ್ಲಿ ಇಂತಹ ಪರಿಣಾಮಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಸಿಗುವುದಿಲ್ಲ. ಈ ಒಂದು ಸಾಧ್ಯತೆಗಳಿಂದ ಶಾಲಾಪೂರ್ವ ಶಿಕ್ಷಣವನ್ನು ಉತ್ತೇಜಿಸುವ ಶೈಕ್ಷಣಿಕ ಯೋಜನೆಗಳು ಹಿಂದುಳಿದ ಕುಟುಂಬಗಳಿಂದ ಬಂದ ಮಕ್ಕಳ ಶಾಲಾಪೂರ್ವ ಶಿಕ್ಷಣದ ಮೇಲೆ ಗಮನ ಹೆಚ್ಚಿಸಿದಷ್ಟೂ ಶಾಲಾ ಉಳ್ಳವರ ಮತ್ತು ಬಡವರ ಮಕ್ಕಳಲ್ಲಿ ಇರುವ ಆರಂಭಿಕ ಸಿದ್ಧತೆಗಳಲ್ಲಿನ ಅಂತರವನ್ನು ಕಡಿಮೆಮಾಡಲು ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಅಕ್ಷರ ಫೌಂಡೇಷನ್-ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮವನ್ನು ರಚಿಸಲಾಗಿತ್ತು.

## 'ಅಕ್ಷರ' ಕಾರ್ಯಕ್ರಮದ ಅನುಭವ

'ಅಕ್ಷರ' ಎಂಬ ಕಾರ್ಯಕ್ರಮ ಶಾಲಾ ಪೂರ್ವಸಿದ್ಧತಾ ಕಾರ್ಯಕ್ರಮವೆಂಬ ಹೆಸರಿನಲ್ಲಿ 2006-2007 ರಲ್ಲಿ ಬೆಂಗಳೂರಿನಲ್ಲಿ ಸುಮಾರು 200 ಸಮಗ್ರ ಶಿಶು ಅಭಿವೃದ್ಧಿ ಯೋಜನೆ (Integrated Child Development Service centres (ICDS)) ಅಂದರೆ ಅಂಗನವಾಡಿಗಳಂತಹ ಸಂಸ್ಥೆಗಳಲ್ಲಿ ಹಣ ಸಂದಾಯ ಪಡೆದು ಕೆಲಸಮಾಡುವ ಶಿಕ್ಷಕರನ್ನಿಟ್ಟು ಪ್ರತಿ ದಿನವೂ ಎರಡು ಗಂಟೆಗಳ ಕಾಲ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಿತು.

2009 ರ ಹೊತ್ತಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರಿಂದ ಪರಿಚಯಿಸಲ್ಪಟ್ಟ ಪಠ್ಯಕ್ರಮಕ್ಕೆ ಅನುಗುಣವಾದ ಬೆಳವಣಿಗೆಗೆ ಸೂಕ್ತ ಆಟದ ಆಧಾರವಾದ ಪಠ್ಯಕ್ರಮವನ್ನು ಅಂಗನವಾಡಿಗಳಲ್ಲಿ ಕಾರ್ಯರೂಪಕ್ಕೆ ತಂದು ಮಕ್ಕಳಿಗೆ ಬೋಧನಾ ಕಲಿಕಾ ಸಾಮಗ್ರಿಗಳ ನೆರವನ್ನು ನೀಡುವುದರೊಂದಿಗೆ 'ಶಾಲಾ ಪೂರ್ವಸಿದ್ಧತಾ ಕಾರ್ಯಕ್ರಮ' ಎಂಬ ಹೆಸರಿಗೆ ಬದಲಾಗಿ ಶಾಲಾಪೂರ್ವ ಶಿಕ್ಷಣ ಕಾರ್ಯಕ್ರಮ' ಎಂಬ ಹೆಸರಿನಲ್ಲಿ ಅದನ್ನು ಪುನರ್ವಿನ್ಯಾಸಗೊಳಿಸಲಾಯಿತು.

ಈ ಕಾರ್ಯಕ್ರಮವು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸಲು ಮಗು ಕೇಂದ್ರಿತ, ಆಟ ಆಧಾರಿತ ಕಲಿಕೆಗೆ ಪೂರಕವಾಗುವಂತೆ ಯಾವ ರೀತಿಯಾದ ಬೋಧನಾ ಕಲಿಕಾ ಸಾಮಗ್ರಿಗಳನ್ನು ಉಪಯೋಗಿಸಬೇಕು ಹಾಗು ಹೇಗೆ ಮಗುವಿನ ಕಲಿಕಾ ಸಾಧನೆಯನ್ನು ಮೌಲ್ಯಮಾಪನ ಮಾಡಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಯಿತು ಇದರೊಂದಿಗೆ, ಪುನರ್ವಿನ್ಯಾಸಗೊಂಡ ಈ ಕಾರ್ಯಕ್ರಮವು ಅಂಗನವಾಡಿಗಳಿಗೆ ಸಮುದಾಯ ಬೆಂಬಲವಾಗಿರುವ ಬಾಲ ವಿಕಾಸ ಸಮಿತಿಗೆ ಮಾರ್ಗದರ್ಶನದ ಪಟ್ಟಿಯನ್ನು ಸಿದ್ಧಪಡಿಸಿತು ಮತ್ತು ಅದರ ಬಾಲ ವಿಕಾಸ ಸಮಿತಿ (BVS) ಸದಸ್ಯರಿಗೆ ಶಾಲಾಪೂರ್ವ ಶಿಕ್ಷಣದ ತರಬೇತಿ ನೀಡಲಾಯಿತು.

ಅಕ್ಷರ ಕಾರ್ಯಕ್ರಮವನ್ನು ಬೆಂಗಳೂರಿನ ಅಧಿಸೂಚಿಸದಿರುವ ಕೊಳಚೆ ಪ್ರದೇಶದಲ್ಲಿ (ಒಂದು ಕ್ರಿಯಾ ಸಂಶೋಧನೆಯ ಯೋಜನೆಯಾಗಿ); ಮಹಿಳಾ ಉದ್ಯಮಿಗಳು ಖಾಸಗೀ ಆರಂಭಿಕ ಬಾಲ್ಯದ ಶಿಕ್ಷಣ ನಡೆಸುತ್ತಿರುವ ಬಾಲವಾಡಿ ಕೇಂದ್ರಗಳಲ್ಲಿ; ಮತ್ತು ಹಾಗೆಯೇ ತೃತೀಯ ಕೆಲಸಗಾರರ ಮಾದರಿಯಲ್ಲಿ[2] ಅಂಗನವಾಡಿ ಕೇಂದ್ರಗಳ ಜೊತೆಗೂಡಿ ಜಾರಿಗೆತರಲಾಯಿತು. ಆದರೂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಅಂಗನವಾಡಿ ಕೇಂದ್ರಗಳಲ್ಲಿ ಜಾರಿಗೆ ತಂದ ಕಾರ್ಯಕ್ರಮವು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬಂತು. ಅದೇ ಪ್ರಸ್ತುತ ಅಧ್ಯಯನದ ಮುಖ್ಯ ಗುರಿಯಾಗಿದೆ.

## ಅಕ್ಷರ ಶಾಲಾಪೂರ್ವ ಶಿಕ್ಷಣ ಕಾರ್ಯಕ್ರಮ

ಅಕ್ಷರ ಎಂಬ ಶಾಲಾಪೂರ್ವ ಶಿಕ್ಷಣ ಕಾರ್ಯಕ್ರಮದ ಮುಖ್ಯ ಉದ್ದೇಶವೇನೆಂದರೆ, ಉತ್ತಮ ಗುಣಮಟ್ಟದ ಬೋಧನಾ ಸಾಮಗ್ರಿಗಳನ್ನು ನೀಡಿ ಶಿಕ್ಷಕರಲ್ಲಿ ಸಾಮರ್ಥ್ಯವನ್ನು ಬೆಳೆಸಿ ಒಂದು ಸಂರಚನಾತ್ಮಕವಾದ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮವನ್ನು ಜಾರಿಗೆ ತರುವುದು. ಈ ಉದ್ದೇಶಕ್ಕಾಗಿ ಈ ಕಾರ್ಯಕ್ರಮದಡಿಯಲ್ಲಿ ತರಬೇತಿ ಪಡೆದ ಶಿಕ್ಷಕರು

[2]ಹೆಚ್ಚಿನ ಪರಾಮರ್ಶನೆಗೆ www.akshara.org.in ನೋಡಿ.

ಈ ಸಂಸ್ಥೆಗಳಲ್ಲಿ ಪ್ರತಿ ದಿನ 90 ನಿಮಿಷ ಶಾಲಾ ಪೂರ್ವ ಶಿಕ್ಷಣ ನೀಡಬೇಕು, ಅಲ್ಲದೇ ಇದಕ್ಕೆ ನೆರವಾಗಿ ಮಕ್ಕಳ ವಿವಿಧ ಸಾಮರ್ಥ್ಯಗಳ ಬೆಳವಣಿಗೆಗೆ ಪೂರಕವಾದ ಉತ್ತಮ ವಿನ್ಯಾಸದ ಸಂಶೋಧನಾಧಾರಿತವಾಗಿ ರಚಿತವಾದ ಬೋಧನಾ ಸಾಮಗ್ರಿಯನ್ನು ನೀಡಲಾಯಿತು. ಇದರೊಂದಿಗೆ ಈ ಕಾರ್ಯಕ್ರಮವು ಬೋಧಕರಿಗೆ ತರಬೇತಿಯನ್ನು ನೀಡುವ ಮತ್ತು ಮೇಲ್ವಿಚಾರಣೆ ನಡೆಸುವ ಸದೃಢ ವ್ಯವಸ್ಥೆ ಇತ್ತು, ಅಲ್ಲದೆ ಬಾಲ ವಿಕಾಸ ಸಮಿತಿಯನ್ನು ರಚಿಸುವ ಮೂಲಕ ಸಮುದಾಯದ ಪಾಲ್ಗೊಳ್ಳುವಿಕೆಗೆ ಬದ್ಧವಾಯಿತು.

## ಯೋಜನೆಯ ನಾಲ್ಕು ಪ್ರಮುಖ ಅಂಗಭಾಗಗಳು.

1. **ಶಾಲಾ ಸಿದ್ಧತೆಯ ಸಾಮಗ್ರಿಗಳು/ಬೋಧನಾ – ಕಲಿಕಾ ಸಾಮಗ್ರಿ:** 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಆರಂಭಿಕ ಬಾಲ್ಯದ ಶಿಕ್ಷಣದ ಪಠ್ಯಕ್ರಮವು ಚಟುವಟಿಕೆ ಆಧಾರಿತವಾಗಿರಬೇಕು, ಶಿಕ್ಷಣವು ಶಿಶು ಕೇಂದ್ರಿತವಾಗಿರಬೇಕು, ಆರಂಭಿಕ ಬಾಲ್ಯ ಶಿಕ್ಷಣ ಪಡೆಯುವ ಮಗುವಿನ ವಯಸ್ಸಿಗೆ ಸಮರ್ಪಕವಾಗಿರಬೇಕು, ಮಗುವಿನ ಸರ್ವಾಂಗೀಣ ಬೆಳವಣಿಗೆಯ ಗುರಿಯನ್ನು ಹೊಂದಿರಬೇಕು ಸ್ಥಳಯ ಪರಿಸ್ಥಿತಿಗೆ ತಕ್ಕಂತೆ ಅಳವಡಿಕೆಯಾಗಿರಬೇಕು ಹಾಗೂ ನಮ್ಯವಾಗಿರಬೇಕು ಎಂದು ಹೇಳುತ್ತದೆ. ಅಲ್ಲದೇ, ಕಲಿಕಾ ಸಾಮಗ್ರಿಯು ಆಟ ಮತ್ತು ಕಲಿಕೆಗೆ ಅಗತ್ಯವಿರುವಷ್ಟು ಇರುವುದಿಲ್ಲ ಮತ್ತು ಈ ಆಟಿಕೆಗಳನ್ನು ಕಲಿಕಾ ಉದ್ದೇಶಕ್ಕೆ ಬಳಸದೇ ಪ್ರದರ್ಶನಕ್ಕೆ ಹೆಚ್ಚು ಬಳಸಲಾಗುತ್ತದೆ. ಕರ್ನಾಟಕ ರಾಜ್ಯದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ICDS) ಸಂಪನ್ಮೂಲ ಪುಸ್ತಕಗಳು ಮತ್ತು ವಿಶಿಷ್ಟವಾದ ಆಟದ ಸಾಮಗ್ರಿಗಳನ್ನು ಒದಗಿಸಿತ್ತು. ಇವುಗಳಗೂ ಮತ್ತು ಕಲಿಕಾ ಉದ್ದೇಶಗಳಿಗೆ ಸಂಬಂಧ ಕಲ್ಪಿಸಬೇಕಿತ್ತು. ಆದರೆ, ಅಕ್ಷರಾ ಕಾರ್ಯಕ್ರಮವು ಈ ರಚನಾತ್ಮಕ ಬೋಧನಾ ಕಲಿಕಾ ಸಾಮಗ್ರಿಗಳಲ್ಲಿ ಕೆಲವೊಂದು ಕೊರತೆ ಕಂಡುಕೊಂಡಿತು. ಈ ಕೊರತೆಯನ್ನು ನೀಗಿಸಲು ಅಕ್ಷರ ಯೋಜನೆಯು ಹೊಸದಾದ ಮತ್ತು ಕಡಿಮೆ ವೆಚ್ಚದ ಬೋಧನಾ ಸಾಮಗ್ರಿಗಳ ಕಿಟ್ ಅನ್ನು ರಚಿಸಿತು. ಕರ್ನಾಟಕ ರಾಜ್ಯ ಶಿಶು ಅಭಿವೃದ್ಧಿ ಪರಿಷತ್, ರಾಷ್ಟ್ರೀಯ ಜನ ಸಹಯೋಗ ಮತ್ತು ಶಿಶು ಅಭಿವೃದ್ಧಿ ಸಂಸ್ಥೆ ಮತ್ತು ಸಮಗ್ರ ಶಿಶು ಅಭಿವೃದ್ಧಿ ಸೇವಾ ಕೇಂದ್ರ ಇವುಗಳೊಡನೆ ಸಮಾಲೋಚನೆ ನಡೆಸಿ ಈ ಬೋಧನಾ ಕಿಟ್‌ನಲ್ಲಿ ಸುಮಾರು 40 ಬಗೆಯ ವಸ್ತುಗಳನ್ನು ಇಡಲಾಗಿದ್ದು, ಅವುಗಳನ್ನು ಎಲ್ಲಾ ಅಂಗನವಾಡಿ ಕೇಂದ್ರಗಳು ಬಳಸುವಂತೆ ನೋಡಿಕೊಳ್ಳಲಾಯಿತು. ಈ ಕಿಟ್ ಮಗು ಕೇಂದ್ರಿತ, ಚಟುವಟಿಕೆ ಆಧಾರಿತ ಕಲಿಕಾ ಪದ್ಧತಿ, ಮಗುವಿನ ಸ್ವ ಕಲಿಕೆಗೆ ಮತ್ತು ಗುಂಪಿನಲ್ಲಿ ಕಲಿಯಲು ಬೆಂಬಲಿಸುವಂತದ್ದಾಗಿದ್ದವು.

2. **ಸಾಮರ್ಥ್ಯಾಭಿವೃದ್ಧಿ:** ಅಂಗನವಾಡಿ ಕಾರ್ಯಕರ್ತೆಯರು ಅಲ್ಲಿನ ಶಾಲಾಪೂರ್ವ ಶಿಕ್ಷಕರಾಗಿ ಕೆಲಸ ಮಾಡುವವರು. ಇವರಿಗೆ ತರಬೇತಿ ಇರುವುದಿಲ್ಲ ಮತ್ತು ಕ್ರಮಬದ್ಧ ಆರಂಭಿಕ ಬಾಲ್ಯದ ಶಿಕ್ಷಣದ ಬೋಧನಾ ಪದ್ಧತಿಯ ಜ್ಞಾನವಿಲ್ಲದವರಾಗಿರುತ್ತಾರೆ. ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಅವರ ಸಾಮರ್ಥ್ಯಾಭಿವೃದ್ಧಿಯನ್ನು ಬಲಪಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

   ಈ ತರಬೇತಿಯು ಮುಖ್ಯವಾಗಿ ಮಕ್ಕಳನ್ನು ವಯಸ್ಸಿಗೆ ಅನುಗುಣವಾಗಿ ವಿಂಗಡಣೆ ಮಾಡುವುದು, ತರಗತಿಯ ನಿರ್ವಹಣೆ ಮತ್ತು ಮಕ್ಕಳಿಗೆ ನಿರಂತರ ಮೌಲ್ಯಮಾಪನಕ್ಕೆ ಅವಶ್ಯಕವಾಗಿರುವ ಕಲಿಕಾ ಸಾಮಗ್ರಿಗಳ ಬಳಕೆಯ ಕಡೆಗೆ ಹೆಚ್ಚು ಕೇಂದ್ರೀಕೃತವಾಗಿತ್ತು. ಅದರೊಂದಿಗೆ ICDS ಮೇಲ್ವಿಚಾರಕಾ ಸಿಬ್ಬಂದಿಗೆ ಓರಿಯಂಟೇಷನ್ ತರಬೇತಿ ನೀಡುವುದು ಅಂಗನವಾಡಿ ಕಾರ್ಯಕರ್ತೆಯರಿಗೆ ನಿರಂತರ ಬೆಂಬಲವನ್ನು ನೀಡುವುದನ್ನೂ ಒಳಗೊಂಡಿತ್ತು.

3. **ಬಾಲ ವಿಕಾಸ ಸಮಿತಿಯನ್ನು ಚುರುಕುಗೊಳಿಸುವುದು:** ಅಕ್ಷರ ಕಾರ್ಯಕ್ರಮವು ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿಯನ್ನು ನೀಡುವುದಲ್ಲದೇ ಬಾಲ ವಿಕಾಸ ಸಮಿತಿ(ಬಿವಿಎಸ್) ಸದಸ್ಯರಿಗೆ ಬೆಂಬಲಯುತವಾದ ಪಾತ್ರ ಮತ್ತು ಅಂಗನವಾಡಿಯ ಹಂತದಲ್ಲಿ ಕಾಣಿಸಿಕೊಳ್ಳುವ ತೊಡಕುಗಳನ್ನು ಗುರುತಿಸುವುದು ಮತ್ತು ಸಾಮೂಹಿಕವಾಗಿ ಪ್ರಯತ್ನಗಳನ್ನು ಮಾಡುವುದರ ಮೂಲಕ ಅವುಗಳಿಗೆ ಸ್ಥಳೀಯವಾಗಿ ಪರಿಹಾರಗಳನ್ನು ಕಂಡುಹಿಡಿಯಬಹುದಾದ ವಿಧಾನಗಳ ಬಗ್ಗೆಯನ್ನು ತಿಳಿಸಲಾಗುತ್ತಿತ್ತು.

4. **ಕಲಿಕಾ ಫಲಿತಾಂಶಗಳನ್ನು ಅಳೆಯುವುದು/ಮೌಲ್ಯಮಾಪನ:** ಮಕ್ಕಳ ಕಲಿಕೆ /ಬೆಳವಣಿಗೆ ಅಳೆಯುವ ಉದ್ದೇಶದಿಂದ ಮಕ್ಕಳ ವಯೋನಿರ್ದಿಷ್ಟ ಫಲಿತಾಂಶ ಸೂಚಕಗಳನ್ನು ರಚಿಸಿತು. ಈ ಮೌಲ್ಯಮಾಪನ ಸಾಧನವು ಚಟುವಟಿಕೆ ಆಧಾರಿತವಾಗಿದ್ದು, ಮಕ್ಕಳ ಬೆಳವಣಿಗೆಯ ಎಲ್ಲ ಕ್ಷೇತ್ರಗಳನ್ನು ಪರಿಗಣಿಸುವ ಎಲ್ಲಾ ರೀತಿಯ ಪ್ರಮುಖ ಕೌಶಲ್ಯಾಧಾರಿತವಾದ ಸೂಚಕಗಳನ್ನು ಒಳಗೊಂಡಿತ್ತು. ಯೋಜನೆಯು ಎಲ್ಲ ಮಕ್ಕಳ ಪೂರ್ವ ಮತ್ತು ಅಂತಿಮ ಮೌಲ್ಯಮಾಪನ ಮಾಡಿ ನಿರ್ಣಯ ತೆಗೆದುಕೊಳ್ಳುತ್ತಿತ್ತು.

### ಅಂಗನವಾಡಿ ಶಾಲಾ ಪೂರ್ವ ಶಿಕ್ಷಣ ಕಾರ್ಯಕ್ರಮಗಳು

2009 ರಿಂದ 2012 ರ ವರೆಗೆ ಬೆಂಗಳೂರಿನ ಸುಮಾರು 1776 ಅಂಗನವಾಡಿಗಳಲ್ಲಿ ಅಕ್ಷರ ಶಾಲಾಪೂರ್ವ ಶಿಕ್ಷಣ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತಂದಿತು. ಈ ಒಂದು ಅವಧಿಯಲ್ಲಿ ಮಕ್ಕಳ ಸಾಧನೆಯನ್ನು ಅಳೆಯಲಾಯಿತಲ್ಲದೇ ನಿರಂತರ ವೀಕ್ಷಣೆಯನ್ನು ಮಾಡಲಾಯಿತು. ಎಲ್ಲಾ 1776 ಅಂಗನವಾಡಿ ಕಾರ್ಯಕರ್ತೆಯರು ತರಬೇತಿ ಪಡೆದರಲ್ಲದೇ ಸುಮಾರು 14300 ಬಾಲ ವಿಕಾಸ ಸಮಿತಿ (ಬಿವಿಎಸ್) ಸದಸ್ಯರು ಸಹ ತರಬೇತಿಯನ್ನು ಪಡೆದರು.

2012 ರಲ್ಲಿ, ದೆಹಲಿಯ ಅಂಬೇಡ್ಕರ್ ವಿಶ್ವವಿದ್ಯಾಲಯದ ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಅಭಿವೃದ್ಧಿ ಕೇಂದ್ರ (CECED)ವನ್ನು ಅಕ್ಷರ ಫೌಂಡೇಷನ್ ಬೆಂಗಳೂರು ನಗರ ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ನಡೆಸಿದ ಶಾಲಾಪೂರ್ವ ಶಿಕ್ಷಣದ ಸ್ವತಂತ್ರ ಮೌಲ್ಯಮಾಪನ ಮಾಡಲು ಆಮಂತ್ರಿಸಿತು. ಆ ಮೌಲ್ಯಮಾಪನದಿಂದ, ಅಕ್ಷರ ಎಂಬ ಕಾರ್ಯಕ್ರಮ ಸ್ವಯಂಪೂರ್ಣವಾಗಿ ಯೋಜಿತವಾಗಿದ್ದು ತನ್ನ ಉದ್ದೇಶಗಳಿಗೆ ತಕ್ಕಂತೆ ಎಲ್ಲಾ ಪ್ರಮುಖ ಅಂಶಗಳನ್ನು ಅಂದರೆ, ಬೋಧನಾ ಕಲಿಕಾ ಸಾಮಗ್ರಿಗಳು, ಕಲಿಕಾ ಪರಿಸರ, ಎಲ್ಲಾ ಹಂತದ ಕಾರ್ಯಕರ್ತೆಯರಿಗೂ ಯೋಗ್ಯವಾದ ತರಬೇತಿ, ಕಾರ್ಯಕ್ರಮದ ನಿರಂತರ ವೀಕ್ಷಣೆ, ಸಮುದಾಯದ ಪಾಲ್ಗೊಳ್ಳುವಿಕೆ ಸೇರಿದಂತೆ ವ್ಯವಸ್ಥಿತ ಸುಧಾರಣೆ ಯೋಜನೆಯೊಂದಿಗೆ ಪ್ರಬಲವಾದ ಚೌಕಟ್ಟನ್ನು ಹೊಂದಿದೆ ಎಂಬ ಅಂಶ ತಿಳಿದು ಬಂದಿರುತ್ತದೆ.

ಈ ಅಧ್ಯಯನದ ಕೊನೆಯಲ್ಲಿ, "ಈ ಮಾದರಿಯು ಅದನ್ನು ಅಳವಡಿಸಿದ ವಿಶಾಲ ಪರಿಧಿಯ ದೃಷ್ಟಿಯಿಂದ ಪ್ರಶಂಶಾರ್ಹವಾಗಿದೆ ಎಂದು ಹೇಳಿದ್ದಾರೆ. ಈ ಕಾರ್ಯಕ್ರಮದ ಒಂದು ವಿಶಿಷ್ಟವಾದ ಕೊಡುಗೆಯೆಂದರೆ ಅಂಗನವಾಡಿಗಳ ಶ್ರೇಷ್ಠತಾ ಮಟ್ಟವನ್ನು ಅಳೆಯುವ 70 ವಿಶಿಷ್ಟವಾದ ಸೂಚಕಗಳನ್ನು ಒಳಗೊಂಡಿರುವ ಒಂದು ಪಟ್ಟಿಯನ್ನು ತಯಾರಿಸಿರುವುದು ಮತ್ತು ಮಕ್ಕಳ ವಾರ್ಷಿಕ ಸಾಧನೆಯನ್ನು ಅಳೆಯುವ 56 ಸೂಚ್ಯಾಂಕಗಳನ್ನು ಹೊಂದಿರುವ ಮೌಲ್ಯ ಮಾಪನ ಚೌಕಟ್ಟು ತಯಾರಿಸಿರುವುದು. ಈ ಯೋಜನೆಯ ಪರಿಣಾಮಕಾರಿ ಕಾರ್ಯಗಳನ್ನು ಕಂಡ CECEDಯು ಉತ್ತರದಾಯಿತ್ವ ಮತ್ತು ಉತ್ತಮ ಫಲಿತಾಂಶದ ಬಗ್ಗೆ ಗಮನವನ್ನು ಕೇಂದ್ರೀಕರಿಸುವುದು ಅತ್ಯಂತ ಅಗತ್ಯವಾಗಿ ಆಗಬೇಕಾಗಿದ್ದ ಕಾರ್ಯ ಈ ದಿಶೆಯಲ್ಲಿ ಇದೊಂದು ಗಮನಾರ್ಹ ಹೆಜ್ಜೆ ಎಂದು ನಿರ್ಣಯಿಸಿದೆ

ಪ್ರಸ್ತುತ ಅಕ್ಷರ ಅವರ ಆರಂಭಿಕ ಬಾಲ್ಯದ ಶಿಕ್ಷಣ ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯ ಸುಮಾರು 335 ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯರೂಪಕ್ಕೆ ತರಲಾಗಿದೆ. ಈ ಕಾರ್ಯಕ್ರಮದಲ್ಲಿನ ಅನೇಕ ಅಂಶಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಮುಂಬರುವ ತಮ್ಮ ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಸಂಬಂಧಿಸಿದ ಹೊಸ ನೀತಿ ನಿಯಮಗಳಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಆದರೂ ಕೆಲವೊಂದು ತೊಡಕುಗಳನ್ನು. ಅಂದರೆ, ಆರಂಭಿಕ ಬಾಲ್ಯದ ಶಿಕ್ಷಣದ ಪಠ್ಯಕ್ರಮವನ್ನು ಹೇಗೆ ಬೋಧಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು, ಹಲವಾರು ಆಡಳಿತಾತ್ಮಕ ಜವಾಬ್ದಾರಿಗಳನ್ನು ಮತ್ತು ಸಮುದಾಯದ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಅಂಗನವಾಡಿ ಕಾರ್ಯಕರ್ತೆಯರೆ ಶಾಲಾಪೂರ್ವ ಶಿಕ್ಷಣದ ಬೋಧಕರಾಗಿ ಕೆಲಸಮಾಡಬೇಕಾಗಿರುವ ಕಾರಣ ಅದಕ್ಕೆ ಅವರ ಸಾಮರ್ಥ್ಯ ಬೆಳೆಸುವುದು, ಅವರಿಗೆ ಸೇವಾ ಪೂರ್ವ ಮತ್ತು ಸೇವಾ ನಿರತ ತರಬೇತಿ ಒದಗಿಸಲು ಇಲಾಖೆಯಲ್ಲಿ ವ್ಯವಸ್ಥಿತ ಏರ್ಪಾಟು, ನಿಯತವಾಗಿ ಮೇಲ್ವಿಚಾರಣೆ ನಡೆಸುವ ಬಗ್ಗೆ ಮತ್ತು ಸಾಕಷ್ಟು ಮೂಲ ಸೌಕರ್ಯಗಳು ಇಲ್ಲದಿರುವುದು, ಈ ಅಂಶಗಳ ಕಡೆಗೆ ಇನ್ನೂ ಹೆಚ್ಚಿನ ಗಮನಹರಿಸಬೇಕಾದ ಅಗತ್ಯವಿದೆ.

* ಈ ವರದಿಯನ್ನು www.akshara.org.in ವೆಬ್‌ಸೈಟ್‌ನಲ್ಲಿ ನೋಡಬಹುದು


**References**

1. Aboud, F.E. (2006) Evaluation of an early childhood preschool programme in rural Bangladesh
2. Currie, Janet (2000) Early Childhood Intervention Programmes: What do we know?
3. Draft National Early Childhood Care and Education (ECCE) Policy
4. Heckman-, J.J. (2008) Schools, Skills and Synapses, Economic Enquiry
5. Magnuson, A.K., Meyers, M.K., Ruhm, C.J., and Waldfogel, J. (2004) Inequality in Preschool Education and School Readiness.
6. Vaijayanti.K, Bangalore Education Profile - A Report Card -2009, Akshara Foundation, Bangalore



**ವೈಜಯಂತಿ**ಯವರು ಪ್ರಸ್ತುತ ಕರ್ನಾಟಕದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಕೇಂದ್ರೀಕರಿಸಿ ಕೆಲಸ ಮಾಡುತ್ತಿರುವ ಲಾಭದಾಯಕವಲ್ಲದ ಸಂಸ್ಥೆ – ಅಕ್ಷರ ಫೌಂಡೇಷನ್ ನಲ್ಲಿ ಸಂಶೋಧನೆ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಅವರು ಆರಂಭಿಕ ಬಾಲ್ಯದ ಶಿಕ್ಷಣದಿಂದ ಹಿಡಿದು ಶಾಲಾ ಶಿಕ್ಷಣದವರೆಗಿನ ಸಮಸ್ಯೆಗಳನ್ನು ಕುರಿತು ಕೆಲಸಮಾಡುತ್ತಿದ್ದಾರೆ. ಅವರ ಬಹುಪಾಲು ಸಂಶೋಧನೆ ಕೆಲಸ ಶಿಕ್ಷಣ ಕ್ಷೇತ್ರಕ್ಕೆ ಸಾಕ್ಷಿ ಆಧಾರಿತ ಕಾರ್ಯ ನೀತಿ ಸಂಶೋಧನೆಗಳಾಗಿವೆ. ಅವರು ASER – ಕರ್ನಾಟಕದ ಮುಖ್ಯಸ್ಥರಾಗಿದ್ದಾರೆ. ಅವರನ್ನು vaijayanti@akshara.org.in ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ.

# ಹ್ಯಾಂಡ್ಸ್ ಟು ಹಾರ್ಟ್ಸ್ ಇಂಟರ್‌ನ್ಯಾಷನಲ್

ಹ್ಯಾಂಡ್ಸ್ ಟು ಹಾರ್ಟ್ಸ್ ಇಂಟರ್‌ನ್ಯಾಷನಲ್ (ಎಚ್‌ಎಚ್‌ಐ) ಎಂಬುದು ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು ಜಗತ್ತಿನಾದ್ಯಂತ ದುರ್ಬಲ ಮಕ್ಕಳ (೦-೩ ವರ್ಷದ) ಆರೋಗ್ಯ ಮತ್ತು ಬೆಳವಣಿಗೆಯನ್ನು ಕೇಂದ್ರವಾಗಿರಿಸಿ, ತಂದೆತಾಯಿಯರಿಗೆ ಆರಂಭಿಕ ಬಾಲ್ಯದ ಅಭಿವೃದ್ಧಿ (ಇಸಿಡಿ) ಮತ್ತು ಪಾಲನೆ ಪೋಷಣೆ ಕೌಶಲ್ಯಗಳ ಬಗ್ಗೆ ತರಬೇತಿಯನ್ನು ನೀಡುತ್ತಿದೆ.

**ಎಚ್‌ಎಚ್‌ಐ ಏನು ಮಾಡುತ್ತದೆ?**

ಎಚ್‌ಎಚ್‌ಐಯು ಸರಳವಾದ, ಹೊಂದಿಕೊಳ್ಳಬಹುದಾದ, ಕಡಿಮೆ ವೆಚ್ಚದ ಮತ್ತು ಆಯಾ ಸಂಸ್ಕೃತಿಗೆ ಸುಸಂಬಂಧಿತವಾದ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತದೆ. ಈ ತರಬೇತಿಯು ಮಹಿಳೆಯರಿಗೆ/ಪೋಷಕರಿಗೆ ತಮ್ಮ ಮಕ್ಕಳ ಭಾಷೆ, ಸಾಮಾಜಿಕ ಅರಿವು, ಗ್ರಹಣ ಶಕ್ತಿ ಮತ್ತು ದೈಹಿಕ ಬೆಳವಣಿಗೆಗಳನ್ನು ಉತ್ತಮಗೊಳಿಸುವ ಸಾಮರ್ಥ್ಯವನ್ನು ನೀಡುತ್ತದೆ ಹಾಗೂ ಅವರ ಆರೋಗ್ಯ ಮತ್ತು ಪೌಷ್ಟಿಕಾಹಾರದ ತಿಳುವಳಿಕೆಗೆ ಉತ್ತಮ ನೆರವನ್ನು ನೀಡುತ್ತದೆ. ಅಲ್ಲದೇ ಇದು ಬಾಂಧವ್ಯಗಳನ್ನು ಬೆಳೆಸುತ್ತದೆ, ಭವಿಷ್ಯದ ಎಲ್ಲಾ ಸಂಬಂಧಗಳಿಗೆ ಅಗತ್ಯವಿರುವ ಬುನಾದಿಯನ್ನು ಮತ್ತು ಆರೋಗ್ಯಕರ ಸಮಾಜದ ಚೌಕಟ್ಟನ್ನು ಸ್ಥಾಪಿಸುತ್ತದೆ. ಚಿಕ್ಕ ಮಕ್ಕಳ ಬೆಳವಣಿಗೆ ಕುರಿತು ಗುಣಮಟ್ಟದ ಮಾಹಿತಿಯನ್ನು ನೀಡುವುದು ಮತ್ತು ಇದಕ್ಕೂ ಸಂಸ್ಕೃತಿ ನಿರ್ದಿಷ್ಟ ಸಾಧನ, ಸಂಪ್ರದಾಯಗಳು ಮತ್ತು ಆಚರಣೆಗಳಿಗೆ ಸಂಬಂಧ ಕಲ್ಪಿಸುವುದರಿಂದ ಎಚ್‌ಎಚ್‌ಐ ಮಾಹಿತಿಗಳು ಎಲ್ಲಿಯಾದರೂ ಅನ್ವಯವಾಗುತ್ತವೆ, ಮತ್ತು ಸಂಪನ್ಮೂಲ ಅಥವಾ ಸಾಕ್ಷರತೆ ಇರಲಿ ಇಲ್ಲದೇ ಇರಲಿ ಅರ್ಥಪೂರ್ಣವಾಗಿರುತ್ತವೆ.



**ಭಾರತದಲ್ಲಿ ಎಚ್‌ಎಚ್‌ಐ ಯ ಇತಿಹಾಸ**

ಎಚ್‌ಎಚ್‌ಐ ಯು ೨೦೦೬ ರಲ್ಲಿ ದಕ್ಷಿಣ ಭಾರತದಲ್ಲಿ ಅನಾಥಾಶ್ರಮಗಳ ಸಹಭಾಗಿತ್ವದೊಂದಿಗೆ ಕಾರ್ಯ ನಿರ್ವಹಿಸಲು ಆರಂಭಿಸಿತು. ಒಂದು ವರ್ಷದೊಳಗೆ ಭಾರತದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಸಹಾಯಕರನ್ನು ಅಲ್ಲಿಗೆ ಕಳುಹಿಸಲು ಆರಂಭಿಸಿತು. ಇಲ್ಲಿಯವರೆಗೆ ಅಂದಾಜು ೪,೦೦೦ ಕಾರ್ಯಕರ್ತೆಯರು ಎಚ್‌ಎಚ್‌ಐ ನಲ್ಲಿ ಪುಟಾಣಿ ಮಕ್ಕಳ ಬೆಳವಣಿಗೆ ಬಗ್ಗೆ ತರಬೇತಿಯನ್ನು ಪಡೆದಿದ್ದಾರೆ.

ಎಚ್‌ಎಚ್‌ಐ ನ ಮುಖ್ಯ ಕಾರ್ಯನಿರ್ವಹಣಾ ಭಾಗಿದಾರವಾಗಿರುವ ವಿಶ್ವ ಯುವ ಕೇಂದ್ರವು, ಒಂದು ಸಮುದಾಯ ಅಭಿವೃದ್ಧಿ ಸಂಸ್ಥೆಯಾಗಿದ್ದು ಒಡಿಶಾದಲ್ಲಿ ನೆಲೆಯಾಗಿದೆ. ಇದು ಪ್ರಾಥಮಿಕವಾಗಿ ಬಡ ಗ್ರಾಮೀಣ ಜನರೊಂದಿಗೆ ಕೆಲಸ ಮಾಡುತ್ತದೆ.

೨೦೧೨ರಲ್ಲಿ ಭಾರತದ ಮಕ್ಕಳನ್ನು ರಕ್ಷಿಸಿ ಅಭಿಯಾನವು ಎಚ್‌ಎಚ್‌ಐ ಜೊತೆಗೆ ೦-೩ ವರ್ಷದ ಮಕ್ಕಳಿಗಾಗಿ ಆಂಧ್ರಪ್ರದೇಶದಲ್ಲಿ ಮೊದಲ ಬಾರಿಗೆ ತನ್ನ ವಿಧಾನವನ್ನು ಪ್ರಯೋಗಿಸಲು, ಕರಾರು ಮಾಡಿಕೊಂಡಿತು. ಎಚ್‌ಎಚ್‌ಐ ಯು, ಮಕ್ಕಳನ್ನು ರಕ್ಷಿಸಿ ಕಾರ್ಯಕ್ರಮದಲ್ಲಿ ೧೭ ನಿಪುಣ ತರಬೇತುದಾರರಿಗೆ ತರಬೇತಿ ನೀಡಿತು. ತರುವಾಯ ಈ ನಿಪುಣ ತರಬೇತುದಾರರು ಸುಮಾರು ೨೯೨ ಐಸಿಡಿಎಸ್ ಕಾರ್ಯಕರ್ತೆಯರು ಮತ್ತು ೬,೭೦೦ ತಾಯಂದಿರಿಗೆ ತರಬೇತಿ ನೀಡಿದರು, ಇದರಿಂದ ೧೦,೦೦೦ ಕ್ಕಿಂತ ಹೆಚ್ಚಿನ ಬಡ ಶಿಶುಗಳಿಗೆ ಸಾಕಷ್ಟು ಪ್ರಯೋಜನವಾಗಿದೆ.

ಈ ಬಗೆಯ, ವಿವಿಧ ಸಹಭಾಗಿತ್ವದ ಮೂಲಕ ಭಾರತದಲ್ಲಿ ಸುಮಾರು ೨೨,೦೦೦ ಪೋಷಕರು (ಆಶಾ, ಸ್ವಯಂ ನೆರವಿನ ಗುಂಪುಗಳು, ಅನಾಥಾಶ್ರಮದ ಪಾಲನಾ ವರ್ಗದವರು, ಕ್ರೇಷ್ ಕಾರ್ಯಕರ್ತೆಯರು, ಐಸಿಡಿಎಸ್ ಸಿಬ್ಬಂದಿ ವರ್ಗದವರು, ಮತ್ತು ತಾಯಂದಿರು) ತಮಿಳುನಾಡು, ಕೇರಳ, ಒಡಿಶಾ, ದೆಹಲಿ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ನಡೆದ ಎಚ್‌ಎಚ್‌ಐ ನ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಎಚ್‌ಎಚ್‌ಐ ತರಬೇತಿಯ ಪ್ರಯೋಜನಗಳು**

**ಮಕ್ಕಳಿಗಾಗಿ**

- ಕಾಯಿಲೆ ಮತ್ತು ಮಾನಸಿಕ ಒತ್ತಡಗಳ ಪ್ರಮಾಣ ಕಡಿಮೆಯಾಗಿವೆ.
- ಮಕ್ಕಳ ತೂಕ ಮತ್ತು ಪೌಷ್ಟಿಕತೆಯ ಸ್ಥಿತಿ ಉತ್ತಮಗೊಂಡಿವೆ.
- ಪೋಷಕರೊಂದಿಗೆ ಉತ್ತಮ ಬಾಂಧವ್ಯ ಏರ್ಪಟ್ಟಿವೆ.

- ಆರೋಗ್ಯ ಮತ್ತು ಸರ್ವಾಂಗೀಣ ಬೆಳವಣಿಗೆಯು ಉತ್ತಮಗೊಂಡಿವೆ.



**ಮಹಿಳೆಯರಿಗೆ ಮತ್ತು ಪೋಷಕರಿಗಾಗಿ**

- ಆರಂಭಿಕ ಬಾಲ್ಯದ ಅಭಿವೃದ್ಧಿಯಲ್ಲಿ ಶೇ. 35 ರಿಂದ ಶೇ.40 ರವರೆಗೆ ಜ್ಞಾನ ಸಿಗುತ್ತದೆ.
- ಉಗಾಂಡದಲ್ಲಿ ತಮ್ಮ ಮಕ್ಕಳಿಗೆ ಭಾಷೆಗಳನ್ನು ಕಲಿಸುವ ತಾಯಂದಿರ ಸಾಮರ್ಥ್ಯ ಶೇ. 193 ರಷ್ಟು ಹೆಚ್ಚಿದೆ.
- ತಮ್ಮ ಮಗುವಿಗೆ ಆಹಾರ ಉಣಿಸುವಾಗ ಮತ್ತು ಆಟವಾಡುವ ಸಮಯದಲ್ಲಿ ಪರಸ್ಪರ ಸಂಭಾಷಣೆ ನಡೆಸುವ ಕಾಲದಲ್ಲಿ ಗ್ರಹಣಶಕ್ತಿಯ ಬೆಳವಣಿಗೆ ಬಗ್ಗೆ ಪ್ರಚೋದನೆ ಒದಗಿಸುವುದು ಶೇ. 100 ರಷ್ಟು ಹೆಚ್ಚಳಗೊಂಡಿದೆ.
- ಮಕ್ಕಳಿಗೆ ಶಿಕ್ಷೆ ವಿಧಿಸುವುದು ಮತ್ತು ಮಾನಸಿಕ ಒತ್ತಡದ ಪ್ರಮಾಣ ಕಡಿಮೆಯಾಗಿವೆ.
- ಪೌಷ್ಟಿಕ ಆಹಾರ ಯೋಜನೆ ಮತ್ತು ಆಹಾರ ಉಣಿಸುವ ಅಭ್ಯಾಸಗಳು ಸಾಕಷ್ಟು ಸುಧಾರಿಸಿವೆ.

**ಸಮುದಾಯಗಳಗಾಗಿ**

- ಮಹಿಳೆಯರು ಮತ್ತು ಸಮುದಾಯದ ಸದಸ್ಯರನ್ನು ಸಬಲೀಕರಣಗೊಳಸಿದೆ
- ದೀರ್ಘಕಾಲೀನ ಸಾಮಾಜಿಕ ವೆಚ್ಚವನ್ನು ಕಡಿಮೆಗೊಳಸಿದೆ
- ಸಾಮಾಜಿಕ ಒಗ್ಗಟ್ಟನ್ನು ಸುಧಾರಿಸಿದೆ
- ಸಮುದಾಯದಲ್ಲಿ ಮಕ್ಕಳ ಸ್ನೇಹಿ ಒಡನಾಟಗಳು ಹೆಚ್ಚಿವೆ.

**ಸಹಭಾಗಿತ್ವದೊಂದಿಗೆ ಎಚ್‌ಎಚ್‌ಐ ಕಾರ್ಯ ನಿರ್ವಹಣೆ**

ಎಚ್‌ಎಚ್‌ಐ ಯ ಮಾದರಿಯು, ತಮ್ಮ ಸಹಭಾಗಿಗಳ ಮತ್ತು ತಾವು ಸೇವೆ ಸಲ್ಲಿಸುತ್ತಿರುವ ಸಮುದಾಯಗಳ ಅವಶ್ಯಕತೆಗಳಿಗೆ ಮತ್ತು ವಾಸ್ತವ ಸ್ಥಿತಿಗೆ, ಅತ್ಯಂತ ಹೊಂದಿಕೊಳ್ಳುವ ಮತ್ತು ಬಾಗುವ ಗುಣಗಳನ್ನು ಹೊಂದಿದೆ. ತರಬೇತುದಾರರಿಗೆ ತರಬೇತಿ (ಟಿಒಟಿ) ಮಾದರಿಯ ಬಳಕೆಯಿಂದ, ಅನುಪಾಲನಾ ನೆರವಿನೊಂದಿಗೆ ಎಚ್‌ಎಚ್‌ಐ ಕಾರ್ಯಕ್ರಮವು, ಅತ್ಯಂತ ಅನುಕರಣೀಯವಾಗಿದೆ. ಬಡ ಮಕ್ಕಳಿಗಾಗಿ ಆರಂಭಿಕ ಬಾಲ್ಯದ ಅಭಿವೃದ್ಧಿಯ ಅರಿವನ್ನು ಉತ್ತಮಗೊಳಸಲು ತಮ್ಮ ಸಹಭಾಗಿಗಳ ಮತ್ತು ಪೋಷಕರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

**ಎಚ್‌ಎಚ್‌ಐ ನ ಕೆಲಸಗಳಗಿರುವ ಮಾನ್ಯತೆ**

- ಎಳೆಯ ಮಕ್ಕಳ ಏಷ್ಯಾ ಪ್ರಾದೇಶಿಕ ಜಾಲವು, ಒಡಿಶಾದಲ್ಲಿ ಎಚ್‌ಎಚ್‌ಐ ನ ಕಾರ್ಯವನ್ನು ಒಂದು ಭರವಸೆಯ ಪ್ರಯತ್ನವೆಂದು ಸಂಶೋಧನೆ ನಡೆಸಿದೆ. ಈ ಸಂಶೋಧನೆಯ ವರದಿಯು 2011 ರಲ್ಲಿ ಅರ್ನೆಕ್ ರಿಪೋರ್ಟ್(ARNEC report)ನಲ್ಲಿ ಪ್ರಕಟವಾಗಿದೆ.
- ಫ್ಲೆಚ್ಚರ್ ಸಂಸ್ಥೆ ಯು ಹಣಕಾಸು ನೆರವು ನೀಡುತ್ತಿರುವ ಎಚ್‌ಎಚ್‌ಐ ನ ಕಾರ್ಯಕ್ರಮಗಳ ಮೌಲ್ಯಮಾಪನ ಒಡಿಶಾದಲ್ಲಿ ನಡೆಯುತ್ತಿದೆ.
- 2011–2013ರಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಸಂಬಂಧಿಸಿದಂತೆ ಯುನೇಸ್ಕೊ(UNESCO Asia)ಗೆ ಸಲಹೆಗಾರ ಸಂಸ್ಥೆಯಾಗಿತ್ತು.





# ಭಾರತದ ಆರಂಭಿಕ ಬಾಲ್ಯ ಶಿಕ್ಷಣ ರೆಜ್ ಎಮಿಲಿಯಾ ಸಿದ್ಧಾಂತದ ಸಂಯೋಜನೆ

ನೀನಾ ಕಂಜಿರತ್

೨000ನೇ ಇಸವಿಯ ಆರಂಭದಲ್ಲಿ, ಆರಂಭಿಕ ಬಾಲ್ಯ ಶಿಕ್ಷಣವು ಮಕ್ಕಳ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂಬ ವಿಚಾರವೇ ತೀರ ಹೊಸ ಆಲೋಚನೆಯಾಗಿತ್ತು. ಈ ಕಾರಣದಿಂದ ನಾನು ಗೀತಾ ನಾರಾಯಣನ್ ಅವರನ್ನು ಭೇಟಿಯಾಗಬೇಕಾಯಿತು. ಆಗ ಅವರು ಮಲ್ಯ ಅದಿತಿ ಇಂಟರ್‌ನ್ಯಾಷಲ್ ಶಾಲೆಯ ನಿರ್ದೇಶಕರಾಗಿದ್ದರು. ಅವರು ನಮಗೆ ರೆಜ್ ಎಮಿಲಿಯಾ ಮಾರ್ಗವನ್ನು ಪರಿಚಯ ಮಾಡಿಸಿದರು.

ಇತರ ಎಲ್ಲಾ ಕಲಿಕಾ ವಿಧಾನಗಳಂತೆ ರೆಜ್ ವಿಧಾನ ಉಗಮವಾದದ್ದು ಮತ್ತು ಜನಿಸಿದ್ದು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಮತ್ತು ಪರಿಸರದಲ್ಲಿ. ವಿಶ್ವದ ಅತಿ ವಿಧ್ವಂಸಕ ಎರಡನೇ ಮಹಾಯುದ್ಧದ ನಂತರ ಇಟಲಿಯ ರೆಜ್ ಎಮಿಲಿಯಾ (ಉಚ್ಚಾರಣೆ: ರೆಜ್ ಎಮಿಲಿಯಾ) ಎಂಬ ಪ್ರದೇಶದ ಸುತ್ತಮುತ್ತಲಿರುವ ಗ್ರಾಮಗಳ ಪೋಷಕರೊಂದಿಗೆ ಸೇರಿಕೊಂಡು ಲೋರಿಸ್ ಮೆಲಗುಜ್ಜಿ ಎಂಬ ಶಿಕ್ಷಕಿಯು ಈ ಕಲಿಕಾ ವಿಧಾನವನ್ನು ರೂಪಿಸಿ ಬೆಳೆಸಿದರು. ಮಕ್ಕಳಿಗೆ ಹೊಸ ಕಲಿಕಾ ವಿಧಾನದ ಅಗತ್ಯವಿದೆ ಎಂಬುದು ಇದರ ನಂಬಿಕೆಯಾಗಿತ್ತು: ಜನರು ಪುಟ್ಟ ಮಕ್ಕಳಾಗಿದ್ದಾಗ ತಮ್ಮದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ, ಮೇಲಾಗಿ ಅಂತಹ ಮಕ್ಕಳು ನೂರಾರು ಭಾಷೆಗಳಿಂದ ಸಂಪನ್ನರಾಗಿರುತ್ತಾರೆ ಎನ್ನುವುದು ಈ ವಿಧಾನದ ಕಲ್ಪನೆ. ಜನರ ದೈನಂದಿನ ಜೀವನದಲ್ಲಿ ಶಿಕ್ಷಣವನ್ನು ಹೇಗೆ ಸದ್ಬಳಕೆ ಮಾಡಬೇಕು ಎನ್ನುವುದು ಈ ವಿಧಾನದ ಗುರಿಯಾಗಿದೆ. ಈ ಕಾರ್ಯಕ್ರಮವು ಗೌರವ, ಜವಾಬ್ದಾರಿ ಮತ್ತು ಸಮುದಾಯವೆಂಬ ತತ್ವಗಳ ಆಧಾರದ ಮೇಲೆ ರೂಪುಗೊಂಡಿದೆ. ಸಂಶೋಧನೆ ಮತ್ತು ಆವಿಷ್ಕಾರಗಳ ಬೆಂಬಲಗಳಿಂದ ಮಕ್ಕಳ ಅಭಿರುಚಿಯನ್ನು ಆಧಾರವಾಗಿರಿಸಿಕೊಂಡು 'ಸ್ವಯಂ-ಮಾರ್ಗದರ್ಶನ ಪಠ್ಯಕ್ರಮ'ದ ಮೂಲಕ ಈ ಕಾರ್ಯಕ್ರಮವನ್ನು ಸಮೃದ್ಧಗೊಳಿಸಲಾಗಿದೆ'.

(ಮೂಲ : ವಿಕಿಪೀಡಿಯ)

ನಮ್ಮ ಪುಟ್ಟ ಮಕ್ಕಳ ಕಲಿಕಾ ಕೇಂದ್ರಗಳಿಗಾಗಿ, ನಮಗೊಂದು ಸಂಪರ್ಕ ದೊರೆತಂತಾಯಿತು. ರೆಜ್‌ನ ಹಲವಾರು ಅಂಶಗಳು ವಿಶೇಷವಾಗಿ "ಸ್ವಯಂ-ಮಾರ್ಗದರ್ಶನ ಪಠ್ಯಕ್ರಮ"ದ ಬಗ್ಗೆ ನಾವು ಸಂತೋಷ ಪಟ್ಟಿದ್ದೆವು. ಇದು ನಮಗೆ ನಮ್ಯತೆ, ಶೋಧಿಸಿ ನೋಡುವ ಅವಕಾಶ, ಸಂಶೋಧನೆ ಮತ್ತು ಸ್ಥಳೀಯ ಅಭಿರುಚಿ ಹಾಗೂ ಪರಿಸ್ಥಿತಿಗಳಿಗೆ ನಮ್ಮನ್ನು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿದೆ. ನಾವು ಇದರ ಒಟ್ಟಾರೆ ಸಿದ್ಧಾಂತವನ್ನು ಆದರದಿಂದ ಸ್ವೀಕರಿಸಿದ್ದೇವೆ.

ರೆಜ್ ಎಮಿಲಿಯಾ ಸಿದ್ಧಾಂತವು ಮುಖ್ಯವಾಗಿ ಈ ಕೆಳಗಿನ ತತ್ವಗಳ ಆಧಾರದಲ್ಲಿ ರೂಪುಗೊಂಡಿದೆ:

- ಮಕ್ಕಳು, ತಮ್ಮ ಕಲಿಕೆ ಯಾವ ದಿಕ್ಕಿನ ಕಡೆಗೆ ಹೋಗಬೇಕು ಎಂಬುದರ ಬಗ್ಗೆ ಒಂದಿಷ್ಟು ನಿಯಂತ್ರಣವನ್ನು ಹೊಂದಿರಬೇಕು.
- ಮಕ್ಕಳು ಸ್ಪರ್ಶಿಸುವುದು, ಚಲಿಸುವುದು/ನಡೆದಾಡುವುದು ಆಲಿಸುವುದು, ನೋಡುವುದು ಮತ್ತು ಕೇಳುವುದು ಮುಂತಾದ ಅನುಭವಗಳ ಮೂಲಕ ಕಲಿಯುವ ಸಾಮರ್ಥ್ಯವನ್ನು ಹೊಂದಿರಬೇಕು.
- ಮಕ್ಕಳು ಇತರ ಮಕ್ಕಳೊಂದಿಗೆ ಹಾಗೂ ಜಗತ್ತಿನ ಭೌತಿಕ ವಸ್ತುಗಳ ಜೊತೆಗೆ ಸಂಬಂಧವನ್ನು ಹೊಂದಿರುತ್ತಾರೆ ಹೀಗಾಗಿ ಅವರು ಅವುಗಳ ಶೋಧನೆ ನಡೆಸಲು ಅವಕಾಶ ಇರಬೇಕು.
- ಮಕ್ಕಳಿಗೆ ತಮ್ಮನ್ನು ತಾವು ಅಭಿವ್ಯಕ್ತಗೊಳಿಸಲು ಕೊನೆಯಿಲ್ಲದಷ್ಟು ಮಾರ್ಗ ಮತ್ತು ಅವಕಾಶಗಳು ಇರಲೇಬೇಕು.

(ಮೂಲ : ವಿಕಿಪೀಡಿಯ)

ರೆಜ್‌ನ, ನಿಬಂದನೆಗಳು ಅತ್ಯಂತ ಹೊಂದಿಕೊಳ್ಳಬಹುದಾಗಿದ್ದು, ಈ ಆ ನಿಬಂದನೆಗಳಂತೆ ಸ್ಥಾಪಿಸಿದ ನಮ್ಮ ಭೌತಿಕ ಆವರಣವನ್ನು ಪರಿಸರವನ್ನು ಮೂರನೇ ಶಿಕ್ಷಕನನ್ನಾಗಿ ಪರಿಗಣಿಸಿ ರೂಪಿಸಿದೆವು. ಇದರಲ್ಲಿ ಮಕ್ಕಳು ಒಂದು ಕಡೆ ಬೆರೆತು ಪರಸ್ಪರ ಸಂಭಾಷಣೆ ನಡೆಸಲು ಅಂಗಳದ ವಿವಿಧ ಮೂಲೆಗಳು, ಒಳಗೆ ಹೊರಗೆ (ಬಾಗಿಲುಗಳಿಲ್ಲದ) ಎಂಬ ತಡೆಗಳಿಲ್ಲದೆ ವಿಲೀನವಾಗುವ ಸ್ಥಳವನ್ನು ಕಲ್ಪಿಸುತ್ತದೆ (ಇಲ್ಲಿ ನಮಗೆ ಬೆಂಗಳೂರಿನ ಹಿತಕರ ವಾತಾವರಣ ಬಹಳ

ಅನುಕೂಲವಾಯಿತು). ಈ ಸ್ಥಳದಲ್ಲಿ ಬೆಳೆಯುತ್ತಿರುವ ತಮ್ಮ ಮಕ್ಕಳನ್ನು ನೋಡಲು ಅವರ ತಂದೆತಾಯಿಯರನ್ನು ಸ್ವಾಗತಿಸಲಾಗುತ್ತದೆ, ಪ್ರತಿಯೊಂದು ವಸ್ತುಗಳನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತದೆ. ಅಲ್ಲದೆ ಇಲ್ಲಿನ ಉದ್ಯಾನವನವು ರಾಸಾಯನಿಕ ವಸ್ತುಗಳಿಂದ ಮುಕ್ತವಾದ, ಮರಗಳಿಂದ ತುಂಬಿದ, ಬೀಳುತ್ತಿರುವ ಎಲೆಗಳು, ಹೂವು, ಹಣ್ಣುಗಳಿರುವ ಸಾವಿರ ಕಾಲಿನ ಹುಳುಗಳು ಆಡುವ ಅಥವಾ ಹೊರಗಿನಿಂದ ಬರುವ ಸ್ಥಳವಾಗಿದೆ. ಈ ವಾತಾವರಣವು ಮಕ್ಕಳನ್ನು ಸ್ವಯಂ ಕಲಿಕೆಗೆ ಪ್ರೋತ್ಸಾಹಿಸುತ್ತದೆ. ಅಲ್ಲದೆ ಅವರು ವಿಷಯಗಳನ್ನು ಪರಸ್ಪರ ಹಂಚಿಕೊಳ್ಳಲು ಮತ್ತು ಸಮಾಲೋಚನೆ ಮಾಡಲು ಅವಕಾಶ ಒದಗಿಸುತ್ತದೆ.

ಆದಷ್ಟು, ಬೇರೂರಿದ ಅಭಿಪ್ರಾಯಗಳಿಂದ ಕೂಡಿದ ಹಿರಿಯರ ಪ್ರಪಂಚವು, ಮಗುವಿನ ಮನಸ್ಸಿನಲ್ಲಿ ಯಾವುದೇ ಪಕ್ಷಪಾತ ಅಥವಾ ಪೂರ್ವಭಾವಿ ಕಲ್ಪನೆಗಳನ್ನು ನೀಡಿ ಅವರ ವ್ಯಕ್ತಿತ್ವವನ್ನು ರೂಪಿಸಲು ಅವಕಾಶವಾಗಬಾರದು ಎಂದು ಗಟ್ಟಿ ಮನಸ್ಸು ಮಾಡಿದ್ದೆವು. ಆದ್ದರಿಂದ ಮಕ್ಕಳು ಹೊರ ಜಗತ್ತಿನ ಸಂಬಂಧಗಳ ಜೊತೆಗೆ ಹರ್ಷದಿಂದಿರಲು ಸಾಧ್ಯವಾಗುವಂಥ ಹಾಗು ಏನನ್ನು ಎದುರಿಸಿದರೂ ತಮ್ಮ ಆತ್ಮವಿಶ್ವಾಸ ಕುಂದದಂತೆ ತಮ್ಮ ಬಗ್ಗೆ ಆಳವಾದ ಜ್ಞಾನ ಮತ್ತು ತಿಳವಳಿಕೆ ಹೊಂದುವಂತಹ ಒಂದು ಪಠ್ಯಕ್ರಮವನ್ನು ನಾವು ಅಭಿವೃದ್ಧಿಗೊಳಿಸಲು ನಾವು ಹೊರೆಟೆವು.

ಮಕ್ಕಳ ನಡುವಿನ ಸಂಭಾಷಣೆಗಳಿಂದ ಅನೇಕ ವಿಷಯಗಳನ್ನು ಕಲಿತು ಅದನ್ನು ದಾಖಲಿಸುವಂತೆ ಶಿಕ್ಷಕರನ್ನು ಪ್ರೋತ್ಸಾಹಿಸಿದೆವು. ಈ ರೆಜ್ ಕಲಿಕೆಯ ಸಿದ್ಧಾಂತದಲ್ಲಿ ನನಗೆ ತುಂಬಾ ಆಸಕ್ತಿಯುಂಟು ಮಾಡಿದ ಅಂಶವೆಂದರೆ ಮಕ್ಕಳ ಯೋಚನೆ ಮತ್ತು ಸಮಸ್ಯೆ ಬಗೆಹರಿಸುವ ಸಾಮರ್ಥ್ಯಗಳನ್ನು ಉತ್ತೇಜಿಸುವ ಪರಿಕಲ್ಪನೆ. ಇದರಿಂದ ಮೂಡಿದ್ದು ಮಾಡಿಕಲಿ ವಿಜ್ಞಾನ ಕಾರ್ಯಕ್ರಮ.

ಪುಸ್ತಕಗಳೇ ರಂಜನೆಯ ಮೂಲವಾಗಿದ್ದ ಪೀಳಿಗೆಯಿಂದ ಬಂದ ನನಗೆ ಓದಿನ ಬಗ್ಗೆ ಪ್ರೀತಿ ಮತ್ತು ಆಸಕ್ತಿಯನ್ನು ಬೆಳೆಸಿಕೊಂಡರೆ ಅದುವೇ ನಮ್ಮಲ್ಲಿ ಸ್ವಯಂ ಕಲಿಕೆಯನ್ನು ಬೆಳೆಸುತ್ತದೆ ಎನ್ನುವುದರ ಬಗ್ಗೆ ಆತ್ಮವಿಶ್ವಾಸವಿದೆ. ನಾನೇ ಬಹಳ ಚಟುವಟಿಕೆಯ ವ್ಯಕ್ತಿ ಆಗಿದ್ದ ಕಾರಣ ಭಾಗಶಃ ಸ್ವಾನುಭವದ ಆಧಾರದ ಮೇಲೆ ಕೈಗೊಂಡ ಇನ್ನೊಂದು ನವೀನ ಪ್ರಯೋಗವೆಂದರೆ, ಮಕ್ಕಳು ತಾವು ಬಯಸಿದಾಗಲೆಲ್ಲಾ ಕುಳಿತುಕೊಳ್ಳಬೇಕು, ನಿಲ್ಲಬೇಕು, ನಡೆಯಬೇಕು, ಮಾತನಾಡಬೇಕು, ತಮಗೆ ಅನಿಸಿದ್ದನ್ನು ವ್ಯಕ್ತಪಡಿಸಬೇಕು ಮತ್ತು ತಮ್ಮ ಕಲಿಕಾ ಏರಿಳಿತವನ್ನು ತಾವೇ ನಿಯಂತ್ರಿಸಿಕೊಳ್ಳುವ ಸಾತಂತ್ರ್ಯ ಅವರಿಗೆ ಇರಬೇಕು. ಮಕ್ಕಳ ಈ ಕ್ರಿಯಾ ಸ್ವಾತಂತ್ರ್ಯವನ್ನು ವೀಕ್ಷಿಸುವುದರಿಂದ ನಮಗೆ ಹಲವಾರು ಆಶ್ಚರ್ಯಕರ ವಿಷಯಗಳನ್ನು ಕಲಿಯುವ ಅವಕಾಶ ಸಿಕ್ಕಿತು. ಶಿಕ್ಷಕರು ಒತ್ತಡ ರಹಿತರಾಗುತ್ತಾರೆ, ಸಭ್ಯತೆ ಮತ್ತು ಪ್ರೀತಿಯಿಂದ ಮಾತನಾಡುತ್ತಾರೆ ಹಾಗೂ ತಮ್ಮ ಸುತ್ತಮುತ್ತ ಇರುವ ಎಲ್ಲರೊಂದಿಗಿನ ಸಂಬಂಧವನ್ನು ಆನಂದಿಸಲು ಆರಂಭಿಸುತ್ತಾರೆ. ಇದರಿಂದ ಅವರಲ್ಲಿ ಶ್ರೇಣಿ ಮನೋಭಾವಗಳು ಮತ್ತು ಬಿಕ್ಕಟ್ಟುಗಳು ದೂರವಾಗುತ್ತವೆ. ಇದು ತಪ್ಪುಗಳನ್ನು ಮಾಡುವುದು ಕೂಡಾ ಒಂದು ಕಲಿಕೆಯ ವಿಧಾನ ಎಂಬುದನ್ನು ತಿಳಿಸುವ ಒಂದು ವಾತಾವರಣವನ್ನು ಸೃಷ್ಟಿಸುತ್ತದೆ. ಇದು ಕೇಳಲು ವಿಚಿತ್ರವೆನಿಸಿದರೂ ಇದು ಶಿಕ್ಷಕರು ಮಾತ್ರವಲ್ಲದೆ ಮಕ್ಕಳಿಗೆ ತುಂಬಾ ಪರಿಣಾಮಕಾರಿಯಾದ ಕಲಿಕಾ ಸಾಧನವಾಗಿದೆ. ಮಕ್ಕಳು ಒಂದೇ ಕಡೆ ಕುಳಿತುಕೊಳ್ಳುತ್ತಿರಲಿಲ್ಲ, ಹಾಗೇನಾದರೂ ಕೂತರೆ ತಾವೇ ಆಯ್ದುಕೊಂಡ ಒಂದು ನಿರ್ದಿಷ್ಟ ಕಾರಣಕ್ಕಾಗಿ ಕುಳಿತು ಕೊಳ್ಳುತ್ತಿದ್ದರು. ಅಗಾಗ್ಗೆ ಗುಂಪು ಬದಲಾಯಿಸುವುದಕ್ಕಾಗಿ, ಅಥವಾ ಕೊಟ್ಟ ಕೆಲಸ ಮುಗಿಸುವುದಕ್ಕಾಗಿ ಅಥವಾ ಊಟ ಮಾಡುವುದಕ್ಕಾಗಿ ಕುಳಿತುಕೊಳ್ಳುತ್ತಿದ್ದರು.ಹೀಗಾಗಿ ಕಲಿಕೆ ಎಂಬುದು ಸಂತೋಷದಾಯಕ ಮತ್ತು ಸಹಜವಾಯಿತು. ಇದಕ್ಕೆ ಸಾಕ್ಷಿಯಾಗಿ ಮಕ್ಕಳ ಕಲರವ ವಾತಾವರಣದಲ್ಲಿ ಮೃದುವಾಗಿ ಹಬ್ಬಿ ಹರಡಿತ್ತು.

ಭಾರತದಲ್ಲಿ ರೆಜ್ ವಿಧಾನದ ಕಲಿಕೆಯನ್ನು ಕಾರ್ಯರೂಪಕ್ಕೆ ತರಲು ಮತ್ತು ಅಳವಡಿಸಿಕೊಳ್ಳಲು ಧೈರ್ಯ ಮತ್ತು ನಂಬಿಕೆಯಿರಬೇಕು. ಅದೇನೆಂದರೆ, "ಎಲ್ಲಾ ಮಕ್ಕಳು ಹಕ್ಕುಗಳನ್ನು ಹೊಂದಿರುತ್ತಾರೆ ಮತ್ತು ಅವು ಸುಂದರ, ಪ್ರಬಲ, ಸಮರ್ಥ, ಕ್ರಿಯಾಶೀಲ, ಕುತೂಹಲಭರಿತರಾಗಿರುತ್ತಾರೆ ಅಲ್ಲದೆ ಸಾಧ್ಯತೆ ಮತ್ತು ಮಹತ್ವಾಕಾಂಕ್ಷೆಯಿಂದ ತುಂಬಿ ತುಳುಕುತ್ತಿರುತ್ತಾರೆ"

(ಮೂಲ: ವಿಕಿಪೀಡಿಯ).

ರೆಜ್ ಎಮಿಲಿಯಾ ಸಿದ್ಧಾಂತವನ್ನು ಅನುಸರಿಸಬೇಕಾದರೆ ಶಿಕ್ಷಕರಿಗೆ ಉತ್ಸಾಹವಿರಬೇಕು ಮತ್ತು ತಮ್ಮ ಸ್ವಂತ ಕಲಿಕೆಯ ಬಗ್ಗೆ ನಿರಂತರ ಆಲೋಚಿಸುವ ಮನೋಭಾವವಿರಬೇಕು. ಇದಕ್ಕೆ ಕಲಿಕಾ ವಿಧಾನ ಮತ್ತು ನಡವಳಿಕೆಗಳಲ್ಲಿ, ಮೂಲಭೂತ ಬದಲಾವಣೆಗಳು ಆಗಬೇಕಾದ ಅಗತ್ಯವಿದೆ. ಏಕೆಂದರೆ ನಮ್ಮ ಬಹುತೇಕ ಕಲಿಕಾ ವಿಧಾನಗಳು ಕಾರ್ಯಾಂತರಗೊಂಡು ವಿತರಿಸಲ್ಪಟ್ಟಿವೆ. ನಮ್ಮ ತರಬೇತಿ ಕಾರ್ಯಕ್ರಮಗಳು ಮಾತ್ರವಲ್ಲ ಬದಲಾಗಿ ನಾವು ಮಕ್ಕಳಾಗಿದ್ದಾಗ ಕಲಿತ ವಿಷಯಗಳೂ ವಿತರಣೆಯಾಗುತ್ತಿವೆ.








**ನೀನಾ** ಅವರು ಬೆಂಗಳೂರಿನ ಆರ್.ಟಿ ನಗರದಲ್ಲಿರುವ ಗಯಿಯಾ ಪ್ರಿಸ್ಕೂಲ್ ಮತ್ತು ಚೈಲ್ಡ್‌ಕೇರ್ ಸೆಂಟರ್‌ನ ನಿರ್ದೇಶಕರಾಗಿದ್ದಾರೆ. ಶಿಕ್ಷಕ ತರಬೇತುದಾರರಾಗಿ, ಪಠ್ಯಕ್ರಮ ರೂಪಿಸುವವರಾಗಿ, ಪ್ರಾಥಮಿಕ ಪೂರ್ವ ಮತ್ತು ಪ್ರಾಥಮಿಕ ಉಪಾಧ್ಯಾಯರಾಗಿ ಅವರಿಗೆ 30 ವರ್ಷಗಳ ಅನುಭವವಿದೆ. ಅವರು ನ್ಯೂಜಿಲೆಂಡ್‌ನ ಕಿಂಡರ್‌ಗಾರ್ಟನ್, ಶ್ರೀಲಂಕಾ ಮತ್ತು ಇಂಡೋನೇಷ್ಯಾದ ಬ್ರಿಟಿಷ್ ಮತ್ತು ಅಮೆರಿಕನ್ ಶಾಲೆಗಳಲ್ಲಿ ಹಾಗೂ ಬೆಂಗಳೂರಿನ ಮಲ್ಯ ಅದಿತಿ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಪ್ರಾಥಮಿಕ ಪೂರ್ವ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಅವರು ಮಲ್ಟಿಮೀಡಿಯಾ ಪಾಠಗಳನ್ನು ರಚಿಸಿ ಇಂಡಿಯಾ ಸ್ಕೂಲ್‌ನೆಟ್‌ನಲ್ಲಿ ಶಿಕ್ಷಕರಿಗೆ ತರಬೇತಿ ನೀಡುತ್ತಿದ್ದಾರೆ. ಇದರಲ್ಲಿ ಅವರು ಬಹು ಸಂವೇದನೆ ವಿಧಾನ (ಮಲ್ಟಿ ಸೆನ್ಸೊರಿಯಲ್ ಅಪ್ರೋಚ್)ವನ್ನು ಬಳಸುತ್ತಾ ಅದರೊಂದಿಗೆ ತರಗತಿಗಳಲ್ಲಿ ತಂತ್ರಜ್ಞಾನದ ಬಳಕೆಯನ್ನೂ ಮಾಡುತ್ತಿದ್ದಾರೆ. ಇವರು ಮಕ್ಕಳಿಗಾಗಿ ಹಲವಾರು ನಾಟಕಗಳನ್ನು ಬರೆದು, ನಿರ್ದೇಶಿಸಿ, ಪ್ರದರ್ಶಿಸಿದ್ದಾರೆ. ಅವರಿಗೆ ಕಲೆ ಮತ್ತು ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ ಬಗ್ಗೆಯೂ ಆಸಕ್ತಿಯಿದೆ. ಅವರು ಬೆಂಗಳೂರು ವೈನ್ ಕ್ಲಬ್‌ನ ಸ್ಥಾಪಕ ಸದಸ್ಯರಾಗಿದ್ದಾರೆ. ಭಾರತದ ಕ್ರಿಸ್ಟೆಲ್ ಹೌಸ್‌ನಲ್ಲೂ (ಅವಕಾಶ ವಂಚಿತ ಮಕ್ಕಳ ಶಾಲೆ) ಅವರು ಕೆಲಸ ಮಾಡಿದ್ದಾರೆ. ಜೊತೆಗೆ ಪಠ್ಯ ರಚನೆ ಮತ್ತು ತರಗತಿ ಅಭ್ಯಾಸದ ಕುರಿತು ಮರು ಚಿಂತನೆ ಮಾಡಲು ಒಯಾಸಿಸ್ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಸಹಾಯ ಮಾಡಿದ್ದಾರೆ. ಅವರನ್ನು ಸಂಪರ್ಕಿಸುವ ವಿಳಾಸ: kanjirath@yahoo.com.



# ಮಕ್ಕಳ ಆಟವೇ ಅವರ ಕೆಲಸ: ಆರಂಭಿಕ ಬಾಲ್ಯ ಶಿಕ್ಷಣದ ಬಗ್ಗೆ ಸ್ಟೈನರ್ ವಾಲ್ಡೊರ್ಫ್‌ರ ದೃಷ್ಟಿಕೋನ

ಜಿ. ಮಣಿವಣ್ಣನ್

ನಿಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳಿ. ನಾವು ಹುಡುಗರು ತುಂಡು ಚಡ್ಡಿಗಳನ್ನು ಧರಿಸಿ, ತರಚಿದ ಮಂಡಿಗಳನ್ನು ಪ್ರದರ್ಶಿಸುತ್ತ, ಕೈಯಲ್ಲಿ ಒಂದು ಕೋಲನ್ನು ಹಿಡಿದುಕೊಂಡು ಅತ್ಯುತ್ಸಾಹದಿಂದ ಹಳೆಯ ಸ್ಕೂಟರ್ ಟಯರ್‌ಗಳನ್ನು ಹೇಗೆಂದರೆ ಹಾಗೆ ಓಡಿಸುತ್ತಿದ್ದೆವು. ನಾವಾಡಿದ ತುಂಟಾಟಗಳಿಗೆ ಲೆಕ್ಕವೇ ಇಲ್ಲ. ಮನೆ ಬಾಗಿಲ ಮೆಟ್ಟಿಲ ಬಳಿ ನಿಂತು "ನದೀ ತೀರದಲ್ಲಿ' ಆಟವನ್ನು ಅದರ ಸಕಲ ವೈವಿಧ್ಯದೊಂದಿಗೆ ಆಡುತ್ತಿದ್ದೆವು. ನೆಲದಲ್ಲಿ ಕುಳಿತುಕೊಂಡು ಐದು ಕಲ್ಲುಗಳೊಂದಿಗೆ, ಹುಣಸೆ ಬೀಜ ಅಥವಾ ಸಮುದ್ರದ ಚಿಪ್ಪುಗಳೊಂದಿಗೆ ಆಟವಾಡಿದ್ದು ಇವೆಲ್ಲವೂ ಖುಷಿ ಕೊಡುವ ನೆನಪುಗಳು. ನಾವು ನಮ್ಮದೇ ಆದ ಗುಂಪುಗಳನ್ನು ಕಟ್ಟಿಕೊಂಡು ಅಲೆದಾಡುತ್ತಾ ಮಾವಿನಕಾಯಿ ಮತ್ತು ಪೇರಳೆ ಹಣ್ಣುಗಳನ್ನು ಕಿತ್ತು ತಿನ್ನುವುದು ಮುಂತಾದ ಸಾಹಸ ಕೃತ್ಯಗಳನ್ನೂ ಮಾಡುತ್ತಿದ್ದೆವು. ನಾವು ಓಡುತ್ತಿದ್ದೆವು, ಆಟವಾಡುತ್ತಿದ್ದೆವು, ನಗುತ್ತಿದ್ದೆವು, ಮರಗಳನ್ನು ಹತ್ತುತ್ತಿದ್ದೆವು ಮತ್ತು ಬೀಳುತ್ತಿದ್ದೆವು. ಬಿದ್ದರೂ ನಾವೇ ಸಾವರಿಸಿಕೊಂಡು ಎದ್ದು ಮತ್ತೆ ಮರ ಏರುವ ಪ್ರಯತ್ನ ಮಾಡುತ್ತಿದ್ದೆವು. ಎಲ್ಲಕ್ಕೂ ಮಿಗಿಲಾಗಿ ಸಾಕಷ್ಟು ಬೆವರುತ್ತಿದ್ದೆವು ಎನ್ನುವುದು ಗಮನಾರ್ಹ. ನಮ್ಮ ಹೆತ್ತವರಿಂದ ಕರೆ ಬಂದ ತಕ್ಷಣ ಮನೆಯೊಳಗೆ ಸೇರಿಕೊಂಡು ಕೈ ಕಾಲು ತೊಳೆದು ಓದುವುದು ಅಥವಾ ಕುಟುಂಬ ಸದಸ್ಯರೊಡನೆ ಒಟ್ಟಿಗೆ ಕುಳಿತುಕೊಂಡು ಸರಳವಾದ ಊಟವನ್ನು ಮಾಡುತ್ತಿದ್ದೆವು. ಆಗ ಟೀವಿ ಅಂದರೇನು ಅಂತಾ ಗೊತ್ತೇ ಇರಲಿಲ್ಲ.

ಆ ಹಳೆಯ ಚಿತ್ರವನ್ನು ಮರೆತು 25 ವರ್ಷ ಮುಂದೆ ಅಂದರೆ ಈಗಿನ ದೃಶ್ಯಕ್ಕೆ ಬನ್ನಿ. ನಗರದ ಜೀವನ ಶೈಲಿಯಿಂದಾಗಿ ರಸ್ತೆಗಳಲ್ಲಿ ಓಡಾಡುವ ಕಾರುಗಳ ಸಂಖ್ಯೆ ದ್ವಿಗುಣಗೊಂಡಿದೆ. ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಿದೆ. ಹಿರಿಯ ಅಣ್ಣಂದಿರು ಅಥವಾ ಅಕ್ಕಂದಿರು ತಮ್ಮ ತಮ್ಮ-ತಂಗಿಯರನ್ನು ನೋಡಿಕೊಳ್ಳದ ಕಾರಣ ಆ ಕೆಲಸವನ್ನು ಮನೆಗೆಲಸದವರು ವಹಿಸಿಕೊಂಡಿದ್ದಾರೆ. ಇಂದಿನ ಅತಿ ನವೀನ ಮತ್ತು ತಂತ್ರ ಜ್ಞಾನ ಆಧಾರಿತ ಆಟಿಕೆಗಳು ಮಕ್ಕಳಿಗೆ ಓಡಾಡಲು ಅಥವಾ ಕ್ರಿಯಾಶೀಲವಾಗಿರಲು ಅವಕಾಶವನ್ನೇ ಕೊಡುತ್ತಿಲ್ಲ ಇವು ಒಂದು ಗುಂಡಿಯನ್ನು ಒತ್ತಿದರೆ ಸಾಕು ಮಾಡಿದ್ದೇ ಮಾಡು ಅಂಥ ಮತ್ತೆ ಮತ್ತೆ ಅದೇ ರೀತಿ ಚಲಿಸುತ್ತಿರುತ್ತವೆ. ಮನೆಯ ಅಜ್ಜಿಯೋ ದೊಡ್ಡಮ್ಮನೋ ಮಾಡಿಕೊಡುತ್ತಿದ್ದ ಬಟ್ಟೆಯ ಗೊಂಬೆಗಳ ಜಾಗವನ್ನು ಬಾರ್ಬಿ ಗೊಂಬೆಗಳು ಆಕ್ರಮಿಸಿಕೊಂಡಿವೆ. ಆಟವಾಡುವ ಜಾಗಗಳು ಸ್ವಚ್ಛ ಮತ್ತು ಸುರಕ್ಷಿತವಾಗಿವೆ ಆದರೆ ಅಲ್ಲಿ ಮಕ್ಕಳ ಕಲ್ಪನೆಗಳು ಅರಳಲು ಆಸ್ಪದವೇ ಇಲ್ಲದಂತಾಗಿದೆ. "ಅಗತ್ಯವೇ ಅನ್ವೇಷಣೆಯ ತಾಯಿ" ಎಂಬ ನಾಣ್ಣುಡಿಗೆ ಈಗ ಬೆಲೆ ಇಲ್ಲದಂತಾಗಿದೆ.

ಬಹಳಷ್ಟು ತಂದೆತಾಯಿಯರು ಮನೆಯಿಂದ ಹೊರಗೆ ಕೆಲಸ ಮಾಡುತ್ತಾ ತಮ್ಮ ಮಕ್ಕಳಿಗೆ ಆದಷ್ಟೂ ಉತ್ತಮವಾದುದನ್ನು ಕೊಡಿಸಿಕೊಡಲು ದುಡ್ಡನ್ನು ಸಂಪಾದನೆ ಮಾಡುವಲ್ಲಿ ನಿರತರಾಗಿದ್ದಾರೆ. ತಂದೆತಾಯಿಯರಲ್ಲಿ ಇತ್ತೀಚೆಗೆ ಬೆಳೆದು ಬಂದ ಇನ್ನೊಂದು ಹೊಸ ಪ್ರವೃತ್ತಿಯೆಂದರೆ ಮಕ್ಕಳ ಬಾಲ್ಯವನ್ನು ಅರ್ಧದಲ್ಲಿಯೇ ಮೊಟಕುಗೊಳಿಸುವ ಧಾವಂತ. ಐದು ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಗ್ರೇಡ್ ಶಾಲೆಗಳಿಗೆ ದಾಖಲೆ ಮಾಡಿಸಿ ತಮ್ಮ ಮಕ್ಕಳನ್ನು ಬಲು ಬುದ್ಧಿವಂತರನ್ನಾಗಿ ಮಾಡುವ ತರಾತುರಿ ತಂದೆತಾಯಿಯರಿಗೆ ಮಾತ್ರವಲ್ಲ ಶಾಲೆಗಳಿಗೂ ಬಂದುಬಿಟ್ಟಿದೆ. ಸಂಶೋಧನೆಗಳ ಪ್ರಕಾರ, ಎಳೆಯ ವಯಸ್ಸಿನಲ್ಲೇ ಶಾಲೆಗೆ ಸೇರುವ ಮಕ್ಕಳು ಮೊದಲ ಕೆಲವು ವರ್ಷಗಳಲ್ಲಿ ಉತ್ತಮ ಸಾಧನೆ ತೋರಿದರೂ ಮೇಲಿನ ತರಗತಿಗಳ ವ್ಯಾಸಂಗ ಮಾಡುವಾಗ ಪರದಾಡುತ್ತಾರೆ. ಏಕೆಂದರೆ ಮಕ್ಕಳ ಅಕ್ಷರಶಃ ಪುಟ್ಟ ಮೆದುಳಿನಲ್ಲಿ ಅಪಾರ ಪ್ರಮಾಣದಲ್ಲಿ ಮಾಹಿತಿಗಳನ್ನು ಸಂಗ್ರಹವಾಗಿಟ್ಟುಕೊಳ್ಳುವುದು ಕಷ್ಟಕರ. ಇದರ ಜೊತೆಗೆ ಸಹಪಾಠಿ ಸ್ಪರ್ಧೆಯ ಒತ್ತಡ, ತಂದೆತಾಯಿ ಏನೆನ್ನುತ್ತಾರೋ ಎಂಬ ಭಯ ಕಾಡುತ್ತದೆ, ಅಂತಿಮವಾಗಿ ಅವರನ್ನು ಟ್ಯೂಷನ್‌ಗೆ ಹೋಗುವಂತೆ ಮಾಡಿ. ಯಾಂತ್ರಿಕವಾದ ಮತ್ತು ನೀರಸವಾದ ಕೆಲಸಗಳನ್ನು ಮಾಡಲು ಹಾಕಿ ಅವರನ್ನು ಸುಸ್ತು ಮಾಡಿ ಬಿಡಲಾಗುತ್ತದೆ. ಇನ್ನು ಅವರು ಆಟವಾಡುವುದು ಎಲ್ಲಿಂದ ಬಂತು?.

ನಾವು ಅರ್ಥ ಮಾಡಿಕೊಳ್ಳ ಬೇಕಾದ ಅಂಶವೆಂದರೆ ಮಕ್ಕಳಿಗೆ ಹಿರಿಯರಿಗಿಂತ ಭಿನ್ನವಾದ ತಮ್ಮದೇ ಆದ ಬೆಳವಣಿಗೆ ವೇಗ ಇರುತ್ತದೆ ಮತ್ತು ಅವರದ್ದೇ ಆದ ಕಾಲಪ್ರಮಾಣ ಇರುತ್ತದೆ.

ನೀವು ನಿಮ್ಮ ಮಕ್ಕಳಿಗೆ ಕೊನೆಯ ಬಾರಿ ಆಕಾಶದಲ್ಲಿ ವಿಮಾನ ತೋರಿಸಿದ ಅಥವಾ ಪೊದೆಗಳಲ್ಲಿ ಕುಳಿತ ಲೇಡಿ ಬರ್ಡ್ ಜೀರುಂಡೆ ತೋರಿಸಿದ ಅಥವಾ ಬಂಡೆಗಲ್ಲಿನ ಮೇಲೆ ಕುಳಿತುಕೊಂಡು ನಕ್ಷತ್ರಗಳನ್ನು ತೋರಿಸಿದ ದಿನ ಯಾವುದೆಂದು ನೆನಪಿದೆಯೇ ಎಂದು ಸೆಲ್ಲಿ ಜೆಂಕಿನ್ಸನ್ ತಮ್ಮ ಜೀನಿಯಸ್ ಆಫ್ ಪ್ಲೇ[1] ಎಂಬ ಕೃತಿಯಲ್ಲಿ ಕೇಳಿದ್ದಾರೆ. "ಬಾಲ್ಯವೆಂಬುದು ಒಂದು ಮೋಹಕ ಅವಧಿ, ಒಂದು ದೊಡ್ಡ ನಿರಾಳತೆ, ಭವಿಷ್ಯಕ್ಕೆ ಸುಂದರ ನೆನಪುಗಳೆಂಬ ಶ್ರೀಮಂತಿಕೆಯನ್ನು ಸಂಗ್ರಹ ಮಾಡುವ ಸಮಯ. ಇದೇನು? ನಾವು ಮಕ್ಕಳೊಡನೆ ಮಕ್ಕಳಾಗಿ ಅವರ ಅನುಭವವನ್ನು ಕೇಳುವ, ಅವರ ಜಗತ್ತನ್ನು ಪ್ರವೇಶಿಸುವ ಸಾಮರ್ಥ್ಯವನ್ನು ನಾವು ಕಳೆದುಕೊಂಡಿದ್ದೆವೆಯೇ? ನಾವು ಅವರನ್ನು ರಕ್ಷಿಸುತ್ತಾ ಅಥವಾ ಅವರನ್ನು ಮುಕ್ತವಾಗಿ ಆಡಲು ಬಿಡಲು ಸಾಧ್ಯವಿದೆಯೇ? ಪ್ರತಿಯೊಂದು ಮಗುವಿಗೂ ಮುಂದೆ ತಾನು ಏನಾಗಬೇಕೆಂಬ ಅರಿವಿರುತ್ತದೆ. ಅದಕ್ಕೆ ಬೇಕಾದ ಭವಿಷ್ಯದ ರಹಸ್ಯ ಮಾರ್ಗದರ್ಶನಗಳನ್ನು ಅವರು ತಮ್ಮ ಆಳವಾದ ಜ್ಞಾನ ಮತ್ತು ಅಂತರ್ ದೃಷ್ಟಿಯ ಬೆಳಕಿನಿಂದ ಪಡೆದುಕೊಳ್ಳುತ್ತಾರೆ."ಎಂದು ಹೇಳುತ್ತಾರೆ.

ನಾನಿಲ್ಲಿ ಮನಶಾಸ್ತ್ರಜ್ಞ ಡಾ. ಸ್ಟುವರ್ಟ್ ಬ್ರೌನ್ ಅವರ ಹೇಳಿಕೆಯನ್ನು ಉಲ್ಲೇಖಿಸಲು ಬಯಸುತ್ತೇನೆ. ಅದೇನೆಂದರೆ, "ಬಾಲ್ಯದ ಆಟ ಪಾಟಗಳು ಬೇಕಿದ್ದರೆ ಆಡಬಹುದು ಬೇಡದಿದ್ದರೆ ಬಿಡಬಹುದು ಎನ್ನುವಂತಹದ್ದಲ್ಲ ಅಥವಾ ಪಠ್ಯೇತರ ಚಟುವಟಿಕೆಯೂ ಅಲ್ಲ ವ್ಯಕ್ತಿಯೋರ್ವನ ಆರೋಗ್ಯಕರ ಬೆಳವಣಿಗೆಗೆ ಇದು ಅತ್ಯಗತ್ಯ'. ಬಾಲ್ಯ ಕಾಲದಲ್ಲಿ ಹೆಚ್ಚು ಆಟವಾಡುವ ಮಕ್ಕಳು ದೊಡ್ಡವರಾದಾಗ ಒತ್ತಡ ಸಂಬಂಧಿ ಕಾಯಿಲೆಗಳಿಂದ ಬಳಲುವ ಸಾಧ್ಯತೆ ತೀರಾ ಕಡಿಮೆಯಾಗುತ್ತದೆ ಹಾಗೂ ಅವರು ತಮ್ಮ ಮನೆಯಲ್ಲಿ, ಕೆಲಸದ ಸ್ಥಳಗಳಲ್ಲಿ, ವೈವಾಹಿಕ ಜೀವನದಲ್ಲಿ ಹೊಂದಿಕೊಂಡು ಬಾಳುತ್ತಾರೆ ಮತ್ತು ಬದುಕಿನಲ್ಲಿ ಎದುರಾಗುವ ಸಂಕಷ್ಟದ ಪರಿಸ್ಥಿತಿಗಳನ್ನು ಸಮರ್ಥವಾಗಿ ನಿಭಾಯಿಸಲು ಅಗತ್ಯವಿರುವ ಆತ್ಮವಿಶ್ವಾಸ ಮತ್ತು ಮಾನಸಿಕ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ. ಆದ್ದರಿಂದ ನಮ್ಮ ಬದುಕಿನಲ್ಲಿ ನಿದ್ರೆ ಮತ್ತು ಕನಸುಗಳು ಹೇಗೆ ಮುಖ್ಯವೊ ಅದರಷ್ಟೇ ಆಟ ಕೂಡ ಮುಖ್ಯವಾಗಿದೆ.

ಆದ್ದರಿಂದ ವಾಲ್ಡೋರ್ಫ್ ಅವರ ಆರಂಭಿಕ ಬಾಲ್ಯದ ಶಿಕ್ಷಣ ಕಾರ್ಯಕ್ರಮದಲ್ಲಿ 'ಆಟವೇ ಕೆಲಸ ಮತ್ತು ಕೆಲಸವೇ ಆಟ' ಹಾಗೂ ಶಿಶು ವಿಹಾರವೆಂದರೆ ಮನೆಯ ಪರಿಸರದ ಒಂದು ಮುಂದುವರಿಕೆ. ಇಲ್ಲಿ ತರಗತಿಗಳು ಪೀಠೋಪಕರಣದಿಂದ ತುಂಬಿದ ಇತರ ಶಿಶುವಿಹಾರಗಳಂತೆ ಇರದೆ ತೆರೆದ ಅಂಗಳವಾಗಿರುತ್ತವೆ. ಮಕ್ಕಳು ಓಡಾಡುತ್ತಾ ಇರಬೇಕೆಂದು ಪ್ರಕೃತಿಯೇ ಬಯಸುತ್ತಿರುವಾಗ ಅವರನ್ನು ಚಲಿಸದಂತೆ ತಡೆಯಲು, ತರಗತಿಯ ಕುರ್ಚಿ ಮತ್ತು ಮೇಜುಗಳ ಹಿಂದೆ ಸೀಮಿತವಾಗಿಡಲು ನಾವ್ಯಾರು? ನವಜಾತ ಶಿಶುವಿನ ಅಂಗಗಳು ಪೂರ್ಣವಾಗಿ ರೂಪುಗೊಳ್ಳುವುದಿಲ್ಲ ಮತ್ತು ಅದು ಬೆಳವಣಿಗೆಯ ಪ್ರಕ್ರಿಯೆಯಲ್ಲಿರುತ್ತದೆ ಎಂಬುದನ್ನು ವೈದ್ಯಕೀಯ ವಿಜ್ಞಾನ ಸಾಬೀತು ಪಡಿಸಿದೆ. ದೇಹದ ಬೆಳವಣಿಗೆಗೆ ಚಲನೆ ಮತ್ತು ಆಟ ಅತ್ಯಗತ್ಯ ಹಾಗೂ ಮೊದಲ ಹಲ್ಲುಗಳ ಬಿದ್ದ ನಂತರವೇ ಮಕ್ಕಳ ಅಂಗಗಳ ಬೆಳವಣಿಗೆ ಪೂರ್ಣಗೊಳ್ಳುತ್ತವೆ. ಆದ್ದರಿಂದ ಸುಂದರವಾದ ಪರಿಸರದಲ್ಲಿ ಆಡುವ ಒಳಾಂಗಣ ಹಾಗೂ ಹೊರಾಂಗಣ ಎಂಬ ಎರಡು ರೀತಿಯ ಆಟಗಳು ಮಕ್ಕಳಿಗೆ ಉಸಿರು ಹೊರಬಿಟ್ಟಂತೆ. ಶಿಶುವಿಹಾರದ ಶಿಕ್ಷಕರು ಸಿದ್ಧಗೊಳಿಸಿದ ವೃತ್ತದ ಸಮಯ, ಕತೆ-ಸಮಯ ಮತ್ತು ಕಲೆ, ಕರಕುಶಲ ಚಟುವಟಿಕೆಗಳು ಉಸಿರು ಒಳತೆಗೆದುಕೊಂಡಂತೆ. ಈ ಲಯಬದ್ಧ ಚಟುವಟಿಕೆಗಳನ್ನು ಎಡೆಬಿಡದೆ ಮತ್ತು ಶ್ರದ್ಧೆಯಿಂದ ನಡೆಸಿಕೊಂಡು ಬಂದರೆ ಅವೇ ಮಕ್ಕಳಲ್ಲಿ ಜೀವಂತಿಕೆಯು ನಳನಳಿಸುವಂತೆ ಮಾಡುತ್ತವೆ ಮತ್ತು ಲಯಬದ್ಧ ನೆನಪಿನ ಶಕ್ತಿಯನ್ನು ಬೆಳೆಸುತ್ತವೆ. ಇವುಗಳೇ ಬೆಳೆಯುತ್ತಿರುವ ವ್ಯಕ್ತಿಯ ಜೀವಮಾನದ ಅತ್ಯಂತ ಅಮೂಲ್ಯವಾದ ಆರೋಗ್ಯ ಖಜಾನೆಯಾಗಿದೆ. ಉದಾಹರಣೆಗೆ ಆಡಾಡಿದ ನಂತರ ಆಟದ ಸಾಮಾನುಗಳನ್ನು ಓರಣವಾಗಿ ಎತ್ತಿಡುವ ಕೆಲಸವೂ ದೈನಂದಿನ ಲಯಬದ್ಧತೆಯ ಒಂದು ಭಾಗವಾಗಿ ಬಿಡುತ್ತದೆ. ಇದು ನಾವು ಬಳಸುವ ವಸ್ತುಗಳನ್ನು ಗೌರವದಿಂದ ಕಾಣುವ ಬಗ್ಗೆ ಪ್ರಥಮ ಪಾಠವಾಗುತ್ತದೆ,

ಡಾ. ರುಡಾಲ್ ಸ್ಟೈನರ್[2] ತಮ್ಮ ಆಧ್ಯಾತ್ಮಿಕ ವಿಜ್ಞಾನದಲ್ಲಿ ಇದನ್ನು "ವಸ್ತುವಿನ ಜೀವಾಳದ ಹುಡುಕಾಟ' ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಸ್ಟೈನರ್ ಕಿಂಡರ್‌ಗಾರ್ಟನ್‌ರ 3 R ಗಳು ಯಾವುವೆಂದರೆ ರಿದಂ, ರಿಪಿಟೇಷನ್ ಮತ್ತು ರಿವರೆನ್ಸ್. ಶಿಕ್ಷಕರು ಈ 3 ಆರ್‌ಗಳನ್ನೇ ತಮ್ಮ ಕಲಿಕಾ ಶೈಲಿಯಲ್ಲಿ ಅಳವಡಿಸಿಕೊಂಡು ಅದನ್ನೇ ಬದುಕಾಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದರಿಂದ ಮಕ್ಕಳು ಮೊದಲ ಏಳು ವರ್ಷಗಳಲ್ಲಿ ಅವರ ಕ್ರಿಯೆ, ಸನ್ನೆ, ಮಾತುಗಳು ಹಾಗೂ ತಮ್ಮ ಆಳವಾದ ಅಮೂರ್ತ ಪ್ರಕ್ರಿಯೆಗಳಲ್ಲಿ ಅವರ ಕಂಪನಗಳನ್ನೂ ಅನುಕರಣೆಯ ಮೂಲಕ ಮನದಟ್ಟು ಮಾಡಿಕೊಳ್ಳುತ್ತಾರೆ. ಆದರೆ ಈಗ ಬಹುತೇಕ ಸಾಂಪ್ರದಾಯಿಕ ಕಿಂಡರ್‌ಗಾರ್ಟನ್ ಅಥವಾ ಶಿಶುವಿಹಾರಗಳು ಈ ನೈಸರ್ಗಿಕ ಅನುಕರಣೆ ಪ್ರಕ್ರಿಯೆಯನ್ನು ಕಲಿಸುವುದಕ್ಕಿಂತ ಸೂಚನಾತ್ಮಕ ಪ್ರಕ್ರಿಯೆಯನ್ನು ಕಲಿಸುವತ್ತ ಬದಲಾಗಿವೆ. ಚಿಕ್ಕ ಮಕ್ಕಳಿಗೆ ಶಿಕ್ಷಣ ಮತ್ತು ಬೋಧನೆ ಮಾಡಿದರೆ ಮಕ್ಕಳ ಕನಸಿನ ಪ್ರಜ್ಞಾಪೂರ್ವಕತೆಯನ್ನು ಬೇಕಾದದ್ದಿಕ್ಕಿಂತಲೂ ಮೊದಲೇ ಜಾಗೃತಗೊಳಿಸಿ ಮುಂದಿನ ಶಾಲಾ ದಿನಗಳಲ್ಲಿ ಉದ್ದೇಶಪೂರ್ವಕವಾಗಿ ಕಲಿಯುವ ಮಗುವಿನ ಇಚ್ಛಾಶಕ್ತಿಗೆ ಅತಿ ಹೊರೆಯನ್ನುಂಟು ಮಾಡಿ ತೀರ

ಭಾರವಾಗಿಸುತ್ತವೆ. ಸ್ಟೈನರ್ ಕಿಂಡರ್‌ಗಾರ್ಟನ್‌ನಲ್ಲಿರುವ ಪರಿಸರದ ಸೌಂದರ್ಯ, ಆಟದಲ್ಲಿ ಬೆರೆತು ಹೋಗುವ ಅದರ ನಿರಂತರ ಲಯ, ಭಾಷೆ ರೂಪಿಸುವ ಅವಕಾಶ, ಪುಟ್ಟ ಕೈಗಳಲ್ಲಿ ಕೆಲಸ ಮಾಡುವಾಗ ಜಾಗೃತವಾಗುವ ಅರಿವು ಹಾಗೂ ಆ ಎಳೆ ಪ್ರಾಯದಲ್ಲೇ ಮನೆ ಬಿಟ್ಟು ಶಾಲೆಗೆ ಬರುವಾಗ ಆಗುವ ಒಟ್ಟು ಖುಷಿಗಳು ಜಗತ್ತಿನ ಇತರ ಯಾವುದೇ ಶಿಕ್ಷಣ ವ್ಯವಸ್ಥೆಗಳಲ್ಲೂ ನಾವು ಕಾಣಲಾರೆವು.







ಚಿತ್ರ ಕೃಪೆ: ಸ್ಮಿತಾ, ಬೆಂಗಳೂರು ಸ್ಟೈನರ್ ಶಾಲೆ.



**References**

1. "The Genius of Play: Celebrating the Spirit of Childhood" by Sally Jenkinson. Hawthorn Press (First published in December 2001)
2. www.rsarchive.org For a collection of the works, lectures given by Dr. Rudolf Steiner, the pioneer of Steiner-Waldorf education.



**ಮಣಿವನ್ನನ್** ಅವರು ಬೆಂಗಳೂರು ಸ್ಟೈನರ್ ಶಾಲೆಯ ಸ್ಥಾಪಕ ಟ್ರಸ್ಟಿಗಳು, ಕಿಂಗ್‌ಡಮ್ ಆಫ್ ಚೈಲ್ಡ್‌ಹುಡ್ ಪ್ರಿ ಸ್ಕೂಲ್‌ನ ಸ್ಥಾಪಕ ನಿರ್ದೇಶಕರು ಮತ್ತು ಬೆಂಗಳೂರಿನ ಸ್ಟೈನರ್ ಶಿಕ್ಷಣದ ವಿಚಾರ ಗೊಷ್ಠಿಯ ಸಮನ್ವಯಕಾರರಾಗಿದ್ದಾರೆ. ಅವರು ವಿಶೇಷ ಶಿಕ್ಷಣದಲ್ಲಿ ಆರ್‌ಸಿಐ (ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ) ಅರ್ಹತಾ ಕೋರ್ಸನ್ನು ಪಡೆದಿದ್ದಾರೆ. ಹಾಗೂ ಆರ್ಟ್ ಆಫ್ ಕ್ಯೂರೇಟಿವ್ ಎಜುಕೇಷನ್ ಆ್ಯಂಡ್ ಸೋಷಿಯೊ–ಥೆರಪಿಯಲ್ಲಿ ಮೂರು ವರ್ಷದ ಕೋರ್ಸ್ ಮಾಡಿದ್ದಾರೆ. ಓರ್ವ ಶಿಕ್ಷಣ ತಜ್ಞರಾಗಿಯೂ ಅವರು ಶಿಕ್ಷಕ ಮಾರ್ಗದರ್ಶಕರಾಗಿದ್ದಾರೆ. ಶಿಕ್ಷಕರು ಮಕ್ಕಳೊಂದಿಗೆ ತಮ್ಮ ಉತ್ತಮ ಕ್ರಿಯಾಶೀಲತೆಯನ್ನು ಪ್ರದರ್ಶಿಸಲು ಸಾಧ್ಯವಾಗಲು ಅವರು ನೆರವು ನೀಡುತ್ತಿದ್ದಾರೆ. ಕೌನ್ಸೆಲಿಂಗ್, ಕಲೆ ಮತ್ತು ರಂಗಭೂಮಿ ಹಾಗೂ ಸಂಗೀತ ಅವರ ಇತರ ಆಸಕ್ತಿಯ ಕ್ಷೇತ್ರಗಳು. ಅವರನ್ನು ಸಂಪರ್ಕಿಸುವ ವಿಳಾಸ: mani@heartnsoulfoundation.org

# ಪ್ರೇಮಾ ರಘುನಾಥ್ ಅವರಿಂದ ಪುಸ್ತಕ ವಿಮರ್ಶೆ




**Giving Kids a Fair Chance**

**(ಪುಟ್ಟಾಣಿ ಮಕ್ಕಳಿಗೆ ನ್ಯಾಯವಾದ ಅವಕಾಶ ನೀಡುವುದು)**

ಸಂಪಾದಕರು: ಜೇಮ್ಸ್. ಜೆ. ಹೆಕ್ ಮ್ಯಾನ್

ಪ್ರಸ್ತುತ ಪುಸ್ತಕವು ನೊಬೆಲ್ ಪ್ರಶಸ್ತಿ ಪಡೆದ ಒಬ್ಬ ಅರ್ಥಶಾಸ್ತ್ರಜ್ಞನ ಪ್ರಬಂಧದಿಂದ ಪ್ರಾರಂಭವಾಗುತ್ತದೆ. ಅದರಲ್ಲಿ ಅವರು ಮಗು ಎಲ್ಲಿ ಯಾರಿಗೆ ಹುಟ್ಟುತ್ತದೆ ಎಂಬ ಮುಂಗಾಣದ ಸಂಭವವೇ ಸಾಮಾಜಿಕ ಅಸಮಾನತೆಗೆ ಬಹು ಮುಖ್ಯ ಅಂಶ ಎನ್ನುತ್ತಾರೆ. ಅವರ ಪ್ರಬಂಧದ ತಿರುಳೆಂದರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಥವಾ ಶೈಕ್ಷಣಿಕವಾಗಿ ಅನುಕೂಲರಹಿತರ ಮನೆಗಳಲ್ಲಿ ಹುಟ್ಟಿದ ಮಕ್ಕಳ ಜೀವನದಲ್ಲಿ ಈ ಅನಾನುಕೂಲತೆ ಇನ್ನಷ್ಟು ಹೆಚ್ಚುತ್ತದೆ: ಶಿಶುವಿಹಾರ ಶಿಕ್ಷಣ ಪಡೆಯುವ ಹಂತದ ಹೊತ್ತಿಗೇ ಮಗುವಿನ ಭವಿಷ್ಯದಲ್ಲಾಗಬಹುದಾದ ಅನಾಹುತಗಳಾದ, ಶಾಲೆಯಿಂದ ಹೊರಗುಳಿದು ಬಿಡುವುದು, ಕಿಶೋರಾವಸ್ಥೆಯಲ್ಲಿಯೇ ಗರ್ಭದಾರಣೆ, ಅಪರಾಧಗಳು ಮತ್ತು ಜೀವನದುದ್ದಕ್ಕೂ ಅಲ್ಪ ಕೂಲಿ ಮತ್ತು ನಿರುದ್ಯೋಗ ಸಮಸ್ಯೆಗಳು ಮುಂತಾದ ಸಮಸ್ಯೆಗಳಿಗೆ ರಂಗ ಸಿದ್ಧವಾಗಿರುತ್ತದೆ. ಹ್ಯೆಕ್ ಮ್ಯೆನ್ ಅವರ ಪ್ರಕಾರ ಇವೆ ಅಮೇರಿಕಾದ ಸಮಾಜದ ಹಿನ್ನೆಡೆಗೆ ಕಾರಣವಾಗಿದೆ.

ಹೆಕ್ ಮ್ಯಾನ್ ರವರ ವಾದವೇನೆಂದರೆ, ಅಮೇರಿಕಾದಂತಹ ಸಂಯುಕ್ತ ರಾಷ್ಟ್ರಗಳ ಶೈಕ್ಷಣಿಕ ಯೋಜನೆಗಳು ವಿಷಯಗ್ರಹಣಾ ಶಕ್ತಿಯನ್ನು ವೃದ್ಧಿಸುವುದರ ಕಡೆಗೆ ಗಮನ ಹರಿಸುತ್ತವೆ, ಆದರೆ ಜೀವನದ ಯಶಸ್ಸಿಗೆ ವಿಷಯಗ್ರಹಣಾ ಶಕ್ತಿಯನ್ನೂ ಮೀರಿ ಅನೇಕ ಅಂಶಗಳು ಕಾರಣವಾಗುತ್ತವೆ. ಮಗುವಿಗೆ ಸಾಮರ್ಥ್ಯದ ಜೊತೆಗೆ ಆತ್ಮವಿಶ್ವಾಸ ಮತ್ತು ಧೈರ್ಯ, ವೈಯಕ್ತಿಕ ಮತ್ತು ಔದ್ಯೋಗಿಕ ಜೀವನದಲ್ಲಿ ಅಗತ್ಯವಾಗಿರುವ ಗುಣಗಳನ್ನು ಗಳಿಸಲು ಅನುಕೂಲವಾಗ ಬಹುದಾದ ಅವಕಾಶಗಳು ಅಗತ್ಯವಾಗಿರುತ್ತವೆ. ಡಾ. ಹೆಕ್ ಮ್ಯಾನ್ ರವರು ಹೇಳುವುದೇನೆಂದರೆ, ಈ ಗುಣಗಳನ್ನು, ಅನುಕೂಲಸ್ಥರ ಕುಟುಂಬದಲ್ಲಿ ಅದೃಷ್ಟ ಪಡೆದು ಜನಿಸಿದ ಮಗುವು ತಾನೇ ತಾನಾಗಿ ಮೈಗೂಡಿಸಿಕೊಳ್ಳುತ್ತದೆ ಮತ್ತು ಪ್ರತಿಹಂತದಲ್ಲೂ ಪ್ರದರ್ಶಿಸುತ್ತದೆ. ಆದುದರಿಂದ ಹೆಕ್ ಮ್ಯಾನ್ ರವರು, ಈ ಕೌಶಲ್ಯಗಳನ್ನು ಎಲ್ಲಾ ವರ್ಗದ ಮಕ್ಕಳೂ ಮೈಗೂಡಿಸಿಕೊಳ್ಳಲು ಅವಕಾಶಗಳು ಸಮಪ್ರಮಾಣದಲ್ಲಿ ದೊರೆಯಬೇಕು ಮತ್ತು ಅದಕ್ಕಾಗಿ ಶಿಶು ಶಿಕ್ಷಣದಲ್ಲಿ ಸುಧಾರಣೆ ತರಬೇಕು ಮತ್ತು ಸಾಮಾಜಿಕ ನೀತಿ–ನಿಯಮಗಳು ಬದಲಾಗಬೇಕು ಎನ್ನುತ್ತಾರೆ. ಅನುಕೂಲವಂಚಿತ ಮನೆತನದಿಂದ ಬಂದ ಮಕ್ಕಳ ಪರಿಸರವನ್ನು ಉತ್ತಮಗೊಳಿಸುವ, ಅದೇ ಸಂದರ್ಭದಲ್ಲಿ ಅಮೇರಿಕಾದಂತಹ ದೇಶಗಳ ಸಾಂಸ್ಕೃತಿಕ ವೈವಿಧ್ಯ ಮತ್ತು ಕುಟುಂಬಗಳ ಮೌಲ್ಯ ಗಳನ್ನು ಗಮನದಲ್ಲಿಟ್ಟುಕೊಂಡು, ಆರಂಭಿಕ ಬಾಲ್ಯದ ಶಿಕ್ಷಣದಲ್ಲಿ ನೂತನ ದೃಷ್ಟಿಕೋನ ತರಬೇಕು ಎಂದು ವಾದಿಸುತ್ತಾರೆ.

ಹ್ಯೆಕ್ ಮ್ಯೆನ್ ಅವರು ಮೂಲತಃ ಒಬ್ಬ ಅರ್ಥಶಾಸ್ತ್ರಜ್ಞ ಹಾಗಾಗಿ ಅವರು ಪರಿಸ್ಥಿತಿಗಳನ್ನು ಇತರ ಅಂಶಗಳ ಜೊತೆಗೆ ಅದರಿಂದ ಅಮೇರಿಕಾಕ್ಕೆ ಎಷ್ಟು ವೆಚ್ಚ ಉಂಟಾಗುತ್ತದೆ ಎಂಬ ಮಸೂರದಿಂದ ನೋಡುತ್ತಾರೆ. ಪುಟ್ಟ ಮಕ್ಕಳ ಶಾಲೆಯಲ್ಲಿ ಶಿಕ್ಷಕ–ಶಿಷ್ಯ ಅನುಪಾತ ಕಡಿಮೆ ಆದದ್ದರಿಂದ ಹಿಡಿದು ವಯಸ್ಕರ ಸಾಕ್ಷರತೆವರೆಗೆ ಎಷ್ಟು ಬೇಗ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೋ ಅಷ್ಟು ಹೆಚ್ಚು ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳು ಉಂಟಾಗುತ್ತವೆ ಎಂದು ಹೇಳುತ್ತಾರೆ.

2008 ರಲ್ಲಿ ಆರ್ಥಿಕ ಕುಸಿತವಾದಾಗ ಶಿಕ್ಷಣಕ್ಕೆ ನೀಡಲಾಗುತ್ತಿದ್ದ ಧನ ಸಹಾಯವನ್ನು ನಿಲ್ಲಿಸಲಾಯಿತು. ಈ ಕುರಿತು ಹೈಕ್ ಮ್ಯೆನ್ ರವರ ವಾದವೇನೆಂದರೆ, ಹಣವನ್ನು ಹೆಚ್ಚು ಹೆಚ್ಚು ಹೂಡಿಕೆಮಾಡಿದರೆ ಭವಿಷ್ಯದ ಸಮಾಜಕ್ಕೆ ಉತ್ತಮ ಫಲಿತಾಂಶ ದೊರಕಿಸುವಂತಹ ಕ್ಷೇತ್ರ ಶಿಕ್ಷಣವೊಂದೇ. ಹೈಕ್ ಮ್ಯೆನ್ ಈ ದೂರದೃಷ್ಟಿ ಹೊಂದಿಲ್ಲದಂತಹ ಯೋಜನೆಗಳನ್ನು ಕೈ ಬಿಡಬೇಕೆಂದು ಕರೆ ನೀಡಿ ಮತ್ತು ಆರಂಭಿಕ ಬಾಲ್ಯದ ಶಿಕ್ಷಣದ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲು ಹಾಗೂ ಅವುಗಳ ಮೇಲೆ ಹಣ ತೊಡಗಿಸುವಿಕೆಯನ್ನು ಕುರಿತು ಪ್ರಾಯೋಗಿಕ ಸಲಹೆ ನೀಡುತ್ತಾರೆ.

ಹೈಕ್ ಮ್ಯೆನ್ ರವರ ಮನವೊಲಿಸುವ ಪ್ರಬಂಧದ ತರುವಾಯ ಈ ಪುಸ್ತಕವು ಕೆಲವು ಚರ್ಚೆಗಳನ್ನು ಒಳಗೊಂಡಿದೆ, ಅವುಗಳಲ್ಲಿ ಇತರ ಶಿಕ್ಷಣತಜ್ಞರು ಸಮಕಾಲೀನವಾಗಿ ಕಾಡುತ್ತಿರುವ ಒಂದು ಸಮಸ್ಯೆಯಾದ ಅಸಮಾನತೆ, ಶಾಲೆಗಳ ಅದರ ಪಾತ್ರ ಮತ್ತು ಸಾಮಾಜಿಕ ಅಡೆತಡೆಗಳನ್ನು ಪರೀಕ್ಷಿಸಿ ಅವುಗಳನ್ನು ಅಂತ್ಯಗೊಳಿಸುವುದು ಹಾಗೂ ಸಾರ್ವಜನಿಕ ಹಣವನ್ನು ತೊಡಗಿಸುವುದು ಇವುಗಳನ್ನು ಕುರಿತು ಮಾತನಾಡುತ್ತಾರೆ. ಈ ಚರ್ಚೆಯಲ್ಲಿ ಮೈಕ್ ರೋಸ್, ಜಿಫ್ರಿ ಕೆನಡಾ, ಚಾರ್ಲ್ಸ್ ಮರ್ರೆ, ಕರೋಲ್ ಡ್ವೆಕ್ ಮತ್ತು ಆನೆಟ್ ಲಾರೋ ಭಾಗವಹಿಸಿದ್ದು ಆನೆಟ್ ಲಾರೋ ಅವರ ಪ್ರಬಂಧ ಈ ಪುಸ್ತಕದಲ್ಲೇ ಅತಿ ಸ್ವಾರಸ್ಯಕರ ಮತ್ತು ಚಿಂತನೆಗಳನ್ನು ಹುಟ್ಟಿಸುವಂತಹ ಅಂಶಗಳನ್ನು ಒಳಗೊಂಡಿರುತ್ತವೆ. ಅವರು ಪ್ರಾಧ್ಯಾಪಕ ಹೈಕ್ ಮ್ಯೆನ್ ರವರ ಆಲೋಚನೆಗೆ ಸಮ್ಮತಿಯನ್ನು ನೀಡುವುದಿಲ್ಲ ಬದಲಾಗಿ ಅತಿಯಾದ ಸೌಕರ್ಯವನ್ನು ನೀಡುವುದರಿಂದ ಯಾವ ಸೌಕರ್ಯವೂ ಇಲ್ಲದೇ ಇರುವಂತಹ ಅನಾಹುತಗಳು ನಡೆಯಬಹುದೆಂಬ ಅಂಶವನ್ನು ಮುಂದಿಟ್ಟಿರುತ್ತಾರೆ. ಜನ್ಮಜಾತ ಪರಿಸರದ ಅನಾನೂಕೂಲತೆಗಳು ಮತ್ತು ಅದರಿಂದಾಗುವ ಅನಾಹುತಗಳ ನಡುವಿನ ಅಂತರವನ್ನು ಭರಿಸುವಲ್ಲಿ ಶಾಲೆಗಳಂತಹ ಸಾಮಾಜಿಕ ಕೇಂದ್ರಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅವರ ಮುಂದುವರಿದ ವಾದವೇನೆಂದರೆ: ಶಿಕ್ಷಣವು ಭವಿಷ್ಯಕ್ಕೊಂದು ರೂಪುರೇಷೆಯನ್ನು ನೀಡಬಹುದು ಅದರೆ, ಅದೇ ಜೀವನದ ಎಲ್ಲವೂ ಅಲ್ಲ.

ಎಡಮ್ ಸ್ವಿಫ್ಟ್ ಮತ್ತು ಹೆರಿ ಬ್ರಿಜ್ಡ್ ಹೌಸ್ ರವರು ಅವರವರ ಪ್ರಬಂಧದಲ್ಲಿ ಆರಂಭಿಕ ಬಾಲ್ಯದ ಶಿಕ್ಷಣವು ಮಗುವಿನ ಬಹುತೇಕ ಮಕ್ಕಳ ವರ್ತನೆಗಳ ಪರವಾಗಿರುತ್ತದೆಯೇ ಹೊರತು ಆ ಮಕ್ಕಳ ಗುಂಪಿನಲ್ಲಿ, ಬರುವಂತಹ ವಿವಿಧ ಸಾಂಸ್ಕೃತಿಕ ನೆಲೆಗಟ್ಟಿನ ಮಕ್ಕಳ ಪ್ರತ್ಯೇಕ ಅಂಶಗಳ ಬಗ್ಗೆ ಗಂಭೀರವಾಗಿ ಆಲೋಚಿಸುವುದಿಲ್ಲ. ಆದುದರಿಂದ ಇವುಗಳು ಭವಿಷ್ಯದಲ್ಲಿ ಇನ್ನಷ್ಟು ಅನಾನುಕೂಲತೆಗೆ ಎಡೆಮಾಡಿಕೊಡುತ್ತವೆ ಎಂದು ಒತ್ತಿ ಹೇಳುತ್ತಾರೆ.

ಇನ್ನಿತರ ಲೇಖಕರ ವಾದಗಳು ಈ ಕೆಳಗಿನ ವಿಭಿನ್ನ ಹೊಸ ಹೊಸ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಅವರಲ್ಲಿ ಎಲ್ಲರೂ ಡಾ. ಹೈಕ್ ಮ್ಯೆನ್ ರವರ ಹೇಳಿಕೆಗಳನ್ನು ಒಪ್ಪುವುದಿಲ್ಲ. ಎಲ್ಲರ ನಿಲುವಿನಲ್ಲಿ ವೈವಿಧ್ಯಮಯವಾದ ಮತ್ತು ಸಮತೋಲನವಾದ ಅಂಶಗಳಿದ್ದರೂ ಹೋಲಿಕೆಯಲ್ಲಿ ಹೈಕ್ ಮ್ಯೆನ್ ರವರ ವಾದಗಳು ಸರಳವಾದವುಗಳು. ಅವೆಂದರೆ, ಉತ್ತಮ ಪರಿಸರದಲ್ಲಿ ಹುಟ್ಟಿದ ಮಗುವಿಗೆ ಭವಿಷ್ಯದಲ್ಲಿ ಇನ್ನೂ ಉತ್ತಮ ಅನುಕೂಲಗಳು ದೊರೆಯುತ್ತವೆ ಎಂಬ ವಾದ ಸತ್ಯವಾದ ಸಂಗತಿಯಾದರೂ, ಅನಾನುಕೂಲವಾದ ಪರಿಸರದಲ್ಲಿ ಹುಟ್ಟಿದ ಮಗುವಿಗೆ ಆ ಪರಿಸರವು ಅದರ ಪ್ರಸ್ತುತ ಮತ್ತು ಮುಂದಿನ ಭವಿಷ್ಯದ ಸನ್ನಿವೇಶ'ವನ್ನು ಇನ್ನಷ್ಟು ಹದಗೆಡಿಸುತ್ತವೆ ಎಂಬ ಅಂಶ ನಿಜವಲ್ಲ. ಇಂದಿನ ಸಮಾಜದಲ್ಲಿ ಮಕ್ಕಳು ತಮ್ಮ ಆರಂಭಿಕ ಪರಿಸರವನ್ನು ಮೀರಿ ಮೆಟ್ಟಿನಿಂತು ಬದುಕಿನಲ್ಲಿ ಗೌರವಯುತವಾದ ಸ್ಥಾನ ಪಡೆದಿರುವ ಮತ್ತು ಹಣಕಾಸು ದೃಷ್ಟಿಯಿಂದಲೂ ಮುಂದೆಬಂದಿರುವ ಅನೇಕ ಉದಾಹರಣೆಗಳಿವೆ.

ಪ್ರಸ್ತುತ ಈ ಕಿರಿದಾದ ಪುಸ್ತಕವನ್ನು ಆಸಕ್ತಿದಾಯಕಗೊಳಿಸುವಲ್ಲಿ, ಡಾ. ಹೈಕ್ ಮ್ಯೆನ್ ರವರ ಪ್ರಬಂಧಕ್ಕಿಂತ, ಇನ್ನಿತರ ಲೇಖಕರ ಖಂಡನಾತ್ಮಕ ಅಂಶಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ವಿಶೇಷವಾಗಿ, ಅನೇಕ ಅಸಮಾನತೆಯನ್ನು ಹೊಂದಿರುವ ನಮ್ಮಂತಹ ಸಮಾಜದಲ್ಲಿ ಅವುಗಳ ಕುರಿತು ಚಿಂತನೆಗೆ ಎಡೆ ಮಾಡಿಕೊಡುವಲ್ಲಿ ಪ್ರಸ್ತುತ ಈ ಪುಸ್ತಕ ತುಂಬಾ ಅನುಕೂಲಕರವಾದುದ್ದು. ಆದುದರಿಂದ ಈ ಪುಸ್ತಕ ಎಲ್ಲಾ ಗ್ರಂಥಾಲಯಗಳಲ್ಲಿಯೂ ಇರಬೇಕಾದುದು ಅಗತ್ಯವೆಂದು ಶಿಫಾರಸ್ಸು ಮಾಡಲಾಗಿದೆ.

Teachers of India
Teachersofindia.org




# ಶಿಕ್ಷಣ ಸಂಘಟನೆ ಹೋರಾಟ!

– DR. B. R. AMBEDKAR

ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ

# ಸಮನ್ವಯ ಶಿಕ್ಷಣ


**ಅಜೀಂ ಪ್ರೇಮ್‌ಜಿ ಫೌಂಡೇಷನ್**
ನಂ 134, ದೊಡ್ಡಕನ್ನೆಳ್ಳಿ,
ವಿಪ್ರೋ ಕಾರ್ಪೊರೇಷನ್ ಕಚೇರಿ ಪಕ್ಕ,
ಸರ್ಜಾಪುರ ರಸ್ತೆ, ಬೆಂಗಳೂರು – 560035, ಭಾರತ
ದೂರವಾಣಿ : 91 80 6614 4900 / 01 / 02 ಫ್ಯಾಕ್ಸ್ : 91 80 6614 4903
ಇ–ಅಂಚೆ : learningcurve@azimpremjifoundation.org
ವೆಬ್‌ಸೈಟ್ : **www.azimpremjifoundation.org**


**ಹಾಗೆಯೇ: www.azimpremjiuniversity.edu.in**
**ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಅಂತರ್ಜಾಲ ತಾಣಕ್ಕೆ ಭೇಟಿ ಕೊಡಿ**

**ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ**


**ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಒಂದು ಪ್ರಕಟಣೆ**
Learning Curve Early Childhood Education (Kannada) Issue 4, February 2017


ನಿಮ್ಮ ಸಲಹೆಗಳು, ವಿಮರ್ಶೆ, ವೈಯಕ್ತಿಕ ಅಭಿಪ್ರಾಯ ಮತ್ತು ಅನುಭವಗಳನ್ನು ಹಂಚಿಕೊಳ್ಳಲು
www.azimpremjifoundation.org ವಿಳಾಸಕ್ಕೆ ಬರೆಯಿರಿ.

**ಸಂಚಿಕೆಗಳನ್ನು ಈ ಕೆಳಗಿನ ಲಿಂಕ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಿ.**
http://azimpremjifoundation.org/Foundation_Newsletter ಅಥವಾ
http://www.azimpremjiuniversity.edu.in/content/publications